ಶನಿವಾರ, 13 ಜುಲೈ 2024
ಪ್ರಜಾವಾಣಿ
ಪ್ರಜಾ ಪ್ಲಸ್
ಮನರಂಜನೆ | ಜಾಹೀರಾತು ಪ್ರೋತ್ಸಾಹ | ಉದ್ಯಮ ಅಭಿವೃದ್ಧಿ

ವತ್ಸಲಾ ಚಿತ್ರಕಲಾ ಪ್ರದರ್ಶನ

ವತ್ಸಲಾ ಅವರ ಕೈಚಳಕದಲ್ಲಿ ಅರಳಿದ ಕಲಾಕೃತಿಗಳು

ಕೈಲ

ತುಂಬಾ ಸಂಬಳ ಕೊಡುವ ಕಾರ್ಪೊರೇಟ್ ಉದ್ಯೋಗವನ್ನು ತೊರೆದು ಕಲೆಯಲ್ಲಿ ತೊಡಗಿಸಿಕೊಳ್ಳುವುದು ಸವಾಲಿನ ಕೆಲಸವೇ ಸೈ. ಅಂಥ ಸವಾಲಿಗೆ ಕೈ ಹಾಕಿ ಯಶ ಕಂಡವರು ಹಾಸನದ ವತ್ಸಲಾ. ಕುಶಾಗ್ರ ಉದ್ಯಮಿಯೂ, ಅಪ್ರತಿಮ ಯೋಗಪಟುವೂ ಹೌದು.

ಏಳು ವರ್ಷಗಳ ಕಾರ್ಪೊರೇಟ್ ಉದ್ಯಮಕ್ಕೆ ರಾಜೀನಾಮೆ ನೀಡಿ, 'ಬೊನಿಟೊ ಡಿಸೈನ್ಸ್' ಎನ್ನುವ ಇಂಟೀರಿಯರ್ ಡಿಸೈನ್ ಕಂಪನಿಯನ್ನು ಹುಟ್ಟುಹಾಕಿದರು. ಈಗ ಅದು ದೇಶದ ಪ್ರಸಿದ್ಧ ಐದು ಒಳಾಂಗಣ ವಿನ್ಯಾಸ ಕಂಪನಿಗಳಲ್ಲಿ ಒಂದು. ಬಳಿಕ ಕ್ಯಾರವಾನ್ ಉದ್ಯಮಕ್ಕೂ ಕಾಲಿಟ್ಟು, ಅಲ್ಲಿಯೂ ಗೆಲುವನ್ನು ಕಂಡಿದ್ದಾರೆ. 'ಟ್ರಿಪ್ಪಿ ವೀಲ್ಸ್', ವತ್ಸಲಾ ಅವರ ಕ್ಯಾರವಾನ್ ಕಂಪನಿ. ಈ ತಲೆಮಾರಿನ ಮಹಿಳಾ ಉದ್ಯಮಿಗಳಿಗೆ ಮಾದರಿಯಾಗುವಂಥ ಸಾಧನೆ ಇವರದು.

ಇವೆಲ್ಲದರ ಜೊತೆಗೆ ಮನಸ್ಸು ಸೆಳೆದಿದ್ದು ಕಲೆಯ ಕಡೆಗೆ. ಚಿತ್ರಕಲೆಯನ್ನು ಅಭ್ಯಾಸ ಮಾಡಿ ಪರಿಣತಿ ಪಡೆದಿದ್ದಾರೆ. ಅವರ ಏಕಾಗ್ರತೆ ಹಾಗೂ ಆಸ್ಥೆಗೆ ಕಲಾ ಸರಸ್ವತಿಯು ಒಲಿದಿದ್ದಾಳೆ. ತಮ್ಮ ಭಾವ, ಭಾವನೆಗಳನ್ನು ಚಿತ್ರರೂಪದಲ್ಲಿ ಅಭಿವ್ಯಕ್ತಪಡಿಸಿದ್ದಾರೆ.

ವತ್ಸಲಾ ಅವರ ಅನುಭವದ ಮೂಸೆಯಿಂದ ಅರಳುವ ಚಿತ್ರದ ಹಿಂದೆ ಮಹಿಳಾ ಸಂವೇದನೆ ಇದೆ. ಪ್ರಕೃತಿಯ ಸೌಂದರ್ಯ ಇದೆ. ಮಾನವ ಜೀವನದ ವಿವಿಧ ಮುಖಗಳಿವೆ. ತುಳಿತಕ್ಕೊಳಗಾದವರ ಸಂಕಟವಿದೆ. ಸಂತೋಷದ ಚಹರೆ ಇದೆ. ಬಣ್ಣಗಳ ಹಿಂದೆ ನೋವಿನ ಮೋರೆ ಅಡಗಿದೆ. ಪ್ರತಿಯೊಂದು ಗೆರೆಗಳಿಗೆ ಹೇಳಲು ನೂರಾರು ಕತೆಗಳಿವೆ. ಕಲೆಯಲ್ಲಿನ ಅವರ ಭಕ್ತಿಗೆ ಸರಸ್ವತಿ ಒಲಿದಿದ್ದಾಳೆ ಎನ್ನುವುದಕ್ಕೆ ಅವರು ಬಿಡಿಸಿರುವ ಚಿತ್ರಗಳೇ ಪ್ರತಿಬಿಂಬ.

'ಕೆಲಸ ಬಿಟ್ಟು ಕಲೆಯಲ್ಲಿ ತೊಡಗಿಕೊಳ್ಳುವುದು ವೃತ್ತಿ ಬದಲಾವಣೆ ಮಾತ್ರವಲ್ಲ. ನನ್ನ ಪಾಲಿಗೆ ಒಂದು ರೂಪಾಂತರವಾಗಿತ್ತು' ಎನ್ನುವುದು ವತ್ಸಲಾ ಅವರ ಮಾತು. ಕಲೆಯನ್ನು ತಬ್ಬಿಕೊಂಡ ವತ್ಸಲಾ ಅವರ ಚಿತ್ರಗಳ ಪ್ರದರ್ಶನಕ್ಕೆ ಬೆಂಗಳೂರಿನ ಚಿತ್ರಕಲಾ ಪರಿಷತ್ ವೇದಿಕೆಯಾಗಲಿದೆ.

ಚಿತ್ರಕಲಾ ಪರಿಷತ್‌ನಲ್ಲಿ ಜುಲೈ 18 ರಿಂದ 24ರವರೆಗೆ ಪ್ರದರ್ಶನ ಇರಲಿದೆ. ಸಮಯ ಬೆಳಿಗ್ಗೆ 10ರಿಂದ ಸಂಜೆ 7ರವರೆಗೆ

ಡುಂಡಿರಾಜರ 'ಪುಕ್ಕಟೆ ಸಲಹೆಗೆ' 85ರ ಸಂಭ್ರಮ

ಚುಟುಕು ಸಾಹಿತಿ ಎಚ್.ಡುಂಡಿರಾಜ್ ಅವರ 'ಪುಕ್ಕಟೆ ಸಲಹೆ' ಹಾಸ್ಯ ನಾಟಕವು ವಿಶ್ವಪಥ ಕಲಾ ಸಂಗಮ ಹವ್ಯಾಸಿ ರಂಗತಂಡದಿಂದ ಜುಲೈ 14ರಂದು ಭಾನುವಾರ 85ನೇ ಪ್ರದರ್ಶನ ಕಾಣುತ್ತಿದೆ.

ನಾಟಕದ ಕುರಿತು: ಡುಂಡಿರಾಜರ ಹಾಸ್ಯಪ್ರಜ್ಞೆಯ ಎರಕದಲ್ಲಿ ಮೂಡಿಬಂದಿರುವ ಈ ನಾಟಕವು ಟಿ.ವಿಗಳಲ್ಲಿ ವಿಜೃಂಭಿಸುವ ಜ್ಯೋತಿಷಿಗಳ ಹಾವಳಿಯನ್ನು, ಅವರ ನಿಜಬಣ್ಣ, ಅವಾಂತರಗಳನ್ನು ಹಾಸ್ಯದ ಮೂಲಕ ನಾಟಕದಲ್ಲಿ ತೋರಿಸಲಾಗಿದೆ. ಕೈಯಲ್ಲಿ ಲ್ಯಾಪ್‌ಟ್ಯಾಪ್ ಹಿಡಿದು ರಂಗದ ಮೇಲೆ ಬಂದು ಕೂರುವ ಲ್ಯಾಪಾನಂದ ಟ್ಯಾಪಾನಂದ ಶಾಸ್ತ್ರಿ ರಾಜ್ಯದ ವಿವಿಧ ಊರುಗಳಿಂದ ತಮ್ಮ ಚಿತ್ರ ವಿಚಿತ್ರ ಸಮಸ್ಯೆಗಳಿಗೆ ಪರಿಹಾರ ಕೇಳಲು ಕರೆ ಮಾಡುವ ಜನರಿಗೆ ಕೊಡುವ ಉಚಿತ ಸಲಹೆಗಳಿಗೆ ರಂಗ ಚೌಕಟ್ಟು ಸಿಕ್ಕಿದೆ.

ನಾಟಕದ ನಡುವೆ ಬರುವ ಡುಂಡಿರಾಜರ ಹಾಸ್ಯ ಚುಟುಕುಗಳು ಪ್ರೇಕ್ಷಕರನ್ನು ನಗುವಂತೆ ಮಾಡುತ್ತವೆ.

ಸ್ಥಳ: ವಾಡಿಯಾ ಸಭಾಂಗಣ, ದಿ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್. ಬಸವನಗುಡಿ. ಸಂಜೆ 7 ಗಂಟೆಗೆ. ವಿವರಗಳಿಗೆ: 99459 77184

ಬೆಂಗಳೂರು ಕಿರುನಾಟಕೋತ್ಸವ ಅಂತಿಮ ಹಂತದ ಸ್ಪರ್ಧೆ ಇಂದು

ಪ್ರವರ ಥಿಯೇಟರ್ ಮತ್ತು ಅಶ್ವ ಘೋಷ ಥಿಯೇಟರ್ ಟ್ರಸ್ಟ್ ಜಂಟಿಯಾಗಿ ಕಳೆದ ಮೂರು ವರ್ಷಗಳಿಂದ 'ಬೆಂಗಳೂರು ಕಿರುನಾಟಕೋತ್ಸವ'ವನ್ನು ಆಯೋಜಿಸುತ್ತ ಬಂದಿದೆ.

ಮೊದಲ ಹಂತದ ಸ್ಪರ್ಧೆಯಲ್ಲಿ 15 ತಂಡಗಳು ಭಾಗವಹಿಸಿದ್ದು, ಅದರಲ್ಲಿ 7 ತಂಡಗಳು ಅಂತಿಮ ಹಂತಕ್ಕೆ ಆಯ್ಕೆಯಾಗಿವೆ. ಅಂತಿಮ ಹಂತದ ಸ್ಪರ್ಧೆ ಜುಲೈ 13ರಂದು ಶನಿವಾರ ಸಂಜೆ 5.45ಕ್ಕೆ ನಡೆಯಲಿದೆ. ಬಸವೇಶ್ವರ ನಗರದಲ್ಲಿರುವ ಕೆಇಎ ಪ್ರಭಾತ್ ರಂಗಮಂದಿರದಲ್ಲಿ ನಡೆಯಲಿದೆ. ಈ ಬಾರಿಯ ನಿರೂಪಣಾ ವಿಷಯ ಸಮಾನತೆ.

ಪ್ರಶಸ್ತಿಗಳು ಹೀಗಿವೆ: ಅತ್ಯುತ್ತಮ ನಾಟಕ (ತೀರ್ಪುಗಾರರ ಆಯ್ಕೆ) - ಫಲಕ ಮತ್ತು ₹ 10,000. ಅತ್ಯುತ್ತಮ ನಾಟಕ (ಪ್ರೇಕ್ಷಕರ ಆಯ್ಕೆ) - ಫಲಕ ಮತ್ತು ₹ 10,000. 'ಆರ್ .ನಾಗೇಶ್' ಅತ್ಯುತ್ತಮ ನಿರ್ದೇಶನ - ಫಲಕ ಮತ್ತು ₹ 2,500. 'ಸಂಚಾರಿ ವಿಜಯ್' ಅತ್ಯುತ್ತಮ ನಟ - ಫಲಕ ಮತ್ತು ₹ 2,500. 'ಉಮಾಶ್ರೀ' ಅತ್ಯುತ್ತಮ ನಟಿ - ಫಲಕ ಮತ್ತು 2,500/- ನಗದು. ಅತ್ಯುತ್ತಮ ಕಥೆ (ಸ್ವರಚಿತ) - ಫಲಕ ಮತ್ತು ₹ 2,500. ಅತ್ಯುತ್ತಮ ನಾಟಕ ವಿನ್ಯಾಸ - ಫಲಕ ಮತ್ತು ₹ 2,500. ಅತ್ಯುತ್ತಮ ಭಿತ್ತಿಪತ್ರ ವಿನ್ಯಾಸ - ಫಲಕ ಮತ್ತು ₹2,500.

ಮಾಹಿತಿಗಾಗಿ ಸಂಪರ್ಕಿಸಿ: 9902590303

ಅಂತಿಮ ಸುತ್ತಿಗೆ ಆಯ್ಕೆಯಾದ ತಂಡಗಳು

ಕಲಾ ಕದಂಬ ಆರ್ಟ್ ಸೆಂಟರ್‌ನ 'ಅದು' ನಾಟಕ. ರಚನೆ ಮತ್ತು ನಿರ್ದೇಶನ ತೇಜಸ್ ಗೌಡ ಕೆ.

ಹತ್ತು ನಾಲ್ಕು ಮೆಟ್ಟಿಲು– ಧ್ವನಿ ತಂಡ. ನಿರ್ದೇಶನ; ಮಧುಸೂದನ್ ಕನೇಕಲ್.

ನೀವಾ ಅಥವಾ ನಾವಾ– ಹೆಜ್ಜೆ ಥಿಯೇಟರ್. ರಚನೆ ಮತ್ತು ನಿರ್ದೇಶನ: ಹೇಮಂತ ಕುಮಾರ್.

ರಾಮ ಈಸ್ ಈಕ್ವೆಲ್ ಟು ರಾಮ– ವೀಕೆಂಡ್ ಥಿಯೇಟರ್,ಆನೇಕಲ್. ರಚನೆ ಮತ್ತು ನಿರ್ದೇಶನ– ಮದನ್ ರಂಗಭೂಮಿ.

ಸಮಾವಸರ: ತಂಡ –ಕಲಾರಾಧ್ಯ. ರಚನೆ ಮತ್ತು ನಿರ್ದೇಶನ: ಚಂದನ್ ವಸಿಷ್ಠ.

ಚವರಿ– ಸಮತಾರಂಗ. ರಚನೆ: ಟಿ.ಎಸ್.ಗೊರವರ. ನಿರ್ದೇಶನ: ನಾಗೇಶ ಎನ್. ಕೋಲಾರ್.

ಅಲೆಮಾರಿ ಭಾರತ– ಕಾಜಾಣ ತಂಡ. ರಚನೆ ಮತ್ತು ನಿರ್ದೇಶನ– ಬೇಲೂರು ರಘುನಂದನ್.

BENGALURU SHORT-PLAY FESTIVAL
ಬೆಂಗಳೂರು ಕಿರುನಾಟಕೋತ್ಸವ

14ಕ್ಕೆ ದ್ವಂದ್ವ ಪಿಟೀಲು ವಾದನ ಹಾಗೂ ಗುರುವಂದನೆ

ವಯೋಲಿನ್ ವಾದನ ಚತುರ ವಿದ್ವಾನ್ ಬಸವನಗುಡಿ ಜಿ.ನಾಗರಾಜ್ ಅವರ 80ನೇ ಜನ್ಮದಿನೋತ್ಸವ-ಸಂಸ್ಮರಣೆ ಪ್ರಯುಕ್ತ ವಿಶೇಷ ಸಂಗೀತ ಕಛೇರಿಯನ್ನು ಜುಲೈ 14ರಂದು ಭಾನುವಾರ ಆಯೋಜಿಸಲಾಗಿದೆ.

ಆವಾಹನ ಕಲ್ಚರಲ್ ಟ್ರಸ್ಟ್ ಈ ಕಾರ್ಯಕ್ರಮ ಆಯೋಜಿಸಿದ್ದು, ವಿದ್ವಾನ್ ಬಿ.ಯು. ಗಣೇಶ್ ಪ್ರಸಾದ್ ಮತ್ತು ವಿದ್ವಾನ್ ಬಿ.ಕೆ.ರಘು ಅವರಿಂದ ದ್ವಂದ್ವ ವಯೋಲಿನ್ ವಾದನವಿರಲಿದೆ. ವಿದ್ವಾನ್ ಅಮೃತ್ ಎನ್. ಅವರು ಮೃದಂಗದಲ್ಲಿ ಹಾಗೂ ವಿದ್ವಾನ್ ಜಿ.ಓಂಕಾರ್ ಘಟಂನಲ್ಲಿ ಸಹಕರಿಸುವರು.

ಬಳಿಕ ಯದುಗಿರಿ ಮಠದ ಯತಿರಾಜ ನಾರಾಯಣ ರಾಮಾನುಜ ಜೀಯಾರ್ ಸ್ವಾಮೀಜಿ ಹಾಗೂ ಮೃದಂಗ ವಿದ್ವಾನ್ ಆನೂರು ಅನಂತಕೃಷ್ಣ ಶರ್ಮಾ ಉಪಸ್ಥಿತಿಯಲ್ಲಿ ಸಭಾ ಕಾರ್ಯಕ್ರಮ ನಡೆಯಲಿದೆ.

80ನೇ ವರ್ಷಕ್ಕೆ ಕಾಲಿರಿಸಿರುವ ಮೃದಂಗ ವಿದ್ವಾನ್ ಎಂ.ವಾಸುದೇವ ರಾವ್ ಹಾಗೂ ಸಂಗೀತ ಕ್ಷೇತ್ರದಲ್ಲಿ 80 ವರ್ಷ ಸೇವೆ ಸಲ್ಲಿಸಿರುವ ವಿದ್ವಾನ್ ಎ.ವಿ.ಆನಂದ್ ಅವರಿಗೆ ಗುರುವಂದನೆ ಹಮ್ಮಿಕೊಳ್ಳಲಾಗಿದೆ. ಸಂಗೀತಾಸಕ್ತರಿಗೆ ಮುಕ್ತ ಪ್ರವೇಶವಿದೆ ಎಂದು ಟ್ರಸ್ಟ್‌ನ ಅಮೃತ್ ಎನ್. ಮತ್ತು ಸಂಧ್ಯಾ ತಿಳಿಸಿದ್ದಾರೆ

ಕಾರ್ಯಕ್ರಮ ನಡೆಯುವ ಸ್ಥಳ: ಕನ್ನಡ ಸಾಹಿತ್ಯ ಪರಿಷತ್, ಬೆಳಿಗ್ಗೆ 9.45ರಿಂದ.

ಸೈನಸ್ ಆಗಲಿ ಮೈನಸ್

ಮಳೆಗಾಲ ಬಂತೆಂದರೆ ಆರೋಗ್ಯದಲ್ಲಿ ವ್ಯತ್ಯಯವಾಗುವುದು ಸಹಜ. ಅದರಲ್ಲಿಯೂ ನೆಗಡಿ, ಶೀತ ಬಹಳ ತೊಂದರೆ ಕೊಡುವ ಸಮಸ್ಯೆ. ಜತೆಗೆ ಬ್ಯಾಕ್ಟೀರಿಯಾ, ವೈರಾಣುಗಳ ಸೋಂಕು ಇದ್ದೇ ಇರುತ್ತದೆ. ದೇಹದ ವಿವಿಧ ಭಾಗಗಳಲ್ಲಿ ಸೋಂಕು ಉಂಟಾಗಿ ತೊಂದರೆಯಾಗಬಹುದು. ಅದರಲ್ಲಿ ಸೈನಸ್‌ನಲ್ಲಿ ಉಂಟಾಗುವ ಸೋಂಕು ಕೂಡ ಒಂದು.

ಸೈನಸ್ ಸೋಂಕುಗಳು ಮೇಲ್ನೋಟಕ್ಕೆ ಗಣನೀಯ ಅನಿಸದೇ ಹೋದರೂ ಸ್ವಲ್ಪ ನಿರ್ಲಕ್ಷ್ಯ ವಹಿಸಿದರೂ ದೀರ್ಘಕಾಲ ತೊಂದರೆಯನ್ನು ತರುವಂಥ ಸಮಸ್ಯೆಯಾಗಿದೆ. ಎಂಟು ಭಾರತೀಯರಲ್ಲಿ ಒಬ್ಬರಿಗೆ ದೀರ್ಘಕಾಲದ ಸೈನುಟಿಸ್ ಸಮಸ್ಯೆ ಉಂಟಾಗಬಹುದು. ಇದನ್ನು ರೈನೋಸಿನುಸಿಟಿಸ್ ಎಂದು ಕರೆಯುತ್ತಾರೆ.

ಮನುಷ್ಯನ ತಲೆಬುರುಡೆಯಲ್ಲಿ ನಾಲ್ಕು ಬಗೆಯ ಸೈನಸ್ ಕುಳಿಗಳಿವೆ. ಅವುಗಳ ನಡುವೆ ಸಣ್ಣ ಕಾಲುವೆಯಂಥ ಹಾದಿಯಿರುತ್ತದೆ. ಈ ಸೈನಸ್‌ಗಳಲ್ಲಿ ಉತ್ಪತ್ತಿಯಾಗುವ ತೆಳ್ಳಗಿನ, ನೀರಿನಂಶದ ಲೋಳೆಯು ಸಾಮಾನ್ಯವಾಗಿ ಮೂಗಿನೊಳಕ್ಕೆ ಮುಕ್ತವಾಗಿ ಹರಿಯುತ್ತದೆ. ಇವು ಸೂಕ್ಷ್ಮಜೀವಿಗಳು, ಅಲರ್ಜಿ ಹಾಗೂ ಸೋಂಕಿನಿಂದ ಮುಕ್ತವಾಗಿರುತ್ತದೆ. ಇದೇ ಕುಳಿಗಳಲ್ಲಿ ದಪ್ಪ ಲೋಳೆಯ, ಊರಿಯೂತವನ್ನು ತಂದೊಡ್ಡುವ ಬ್ಯಾಕ್ಟೀರಿಯಾ ಮತ್ತು ಅಲರ್ಜಿಯ ಪರಿಣಾಮ ದ್ರವ ಸಂಗ್ರಹಗೊಳ್ಳುತ್ತದೆ. ಇದು ಒತ್ತಡಕ್ಕೆ ಕಾರಣವಾಗುತ್ತದೆ.

ತೊಂದರೆಯೇನು?

ಈ ಸೈನಸ್ ಸೋಂಕು, ನೆಗಡಿ ಅಲರ್ಜಿ, ಕೋವಿಡ್ ಸೋಂಕು ಮತ್ತು ಶೀತಗಳ ನಡುವಿನ ವ್ಯತ್ಯಾಸವನ್ನು ಕಂಡುಹಿಡಿಯುವುದು ತುಸು ಕಷ್ಟ. ಏಕೆಂದರೆ ಈ ಎಲ್ಲದರ ರೋಗಲಕ್ಷಣಗಳು ಒಂದೇ ತೆರನಾಗಿರುತ್ತವೆ. ಶೀತವು ಸಾಮಾನ್ಯವಾಗಿ ವಾರದವರೆಗೆ ಇರುತ್ತದೆ. ಆಮೇಲೆ ಕಡಿಮೆಯಾಗುತ್ತ ಹೋಗುತ್ತದೆ.

ಇನ್ನು ಸಾಮಾನ್ಯ ನೆಗಡಿಯಲ್ಲಿಯೂ ಮೂಗು ಸೋರುವಿಕೆ, ಕಣ್ಣು ಹಾಗೂ ಮೂಗು ತುರಿಕೆ, ಸೀನುವಿಕೆ ಇರುತ್ತದೆ. ಆದರೆ ಸೈನಸ್‌ನಲ್ಲಿ ಈ ಲಕ್ಷಣಗಳ ಜತೆಗೆ ಮುಖ ಊದಿದಂತೆ ಆಗುತ್ತದೆ. ಬಾವಿನಿಂದಾಗಿ ನೋವು ಉಂಟಾಗುತ್ತದೆ. ಸೈನಸ್‌ಗಳಲ್ಲಿರುವ ಸಣ್ಣ ಕೂದಲಿನಂಥ ರಚನೆಗಳು ಸೈನಸ್ ಕುಳಿಗಳಲ್ಲಿ ಲೋಳೆಯನ್ನು ಹೊರಹಾಕುತ್ತವೆ. ಸೂಕ್ಷ್ಮಜೀವಿಗಳು ಹಾಗೂ ಮಾಲಿನ್ಯಕಾರಕ ಅಂಶಗಳನ್ನು ತೆಗೆದುಹಾಕುತ್ತದೆ. ಶೀತ ಹಾಗೂ ವೈರಾಣು ಜ್ವರಗಳಿಂದ ಸೈನಸ್ ಕುಳಿಗಳಿಗೆ ಸೋಂಕು ತಗುಲಿದರೆ, ವೈರಾಣು ಸೈನುಟಿಸ್ ಸಂಭವಿಸುತ್ತದೆ. ಕೆಲವೊಮ್ಮೆ ಬ್ಯಾಕ್ಟೀರಿಯಾದ ಸೋಂಕುಗಳಿಂದಲೂ ಸೈನುಟಿಸ್‌ಗಳಿಗೆ ತೊಂದರೆಯಾಗಬಹುದು. ಇದನ್ನು ದೀರ್ಘಕಾಲದ ಮತ್ತು ಮರುಕಳಿಸುವ ಸೈನುಟಿಸ್ ಎನ್ನಲಾಗುತ್ತದೆ. ವೈರಾಣು, ಬ್ಯಾಕ್ಟೀರಿಯಾ, ಶಿಲೀಂಧ್ರಗಳ ಸೋಂಕಿನ ಆಧಾರದ ಮೇಲೆ ಸೈನಸೈಟಿಸ್ ಅನ್ನು ವರ್ಗೀಕರಿಸಬಹುದು. ಸೈನಸೈಟಿಸ್‌ನ ಪ್ರಮುಖ ಲಕ್ಷಣಗಳಲ್ಲಿ ಹಣೆ, ಮೂಗಿನ ಭಾಗದಲ್ಲಿ ಒತ್ತಡ, ನೋವು, ಬಣ್ಣ ಬಣ್ಣದ ಮೂಗು ಸೋರುವಿಕೆ (ಸಾಮಾನ್ಯವಾಗಿ ಹಳದಿ ಮತ್ತು ಹಸಿರು).ಆಘ್ರಾಣಶಕ್ತಿ ಕುಂದುವುದು, ಜ್ವರ, ತಲೆನೋವು, ಮೇಲಿನ ದವಡೆಯ ಭಾಗದಲ್ಲಿ ನೋವು ಮತ್ತು ಆಯಾಸ ಇರುತ್ತದೆ. ನಿಗದಿತ ಸಂದರ್ಭಗಳಲ್ಲಿ ಹಬೆ ತೆಗೆದುಕೊಳ್ಳುವುದು, ಮೂಗಿನ ಡ್ರಾಪ್ಸ್ ಬಳಸುವುದು, ಮುಖಕ್ಕೆ ಬೆಚ್ಚಗಿನ ನೀರು ಬಳಸುವುದರಿಂದ ಊತ ಕಡಿಮೆಯಾಗುತ್ತದೆ. ತಜ್ಞ ವೈದ್ಯರ ನೆರವಿನಿಂದ ಆ್ಯಂಟಿ ಆಲರ್ಜಿಕ್ ಔಷಧಿ ಬಳಸಬಹುದು.

ಯಾರಲ್ಲಿ ಹೆಚ್ಚು?

ರೋಗನಿರೋಧಕ ಶಕ್ತಿ ಕಡಿಮೆ ಹೊಂದಿರುವವರು ಪದೇ ಪದೇ ಶೀತ, ನೆಗಡಿ, ಕೆಮ್ಮಿನ ಸಮಸ್ಯೆಗೆ ತುತ್ತಾಗುತ್ತಾರೆ. ಅದರಲ್ಲಿಯೂ ಶಿಲೀಂಧ್ರ, ಬ್ಯಾಕ್ಟೀರಿಯಾಗಳಿಂದ ಉಂಟಾಗುವ ಸೈನಸ್ ಸೋಂಕು ಇಂಥವರಲ್ಲಿಯೇ ಹೆಚ್ಚಾಗಿ ಕಂಡುಬರುತ್ತದೆ.

ಡಾ. ಹರ್ಷಲತಾ ಎಸ್. ಕಣ್ಣು, ಕಿವಿ, ಮೂಗುತಜ್ಞೆ, ರಾಮಕೃಷ್ಣ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ.



ಎಂಥ ಆಹಾರ ಸೇವಿಸಬೇಕು?

ಸೈನಸ್ ಸಮಸ್ಯೆ ಇರುವವರು ಆದಷ್ಟು ಅಧಿಕ ನೀರು ಸೇವನೆ ಮಾಡಬೇಕು. ಸಕ್ಕರೆರಹಿತವಾದ ಬೆಚ್ಚಗಿನ ಪಾನೀಯಗಳನ್ನು ಆಗಾಗ್ಗೆ ಸೇವಿಸುತ್ತಿರಬೇಕು. ದೇಹವು ನಿರ್ಜಲೀಕರಣಕ್ಕೆ ಒಳಗಾಗದಂತೆ ನೋಡಿಕೊಳ್ಳುವುದು ಉತ್ತಮ. ದೇಹದಲ್ಲಿ ನೀರಿನಂಶ ಹೆಚ್ಚಾಗಿದ್ದರೆ ಲೋಳೆಗಳು ತೆಳುವಾಗಿರಲು ನೆರವಾಗುತ್ತದೆ. ಆಲ್ಕೋಹಾಲ್, ಕೆಫಿನ್, ಧೂಮಪಾನವನ್ನು ಆದಷ್ಟು ತಪ್ಪಿಸಿ. ಬಿಸಿನೀರಿನ ಪಾತ್ರೆಗೆ ರೋಸ್ಮೆರಿ ಎಣ್ಣೆ, ನೀಲಗಿರಿ ಎಣ್ಣೆಯನ್ನು ಹಾಕಿ ಅದರ ಹಬೆಯನ್ನು ತೆಗೆದುಕೊಳ್ಳಿ ಅರಿಶಿನ, ಶುಂಠಿ, ಕಾಳುಮೆಣಸಿನ ಬಳಕೆ ಹೆಚ್ಚಿರಲಿ. ಆಗಾಗ್ಗೆ ಕಷಾಯ ಮಾಡಿಕೊಂಡು ಕುಡಿಯುತ್ತೀರಿ. ತಾಜಾ ಶುಂಠಿ ರಸಕ್ಕೆ ಶುದ್ಧ ಜೇನುತುಪ್ಪ ಸೇವಿಸಿದರೆ ತ್ವರಿತ ಉಪಶಮನ ಕಾಣಬಹುದು.

ಯಾವ ವ್ಯಾಯಾಮ ಸೂಕ್ತ?

ಬಿರುಸಿನ ನಡಿಗೆ ಹಾಗೂ ಯೋಗ, ಪ್ರಾಣಾಯಾಮಗಳನ್ನು ನಿತ್ಯ ಅಭ್ಯಾಸದಲ್ಲಿ ಅಳವಡಿಸಿಕೊಳ್ಳುವುದರಿಂದ ಸೈನಸ್ ಸ್ಥಿತಿ ಸುಧಾರಿಸುತ್ತದೆ. ತಜ್ಞರ ಮಾರ್ಗದರ್ಶನದ ಮೇಲೆ ಪ್ರಾಣಾಯಾಮಗಳನ್ನು ಮಾಡಬಹುದು.

ಯುವ ವಾಸ್ತುಶಿಲ್ಪಿ, ವಿನ್ಯಾಸಕಾರರಿಗೆ 'ಐಡಾ ಅವಾರ್ಡ್'

ಚೆನ್ನೈನಲ್ಲಿ ನಡೆದ ಸಮಾರಂಭದಲ್ಲಿ 'ಐಡಾ ಪ್ರಶಸ್ತಿ' ಪುರಸ್ಕೃತರು, ಸ್ಪರ್ಧೆಯ ತೀರ್ಪುಗಾರರು ಮತ್ತು ನಿಪ್ಪಾನ್ ಪೇಂಟ್ ಕಂಪನಿಯ ಸಿಬ್ಬಂದಿ

ಗಾಣಧಾಳು ಶ್ರೀಕಂಠ

ಜಗಮಗಿಸುವ ಬೆಳಕಿನಲ್ಲಿ, ಕಲಾವಿದರು ಭಾರತದ ವೈವಿಧ್ಯಮಯ ಸಾಂಸ್ಕೃತಿಕ ಲೋಕವನ್ನೇ ಅನಾವರಣಗೊಳಿಸಿದರು. ಯುವ ವಾಸ್ತುಶಿಲ್ಪಿಗಳು, ಒಳಾಂಗಣ ವಿನ್ಯಾಸಕಾರರು, ಸ್ಥಳೀಯ ಪರಿಸರ, ಸಮುದಾಯಗಳ ಸುಸ್ಥಿರ ಬದುಕಿಗಾಗಿ ರೂಪಿಸಿರುವ 'ಯೋಜನೆ'ಗಳನ್ನು ತೆರೆದಿಟ್ಟರು. ಸಭಿಕರು ಚಪ್ಪಾಳೆ ತಟ್ಟಿದರು. ಯುವ ಸಾಧಕ-ಸಾಧಕಿಯರು ಪ್ರಶಸ್ತಿಯನ್ನು ಮುಡಿಗೇರಿಸಿಕೊಂಡು ಸಂಭ್ರಮಿಸಿದರು!

ಚೆನ್ನೈನ ಐಟಿಸಿ ಗ್ರ್ಯಾಂಡ್ ಚೋಳ ಹೋಟೆಲ್‌ನಲ್ಲಿ ಕಳೆದ ವಾರ(ಜುಲೈ 5) ನಿಪ್ಪಾನ್ ಪೇಂಟ್ ಆಯೋಜಿಸಿದ್ದ ಏಷ್ಯಾ ಯಂಗ್ ಡಿಸೈನರ್ ಅವಾರ್ಡ್ 2023-24 (AIDA 2024) ನ ಅಂತಿಮ ಸುತ್ತಿನ ಆಯ್ಕೆ(ಫಿನಾಲೆ) ಮತ್ತು ಪ್ರಶಸ್ತಿ ಪ್ರದಾನ ಸಮಾರಂಭದ ಸಂಭ್ರಮದ ತುಣುಕುಗಳಿವು.

ನಿಪ್ಪಾನ್ ಪೇಂಟ್‌ನ ಸಾಂಸ್ಥಿಕ ಸಾಮಾಜಿಕ ಹೊಣೆಗಾರಿಕೆ (ಸಿಎಸ್‌ಆರ್) ಭಾಗವಾಗಿರುವ 'ಐಡಾ ಅವಾರ್ಡ್' ಆರಂಭವಾಗಿದ್ದು 2008ರಲ್ಲಿ. ನಿರ್ದಿಷ್ಟ ಆಶಯದೊಂದಿಗೆ ಪ್ರತಿ ವರ್ಷ ವಿವಿಧ ಪ್ರಶಸ್ತಿ ಕಾರ್ಯಕ್ರಮ ನಡೆಯುತ್ತಾ ಬಂದಿದೆ. ಈ ವರ್ಷದ ಫಿನಾಲೆ ಹಾಗೂ ಪ್ರಶಸ್ತಿ ಪ್ರದಾನ ಸಮಾರಂಭವನ್ನು ಭಾರತದಲ್ಲಿ (ಚೆನ್ನೈ)ನಲ್ಲಿ ಆಯೋಜಿಸಲಾಗಿತ್ತು. ಈ ವರ್ಷದ ಥೀಮ್ 'ಉದ್ದೇಶಪೂರ್ವಕ ವಿನ್ಯಾಸಗಳ ಗೆಲುವಿಗಾಗಿ ಕೇಂದ್ರೀಕೃತ ಪ್ರಯತ್ನ(CONVERGE: Championing Purposeful Designs).

17 ರಾಷ್ಟ್ರಗಳ ಫೈನಲಿಸ್ಟ್‌ಗಳು

ಯುವ ವಾಸ್ತುಶಿಲ್ಪಿಗಳು ಹಾಗೂ ಒಳಾಂಗಣ ವಿನ್ಯಾಸಕಾರರನ್ನು ಉತ್ತೇಜಿಸುವ 'ಐಡಾ

ಅಲಿಫಿಯಾ

ಲಿಮ್ ಜೆಂಗ್ ಯಿಂಗ್

ಪ್ರಶಸ್ತಿ'ಗಾಗಿ ಈ ವರ್ಷ ಭಾರತ, ಇಂಡೋನೇಷ್ಯಾ ಸೇರಿದಂತೆ ವಿವಿಧ ರಾಷ್ಟ್ರಗಳಿಂದ ಆರು ಸಾವಿರ ಅರ್ಜಿ ಸಲ್ಲಿಕೆಯಾಗಿದ್ದವು. ಚೆನ್ನೈನಲ್ಲಿ ನಡೆದ ಅಂತಿಮ ಸುತ್ತಿನ ಆಯ್ಕೆಯಲ್ಲಿ ಬೆಂಗಳೂರಿನ ಆರ್.ವಿ. ಇನ್‌ಸ್ಟಿಟ್ಯೂಟ್ ಆಫ್ ಆರ್ಕಿಟೆಕ್ಚರ್‌ನ ಎರೊಮಿತ ರಮೇಶ್ ಮತ್ತು ಮುಂಬೈನ ಅಕಾಡೆಮಿ ಆಫ್ ಆರ್ಕಿಟೆಕ್ಚರ್‌ನ ಸೂರಜ್ ಇಫೆ ಸೇರಿ 17 ರಾಷ್ಟ್ರಗಳ ಮೂವತ್ನಾಲ್ಕು ಸ್ಪರ್ಧಿಗಳು ಪಾಲ್ಗೊಂಡಿದ್ದರು. ಮೂರು ದಿನಗಳು ನಡೆದ ಅಂತಿಮ ಸುತ್ತಿನ ಆಯ್ಕೆಯಲ್ಲಿ ಫೈನಲಿಸ್ಟ್‌ಗಳು ತಮ್ಮ 'ವಿನ್ಯಾಸ'ಗಳನ್ನು ಪ್ರಸ್ತುತಪಡಿಸಿದರು.

ಅಂತಿಮ ಸುತ್ತಿನಲ್ಲಿ ಒಳಾಂಗಣ ವಿನ್ಯಾಸ ವಿಭಾಗದಲ್ಲಿ ಇಂಡೋನೇಷ್ಯಾದ ಟೆಲ್ಕಾಂ ವಿಶ್ವ ವಿದ್ಯಾಲಯದ ಅಲಿಫಿಯಾ ಹಾಗೂ ಆರ್ಕಿಟೆಕ್ಚರ್ ವಿಭಾಗದಲ್ಲಿ ಮಲೇಷ್ಯಾದ ಲಿಂಗ್ ಜಂಗ್ ಯಿಂಗ್ ಅವರು 'ಐಡಾ ವರ್ಷದ ಉತ್ತಮ ವಿನ್ಯಾಸಕಾರ' ಪ್ರಶಸ್ತಿಗೆ ಆಯ್ಕೆಯಾದರು. ಪ್ರಶಸ್ತಿ ವಿಜೇತರಿಗೆ ಜೂನ್ 2025ರಂದು ಹಾರ್ವರ್ಡ್ ವಿಶ್ವವಿದ್ಯಾಲಯ ಸಮೂಹದ ಗ್ರಾಜುಯೇಟ್ ಸ್ಕೂಲ್ ಆಫ್ ಡಿಸೈನ್‌ನಲ್ಲಿ ನಡೆಯಲಿರುವ ಮೂರು ದಿನಗಳ 'ಡಿಸೈನ್ ಡಿಸ್ಕವರಿ' ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವ ಅವಕಾಶ ಕಲ್ಪಿಸಲಾಗುತ್ತಿದೆ. ಮೂರು ದಿನಗಳು ನಡೆಯುವ ಈ ತರಬೇತಿ 10 ಸಾವಿರ ಡಾಲರ್ ಮೌಲ್ಯದ್ದಾಗಿದೆ.

ಸ್ಪರ್ಧೆಯಷ್ಟೇ ಅಲ್ಲ..

'ಐಡಾ ಪ್ರಶಸ್ತಿ, ಒಂದು ಸ್ಪರ್ಧೆಯಷ್ಟೇ ಅಲ್ಲ, ವಿಶೇಷ ತರಬೇತಿ ನೀಡುವ ಹಾಗೂ ನಮ್ಮ ಸಾಮರ್ಥ್ಯ ವೃದ್ಧಿಸುವಂತಹ ಕಾರ್ಯಕ್ರಮ' ಎಂದು ಅಂತಿಮ ಸುತ್ತಿನಲ್ಲಿದ್ದ ಬೆಂಗಳೂರಿನ ಎರೊಮಿತ ರಮೇಶ್ ಪ್ರತಿಕ್ರಿಯಿಸಿದರು.

ಉದಯೋನ್ಮುಖರಿಗೆ ವೇದಿಕೆ

'ಯುವ ವಿನ್ಯಾಸಕರನ್ನು ಪ್ರೋತ್ಸಾಹಿಸುವ ನಿಪ್ಪಾನ್ ಪೇಂಟ್ ಕಂಪನಿಯ ಬದ್ಧತೆ ಶ್ಲಾಘನೀಯ. ಇದು ಈ ಕ್ಷೇತ್ರದ ಶ್ರೇಷ್ಠತೆಯನ್ನು ಗುರುತಿಸಿ ಭವಿಷ್ಯದಲ್ಲಿ ಉಪಯೋಗವಾಗುವಂತಹ ವಿನ್ಯಾಸಗಳ ಮೇಲೆ ಹೂಡಿಕೆ ಮಾಡುತ್ತದೆ. ಉದ್ಯಮ ಮತ್ತು ತಂತ್ರಜ್ಞಾನದಲ್ಲಿ ಪ್ರಗತಿಯೊಂದಿಗೆ ವಿಕಸನಗೊಳ್ಳುತ್ತಿರುವ ಸಂದರ್ಭದಲ್ಲಿ ಪ್ರತಿ ವರ್ಷ ಇಲ್ಲಿ ಪ್ರವೇಶ ಪಡೆಯುವ ಹೊಸ ಬಗೆಯ ವಿನ್ಯಾಸಗಳ ಗುಣಮಟ್ಟವನ್ನು ನೋಡಲು ಹೆಮ್ಮೆಯೆನಿಸುತ್ತಿದೆ' ಎಂದು ಆರ್ಕಿಟೆಕ್ಟ್ ವಿಭಾಗದ ತೀರ್ಪುಗಾರರಾದ ನೀನಾ ಬೈಲಾನ್ ಆರ್ಕೆ ಅಭಿಪ್ರಾಯಪಟ್ಟರು.

'ಈ ಸ್ಪರ್ಧೆಯು ಅರ್ಥಪೂರ್ಣ ನಾವೀನ್ಯ ಮತ್ತು ಸೃಜನಶೀಲತೆಯ ದಾರಿದೀಪವಾಗಿದೆ. ಉದಯೋನ್ಮುಖ ಪ್ರತಿಭೆಗಳು ಹೊರ ಹೊಮ್ಮಲು ಮತ್ತು ಅಭಿವೃದ್ಧಿ ಹೊಂದಲು ಉತ್ತಮ ವೇದಿಕೆಯಾಗಿದೆ' ಎಂದು ಒಳಾಂಗಣ ವಿನ್ಯಾಸ ವಿಭಾಗದ ತೀರ್ಪುಗಾರರಾದ ಸಂತಿ ಅಲೋಸಿಯಸ್ ಅಭಿಪ್ರಾಯಪಟ್ಟರು.

ವಿವಿಧ ಸಾಧಕರಿಗೂ ಪ್ರಶಸ್ತಿ ಇದರ ಜೊತೆಗೆ, ಆರ್ಕಿಟೆಕ್ಚರ್ ಹಾಗೂ ಇಂಟೀರಿಯರ್ ಡಿಸೈನ್ ವಿಭಾಗದಲ್ಲಿ ಉತ್ತಮ ಸಾಧನೆ ಮಾಡಿದ ಏಳು ಯುವ ಸಾಧಕ- ಸಾಧಕಿಯರಿಗೆ ಪ್ರಶಸ್ತಿ ನೀಡಲಾಯಿತು. ಆರ್ಕಿಟೆಕ್ಚರಲ್ ವಿಭಾಗ: ಇರಾನ್‌ನ ಅಮೀರ್‌ಮಸೂದ್ ಅಫಜಾನಿಝಾದೆ ಅವರಿಗೆ 'ಬೆಸ್ಟ್ ಡಿಸೈನ್ ಇಂಪ್ಯಾಕ್ಟ್ ಅವಾರ್ಡ್', ವಿಯೆಟ್ನಾಂನ ಡನ್ ಮಿನ್ ಅನ್ ಅವರಿಗೆ 'ಅತ್ಯುತ್ತಮ ಸುಸ್ಥಿರ ವಿನ್ಯಾಸ ಪ್ರಶಸ್ತಿ', ಶ್ರೀಲಂಕಾದ ನಿರ್ಲಾಂಧ್ರ ಫೊನೆಸ್ಕಾ ಅವರಿಗೆ 'ನಿಪ್ಪಾನ್ ಪೇಂಟ್ ಕಲರ್ ಪ್ರಶಸ್ತಿ' ನೀಡಿ ಗೌರವಿಸಲಾಯಿತು.

ಒಳಾಂಗಣ ವಿನ್ಯಾಸ: ಮಲೇಷ್ಯಾದ ಜೆಸ್ಲಿನ್ ಟ್ಯೂ ಅವರಿಗೆ 'ಬೆಸ್ಟ್ ಡಿಸೈನ್ ಇಂಪ್ಯಾಕ್ಟ್ ಅವಾರ್ಡ್', ಸಿಂಗಪುರದ ಲಿಮ್ ಜಿಯಾ ಝುನ್ ಅವರಿಗೆ 'ಅತ್ಯುತ್ತಮ ಸುಸ್ಥಿರ ವಿನ್ಯಾಸ ಪ್ರಶಸ್ತಿ' ಹಾಗೂ ಥಾಯ್ಲೆಂಡ್‌ನ ಪನಿಸಾ ವಾಂಗ್‌ಚಾವೊಮ್ ಅವರಿಗೆ 'ನಿಪ್ಪಾನ್ ಪೇಂಟ್ ಕಲರ್ ಅವಾರ್ಡ್' ನೀಡಿ ಗೌರವಿಸಲಾಯಿತು. ವಿಯೆಟ್ನಾಂನ ಟ್ರೂಂಗ್ ತಾನ್ ಕ್ವೀ ಅವರಿಗೆ 'ತೀರ್ಪುಗಾರರ ಆಯ್ಕೆ ಪ್ರಶಸ್ತಿಗೆ ಪಾತ್ರರಾದರು.

(ಕಂಪನಿಯ ಆಹ್ವಾನದ ಮೇರೆಗೆ ಪ್ರತಿನಿಧಿ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು)

ಡಾರ್ಲಿಂಗ್ ಕೃಷ್ಣ, ಅಮೃತ ಅಯ್ಯಂಗಾರ್

ಜಿಮ್‌ಗೆ ಹೋದರೆ ನಟನಾಗುವುದಿಲ್ಲ: ಪ್ರಕಾಶ್ ರಾಜ್

ಸಿನಿ ಹನಿ

'ಆರ್.ಸಿ. ಸ್ಟುಡಿಯೊಸ್'ನಲ್ಲಿ ನಿರ್ದೇಶಕ ಆರ್.ಚಂದ್ರು ನಿರ್ಮಾಣ ಮಾಡುತ್ತಿರುವ 'ಫಾದರ್' ಸಿನಿಮಾದ ಚಿತ್ರೀಕರಣ ಮೈಸೂರಿನಲ್ಲಿ ನಡೆಯುತ್ತಿದೆ. ಮೊದಲ ಹಂತದ ಚಿತ್ರೀಕರಣದ ವೇಳೆ ಚಿತ್ರತಂಡ ಸುದ್ದಿಗೋಷ್ಠಿಯಲ್ಲಿ ಚಿತ್ರದ ಬಗ್ಗೆ ಮಾಹಿತಿ ಹಂಚಿಕೊಂಡಿತು.



ಪ್ರಕಾಶ್‌ರಾಜ್

'ಈ ಚಿತ್ರದಲ್ಲಿ ನಾನು ಸಹಾಯಕ ನಿರ್ದೇಶಕನಾಗಿ ಕೆಲಸ ಮಾಡುತ್ತಿದ್ದೇನೆ' ಎಂದು ಮಾತು ಆರಂಭಿಸಿದ ಆರ್.ಚಂದ್ರು, 'ಫಾದರ್ ಚಿತ್ರಕ್ಕೆ ಪ್ರಕಾಶ್ ರಾಜ್ ಅವರು ಆಧಾರಸ್ತಂಭ. ಗಟ್ಟಿಯಾದ ಕಥೆ ಸಿನಿಮಾದಲ್ಲಿದೆ. ಭಾವನೆಗಳು, ಲವಲವಿಕೆ ಈ ಚಿತ್ರದಲ್ಲಿದ್ದು ಅಪ್ಪ-ಮಗನ ಬಾಂಧವ್ಯಕ್ಕೆ ಇದೊಂದು ಉದಾಹರಣೆಯಾಗಲಿದೆ. ಚಿತ್ರದ ನಿರ್ದೇಶಕ ರಾಜ್‌ಮೋಹನ್ ಅವರಿಗೆ ಸಹಾಯಕ ನಿರ್ದೇಶಕನಾಗಿ ನಾನು ಕೆಲಸ ಮಾಡುತ್ತಿದ್ದೇನೆ. ಇದು 'ಫಾದರ್' ಮೇಲೆ ಇರುವ ನಂಬಿಕೆ' ಎಂದರು.

'ಕಬ್ಜ' ಸಿನಿಮಾದಲ್ಲಿ ನಾನು ನಟಿಸಬೇಕಿತ್ತು. ಆದರೆ ಕಾರಣಾಂತರಗಳಿಂದ ಆಗಿರಲಿಲ್ಲ. ಆ ಬೇಜಾರು ಚಂದ್ರು ಅವರಿಗೆ ಇನ್ನೂ ಇದೆ. ರಾಜ್‌ಮೋಹನ್ ಹೇಳಿದ 'ಫಾದರ್' ಕಥೆ ಮನಸ್ಸಿಗೆ ಬಹಳ ಹತ್ತಿರವಾಯಿತು. ತಂದೆ-ಮಗನ ಬಾಂಧವ್ಯದ ಕಥೆಯಾದರೂ ಅದನ್ನು ಕಟ್ಟಿರುವ ರೀತಿ, ಅದರೊಳಗಿನ ಪರಿಸ್ಥಿತಿ ಭಿನ್ನವಾಗಿತ್ತು. ಇವತ್ತಿನ ಯುವಕರು-ತಂದೆಯಂದಿರ ಕಥೆಯಿದು. ಒಳ್ಳೆಯ ಅಭಿರುಚಿಯ ಕಥೆ. ಆರ್.ಚಂದ್ರು ನಿರ್ಮಾಣ ಮಾಡುತ್ತಿರುವ ಐದೂ ಸಿನಿಮಾಗಳಲ್ಲಿ ಒಂದೊಂದು ಅಭಿರುಚಿ ಕಾಣಿಸುತ್ತಿವೆ. ಈ ರೀತಿಯ ಉತ್ಸಾಹ, ಪ್ರೋತ್ಸಾಹ ಸಿನಿಮಾ ಇಂಡಸ್ಟ್ರಿಗೆ ಬೇಕಾಗಿದೆ. ಪ್ರೇಕ್ಷಕರು ಇಂತಹ ಪ್ರಯತ್ನಗಳ ಬೆನ್ನಿಗೆ ನಿಲ್ಲಬೇಕು. ಜಿಮ್‌ಗೆ ಹೋಗಿ ನಟ ಆಗಿಬಿಡುತ್ತೇನೆ ಎಂದರೆ ಆಗುವುದಿಲ್ಲ. ಭಾಷೆ, ಸಂಸ್ಕೃತಿ, ಸಾಹಿತ್ಯದ ಬಗ್ಗೆ, ಕಥೆಯ ಪ್ರಕಾರಗಳನ್ನು ತಿಳಿದುಕೊಳ್ಳುವ ಪ್ರಯತ್ನ ಮಾಡಬೇಕು. ಪ್ರತಿಯೊಬ್ಬರೂ ಗೆಲ್ಲಲೇಬೇಕು ಎಂಬ ಒತ್ತಡದ ಸ್ಥಿತಿ ತಂದಿದ್ದೇವೆ. ಸೋಲುವ ಸಂತೋಷ ಏಕೆ ಕೊಟ್ಟಿಲ್ಲ? ನೋಡುಗನಿಗೂ ತಾಳ್ಮೆ ಇಲ್ಲದಂತಾಗಿದೆ' ಎಂದು ಚಿತ್ರರಂಗದ ಈಗಿನ ಸ್ಥಿತಿಯ ಬಗ್ಗೆ ಅಭಿಪ್ರಾಯ ವ್ಯಕ್ತ ಪಡಿಸಿದರು ಪ್ರಕಾಶ್ ರಾಜ್.

ಡಾರ್ಲಿಂಗ್ ಕೃಷ್ಣ ಮಾತನಾಡಿ, 'ಇದು ಮಿಲನಾ ಇಷ್ಟಪಟ್ಟ ಕಥೆ. ಪ್ರಕಾಶ್ ರಾಜ್ ಅವರ ಜೊತೆ ತೆರೆ ಹಂಚಿಕೊಳ್ಳುವಾಗ ಒಂದು ಸಣ್ಣ ಭಯ ಇತ್ತು. ಅದನ್ನು ತೋರಿಸಿಕೊಳ್ಳಲಿಲ್ಲ. ಆ ಭಯ ಇನ್ನೂ ಇದೆ ಎನ್ನಬಹುದು. ಅವರ ನಟನೆಯನ್ನು ನೋಡಿ ಮೈಮರೆತಿದ್ದೂ ಇದೆ. ಭಾವನಾತ್ಮಕ ಕಥಾಹಂದರವುಳ್ಳ ಈ ಸಿನಿಮಾ ಪ್ರೇಕ್ಷಕರಿಗೆ ಹತ್ತಿರವಾಗಲಿದೆ. ಹತ್ತು ದಿನದ ಚಿತ್ರೀಕರಣ ಪೂರ್ಣಗೊಂಡಿದ್ದು, ಒಂದೊಳ್ಳೆಯ ಸಿನಿಮಾವನ್ನು ತೆರೆಗೆ ತರಲಿದ್ದೇವೆ' ಎಂದರು.

ಅಂತರರಾಷ್ಟ್ರೀಯ ಮಕ್ಕಳ ನಾಟಕೋತ್ಸವ



ರಂಗಶಂಕರ ಮಕ್ಕಳಿಗೆಂದೇ ರೂಪಿಸಿ, ನಿರ್ವಹಿಸುತ್ತಿರುವ ರಾಷ್ಟ್ರದ ಅತ್ಯುತ್ತಮ ಮಕ್ಕಳ ರಂಗಭೂಮಿ ಕಾರ್ಯಕ್ರಮಗಳಲ್ಲಿ ಒಂದು 'ಆಹಾ! ಮಕ್ಕಳ ನಾಟಕೋತ್ಸವ'.

ಈ ಕಾರ್ಯಕ್ರಮವು ಬದ್ಧತೆಯ ಜೊತೆಗೆ ಮಕ್ಕಳ ಕಲಿಕೆಗೆ ಹೊಸ ಮಾದರಿಗಳನ್ನು ಒದಗಿಸುವ ಮೂಲಕ ಮಕ್ಕಳು ಮಾಹಿತಿಪೂರ್ಣ, ಕ್ರಿಯಾಶೀಲ ಮತ್ತು ಸಾಮಾಜಿಕ ಅನುಭೂತಿಯುಳ್ಳ ವ್ಯಕ್ತಿತ್ವದವರಾಗಲು ಸಹಕರಿಸುತ್ತದೆ. ಈ ಕಾರ್ಯಕ್ರಮದ ಭಾಗವಾಗಿ ಒದಗಿಸಲಾಗುವ ನಾಟಕಗಳು ಮಕ್ಕಳಿಗೆ ದೃಶ್ಯ, ಶ್ರವ್ಯ, ಮೌಖಿಕ ಮತ್ತು ದೈಹಿಕ ಚಿಂತನೆಗೆ ಪ್ರಚೋದನೆಯನ್ನು ಒದಗಿಸುವುದಲ್ಲದೆ, ಮಕ್ಕಳಲ್ಲಿ ಸೃಜನಾತ್ಮಕತೆ, ಚಿಂತನಶೀಲತೆ, ಕಲ್ಪನಾ ಶಕ್ತಿ ಹೆಚ್ಚಿಸುತ್ತದೆ ಹಾಗೂ ಎದುರಾಗಬಹುದಾದ ಸಮಸ್ಯೆಗಳನ್ನು ಪರಿಹರಿಸಲು ಉಪಾಯಗಳನ್ನು ದಾರಿಗಳನ್ನು ತೋರುವ ಮೂಲಕ ಮಾನವೀಯ ವ್ಯಕ್ತಿತ್ವ ರೂಪಿಸುತ್ತದೆ.

ಆಹಾ! ಅಂತರರಾಷ್ಟ್ರೀಯ ಮಕ್ಕಳ ರಂಗೋತ್ಸವದ ಕಾರ್ಯಕ್ರಮ ವೇಳಾಪಟ್ಟಿ ಈ ಕೆಳಗೆ ನೀಡಲಾಗಿದೆ.	
13 ಜುಲೈ	ಕ್ರಾಬ್ಬೀ (ಇಂಡಿಯಾ)
14 ಜುಲೈ	ಎ ಟ್ರೀ ಅಂಡ್ ಎ ಬಾಯ್ (ದಕ್ಷಿಣ ಕೊರಿಯಾ)
15 ಜುಲೈ	ಶ್ಪೀಲ್ ಇಮ್ ಶ್ಪೀಲ್ (ಜರ್ಮನಿ)
16 ಜುಲೈ	ಪೆಟಿಟ್ಪಾಸ್ ಅಂಡ್ ಮೀ (ಸ್ವಿಟ್ಜರ್ಲ್ಯಾಂಡ್)
17 ಜುಲೈ	ಎ ಹ್ಯಾಟ್ ಸೆಲ್ಲರ್ಸ್ ಟೇಲ್ (ಶ್ರೀಲಂಕಾ)
18 ಜುಲೈ	ಪಿನ್ಕೋಬ್ಲೂ (ಜರ್ಮನಿ)
19 ಜುಲೈ	ದ ರಾಬಿಟ್ ಅಂಡ್ ದ ಹೆಡ್ಜ್ ಹಾಗ್ (ಆಸ್ಟ್ರಿಯಾ)
ಸ್ಥಳ: ರಂಗಶಂಕರ, ಜೆ.ಪಿ.ನಗರ. ಸಂಜೆ 7.30ಕ್ಕೆ. ಮಾಹಿತಿಗೆ: 080 2659 2777	

ಆಹಾ! ಅಂತರರಾಷ್ಟ್ರೀಯ ಮಕ್ಕಳ ನಾಟಕೋತ್ಸವ 2024: ನಾಟಕೋತ್ಸವದ ಹದಿನಾಲ್ಕನೇ ಆವೃತ್ತಿ ಜುಲೈ 13ರಿಂದ 19ರವರೆಗೆ ನಡೆಯಲಿದೆ. ಈ ಮಕ್ಕಳ ರಂಗಸಪ್ತಾಹದಲ್ಲಿ ದಕ್ಷಿಣ ಕೊರಿಯಾ, ಜರ್ಮನಿ, ಆಸ್ಟ್ರಿಯಾ, ಶ್ರೀಲಂಕಾ, ಸ್ವಿಟ್ಜರ್ಲೆಂಡ್ ದೇಶಗಳ ನಾಟಕಗಳಲ್ಲದೇ ಭಾರತದ ನಾಟಕವನ್ನು ಪ್ರಸ್ತುತಪಡಿಸಲಾಗುತ್ತಿದೆ. ಈ ನಾಟಕಗಳು ಪರಿಸರ ರಕ್ಷಣೆ, ಸಹಜೀವನ, ಲಿಂಗ ಅಸಮಾನತೆ ತೊಡೆಯುವ ಹಾಗೂ ಸಂಘರ್ಷದ ಕಾಲದಲ್ಲಿ ಸಹಾನುಭೂತಿಯಿಂದ ಎದುರಿಸುವ ರೀತಿ - ಹೀಗೆ ವೈವಿಧ್ಯಮಯ ವಸ್ತುಗಳನ್ನು ಒಳಗೊಂಡಿವೆ.

ಮತ್ತೊಂದು ವಿಶೇಷವೆಂದರೆ, ಬೆಂಗಳೂರಿನ ರಂಗ ಶಂಕರದಲ್ಲಿ ಪ್ರದರ್ಶನವಾಗುವ ಆಹಾ! ನಾಟಕಗಳು ಅಹಮದಾಬಾದ್ ನಗರದಲ್ಲಿ ಸಹ ಪ್ರದರ್ಶನ ಆಗುತ್ತಿವೆ. ಅಹಮದಾಬಾದಿನ ನಿಕೊಯೀ ಫೌಂಡೇಷನ್ ಅವರು ಈ ಪ್ರದರ್ಶನಗಳಿಗೆ ಸಹಭಾಗಿತ್ವ ನೀಡುತ್ತಿದ್ದಾರೆ.

'ನಾಟ್‌ಔಟ್' ಫಸ್ಟ್‌ಹಾಫ್ ಉಚಿತ!

ರಚನಾ ಇಂದರ್

ಅಜಯ್ ಪೃಥ್ವಿ

ಜನರನ್ನು ಚಿತ್ರಮಂದಿರದತ್ತ ಸೆಳೆಯಲು ನಾನಾ ಬಗೆಯ ಕಸರತ್ತುಗಳನ್ನು ಚಿತ್ರತಂಡಗಳು ಮಾಡುತ್ತವೆ. ಇಲ್ಲೊಂದು ಚಿತ್ರತಂಡ ಚಿತ್ರದ ಮೊದಲಾರ್ಧವನ್ನು ವೀಕ್ಷಕರಿಗೆ ಉಚಿತವಾಗಿ ತೋರಿಸಲು ನಿರ್ಧರಿಸಿದೆ. ಜುಲೈ 19ರಂದು ಬಿಡುಗಡೆಗೊಳ್ಳಲಿರುವ 'ನಾಟ್‌ಔಟ್' ಈ ಪ್ರಯತ್ನಕ್ಕೆ ಕೈಹಾಕಿದ ಸಿನಿಮಾ.

ರಾಷ್ಟ್ರಕೂಟ ಪಿಕ್ಚರ್ಸ್ ಲಾಂಛನದಲ್ಲಿ ನಿರ್ಮಾಣವಾಗಿರುವ ಅಂಬರೀಶ್ ಎಂ. ನಿರ್ದೇಶನದ ಹಾಗೂ ಅಜಯ್ ಪೃಥ್ವಿ, ರಚನಾ ಇಂದರ್ ನಟಿಸಿರುವ ಈ ಚಿತ್ರದ ಟ್ರೇಲರ್ ಇತ್ತೀಚೆಗೆ ಬಿಡುಗಡೆಯಾಯಿತು. ನಟ ಶ್ರೀನಗರ ಕಿಟ್ಟಿ ಹಾಗೂ ನಿರ್ದೇಶಕ ಸಿಂಪಲ್ ಸುನಿ ಟ್ರೇಲರ್ ಬಿಡುಗಡೆ ಮಾಡಿದರು.

ಈ ಸಂದರ್ಭದಲ್ಲಿ ಮಾತನಾಡಿದ ಅಂಬರೀಶ್, 'ಕೆಲವು ಮುಖ್ಯ ಚಿತ್ರಮಂದಿರಗಳಲ್ಲಿ ಚಿತ್ರದ ಫಸ್ಟ್‌ಹಾಫ್ ಉಚಿತವಾಗಿ ನೋಡಬಹುದು. ದ್ವಿತೀಯಾರ್ಧವನ್ನು ನೋಡಲು ಟಿಕೆಟ್ ಪಡೆಯಬೇಕು. ಮಧ್ಯಂತರದಲ್ಲಿ ಸಿನಿಮಾ ಕುತೂಹಲಕಾರಿಯಾಗಿದೆ ಎಂದೆನಿಸಿದರೆ ಆಗಷ್ಟೇ ಟಿಕೆಟ್ ಖರೀದಿಸಬಹುದು. ಇದೊಂದು ವಿಶೇಷ ಪ್ರಯತ್ನ. ಇದಕ್ಕೆ ಬೇಕಾದ ವ್ಯವಸ್ಥೆ ಮಾಡುತ್ತಿದ್ದೇವೆ. ಕೆಲವರು ಸಿನಿಮಾ ನೋಡಿದ ಬಳಿಕ 'ಫಸ್ಟ್‌ಹಾಫ್ ಬೋರ್ ಆಯಿತು, ಅದಕ್ಕೆ ಎದ್ದು ಬಂದೆ. ದುಡ್ಡು ವ್ಯರ್ಥ' ಎನ್ನುತ್ತಾರೆ. ಈ ಹಿನ್ನೆಲೆಯಲ್ಲಿ ಈ ಹೊಸ ಪ್ರಯತ್ನ ಮಾಡುತ್ತಿದ್ದೇವೆ. 70ಕ್ಕೂ ಅಧಿಕ ಚಿತ್ರಮಂದಿರಗಳಲ್ಲಿ ಸಿನಿಮಾ ಬಿಡುಗಡೆಯಾಗುತ್ತಿದೆ. ಕನ್ನಡ ಸಿನಿಮಾಗೆ ಪ್ರೇಕ್ಷಕರು ಬರುತ್ತಿಲ್ಲ ಎನ್ನುವ ವಾತಾವರಣದಲ್ಲಿ ಈ ಹೆಜ್ಜೆ ಇಟ್ಟಿದ್ದೇವೆ' ಎಂದರು.

'ನನ್ನ ಮೊದಲ ಸಿನಿಮಾ 'ಹೋಪ್' ಚಿತ್ರಮಂದಿರಗಳಲ್ಲಿ ಸದ್ದು ಮಾಡಿಲ್ಲ. ಸಿನಿಮಾ ಒಟಿಟಿಯಲ್ಲಿ ಬಂದ ಬಳಿಕ ಎಲ್ಲರೂ ಒಳ್ಳೆಯ ವಿಮರ್ಶೆ ನೀಡಿದರು. ಈ ಹಿನ್ನೆಲೆಯಲ್ಲಿ ಚಿತ್ರಮಂದಿರದಲ್ಲಿ ಸಿನಿಮಾ ಇದ್ದಾಗಲೇ ಮಾತನಾಡಬೇಕು ಎಂದು ಮೊದಲಾರ್ಧವನ್ನು ಉಚಿತವಾಗಿ ತೋರಿಸುವ ನಿರ್ಧಾರ ಕೈಗೊಂಡಿದ್ದೇವೆ' ಎಂದರು ಅಂಬರೀಶ್. ಈ ಚಿತ್ರ ಡಾರ್ಕ್ ಹ್ಯೂಮರ್ ಕಾಮಿಡಿ ಜಾನರ್‌ನಲ್ಲಿದ್ದು, ಚಿತ್ರದಲ್ಲಿ ಆಂಬುಲೆನ್ಸ್ ಚಾಲಕನ ಪಾತ್ರದಲ್ಲಿ ಅಜಯ್ ಪೃಥ್ವಿ ನಟಿಸಿದ್ದಾರೆ. ನರ್ಸ್ ಪಾತ್ರದಲ್ಲಿ ರಚನಾ ಇಂದರ್ ನಟಿಸಿದ್ದಾರೆ. ಕಾಕ್ರೋಚ್ ಸುಧಿ, ಅಶ್ವಿನ್ ಹಾಸನ್, ಪ್ರಶಾಂತ್ ಸಿದ್ದಿ, ಸಲ್ಮಾನ್ ಮುಂತಾದ ಕಲಾವಿದರು ಚಿತ್ರದಲ್ಲಿದ್ದಾರೆ.



ಬೆಂಗಳೂರು ನಗರ ಜಿಲ್ಲೆಯ ಆನೇಕಲ್ ತಾಲ್ಲೂಕಿನ ಬನ್ನೇರುಘಟ್ಟ ಜೈವಿಕ ಉದ್ಯಾನದಲ್ಲಿ ಹುಲಿ, ಸಿಂಹ ಮತ್ತು ಕರಡಿ ಸಫಾರಿ ಜತೆಗೆ ಚಿರತೆ ಸಫಾರಿ ಹೊಸ ಸೇರ್ಪಡೆಯಾಗಿದ್ದು ಪ್ರವಾಸಿಗರಿಗೆ ಹೊಸ ಆಕರ್ಷಣೆಯಾಗಿದೆ
– ಪ್ರಜಾವಾಣಿ ಚಿತ್ರ/ ರಂಜು ಪಿ.

ಬೆಂಗಳೂರಿನಂಥ ಮಹಾನಗರದ ಮಧ್ಯದಲ್ಲಿ, ತೀರಾ ಹತ್ತಿರದಿಂದ ಚಿರತೆಗಳನ್ನು ನೋಡುವ ಅವಕಾಶ ಕಲ್ಪಿಸಿದೆ ಬನ್ನೇರುಘಟ್ಟ ಜೈವಿಕ ಉದ್ಯಾನದ ಆಡಳಿತ. ಪಂಜರದ ಬದಲಿಗೆ ಕಾಡಿನಂತಹ ಆವರಣದೊಳಗೆ ಓಡಾಡಿಕೊಂಡಿರುವ ಚಿರತೆಗಳನ್ನು, ಅವುಗಳ ಚಿನ್ನಾಟವನ್ನು ಕಣ್ತುಂಬಿಕೊಳ್ಳುವುದೇ ವಿಶೇಷ ಅನುಭವ. ಅರಣ್ಯದೊಳಗೆ ಹೋದಾಗ 'ನಾ ಬರಲ್ಲ' ಎಂದು ಹಟ ಹಿಡಿದು ಮರ ಏರಿ ಕುಳಿತುಕೊಳ್ಳುವ ಚಿರತೆಗಳು, ಇಲ್ಲಿ ಬಸ್ಸು, ಜೀಪಿನೊಳಗೆ ಹೋಗುವ ನಿಮ್ಮನ್ನು ಕಂಡು 'ಹಾಯ್' ಎನ್ನುತ್ತವೆ !

ಹೋಗಣ ಬರ್ರಿ ಚಿರತೆ ಸಫಾರಿ

ಗುರು ಪಿ.ಎಸ್.

ಕಾಡಿನೊಳಗೆ ಸಫಾರಿಗೆ ಹೋದಾಗಲೂ ಕಣ್ಣಿಗೆ ಸುಲಭವಾಗಿ ಕಾಣಸಿಗದ, ಮನುಷ್ಯರನ್ನ ಕಂಡರೆ ಅಡಗಿಕೊಳ್ಳುವ ಗುಣ ಹೊಂದಿರುವ ಚಿರತೆಗಳು, ಬನ್ನೇರುಘಟ್ಟ ಜೈವಿಕ ಉದ್ಯಾನದಲ್ಲಿ ನಿಮಗೆ ತೀರಾ ಹತ್ತಿರದಲ್ಲಿಯೇ ಪ್ರತ್ಯಕ್ಷವಾಗುತ್ತವೆ. ಅದೂ, ಪಂಜರದೊಳಗಲ್ಲ. ಮಿನಿ ಕಾಡಿನಂತಿರುವ ಆವರಣದೊಳಗೆ !

ಬನ್ನೇರುಘಟ್ಟ ಜೈವಿಕ ಉದ್ಯಾನದಲ್ಲಿ, ದಕ್ಷಿಣ ಭಾರತದ ಮೊದಲ ಮತ್ತು ದೇಶದ ಅತಿ ದೊಡ್ಡ ಚಿರತೆ ಸಫಾರಿಯು ಜೂನ್ 26ರಿಂದ ಆರಂಭವಾಗಿದೆ. ಸಿಂಹ, ಹುಲಿ, ಕರಡಿ ಮತ್ತು ಸಸ್ಯಾಹಾರಿ ಪ್ರಾಣಿಗಳ ಸಫಾರಿಯ ನಂತರ, ಚಿರತೆ ಸಫಾರಿಯಂತಹ ಸವಾಲಿನ ಕೆಲಸವನ್ನು ಪ್ರೀತಿಯಿಂದ ಆರಂಭಿಸಿದ್ದಾರೆ ಉದ್ಯಾನದ ಸಿಬ್ಬಂದಿ.

12 ವರ್ಷಗಳ ತಯಾರಿ !

ಬನ್ನೇರುಘಟ್ಟದಲ್ಲಿ ಚಿರತೆ ಸಫಾರಿ ಶುರು ಮಾಡಬೇಕು ಎಂಬುದು 12 ವರ್ಷಗಳಿಂದ ಇದ್ದ ಕನಸು. 20ಹೆಕ್ಟೇರ್ (50 ಎಕರೆ) ಪ್ರದೇಶದಲ್ಲಿ ಸಫಾರಿ ಮಾಡಬೇಕು ಎಂಬುದು ಕೇಂದ್ರೀಯ ಮೃಗಾಲಯ ಪ್ರಾಧಿಕಾರದ ನಿಯಮ. ಅದರಂತೆ, 50 ಎಕರೆ ಪ್ರದೇಶವನ್ನು ಚಿರತೆ ಸಫಾರಿಗೆ ಸೂಕ್ತವಾಗುವ ರೀತಿಯಲ್ಲಿ ಸಜ್ಜುಗೊಳಿಸಲಾಗಿದೆ. ಈ 12 ವರ್ಷಗಳ ಅವಧಿಯಲ್ಲಿ, ಯೋಜನೆಯ ಬಜೆಟ್ ಅಂದಾಜು ಸೇರಿದಂತೆ, ಚಿರತೆಗಳ ವಾಸಕ್ಕೆ ಅನುಗುಣವಾದ ಸ್ಥಳದ ಆಯ್ಕೆ, ಕಾಡಾನೆಗಳು ಈ ಆವರಣದೊಳಗೆ ಬಾರದಂತೆ ತಡೆಯಲು ಅವುಗಳಿಗೆ ತರಬೇತಿ ಮತ್ತು ಮುನ್ನೆಚ್ಚರಿಕೆ ಕ್ರಮ, ತಡೆಗೋಡೆಗಳ ನಿರ್ಮಾಣ, 4.5 ಮೀಟರ್ ಎತ್ತರದ ಸೌರವಿದ್ಯುತ್ ತಂತಿ ಬೇಲಿ, ಸಿಬ್ಬಂದಿ ಮತ್ತು ಚಿರತೆಗಳಿಗೂ ತರಬೇತಿ ನೀಡುವಂತಹ ಕೆಲಸ ನಡೆದಿದೆ. ಒಟ್ಟು ₹5 ಕೋಟಿ ವೆಚ್ಚದಲ್ಲಿ ಈ ಯೋಜನೆಯನ್ನು ಅನುಷ್ಠಾನಕ್ಕೆ ತಂದಿದೆ ಬನ್ನೇರುಘಟ್ಟ ಉದ್ಯಾನದ ಆಡಳಿತ.

ಸುಮ್ಮನಿರಬೇಕು, ಧೈರ್ಯವೂ ಬೇಕು !

ಸದ್ಯ, ಬನ್ನೇರುಘಟ್ಟ ಜೈವಿಕ ಉದ್ಯಾನದಲ್ಲಿ 82 ಚಿರತೆಗಳಿವೆ. ಆದರೆ, ಸಫಾರಿಗೆ ಆಯ್ಕೆಯಾಗಿರುವ ಚಿರತೆಗಳ ಸಂಖ್ಯೆ 20 ಮಾತ್ರ. ಇವುಗಳಲ್ಲಿ ದಿನಕ್ಕೆ 9 ಅಥವಾ 10 ಚಿರತೆಗಳನ್ನು ಸಫಾರಿಗೆ ಬಿಡಲಾಗುತ್ತದೆ. ಅಂದರೆ, ನೀವು ಸಫಾರಿಗೆ ಹೋದಾಗ, ಗರಿಷ್ಠ 10 ಚಿರತೆಗಳನ್ನು ನೋಡಬಹುದು.

ಸಫಾರಿಗೆ ಚಿರತೆಗಳನ್ನು ಆಯ್ಕೆ ಮಾಡುವ ಸವಾಲಿನ ಕೆಲಸವನ್ನೂ ಇಲ್ಲಿನ ಪಶುವೈದ್ಯರು ಅಚ್ಚುಕಟ್ಟಾಗಿ ಪೂರ್ಣಗೊಳಿಸಿದ್ದಾರೆ. ಇಲ್ಲಿನ ಪ್ರಮುಖ ಸವಾಲು ಏನೆಂದರೆ, ಚಿರತೆಗಳು ಹುಲಿ, ಸಿಂಹದಂತೆ ಅಲ್ಲ. ಹುಲಿ–ಸಿಂಹಗಳಲ್ಲಾದರೆ 'Dominance establishment' ಗುಣ ಇರುತ್ತದೆ. ಅಂದರೆ, ದೊಡ್ಡ ಹುಲಿಯನ್ನು ಸಣ್ಣ ಹುಲಿ ಮುಟ್ಟುವುದಕ್ಕೇ ಹೋಗುವುದಿಲ್ಲ. ಆದರೆ, ಚಿರತೆಗಳಲ್ಲಿ ಹಾಗಲ್ಲ. ಸಣ್ಣ ಮರಿಯೂ ದೊಡ್ಡ ಮರಿಯನ್ನು ಕೆಣಕಲು ಹೋಗುತ್ತದೆ. ಹೀಗಾಗಿ, ಹೆಚ್ಚಿನ ಚಿರತೆಗಳನ್ನು ಒಟ್ಟಿಗೇ ಸಫಾರಿಗೆ ಬಿಡಬೇಕೆಂದರೆ, ಬೇರೆ ಚಿರತೆಗಳ ಮೇಲೆ ದಾಳಿ ಮಾಡದಂತೆ ತರಬೇತಿ ನೀಡಬೇಕಾಗುತ್ತದೆ.

ಇನ್ನು, ಸಫಾರಿಗೆ ಹೋಗಬೇಕಾದ ಚಿರತೆಗಳ ಆಯ್ಕೆ. ಮೊದಲೇ ಹೇಳಿದಂತೆ, ಚಿರತೆಗಳದ್ದು ಅಡಗಿಕೊಳ್ಳುವ ಸ್ವಭಾವ. ಅಂತಹ ಸ್ವಭಾವವನ್ನು ಹೆಚ್ಚು ಹೊಂದಿರುವ ಚಿರತೆಗಳನ್ನು ಸಫಾರಿಗೆ ಬಿಡುವುದೇ ಇಲ್ಲ. ಮನುಷ್ಯರನ್ನು ಕಂಡರೆ ಹೆದರದ, ವಾಹನಗಳಿಗೆ ಅಂಜದ ಮತ್ತು ರಸ್ತೆಯಲ್ಲಿ ನಡೆಯಲು ಭಯಪಡದ, ಆದರೆ, ಹೆಚ್ಚು ಆಕ್ರಮಣಕಾರಿಯಲ್ಲದ ಚಿರತೆಗಳು ಮಾತ್ರ ಸಫಾರಿಗೆ ಹೋಗುವ 'ಅರ್ಹತೆ' ಪಡೆದಿವೆ.

ಜೀವನದ ಎರಡನೇ ಅಧ್ಯಾಯ !

ಬನ್ನೇರುಘಟ್ಟದಲ್ಲಿರುವ ಬಹುತೇಕ ಚಿರತೆಗಳು ರಕ್ಷಿಸಲ್ಪಟ್ಟಿರುವಂಥವು. ಅಂದರೆ, ಅರಣ್ಯದಲ್ಲಿ ಗಾಯಗೊಂಡು ಬಿದ್ದಿದ್ದ, ಹೊಲ–ಊರಿನೊಳಗೆ ನುಗ್ಗಿದಾಗ ಸೆರೆ ಹಿಡಿದ, ತಾಯಿಯಿಂದ ದೂರವಾದ ಮರಿಗಳು ಇಲ್ಲಿ ಹೆಚ್ಚಿವೆ. ಇವು, ಬನ್ನೇರುಘಟ್ಟದಲ್ಲಿ ಆರೈಕೆ ಪಡೆದು, ಚೇತರಿಸಿಕೊಳ್ಳುವ ಮೂಲಕ ತಮ್ಮ ಜೀವನದ ಎರಡನೇ ಅಧ್ಯಾಯವನ್ನು ಆರಂಭಿಸುತ್ತಿವೆ.

ಇನ್ನು, ಸಫಾರಿಗೆ ಹೋಗುವ ಚಿರತೆಗಳು ತಮ್ಮದೇ ಆದ ದಿನಚರಿ ಹೊಂದಿವೆ. ಬೆಳಿಗ್ಗೆ 10.30ಕ್ಕೆ ಸುಮಾರು 10 ಚಿರತೆಗಳನ್ನು ಸಫಾರಿಗೆ ಬಿಡಲಾಗುತ್ತದೆ. 50 ಎಕರೆ ಪ್ರದೇಶದಲ್ಲಿ ಓಡಾಡಿಕೊಂಡಿರುವ ಇವು, ಆವರಣದೊಳಗೆ ಬೇರೆ ಪ್ರಾಣಿಗಳಿಲ್ಲದೆ ಇರುವುದರಿಂದ ಆಹಾರ ಹುಡುಕಿಕೊಂಡು, ಸಂಜೆ 5ರ ವೇಳೆಗೆ ತಮ್ಮ ವಾಸಸ್ಥಾನ ಅಥವಾ ಪಂಜರಕ್ಕೆ ಮರಳುತ್ತವೆ. ಸಂಜೆ 5.30ರ ನಂತರ ಆಹಾರ ನೀಡಲಾಗುತ್ತದೆ.

ಏನೇ ತರಬೇತಿ ನೀಡಿದರೂ, ಗುಂಪಾಗಿ ಹೋಗುವುದರಿಂದ ಪರಸ್ಪರ ಕಚ್ಚಾಡಿಕೊಳ್ಳುವುದು, ಕಂದಕಗಳನ್ನು ಹಾರುವಾಗ ತರಚುಗಾಯ ಮಾಡಿಕೊಳ್ಳುವುದು ಹೆಚ್ಚು. ಹೀಗಾಗಿ, ಇವು ಸಫಾರಿ ಮುಗಿಸಿಕೊಂಡು ಬಂದ ತಕ್ಷಣ, ಮೂಗಿನಿಂದ ಬಾಲದವರೆಗೆ ಇವುಗಳ ಪರೀಕ್ಷೆ ನಡೆಯುತ್ತದೆ. ಅಗತ್ಯವಿದ್ದರೆ ಚಿಕಿತ್ಸೆ ಕೊಡಲಾಗುತ್ತದೆ.

ಸಾಮಾನ್ಯವಾಗಿ, ಚಿರತೆಗಳು ಬೇಟೆಯಾಡುವಾಗ ಮತ್ತು ಮಿಲನದ ಸಂದರ್ಭದಲ್ಲಿ ಹೊಡೆದಾಡಿಕೊಳ್ಳುವುದು ಹೆಚ್ಚು. ಸಂಜೆಗೆ ಹೇಗೂ ಆಹಾರ ಸಿಗುವುದರಿಂದ ಬೇಟೆ ಆಡುವುದಿಲ್ಲ. ಇನ್ನು, ಎಲ್ಲ ಗಂಡು ಚಿರತೆಗಳಿಗೆ ಸಂತಾನಶಕ್ತಿಹರಣ ಶಸ್ತ್ರಚಿಕಿತ್ಸೆ ಆಗಿರುವುದರಿಂದ, ಮಿಲನದ ಸಂದರ್ಭದಲ್ಲಿ ರಕ್ತಸ್ರಾವವಾಗುವಂತಹ ಸಮಸ್ಯೆಗಳೂ ಇವುಗಳಿಗೆ ಇಲ್ಲ.

ಹೊಸ ಅನುಭವ, ಕಲಿಕೆಗೆ ಅವಕಾಶ

ರಾಜ್ಯದ ಬಂಡೀಪುರ, ಕಬಿನಿ ಮಾತ್ರಲ್ಲದೆ, ಮಧ್ಯಪ್ರದೇಶ, ಮಹಾರಾಷ್ಟ್ರದಂತಹ ರಾಜ್ಯಗಳಲ್ಲಿ ಅರಣ್ಯದಲ್ಲಿ ಸಫಾರಿ ಹೋದರೂ ಚಿರತೆಗಳು ತಕ್ಷಣಕ್ಕೆ ಕಾಣಸಿಗುವುದು ವಿರಳ. ಅಲ್ಲದೆ, ಅಲ್ಲಿ ಹೋಗಿ ಬರಲು ಖರ್ಚೂ ಹೆಚ್ಚು. ಆದರೆ ಇಲ್ಲಿ, ಯೋಗ್ಯ ದರದಲ್ಲಿ ಚಿರತೆ ಸಫಾರಿ ತೆರಳಬಹುದಾಗಿದೆ.

ಇನ್ನು, ಇತ್ತೀಚೆಗೆ ಮಾನವ–ಚಿರತೆ ಸಂಘರ್ಷ ಹೆಚ್ಚುತ್ತಿದೆ. ಮುಖ್ಯವಾಗಿ, ಹೊಲದಲ್ಲಿ ಕೆಲಸ ಮಾಡುವ ಕೃಷಿ ಕಾರ್ಮಿಕರು, ರೈತರು ಚಿರತೆ ದಾಳಿಗೆ ಬಲಿಯಾಗುತ್ತಿದ್ದಾರೆ. ಇವರೆಲ್ಲ ಈ ಸಫಾರಿಗೆ ಭೇಟಿ ನೀಡಿ, ಚಿರತೆಗಳ ಸ್ವಭಾವ, ಅವುಗಳ ವರ್ತನೆ ಬಗ್ಗೆಯೂ ತಿಳಿದುಕೊಳ್ಳಬಹುದಾಗಿರುವುದರಿಂದ ದಾಳಿ ವೇಳೆ ಹೆಚ್ಚು ವಿವೇಚನೆಯಿಂದ ನಡೆದುಕೊಳ್ಳಲು ಸಾಧ್ಯವಾಗಬಹುದು. ಎಲ್ಲಕ್ಕಿಂತ ಹೆಚ್ಚಾಗಿ, ಶಾಲಾ ಮಕ್ಕಳು ಬನ್ನೇರುಘಟ್ಟಕ್ಕೆ ಭೇಟಿ ನೀಡಿದರೆ, ಅದು ಕಲಿಕಾ ಪ್ರವಾಸವಾಗಿಯೂ ಬದಲಾಗಬಹುದು. ❖

ಟಿಕೆಟ್ ದರ ಎಷ್ಟು? ಸಮಯ ಏನು?

ಎಸಿ ರಹಿತ ಬಸ್‌ನಲ್ಲಿ ಮೃಗಾಲಯ ವೀಕ್ಷಣೆ ಮತ್ತು ಸಫಾರಿಗೆ– ಸೋಮವಾರದಿಂದ ಶುಕ್ರವಾರದವರೆಗೆ ವಯಸ್ಕರಿಗೆ ₹350, ಮಕ್ಕಳಿಗೆ ₹200, ಹಿರಿಯ ನಾಗರಿಕರಿಗೆ ₹250 ದರ ನಿಗದಿ ಮಾಡಲಾಗಿದೆ. ವಾರಾಂತ್ಯದಲ್ಲಿ ಈ ಎಲ್ಲ ವಿಭಾಗದಲ್ಲಿ ₹50 ಹೆಚ್ಚುವರಿ ಶುಲ್ಕ ಇರುತ್ತದೆ. ಎಸಿ ಬಸ್‌ಗಳಲ್ಲಾದರೆ, ಎಲ್ಲ ವಿಭಾಗದಲ್ಲಿ (ಮೃಗಾಲಯ + ಸಫಾರಿ + ಚಿಟ್ಟೆಉದ್ಯಾನ + ಕ್ಯಾಮೆರಾ) ವಯಸ್ಕರಿಗೆ ₹670, ಮಕ್ಕಳಿಗೆ ₹470 ಟಿಕೆಟ್ ದರವಿದೆ. ವಾರಾಂತ್ಯ ಮತ್ತು ಸರ್ಕಾರಿ ರಜಾ ದಿನಗಳಲ್ಲಿ ಈ ದರದ ಮೇಲೆ ಹೆಚ್ಚುವರಿಯಾಗಿ ₹50 ನೀಡಬೇಕಾಗುತ್ತದೆ. ವಾರಾಂತ್ಯದಲ್ಲಿ 6 ಆಸನಗಳ ಎಸಿ ರಹಿತ ಜೀಪಿಗೆ ₹3,900, ಎಸಿ ಜೀಪಿಗೆ ₹4,500 ನಿಗದಿ ಮಾಡಲಾಗಿದೆ. ಹೆಚ್ಚುಆಸನಗಳಿರುವ ವಾಹನಗಳಲ್ಲಿ ಟಿಕೆಟ್ ದರವೂ ಹೆಚ್ಚುತ್ತದೆ. ಶಾಲಾ ವಿದ್ಯಾರ್ಥಿಗಳ ಗುಂಪು ಭೇಟಿಗೆ ರಿಯಾಯಿತಿ ದರ ನಿಗದಿ ಮಾಡಲಾಗಿದೆ. ಪ್ರತಿದಿನ ಬೆಳಿಗ್ಗೆ 9.30ರಿಂದ ಸಂಜೆ 5ರವರೆಗೆ ಭೇಟಿ ನೀಡಬಹುದು. ಸಫಾರಿ ಬೆಳಿಗ್ಗೆ 10.30ರಿಂದ ಮಧ್ಯಾಹ್ನ 3.30ರವರೆಗೆ ಮಾತ್ರ ಇರಲಿದೆ. ಪ್ರತಿ ಮಂಗಳವಾರ ರಜೆ ಇರುತ್ತದೆ.

ಆನ್‌ಲೈನ್‌ನಲ್ಲಿ ಟಿಕೆಟ್ ಕಾಯ್ದಿರಿಸಲು http:bannerughatta biologicalpa rk.orgಗೆ ಭೇಟಿ ನೀಡಬಹುದು.

ಮುತ್ತಿಟ್ಟಳಾ ಮಗಳು

ರಣಬೀರ್ ತುಂಟ ಮಗ. ಆದರೆ ತುಂಬಾನೆ ಒಳ್ಳೆಯ ಅಪ್ಪ ಅಂತ ನೀತು ಕಪೂರ್ ಆಗಾಗ ಎಲ್ಲ ಸಂದರ್ಶನಗಳಲ್ಲಿಯೂ ಹೇಳುತ್ತಿರುತ್ತಾರೆ. ಮಗಳು ರಾಹಾ, ಅಮ್ಮನೊಟ್ಟಿಗೆ ಇರುವಂತೆಯೇ ಅಪ್ಪನೊಂದಿಗೂ ಅತಿ ಹೆಚ್ಚು ಸಮಯ ಕಳೆಯುತ್ತಾಳೆ. ಸದಾ ಅಪ್ಪನತ್ತ ಕೈ ಚಾಚುವ ಅವಳು ಮಲಗುವಾಗ ಮಾತ್ರ ಅಮ್ಮನ ಮಡಿಲನ್ನೇ ಬಯಸುತ್ತಾಳಂತೆ!

ರಾಹಾ ರಣಬೀರ್ ಕಪೂರ್ ಮತ್ತು ಆಲಿಯಾ ಭಟ್ ಮಗಳು, ನೋಡಲು ತನ್ನ ಹಿರಿಯಜ್ಜ ರಾಜಕಪೂರ್ ಅವರನ್ನೇ ಹೋಲುತ್ತಾಳೆ ಎಂದು ನೆಟ್ಟಿಗರು ಅಭಿಪ್ರಾಯ ಪಟ್ಟಿದ್ದರು. ಈ ಬಗ್ಗೆ ರಣಬೀರ್ ಅತಿ ಪ್ರೀತಿಯಿಂದ ಸಂದರ್ಶನದಲ್ಲಿ ನೆನೆಯುತ್ತಾರೆ. ಮಗು ನೋಡಲು ಬಂದವರೆಲ್ಲ, ಓಹ್.. ಮೂಗು ಆಲಿಯಾಳಂತಿವೆ. ಕಣ್ಣು ಅಜ್ಜನಂತಿವೆ. ಮುಖ ಮುತ್ತಜ್ಜನಂತೆ ಕಾಣುತ್ತವೆ. ನೀಲಿ ಕಂಗಳು ಕಪೂರ್ ಖಾಂದಾನ್ ನಿಂದ ಬಂದಿವೆ ಎಂದೆಲ್ಲ ಹೆಸರಿಡುತ್ತಾರಂತೆ.

ಮುದ್ದಿನ ಮಗಳು ರಾಹಾ ಕಪೂರ್ ಜೊತೆಗೆ

ಒಂದೂವರೆ ವರ್ಷದ ಮಗಳೊಂದಿಗೆ ಸಮಯ ಕಳೆಯುವುದು ಅತಿ ಪ್ರೀತಿಯ ಕೆಲಸವಾಗಿದೆ. ಆರೇಳು ತಿಂಗಳ ಮಗುವಾಗಿದ್ದಾಗ, ರಾಹಾಳನ್ನು ಕೂರಿಸಿ, ಮಮ್ಮಾ ಎಲ್ಲಿ... ಪಪ್ಪಾ ಎಲ್ಲಿ.. ದಾದಿ ಎಲ್ಲಿ ಎಂದು ಕೇಳುವುದೇ ನನಗಿಷ್ಟದ ಕೆಲಸವಾಗಿತ್ತು ಎಂದು ಆಲಿಯಾ ನೆನಪಿಸಿಕೊಂಡರೆ, ಅವಳನ್ನು ಬಗಲಲ್ಲಿ ಎತ್ತಿಕೊಂಡಾಗ ಸಿಗುವ ಸುಖವೇ ಬೇರೆ ಎಂದು ಹೇಳಿದ್ದರು.

ಸದ್ಯ ಕಪೂರ್ ಖಾಂದಾನ್ ಕಣ್ಮಣಿಯಾಗಿ ಬೆಳೆಯುತ್ತಿರುವ ರಾಹಾ, ಆಟವಾಡಲು ಕರೀನಾ ಕಪೂರ್ ಮನೆಗೆ ಹೋಗುತ್ತಾಳಂತೆ. ಜೆ ಮತ್ತು ತೈಮೂರ್ ಜೊತೆ ಆಟವಾಡುವುದು ಅವಳಿಗಿಷ್ಟ ಎಂದು ಆಲಿಯಾ ಸಂದರ್ಶನವೊಂದರಲ್ಲಿ ಹೇಳಿದ್ದರು.

ಕರಣ್‌ಜೋಹರ್ ನಡೆಸಿಕೊಡುವ ಕಾಫಿ ವಿತ್ ಕರಣ್ ಶೋನಲ್ಲಿ ಬಂದಿದ್ದ ಆಲಿಯಾ ಮತ್ತು ಕರೀನಾ ಜೇ ಮತ್ತು ರಾಹಾಳ ಆಟೋಟಗಳನ್ನು ನೆನಪಿಸಿಕೊಂಡಿದ್ದರು.

ಸದಾ ಅಪ್ಪನ ತೋಳಿನಲ್ಲಿಯೇ ಕಾಣಿಸಿಕೊಳ್ಳುವ ರಾಹಾ, ಆಗಾಗ ರಣಬೀರ್ ಕೆನ್ನೆಗೆ ಮುತ್ತಿಡುತ್ತಲೇ ಇರುತ್ತಾಳೆ. ಆಗಾಗ ಅಪ್ಪನ ಕೆನ್ನೆಗೆ ಉಮ್ಮಾ ಎನ್ನುವ ರಾಹಾ ಅಪ್ಪ ಅಮ್ಮನ ಕಣ್ಮಣಿಯಾಗಿ ಬೆಳೆಯುತ್ತಿದ್ದಾಳೆ. ❖

ಸುಧಾರಾಣಿ, ಅಚ್ಯುತ್ ಕುಮಾರ್

'ಫೈರ್‌ಫ್ಲೈ' ಹತ್ತಿದ ಅಚ್ಯುತ್‌ಕುಮಾರ್

ನಿವೇದಿತಾ ಶಿವರಾಜ್‌ಕುಮಾರ್ ನಿರ್ಮಾಣದ, ವಂಶಿ ನಿರ್ದೇಶನದ 'ಫೈರ್‌ಫ್ಲೈ' ಸಿನಿಮಾ ಬಿಡುಗಡೆಗೆ ಸಜ್ಜಾಗುತ್ತಿದ್ದು, ಚಿತ್ರದ ಪಾತ್ರಗಳನ್ನು ಚಿತ್ರತಂಡ ಪರಿಚಯಿಸುತ್ತಿದೆ. ಮೂಗು ಸುರೇಶ್, ಶೀತಲ್ ಶೆಟ್ಟಿ, ಸುಧಾರಾಣಿ ಅವರ ಬಳಿಕ ಅಚ್ಯುತ್ ಕುಮಾರ್ ಅವರೂ ಚಿತ್ರದ ಪ್ರಮುಖ ಪಾತ್ರಕ್ಕೆ ಬಣ್ಣಹಚ್ಚಿದ್ದಾರೆ.

ಅಚ್ಯುತ್ ಕುಮಾರ್ ಇಲ್ಲಿ ನಾಯಕನ ತಂದೆ ಪಾತ್ರ ನಿಭಾಯಿಸಲಿದ್ದಾರೆ. ಅವರಿಗೆ ಜೋಡಿಯಾಗಿ ಸುಧಾರಾಣಿ ನಟಿಸುತ್ತಿದ್ದಾರೆ ಎಂದಿದೆ ಚಿತ್ರತಂಡ. 'ನಾನು ಹೀರೋ ತಂದೆಯ ಪಾತ್ರ ಮಾಡುತ್ತಿದ್ದೇನೆ. ಪಾತ್ರ ತುಂಬಾ ಆಸಕ್ತಿಯಿಂದ ಕೂಡಿದೆ. ಒಬ್ಬ ತಂದೆ ಮಗನ ಬಾಂಧವ್ಯ ಮತ್ತು ಅವರಿಬ್ಬರು ಸ್ನೇಹಿತರಾಗಿದ್ದರೆ ಹೇಗೆ ಮಜವಾಗಿರುತ್ತದೆ ಎಂದು ಈ ಸಿನಿಮಾದಲ್ಲಿ ನೋಡಬಹುದು. ನನ್ನ ಜೊತೆ ಸುಧಾರಾಣಿಯವರು ನಟಿಸುತ್ತಿದ್ದಾರೆ. ಬೇರೆ ಸಿನಿಮಾಗಳಲ್ಲಿ ನಮ್ಮ ಜೋಡಿಯನ್ನು ನೋಡಿ ಜನ ಮೆಚ್ಚಿದ್ದರು. ಆದರೆ ಈ ಸಿನಿಮಾದಲ್ಲಿ ನಮ್ಮಿಬ್ಬರ ಜೋಡಿ ಹಿಂದಿನ ಸಿನಿಮಾಗಳಿಗಿಂತ ವಿಭಿನ್ನವಾಗಿರುತ್ತದೆ. ಅದನ್ನು ನೀವು ಸ್ಕ್ರೀನ್ ಮೇಲೆ ನೋಡಬೇಕು. 'ಫೈರ್ ಫ್ಲೈ' ತುಂಬಾ ಕಲರ್‌ಫುಲ್ ಆಗಿ ಮೂಡಿ ಬಂದಿದೆ ಮತ್ತು ಮನರಂಜನೆಯಿಂದ ಕೂಡಿದೆ' ಎಂದಿದ್ದಾರೆ ಅಚ್ಯುತ್ ಕುಮಾರ್. 'ನಮ್ಮ ಶಿವಣ್ಣನ ಮಗಳು ನಿವೇದಿತಾ ಸಿನಿಮಾ ಮಾಡುತ್ತಿರುವುದು ತುಂಬಾ ಖುಷಿಯಾಗುತ್ತಿದೆ. ಶ್ರೀಮುತ್ತು ಸಿನಿ ಸರ್ವಿಸ್‌ನಡಿ ಅಚ್ಚುಕಟ್ಟಾಗಿ ಮುನ್ನಡೆಯುತ್ತಿರುವುದನ್ನು ನೋಡಿದರೆ ಇಂತಹದೊಂದು ನಿರ್ಮಾಣ ಸಂಸ್ಥೆ ಮತ್ತು ನಿರ್ಮಾಪಕಿ ನಮ್ಮ ಚಿತ್ರರಂಗಕ್ಕೆ ಬೇಕಿತ್ತು ಎಂದೆನಿಸುತ್ತದೆ. ಹೊಸಬರಿಗೆ ಅವಕಾಶ ಕೊಡುತ್ತಿರುವುದರಿಂದ ಹೊಸ ತಲೆಮಾರಿನ ಫಿಲಂಮೇಕರ್‌ಗಳಿಗೆ ಅನುಕೂಲವಾಗಲಿದೆ' ಎಂದಿದ್ದಾರೆ. 'ಫೈರ್ ಫ್ಲೈ' ಸಿನಿಮಾದಲ್ಲಿ ವಂಶಿ ಅವರು ಹೀರೋ ಆಗಿ ಅಭಿನಯಿಸುತ್ತಿದ್ದು, ಅವರೇ ಚಿತ್ರಕ್ಕೆ ಆ್ಯಕ್ಷನ್ ಕಟ್ ಕೂಡಾ ಹೇಳುತ್ತಿದ್ದಾರೆ. ದೀಪಾವಳಿಗೆ 'ಫೈರ್ ಫ್ಲೈ' ಸಿನಿಮಾ ತೆರೆಕಾಣಲಿದೆ ಎಂದು ಚಿತ್ರತಂಡ ಮಾಹಿತಿ ನೀಡಿದೆ.

ಹಣ್ಣು ಹೆಚ್ಚುತ್ತ, ಚುರುಮುರಿ ಹಚ್ಚುತ್ತ...

ಹಣ್ಣು, ಚುರುಮುರಿ ಸವಿಯಲು ನೀಡುವ ಪಾಶಾ

ನಲ್ವತ್ತು ವರ್ಷಗಳ ಹಿಂದಿನ ಮಾತಿದು. ಆಗ ಚರ್ಚ್‌ಸ್ಟ್ರೀಟ್ ಹೀಗೆ ಆಹಾರ ಬೀದಿಯಾಗಿ ಬದಲಾಗಿರಲಿಲ್ಲ. ಸಂಜೆ ನಡಿಗೆಗೆ, ಸುಮ್ಮನೆ ಸುತ್ತಾಡಲೆಂದೇ ಎಂ.ಜಿ ರೋಡಿಗೆ ಬರುತ್ತಿದ್ದರು. ಆ ಕಾಲದ ಮಾತಿದು.

ಈಗಲೂ ಸುತ್ತಾಡಲೆಂದೇ ಬರುತ್ತಾರೆ. ಬಂದವರಿಗೆ ಇಳಿಸಂಜೆ ಹೊತ್ತಿಗೆ ಬಾಯಾಡಿಸಿಕೊಂಡು ಹೋಗಲೆಂದೇ ಈ ಗಾಡಿ ತಂದೆ.

ಕಡಪಾ ಜಿಲ್ಲೆಯವನು ನಾನು.

ಬೆಂಗಳೂರಿಗೆ ಬಂದು ನೆಲೆಸಿ ಐದಾರು ದಶಕಗಳೇ ಕಳೆದವು. ಮೊದಲು ಚುರುಮುರಿ ಮಾಡುವಾಗ ಹತ್ತು ರೂಪಾಯಿಗೆ ನೀಡುತ್ತಿದ್ದೆ. ಈಗ ನಲ್ವತ್ತು ರೂಪಾಯಿಗೆ.. ಎಂದು ಹೇಳುತ್ತಲೇ.. ಪಾಶಾ ಚುರುಮುರಿ ಕಲಿಸುತ್ತಿದ್ದರು.

ಮೊದಲಿಗೆ, ಈರುಳ್ಳಿ, ಅದರ ಮೇಲೆ ಒಂದಿಷ್ಟು ಟೊಮೆಟೊ (ಬೇಕಿದ್ದರೆ, ನಿಮಗೆ ಬೇಡವೆಂದರೆ ಅವರಿಗೆ ತಿಳಿಸಬಹುದು) ಮನೆಯಲ್ಲಿಯೇ ಕುಟ್ಟಿದ ಜೀರಿಗೆಪುಡಿ, ಧನಿಯಾ ಪುಡಿ, ಬೆಳಗ್ಗೆ ರುಬ್ಬಿ ತಂದ ಹಸಿಮೆಣಸಿನ ಚಟ್ನಿ ಎಲ್ಲವನ್ನೂ ಗರ್...ಗರ್... ಅಂತ ಒಂದೆರಡು ಸಲ ತಿರುವಿ, ಅದಕ್ಕೆ ಚುರುಮುರಿ ಹಾಕಿ, ಉದ್ದುದ್ದ ಕನಕಾಂಬರಿಯ ಮೊಗ್ಗನ್ನು ಹೋಲುವ ಕ್ಯಾರೆಟ್ ತುರಿ, ಮಾವಿನಕಾಯಿ, ಸೌತೆಕಾಯಿ ಹಾಕಿ ಮತ್ತೆ ತಿರುವುತ್ತಾರೆ.

ಅದರ ಮೇಲೆ ಶೇಂಗಾ, ಸಣ್ಣ ಶೇವು, ತಾವೇ ಹದವಾಗಿ ಬೆರೆಸಿದ ಚೌಚೌ ಉದುರಿಸುತ್ತಾರೆ. ಹಾಳೆಯ ತುಣುಕೊಂದರಲ್ಲಿ ಮುತ್ತುಗದ ಎಲೆಯನ್ನಿತ್ತು, ಪುಡಿಕೆ ಕಟ್ಟಿ ಭೇಲ್ ಹಾಕಿ ಕೊಡುವಾಗಲೇ ರುಚಿಮೊಗ್ಗುಗಳು ಲಾಲಾರಸವನ್ನು ಚಿಮ್ಮುತ್ತಿರುತ್ತವೆ. ಇನ್ನು ಆರೋಗ್ಯಕರವೂ ಆಗಿರಬೇಕು. ರುಚಿಕರವೂ ಬೇಕು ಎನ್ನುವವರಿಗೆ ಟೊಮೆಟೊ ಮಸಾಲಾ ಮಾಡಿಕೊಡುತ್ತಾರೆ.

ದುಂಡನೆಯ ಚಕ್ರದಂತೆ ಟೊಮೆಟೊ ಕಟ್ ಮಾಡಿ, ಅದರ ಮೇಲೆ ಚುರುಮುರಿ, ಚೌಚೌ ಉದುರಿಸಿಕೊಡುತ್ತಾರೆ. ಪಾನಿಪುರಿಯ ನೀರಿನ ಬಗ್ಗೆ ಅನುಮಾನ ಇರೋರೆಲ್ಲ, ಇಲ್ಲಿ ಸುಖಾಪುರಿ ಆಸ್ವಾದಿಸಬಹುದು.

ಎಲ್ಲದಕ್ಕೂ ಮುಖ್ಯವಾಗಿ ಕಾಯಿಗಳನ್ನು ತಂದು, ಪೇಪರ್ ಸುತ್ತಿಟ್ಟು, ಹದವಾಗಿ ಬಿಸಿಲುಣಿಸಿ, ಮಾಗಿಸಿದ ಹಣ್ಣನ್ನು ಹೆಚ್ಚಿಕೊಡುತ್ತಾರೆ. ಕಾಯಿ ತಂದರೆ ಅವರಿಗೆ ದುಬಾರಿಯಾಗುವುದಿಲ್ಲ. ಜೊತೆಗೆ ರಾಸಾಯನಿಕಗಳಿಲ್ಲದ ಹಣ್ಣನ್ನು ಗ್ರಾಹಕರಿಗೆ ಉಣಿಸಿದ ಸಮಾಧಾನ. ಹಣ್ಣುಸೇವನೆ ಹೊಟ್ಟೆಗೆ, ಮನಸಿಗೆ ಸಮಾಧಾನವೆನಿಸುವಂತಾಗಬೇಕು. ಆ ಕಾರಣಕ್ಕೆ ಕಾಯಿ ತಂದು ತಾವೇ ಹಣ್ಣು ಮಾಡುವುದಾಗಿ ಪಾಶಾ ಹೇಳುತ್ತಾರೆ.

ಈ ಸಲ ಎಂಜಿ ರಸ್ತೆಗೆ ಬಂದರೆ, ಚುರುಚುರು ಚಾಟ್ ತಿನ್ನೇಬೇಕೆನಿಸಿದರೆ, ಜಗಮಗ ಲೈಟು ನೋಡಿ ದಣಿವಾಗಿದ್ದರೆ, ಶಾಪಿಂಗ್ ಮಾಡಿ ಕಸುವು ಕಡಿಮೆಯಾಗಿದೆ ಎಂದೆನಿಸಿದರೆ, ಒಮ್ಮೆ ಬಂದು ಇಲ್ಲಿ ಹಣ್ಣು ತಿಂದು, ಚುರುಮುರಿ ಸವಿದು ಹೋಗಿ.. ಮತ್ತೊಮ್ಮೆ ಪಾಶಾ ಅವರನ್ನು ಕಾಣಲೆಂದೇ ಬರುವಿರಿ. ❖

PVR - INOX CINEMAS {DIRECTORS CUT, FORUM REX WALK, 8:15, 11:10, 4:00, 7:35, 10:30 p.m. | NEXUS FORUM MALL, KORMANGALA, 9:00, 10:20, 12:15, 3:30, 4:00, 7:15, 10:00, 10:30 p.m. | ORION MALL, YESHWANTPUR, 8:50, 9:15, 12:05, 3:45, 4:40, 7:00, 10:15 p.m. | VAISHNAVI SAPPHIRE MALL, TUMKUR ROAD, 9:00, 12:15, 3:30, 6:45, 10:00 p.m. | VEGA CITY MALL, 9:30, 10:20, 12:45, 1:35, 4:00, 7:15, 10:15 p.m. | MSR REGALIA, 9:00, 12:15, 4:20, 6:45, 10:00 p.m. | PHOENIX MARKET CITY, K.R. PURAM, 9:00, 9:40, 12:15, 3:30, 6:45, 10:00, 10:30 p.m. | BHARTIYA CITY, 9:30, 12:45, 4:00, 7:15, 10:00 p.m. | GT WORLD MALL, 9:00, 12:15, 3:30, 6:45, 10:00 p.m. | AURA PARK SQUARE, WHITEFIELD ROAD, 9:00, 12:15, 3:30, 6:45, 10:00 p.m. | SPIRIT MALL, 9:00, 12:15, 4:25, 7:15, 10:30 p.m. | VR MALL, WHITEFIELD ROAD, 8:50, 12:05, 3:20, 3:35, 5:45, 6:35, 9:00, 9:50, 10:30 p.m. | GLOBAL MALL, NAYANDALLI, 9:15, 12:30, 3:45, 7:00, 10:15 p.m. | UPTOWN OMR MALL, 9:00, 12:15, 3:30, 6:45, 10:00 p.m. | SUPERPLEX FALCON CITY, 9:30, 12:45, 7:15, 10:30 p.m. IN ATMOS : 9:00, 12:15, 3:30, 6:45, 10:00 p.m. | MANTRI MALL, 9:00, 12:15, 3:30, 6:45, 10:00 p.m. | CENTRAL MALL, J.P.NAGAR, 9:05, 4:00, 7:15, 10:30 p.m. | GARUDA MALL, 9:00, 10:25, 12:15, 3:30, 6:45 p.m. | SWAGATH MALL, 12:20, 7:15, 10:30 p.m. | BROOKFIELD MALL, 9:00, 12:10, 7:05, 10:20 p.m. | LIDO, 3:35, 10:30 p.m. | GALLERIA MALL, RMZ YELAHANKA, 9:05, 12:15, 3:30, 6:45, 10:00 p.m. | GARUDA, YELAHANKA, 12:45, 4:00, 7:15, 10:30 p.m. | SBR HORIZON, SEEGEHALLI, 9:00, 12:15, 3:30, 6:45, 10:00 p.m. | VALUE NEIGHBOURHOOD MALL, WHITEFIELD, 9:00, 12:15, 3:30, 6:45, 10:00 p.m.} | CINEPOLIS CINEMAS {ROYAL MEENAKSHI MALL, 9:45, 12:55, 4:05, 7:15, 10:25 p.m. | ETA MALL, BINNY MILL, 9:45, 1:20, 4:05, 7:15, 10:25 p.m. | EAST ORION MALL, 12:30, 6:30, 9:40 p.m. | SHANTINIKETAN, 9:45, 12:55, 4:05, 7:15, 10:25 p.m. | SJR SPECTRUM MALL, 10:35, 12:45, 7:05, 10:15 p.m. | LULU MALL (TRD), 12:35, 7:20 p.m. | LULU MALL (VIP), 10:00, 12:35, 3:45, 6:55, 10:05 p.m.} | GOPALAN CINEMAS {ARCADE MALL, 9:45, 7:00, 10:00 p.m. | LEGACY MALL,10:00, 1:30, 6:30, 9:30 p.m. | GRAND MALL, 9:30, 6:45, 10:15 p.m. | GRAND MALL, 9:30, 6:45, 10:15 p.m. | SIGNATURE MALL, 12:30, 6:30, 10:15 p.m. | INNOVATION MALL, 9:30, 7:30, 10:15 p.m.} | INNOVATIVE {MARATHHALLI} | CINEPHILE {HSR LAYOUT, 12:45, 7:35, 10:30 p.m.} | ROCKLINE CINEMA MALL {JALAHALLI CROSS, 11:30, 2:30, 6:00, 9:00 p.m.} | CINE GALAXY {SURATKAL, 9:50, 1:30, 5:10, 7:00, 10:15 p.m.} | MOVIE TIME {DAVANGERE, 11:32, 4:45, 10:30 p.m. | BELLARY, 10:00, 1:30, 4:00, 7:00, 10:30 p.m.} | ABHINAY {K.G.ROAD} | VEERESH THEATRE {MAGADI ROAD, 1:15, 4:15, 7:15 p.m.} | SHARADA THEATRE {SP ROAD, 10:30, 1:15, 4:15, 7:15 p.m.} | PVR - INOX CINEMAS {FIZA MALL, MANGALORE, 9:00, 12:15, 3:30, 6:45, 10:00 p.m. | FORUM MALL, MYSORE, 9:00, 12:15, 3:30, 6:45, 10:00 p.m. | GARUDA MALL, MYSORE, 9:30, 12:45, 4:00, 7:15, 10:30 p.m. | CENTRAL, MANIPAL, 9:00, 12:15, 3:30, 6:45, 10:00 p.m. | SATYAM MALL, MYSORE, 9:05, 4:00, 7:15, 10:30 p.m. | S MALL, TUMKUR, 9:30, 12:45, 4:00, 7:15, 10:30 p.m. | CENTRO MALL MYSORE, 9:30, 12:45, 7:05, 10:20 p.m.} | CINEPOLIS {CITY CENTRE MALL, MANGALORE, 10:00, 1:05, 4:05, 10:05 p.m.} | BHARATH CINEMAS {MANGALORE, 10:15, 1:15, 5:00, 7:30, 10:15 p.m. | MANIPAL, 10:30, 1:30, 4:30, 7:30, 10:30 p.m. | SHIMOGA, 10:00, 1:15, 4:00, 7:15, 10:30 p.m.} | DRC CINEMAS {MYSORE, 9:45, 12:50, 7:20, 10:20 p.m.} | RAJKAMAL THEATRE {MYSORE, 11:30, 2:30, 6:30, 9:30 p.m.} | SUCHITRA THEATRE {MANGALORE, 10:30, 1:30, 4:30, 7:30 p.m.} | NETHRAVATHI THEATRE {BHADRAVATHI} | DIANA THEATRE {UDUPI, 10:30, 1:30, 4:30, 7:30 p.m.}.

FARNAZ

ಪಿಕ್ಚರ್ ಪ್ಯಾಲೇಸ್

ಆಷಾಢ ಶುಕ್ರವಾರದ ಸಂಭ್ರಮ

ಭಕುತಿಯ ಭಾವ

ಆಷಾಢ ಮಾಸ ಸಮೃದ್ಧಿಯ ಪ್ರತೀಕವೆಂದು ಭಾವಿಸಲಾಗುತ್ತದೆ. ಬೇಸಿಗೆಯಲ್ಲಿ ಆವಿಗಟ್ಟಿದ ಮೋಡಗಳೆಲ್ಲ ಸದಾ ಜಿಟಿಜಿಟಿ ಮಳೆ ಸುರಿಸಿ, ಹದಗೊಂಡ ಹೊಲದಲ್ಲಿ ಬಿತ್ತಿದ ಬೀಜಗಳು ಮೊಳಕೆಯೊಡೆದು ಬೆಳೆಯುವ ಕಾಲವಿದು.

ಸದಾ ಜಿಟಿಜಿಟಿ ಸೋನೆ ಮಳೆ ಸುರಿಯುವುದು, ಇಲ್ಲವೇ ಹಿಟ್ಟು ಸೋಸಿದಂತಹ ತುಷಾರ ಮಳೆ. ಈ ಮಾಸದ ಮಂಗಳವಾರ, ಶುಕ್ರವಾರಗಳಲ್ಲಿ ಭಕ್ತಿಯ ಪರಾಕಾಷ್ಠೆಯನ್ನು ಕಾಣಬಹುದು. ಶಕ್ತಿ ದೇವತೆಯ ಪೀಠಗಳಲ್ಲಿ ವಿವಿಧ ಭಕುತಿಯ ಭಾವಗಳು ಕಂಡು ಬರುತ್ತವೆ.

ದೇವಿಯ ಮುಂದೆ ದೇಹಿ ಎಂದು ನಿಲ್ಲುವಾಗ ಬದುಕೆಲ್ಲ ಬೆಲ್ಲವಾಗಲಿ ಎಂದು ಬೆಲ್ಲದ ದೀಪಗಳನ್ನೂ, ದುಷ್ಟಶಕ್ತಿಗಳ ಸಂಹಾರವಾಗಲಿ ಎಂದು ನಿಂಬೆ ದೀಪಗಳನ್ನೂ, ಹರಳುಪ್ಪು, ಮೆಣಸಿನ ತಟ್ಟೆಗಳಿಂದ ಇಳಿ ತೆಗೆದು ಕೆಟ್ಟ ದೃಷ್ಟಿ ನಿವಾರಣೆ ಆಗಲಿ ಎಂದು ವಿವಿಧ ಆಚರಣೆಗಳನ್ನು ಆಚರಿಸುತ್ತಾರೆ. ಬೆಂಗಳೂರಿನ ಬನಶಂಕರಿ ದೇವಸ್ಥಾನದಲ್ಲಿ, ದೇಗುಲದಲ್ಲಿ ಇಂಥ ಭಕುತಿಯ ವಿವಿಧ ಭಾವಗಳನ್ನು ಪ್ರಜಾವಾಣಿಯ ಫೋಟೊ ಜರ್ನಲಿಸ್ಟ್ ಎಂ.ಎಸ್. ಮಂಜುನಾಥ್ ಸೆರೆ ಹಿಡಿದಿದ್ದಾರೆ.

ಎಲ್ಲರ ನೋವನ್ನು ಬಲ್ಲವನಾದರೆ...

'ಲೋಕದ ಕಾಳಜಿ ಮಾಡುತ್ತೀನಂತಿ ನಿನಾಗ್ಯಾರು ಬ್ಯಾಡಂತಾರೂ ಮಾಡಪ್ಪ ಚಿಂತಿ' ಎಂದು ಸಂತ ಶಿಶುನಾಳ ಶರೀಫರು ಹೇಳಿ ಕಾಲಗಳೇ ಉರಳಿವೆ. ಹಾಗಿದ್ದರೆ ಲೋಕದ ಕಾಳಜಿ ಮಾಡುವವರು ಯಾರು? ಯಾರು ಮಾಡಬೇಕು? ಸರಿಯಾಗದ ಲೋಕದ ಕುರಿತು ನಿಲ್ಲದ ಕಾಳಜಿ ಮಾಡಲು ಸಾಧ್ಯವೇ, ಖಂಡಿತಾ ಇಲ್ಲ. ನಾವು! ನಮ್ಮ ಮನೆ! ಮನೆಯ ಕಾಂಪೌಂಡ್ ಬಿಟ್ಟು ಅದರಾಚೆಗೆ ಯೋಚನೆ ಮಾಡುವುದಿಲ್ಲ. ನಮ್ಮ ಮನೆ ಕಸ ತೆಗೆದು, ಪಕ್ಕದ ಮನೆ ಕಾಂಪೌಂಡ್‌ಗೆ ತಾಗುವಂತೆ ಒರಗಿಸಿ ಬರೋ ಜನ ನಾವು ಬೇರೆಯವರ ಕುರಿತು ಚಿಂತೆ ಮಾಡುತ್ತೇವೆಂದರೆ ನಂಬದ ಮಾತು.

ಹಾಗೆ ಜಗದಲ, ಮುಗಿಲಗಲ ಎಂದು ಚಿಂತೆ ಮಾಡುವವರು ತೀರಾ ವಿರಳ. ಆ ವಿರಳತೆಗೆ ಬಸವಣ್ಣ, ಶರೀಫರು, ಕುವೆಂಪು ಮುಂತಾದ ದಾರ್ಶನಿಕರೇ ಸಾಕ್ಷಿ. ಮನೆ ಮನೆಯ ಕಸಗುಡಿಸಲು ನಾವಿದ್ದೇವೆ. ಜಗದ ಕಸ ತೆಗೆಯಲು ಯಾರು ಬರುತ್ತಾರೆ. ಹಾಗೊಂದು ವೇಳೆ ಬಂದರೆ ಅವರನ್ನು ಸಹಿಸುವ ಮನುಷ್ಯತ್ವ ನಮ್ಮಲ್ಲಿದೆಯೇ? ಅದೂ ಇಲ್ಲೆ!. ಸರ್ವೆ ಜನಾ ಸುಖಿನೋ ಭವಂತು. ಎಂಬ ಮಾತಿನನ್ವಯ ಎಷ್ಟು ಜನರು ಎಲ್ಲರ ಸುಖವನ್ನು ಬಯಸುತ್ತಾರೆ?. ತೀರಾ ಕಡಿಮೆ. ಸ್ವಹಿತ, ಸ್ವಕಾರ್ಯ ಇವುಗಳೇ ತುಂಬ ತುಳುಕಾಡುತ್ತವೆ.

ಸರತಿ ಸಾಲಿನಲ್ಲಿ ನಿಂತಿದ್ದಾಗ ಯಾರಾದರೂ ಸುಸ್ತಾಗಿ ತಲೆತಿರುಗಿ ಬಿದ್ದರೆ; ಬಿದ್ದರೆ ಬೀಳಲಿ ನಮ್ಮ ಸರತಿ ಇನ್ನೂ ಎರಡು ಹೆಜ್ಜೆ ಮುಂದೆ ಹೋಯಿತು ಎನ್ನುವವರೇ ಹೆಚ್ಚು. ಯಾಕೇ ಹೀಗೆ? ಅಯ್ಯೋ ಜಗದ ಬಗ್ಗೆ ಮಾತನಾಡುವುದಿರಲಿ. ನಮ್ಮ ಮನೆಯಲ್ಲಿಯೇ ಅವರವರ ವಸ್ತು ಎತ್ತಿಟ್ಟುಕೊಂಡರೆ, ಬೇರೆಯವರ ಕೆಲಸ ಹಗುರವಾದಂತೆ.

ಈ ಲೋಕದಲ್ಲಿ ಇದ್ದೇವೆ ಅಂದ ಮೇಲೆ ಗಾಳಿ ನೀರು, ಅನ್ನ, ಅವಕಾಶ ಬಳಸಿಕೊಳ್ಳುತ್ತೇವೆ ಎಂದ ಮೇಲೆ ನಾವು ಪ್ರತಿಯಾಗಿ ಲೋಕದ ಬಗ್ಗೆ ಕಾಳಜಿ ತೋರಬೇಕಲ್ಲವೆ. ಈ ನಡುವೆ ಆದ್ಯವಚನಕಾರ ದಾಸಿಮಯ್ಯನ ವಚನದ ಸಾಲುಗಳು ನೆನಪಾಗುತ್ತವೆ. 'ಇಳೆ ನಿಮ್ಮದಾನ. ಬೆಳೆ ನಿಮ್ಮ ದಾನ. ಸುಳಿದು ಸೂಸುವ ವಾಯು ನಿಮ್ಮ ದಾನ, ನಿಮ್ಮ ದಾನವನುಂಡು ಅನ್ಯಂ ಹೊಗುಳುವ ಕುನ್ನಿಗಳನೇನೆಂಬೆ ಕಾಣ ರಾಮನಾಥ' ನಾವು ಮಾಡುವುದೇ ಹಾಗೆ. ಅಟ್ಟಕ್ಕೆ ಹತ್ತಿದ ಮೇಲೆ ಏಣಿ ಒದೆಯುವ, ಹೊಳೆ ದಾಟಿದ ಮೇಲೆ ಅಂಬಿಗನನ್ನು ತಿರಸ್ಕರಿಸುವ ಮನೋಭಾವದವರು.

ಇಲ್ಲಿ ಹುಟ್ಟಿದ್ದೇವೆ, ಇಲ್ಲಿಯೇ ಚಂದದ ಬದುಕು ಸಾಗಿಸುತ್ತಿದ್ದೇವೆ ಎಂದ ಮೇಲಾದರೂ ಬೇರೆಯವರ ಬಗ್ಗೆ ಕಿಂಚಿತ್ ಯೋಚನೆ ಮಾಡಬೇಕು ಅಲ್ಲವೆ!. ಡಾಕ್ಟರ್ ಹತ್ತಿರ ಅಪಾಯಿಂಟ್‌ಮೆಂಟ್ ತೆಗೆದುಕೊಂಡು ಹೋಗಿರುತ್ತೇವೆ. ಮೊದಲೇ ಹೋಗಿದ್ದ ರೋಗಿ ಏನಾದರೂ ಹೆಚ್ಚು ಹೊತ್ತು ಇದ್ದುಬಿಟ್ಟರೆ ಸಿಡಿಮಿಡಿಗೊಳ್ಳುತ್ತೇವೆ. ಅದೇ ನಮ್ಮ ಸರತಿ ಬಂದಾಗ ಆರಾಮಾಗಿ ಎಲ್ಲ ವಿವರಗಳನ್ನು ಹೇಳಿ ಕೇಳಿ ಮತ್ತೆ ಮತ್ತೆ ಪ್ರಶ್ನೆ ಮಾಡಿ, ನಿರಾಯಾಸವಾಗಿ ಒಳಗೇ ಕುಳಿತುಕೊಳ್ಳುತ್ತೇವೆ.

ಇನ್ನು ಒಂದು ಉದಾಹರಣೆಯೆಂದರೆ ದೇವಸ್ಥಾನಕ್ಕೆ ಸರತಿಯಲ್ಲಿ ನಿಂತಿದ್ದ ಜನ ದೇವರ ದರ್ಶನಕ್ಕೆ ಹಾತೊರೆಯುವುದು ಸಹಜ. ಹಾಗೆಯೇ ನಮ್ಮ ಸರದಿ ಬಂದು ದೇವರ ದರ್ಶನ ಸಿಕ್ಕಿದ ಮೇಲೂ ಮತ್ತೆ ಮತ್ತೆ ಕೇಳಿದ್ದನ್ನೇ ಕೇಳಿಕೊಂಡು ನಿಂತು ಸಮಯ ವ್ಯರ್ಥ ಮಾಡುತ್ತೇವೆ. ಸ್ವಯಂಸೇವಕರು ತಳ್ಳಿದರೂ ದೇವರನ್ನು ಮತ್ತೆ ಮತ್ತೆ ನೋಡುವ ಹಂಬಲ ನಮ್ಮದು. ಯಾಕೆ ಹೀಗೆ ಬೇರೆಯವರ ಬಗ್ಗೆ ಚಿಂತೆ ಮಾಡುವುದಿರಲಿ ನಮ್ಮಲ್ಲಿ ಶಿಸ್ತು ಎನ್ನುವುದೇ ಇಲ್ಲ. ಶಿಸ್ತನ್ನು ಏಕೆ ಪಾಲಿಸಲಾಗಿಲ್ಲ ಎಂಬುದಕ್ಕೆ ಸಮರ್ಥನೆಯನ್ನು ಭರಪೂರ ನೀಡುತ್ತೇವೆ.

ವಿಶ್ವಕುಟುಂಬಿಯ ಕಷ್ಟ ಮಾಸ್ತಿಯವರ ಕವಿತೆ 'ನಾಗಿ' ನಾಯಕಿ ಕಡು ಬಡತನವಿದ್ದರೂ ಮಲೆದೇವರ ಕಷ್ಟದ ಬಗ್ಗೆ ಮಿಡಿಯುತ್ತಾಳೆ. ಜಗತ್ತನ್ನು ಅರಿಯದ ಹೆಂಗಸು ಬೇಸಗೆಯ ಬಿಸಿಲಿನ ಝಳಕ್ಕೆ ಏನೇಲ್ಲ ತೊಂದರೆಯಾಗುತ್ತವೆ ಎಂಬುದನ್ನು ಹೇಳಬಲ್ಲಳು. ಮುಗ್ಧಗಿರುವ ಲೋಕದ ಕಾಳಜಿ ಎಲ್ಲವನ್ನೂ ತಿಳಿದುಕೊಂಡಿರುವ ನಮಗೆಲ್ಲಿ ಬರಬೇಕು ಅಲ್ಲವೇ?

ಹೆಂಗಸೊಬ್ಬಳು ಇರುವ ಮೂವರ ಬದುಕನ್ನು ನೀಗಲು ಕಷ್ಟವಿರುವಾಗ ಆ ಭಗವಂತನಿಗೆ ಲೋಕದ ಭಾರವನ್ನು ಸರಿದೂಗಿಸಲು ಇನ್ನೇಷ್ಟು ಚಿಂತೆ ಇದೆ, ಅವನಿಗೆ ಅಷ್ಟೊಂದು ಕಷ್ಟವಿರುವಾಗ ನಾನು ಏನು ಕೇಳೊದು? ಎಂದು ಯೋಚಿಸುತ್ತಾಳೆ. ಆದರೆ ನೋಟಿನ ಕಂತೆ ಕಂತೆ ಹಾಕಿ ನಮಗೆ ಒಳ್ಳೆಯದು ಮಾಡು ಎಂದು ಬೇಡಿ ಬರುವವರ ನಡುವೆ ನಾವಿದ್ದೇವೆ.

ಇನ್ನೊಬ್ಬರ ಕಾಳಜಿ ಮಾಡುವುದು, ಇನ್ನೊಬ್ಬರ ಬದುಕಿನಲ್ಲಿ ಮೂಗು ತೂರಿಸುವುದರ ಮಧ್ಯೆ ಸ್ಪಷ್ಟವಾದ ಗೆರೆಗಳಿವೆ. ಅದನ್ನು ಅರಿತುಕೊಳ್ಳದೇ ಕಾಳಜಿಯ ಮಾತನ್ನು ಹಿಂದಕ್ಕೆ ಸರಿಸಿ, ಬೇರೆಯವರ ಬದುಕಿನ ಬಗ್ಗೆ ಯೋಚಿಸಿ, ಅವರನ್ನು ಮಾತಿನ ಕೊರಂಬುಗಳಿಂದ ಚುಚ್ಚುವುದು ಹೇಗೆ ಎಂದು ಚಿಂತಿಸುವುದು ಅಮಾನವೀಯ. ಹಾಗೊಮ್ಮೆ ನಮಗೆ ಯಾರಾದರೂ ಮಾತಿನಿಂದ ಚುಚ್ಚಿದರೆ, ಅದನ್ನು ಸಹಿಸುವ ತಾಳ್ಮೆಯನ್ನು ಕಳೆದುಕೊಂಡಿದ್ದೇವೆ.

ಮುಗಿಲನ್ನು ಮುಟ್ಟಲು ಯಾರಿಗೂ ಸಾಧ್ಯವಿಲ್ಲ. ಹಾಗೆ ಎಲ್ಲರ ಕಷ್ಟಗಳನ್ನು ಪರಿಹರಿಸಲು ಸಾಧ್ಯವಿಲ್ಲ. ನಮ್ಮ ಅನುಕೂಲವನ್ನು ನೋಡಿಕೊಂಡು ಬೇರೆಯವ ಕುರಿತು ಕಾಳಜಿ ಮಾಡಲು ಮನಸ್ಸು ಮಾಡಿದರೆ ಅದೇ ಮಾನವೀಯತೆ.

ಕೇವಲ ಒಂದು ಇಟ್ಟಿಗೆಯಿಂದ ಭವ್ಯ ಬಂಗಲೆಯನ್ನು ನಿರ್ಮಿಸಲು ಸಾಧ್ಯವೇ? ಅಂಥ ನೂರಾರು ಸಾವಿರಾರು ಇಟ್ಟಿಗೆಗಳಿಂದ ಭವ್ಯ ಬಂಗಲೆ ನಿರ್ಮಾಣ ಮಾಡಲು ಸಾಧ್ಯವಾಗುತ್ತದೆ.

ಜಗದ ನೋವಿಗೆ ಸ್ಪಂದಿಸುವ ಮನಸ್ಸು ನಮ್ಮಲ್ಲಿದೆಯಂತಾದರೆ ಅದುವೇ ಜಗದ ಏಳಿಗೆಗೆ ಪ್ರಥಮ ಅಡಿಗಲ್ಲಾಗುತ್ತದೆ.

ಸುಮಾವೀಣಾ

ಲಹರಿ

ಶನಿವಾರ, ಜುಲೈ 13, 2024 | ಬೆಂಗಳೂರು | ₹ 7.00 | ಸಂಪುಟ 77 | ಸಂಚಿಕೆ 194 | ಪುಟ 22
www.prajavani.net
prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭೂಮಿಕಾ
ಸೇನಾ ನಾರಿ ಬೈಕ್ ಬೆನ್ನೇರಿ...

ಅರವಿಂದ ಕೇಜ್ರಿವಾಲ್‌ಗೆ ಸಿಹಿ-ಕಹಿ 11
ಜಿಎಸ್‌ಟಿ ವಂಚನೆ: ಉದ್ಯಮಿಗಳಿಗೂ ಕಂಟಕ 10

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
80,519	24,502	₹75,520 (ಬೆಂಗಳೂರು)	₹95,300 (ಬೆಂಗಳೂರು)	83.51

ವಾಲ್ಮೀಕಿ ಅಭಿವೃದ್ಧಿ ನಿಗಮದ ₹94 ಕೋಟಿ ಅಕ್ರಮ ವರ್ಗಾವಣೆ ಪ್ರಕರಣ

ಮಾಜಿ ಸಚಿವ ನಾಗೇಂದ್ರ ಬಂಧನ

ಪ್ರಜಾವಾಣಿ ವಾರ್ತೆ

ಬಿ. ನಾಗೇಂದ್ರ

ಬೆಂಗಳೂರು: ಕರ್ನಾಟಕ ಮಹರ್ಷಿ ವಾಲ್ಮೀಕಿ ಅಭಿವೃದ್ಧಿ ನಿಗಮದ ಬ್ಯಾಂಕ್ ಖಾತೆಯಿಂದ ₹94 ಕೋಟಿಯನ್ನು ಅಕ್ರಮವಾಗಿ ವರ್ಗಾವಣೆ ಮಾಡಿದ ಪ್ರಕರಣದಲ್ಲಿ ಮಾಜಿ ಸಚಿವ, ಬಳ್ಳಾರಿ ಗ್ರಾಮೀಣ ಕ್ಷೇತ್ರದ ಕಾಂಗ್ರೆಸ್ ಶಾಸಕ ಬಿ. ನಾಗೇಂದ್ರ ಅವರನ್ನು ಜಾರಿ ನಿರ್ದೇಶನಾಲಯ (ಇ.ಡಿ) ಶುಕ್ರವಾರ ಬಂಧಿಸಿದೆ.

ಪ್ರಕರಣದ ತನಿಖೆ ಆರಂಭಿಸಿದ್ದ ಇ.ಡಿ ಅಧಿಕಾರಿಗಳು, ಪರಿಶಿಷ್ಟ ಪಂಗಡಗಳ ಕಲ್ಯಾಣ ಸಚಿವರಾಗಿದ್ದ ನಾಗೇಂದ್ರ, ನಿಗಮದ ಅಧ್ಯಕ್ಷರೂ ಆಗಿರುವ ರಾಯಚೂರು ಗ್ರಾಮೀಣ ಕ್ಷೇತ್ರದ ಶಾಸಕ ಬಸನಗೌಡ ದದ್ದಲ್ ಮನೆಗಳೂ ಸೇರಿದಂತೆ 20ಕ್ಕೂ ಹೆಚ್ಚು ಸ್ಥಳಗಳ ಮೇಲೆ ಬುಧವಾರ ದಾಳಿ ನಡೆಸಿದ್ದರು. ಎರಡು ದಿನಗಳ ಸತತ ಶೋಧ ನಡೆಸಿದ್ದ ತನಿಖಾ ತಂಡ, ಇಬ್ಬರಿಗೂ ಮನೆಯಲ್ಲೇ ದಿಗ್ಬಂಧನ ವಿಧಿಸಿತ್ತು.

10ನೇ ಪುಟ ನೋಡಿ

ಎಂ.ಡಿ ಹೇಳಿಕೆಯೇ ಪ್ರಬಲ ಸಾಕ್ಷ್ಯ

‘ಯೂನಿಯನ್ ಬ್ಯಾಂಕ್‌ನ ವಸಂತನಗರ ಶಾಖೆಯಲ್ಲಿದ್ದ ವಾಲ್ಮೀಕಿ ಅಭಿವೃದ್ಧಿ ನಿಗಮದ ಖಾತೆಯನ್ನು ಎಂ.ಜಿ. ರಸ್ತೆ ಶಾಖೆಗೆ ವರ್ಗಾಯಿಸಿ, ತಾವು ಸೂಚಿಸಿದ್ದ ವ್ಯಕ್ತಿಗೆ ಖಾತೆ ನಿರ್ವಹಣೆ ಅಧಿಕಾರ ನೀಡುವಂತೆ ಸಚಿವರಾಗಿದ್ದ ಬಿ.ನಾಗೇಂದ್ರ ಒತ್ತಡ ಹೇರಿದ್ದರು’ ಎಂದು ನಿಗಮದ ಮಾಜಿ ವ್ಯವಸ್ಥಾಪಕ ನಿರ್ದೇಶಕ ಜೆ.ಜಿ. ಪದ್ಮನಾಭ ಅವರು ವಿಶೇಷ ತನಿಖಾ ದಳದ (ಎಸ್‌ಐಟಿ) ವಿಚಾರಣೆ ವೇಳೆ ಹೇಳಿಕೆ ನೀಡಿದ್ದರು.

ಪದ್ಮನಾಭ, ನಿಗಮದ ಮುಖ್ಯ ಲೆಕ್ಕಾಧಿಕಾರಿಯಾಗಿದ್ದ ಪರಶುರಾಮ ದುರ್ಗಣ್ಣನವರ ಸೇರಿದಂತೆ 11 ಆರೋಪಿಗಳನ್ನು ಎಸ್‌ಐಟಿ ಈವರೆಗೆ ಬಂಧಿಸಿದೆ . ಈ ಪೈಕಿ ಪದ್ಮನಾಭ ಮತ್ತು ಪರಶುರಾಮ ಅವರನ್ನು ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿ ನ್ಯಾಯಾಂಗ ಬಂಧನದಲ್ಲಿದ್ದ ಅವಧಿಯಲ್ಲೇ ವಶಕ್ಕೆ ಪಡೆದಿದ್ದ ಇ.ಡಿ ಅಧಿಕಾರಿಗಳು ವಿಚಾರಣೆ ನಡೆಸಿದ್ದರು. ಆಗಲೂ, ಪದ್ಮನಾಭ ಅವರು ನಾಗೇಂದ್ರ ಒತ್ತಡ ಹೇರಿದ್ದ ಕುರಿತು ಹೇಳಿಕೆ ನೀಡಿದ್ದರು. ಅದನ್ನು ಆಧರಿಸಿ ತನಿಖೆ ಮುಂದುವರಿಸಿದ್ದು, ಪ್ರಬಲ ಸಾಕ್ಷ್ಯಾಧಾರಗಳು ಲಭಿಸಿದ ಬಳಿಕ ಬಂಧಿಸಲಾಗಿದೆ ಎಂದು ಮೂಲಗಳು ತಿಳಿಸಿವೆ.

ಮೂರನೇ ಬಾರಿ ಬಂಧನ

ಬೇಲೇಕೇರಿ ಬಂದರಿನಲ್ಲಿ ಲೋಕಾಯುಕ್ತ ತನಿಖಾ ತಂಡ ವಶಕ್ಕೆ ಪಡೆದಿದ್ದ ಕಬ್ಬಿಣದ ಅದಿರಿನ ಕಳ್ಳಸಾಗಣೆ ಪ್ರಕರಣದಲ್ಲಿ, ಆಗ ಶಾಸಕರಾಗಿದ್ದ ನಾಗೇಂದ್ರ ಅವರನ್ನು ಸಿಬಿಐ 2014ರಲ್ಲಿ ಬಂಧಿಸಿತ್ತು. ಅಕ್ರಮ ಗಣಿಗಾರಿಕೆಗೆ ಸಂಬಂಧಿಸಿದ ಪ್ರತ್ಯೇಕ ಪ್ರಕರಣದಲ್ಲಿ ಲೋಕಾಯುಕ್ತದ ಎಸ್‌ಐಟಿ 2015ರಲ್ಲಿ ಬಂಧಿಸಿತ್ತು. ಈಗ ಮೂರನೇ ಬಾರಿ ಆರ್ಥಿಕ ಅಪರಾಧಕ್ಕೆ ಸಂಬಂಧಿಸಿದ ಪ್ರಕರಣದಲ್ಲಿ ನಾಗೇಂದ್ರ ಬಂಧಿತರಾಗಿದ್ದಾರೆ.

ಬಂಧಿಸುವಂತೆ ದದ್ದಲ್ ದುಂಬಾಲು

ದದ್ದಲ್

ಬೆಂಗಳೂರು: ವಾಲ್ಮೀಕಿ ನಿಗಮದ ಅಧ್ಯಕ್ಷರೂ ಆಗಿರುವ ರಾಯಚೂರು ಗ್ರಾಮೀಣ ಕ್ಷೇತ್ರದ ಕಾಂಗ್ರೆಸ್ ಶಾಸಕ ಬಸನಗೌಡ ದದ್ದಲ್ ಅವರು ಶುಕ್ರವಾರ ವಿಶೇಷ ತನಿಖಾ ದಳದ (ಎಸ್‌ಐಟಿ) ಎದುರು ದಿಢೀರ್ ಹಾಜರಾಗಿ ‘ತಮ್ಮನ್ನು ಬಂಧಿಸಿ’ ಎಂದು ದುಂಬಾಲು ಬಿದ್ದ ಪ್ರಸಂಗ ನಡೆದಿದೆ.

ಗುರುವಾರ ಎರಡನೇ ಬಾರಿಗೆ ವಿಚಾರಣೆಗೆ ಬರುವಂತೆ ದದ್ದಲ್ ಅವರಿಗೆ ಎಸ್‌ಐಟಿ ನೋಟಿಸ್ ಜಾರಿ ಮಾಡಿತ್ತು. ಆದರೆ, ಇ.ಡಿ (ಜಾರಿ ನಿರ್ದೇಶನಾಲಯ) ಅಧಿಕಾರಿಗಳ ದಾಳಿಯಿಂದ ಅವರು ವಿಚಾರಣೆಗೆ ಗೈರಾಗಿದ್ದರು. ಬೆಳಿಗ್ಗೆ 10.30ರ ಸುಮಾರಿಗೆ ಸಿಐಡಿ ಕಚೇರಿಗೆ ಅವರು ಬಂದಿದ್ದರು.

ಅತ್ತ ಜಾರಿ ನಿರ್ದೇಶನಾಲಯದ (ಇ.ಡಿ) ಅಧಿಕಾರಿಗಳು ಮಾಜಿ ಸಚಿವ, ಬಳ್ಳಾರಿ ಗ್ರಾಮೀಣ ಕ್ಷೇತ್ರದ ಶಾಸಕ ಬಿ.ನಾಗೇಂದ್ರ ಅವರನ್ನು ಶುಕ್ರವಾರ ಬೆಳಿಗ್ಗೆ ವಶಕ್ಕೆ ಪಡೆದು ವಿಚಾರಣೆ ನಡೆಸುತ್ತಿದ್ದರೆ, ಇತ್ತ ಎಸ್‌ಐಟಿ ಎದುರು ದದ್ದಲ್ ಪ್ರತ್ಯಕ್ಷರಾಗಿದ್ದರು.

ಸಿಐಡಿ ಕಚೇರಿಗೆ ಬಂದ ಅವರು, ‘ಇ.ಡಿ ಅಧಿಕಾರಿಗಳು ಬಂಧಿಸಿದರೆ ಕಷ್ಟವಾಗುತ್ತದೆ. ಕುಟುಂಬದ ಸದಸ್ಯರಿಗೂ ಕಾನೂನು ಸಂಕಷ್ಟ ಎದುರಾಗಲಿದೆ. ದಯವಿಟ್ಟು ನೀವೇ ನನ್ನನ್ನು ಬಂಧಿಸಿ, ಇ.ಡಿ ಸಂಕಷ್ಟದಿಂದ ಪಾರು ಮಾಡಿ’ ಎಂದು ತನಿಖಾಧಿಕಾರಿಗಳ ಎದುರು ಪರಿಪರಿಯಾಗಿ ಬೇಡಿಕೊಂಡರು’ ಎಂದು ಮೂಲಗಳು ಹೇಳಿವೆ.

ಆದರೆ, ದದ್ದಲ್ ಅವರನ್ನು ಬಂಧಿಸಲು ಎಸ್‌ಐಟಿ ಅಧಿಕಾರಿಗಳು ನಿರಾಕರಿಸಿದರು. ‘ನಾವು ಬಂಧಿಸಿದರೂ ಇ.ಡಿ ಅಧಿಕಾರಿಗಳು ಬಾಡಿ ವಾರಂಟ್ ಮೇಲೆ ನಿಮ್ಮನ್ನು ವಶಕ್ಕೆ ಪಡೆಯುತ್ತಾರೆ. ಆಗ ಮತ್ತಷ್ಟು ಸಮಸ್ಯೆ ಆಗಲಿದೆಯೆಂದು ಹೇಳಿ ವಿಚಾರಣೆ ನಡೆಸಿ ಕಳುಹಿಸಿದ್ದಾರೆ’ ಎಂದು ಮೂಲಗಳು ತಿಳಿಸಿವೆ.

10ನೇ ಪುಟ ನೋಡಿ

ಟ್ರಕ್ ಟರ್ಮಿನಲ್ ಅಕ್ರಮ: ಬಿಜೆಪಿಯ ವೀರಯ್ಯ ಸೆರೆ

ಪ್ರಜಾವಾಣಿ ವಾರ್ತೆ

ವೀರಯ್ಯ

ಬೆಂಗಳೂರು: ಡಿ.ದೇವರಾಜ ಅರಸು ಟ್ರಕ್ ಟರ್ಮಿನಲ್ ನಿಯಮಿತದಲ್ಲಿ (ಡಿಡಿಯುಟಿಟಿಎಲ್) ನಡೆದಿದೆ ಎನ್ನಲಾದ ₹47.10 ಕೋಟಿ ಹಗರಣಕ್ಕೆ ಸಂಬಂಧಿಸಿ ನಿಯಮಿತದ ಮಾಜಿ ಅಧ್ಯಕ್ಷ ಹಾಗೂ ಬಿಜೆಪಿ ಮುಖಂಡ ಡಿ.ಎಸ್.ವೀರಯ್ಯ ಅವರನ್ನು ಸಿಐಡಿ ಪೊಲೀಸರು ಶುಕ್ರವಾರ ಬಂಧಿಸಿದರು.

‘ಅಕ್ರಮದಲ್ಲಿ ವೀರಯ್ಯ ಅವರೂ ಶಾಮೀಲಾಗಿರುವುದಕ್ಕೆ ಕೆಲವು ಸಾಕ್ಷ್ಯಗಳು ಲಭಿಸಿದ್ದು ಬಂಧಿಸಲಾಗಿದೆ’ ಎಂದು ಸಿಐಡಿ ಮೂಲಗಳು ತಿಳಿಸಿವೆ.

‘ಮುಡಾ ನಿವೇಶನ ಅಕ್ರಮ ವಿರೋಧಿಸಿ ಶುಕ್ರವಾರ ಬಿಜೆಪಿ ಹಮ್ಮಿಕೊಂಡಿದ್ದ ಪ್ರತಿಭಟನೆಯಲ್ಲಿ ವೀರಯ್ಯ ಸಹ ಭಾಗವಹಿಸಲು ಹೊರಟಿದ್ದರು. ಆಗ ವೀರಯ್ಯ ಅವರನ್ನು ಬಂಧಿಸಲಾಗಿದೆ. ವೀರಯ್ಯ ಅವರನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಲಾಗುವುದು. ಹೆಚ್ಚಿನ ವಿಚಾರಣೆಗಾಗಿ ಕಸ್ಟಡಿಗೆ ನೀಡುವಂತೆ ನ್ಯಾಯಾಧೀಶರನ್ನು ಕೋರಲಾಗುವುದು’ ಎಂದು ಪೊಲೀಸರು ಹೇಳಿದರು.

7ನೇ ಪುಟ ನೋಡಿ

ಬಿಜೆಪಿ ಪ್ರತಿಭಟನೆ

ಮೈಸೂರಿನ ಮುಡಾ ಕಚೇರಿಗೆ ಶುಕ್ರವಾರ ಮುತ್ತಿಗೆ ಹಾಕಲು ಹೊರಟ ವಿಧಾನಸಭೆಯ ವಿರೋಧ ಪಕ್ಷದ ನಾಯಕ ಆರ್‌. ಅಶೋಕ್ ಹಾಗೂ ಶಾಸಕ ಡಾ.ಸಿ.ಎನ್‌. ಅಶ್ವತ್ಥನಾರಾಯಣ ಅವರನ್ನು ಪೊಲೀಸರು ವಶಕ್ಕೆ ಪಡೆದರು–ಪ್ರಜಾವಾಣಿ ಚಿತ್ರ

ಪ್ರಜಾವಾಣಿ ವಾರ್ತೆ

ಮೈಸೂರು: ಮುಡಾ ಹಗರಣದ ಸಿಬಿಐ ತನಿಖೆ ಹಾಗೂ ಮುಖ್ಯಮಂತ್ರಿ ಸಿದ್ದರಾಮಯ್ಯ, ನಗರಾಭಿವೃದ್ಧಿ ಸಚಿವ ಬೈರತಿ ಸುರೇಶ್ ರಾಜೀನಾಮೆಗೆ ಒತ್ತಾಯಿಸಿ ಬಿಜೆಪಿ ಕಾರ್ಯಕರ್ತರು ನಗರದಲ್ಲಿ ಶುಕ್ರವಾರ ಪ್ರತಿಭಟಿಸಿದರು. ಮುಡಾ ಕಚೇರಿಗೆ ಮುತ್ತಿಗೆ ಹಾಕಲು ಹೊರಟ ಅವರನ್ನು ಪೊಲೀಸರು ವಶಕ್ಕೆ ಪಡೆದು ನಂತರ ಬಿಡುಗಡೆ ಮಾಡಿದರು.

ಮಹಾರಾಜ ಕಾಲೇಜು ಮೈದಾನದಲ್ಲಿ ಸೇರಿದ ಕಾರ್ಯಕರ್ತರು ಬಿಜೆಪಿ ಬಾವುಟ ಹಿಡಿದು, ಕಾಂಗ್ರೆಸ್ ನಾಯಕರ ವಿರುದ್ಧ ಘೋಷಣೆ ಕೂಗಿದರು. ‘ಸಿದ್ದರಾಮಯ್ಯ ಪತ್ನಿಗೆ 14 ಸೈಟು; ಬಡ ಮಹಿಳೆಯರಿಗೆ ಖಾಲಿ ಸೌಟು’ ಮೊದಲಾದ ಫಲಕಗಳನ್ನು ಹಿಡಿದು ಮಹಿಳೆಯರು ಹೆಜ್ಜೆ ಹಾಕಿದರು.

ಮುಡಾ ಕಚೇರಿಯತ್ತ ಹೆಜ್ಜೆ ಹಾಕುತ್ತಿದ್ದ ಅವರನ್ನು ಒಆರ್‌ಐ ಕಟ್ಟಡದ ಹಿಂಭಾಗ ತಡೆದ ನಗರ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್ ನೇತೃತ್ವದ ತಂಡವು ಮಳೆಯಲ್ಲೇ ವಶಕ್ಕೆ ಪಡೆದು ಕರೆದೊಯ್ದಿತು.

‘10 ಸಾವಿರಕ್ಕೂ ಹೆಚ್ಚು ಸಂಖ್ಯೆಯ ಕಾರ್ಯಕರ್ತರು ಪಾಲ್ಗೊಳ್ಳಲಿದ್ದಾರೆ’ ಎಂದು ಬಿಜೆಪಿ ನಾಯಕರು ಹೇಳಿದ್ದರು.

7ನೇ ಪುಟ ನೋಡಿ

ಕೊಚ್ಚಿಹೋದ 2 ಬಸ್: 60 ಜನರು ನಾಪತ್ತೆ

ಕಠ್ಮಂಡು (ಪಿಟಿಐ): ನೇಪಾಳದ ನಾರಾಯಣಘಾಟ್‌-ಮುಗಲಿಂಗ್ ರಸ್ತೆಯಲ್ಲಿ ಶುಕ್ರವಾರ ಬೆಳಿಗ್ಗೆ ಭೂಕುಸಿತ ಸಂಭವಿಸಿದ್ದು, ಎರಡು ಬಸ್‌ಗಳಲ್ಲಿ ಪ್ರಯಾಣಿಸುತ್ತಿದ್ದ ಏಳು ಭಾರತೀಯರು ಸೇರಿದಂತೆ 60 ಮಂದಿ ನಾಪತ್ತೆಯಾಗಿದ್ದಾರೆ.

ಭೂಕುಸಿತದ ಬಳಿಕ ಎರಡು ಬಸ್‌ಗಳು ತ್ರಿಶೂಲಿ ನದಿಯಲ್ಲಿ ಕೊಚ್ಚಿಹೋಗಿವೆ. ಬಸ್‌ಗಳಲ್ಲಿ 65 ಪ್ರಯಾಣಿಕರಿದ್ದರು ಎಂದು ಸ್ಥಳೀಯ ‘ಮೈರಿಪಬ್ಲಿಕಾ’ ಸುದ್ದಿ ಪೋರ್ಟಲ್ ವರದಿ ಮಾಡಿದೆ.

ಚಿತ್ವಾನ್ ಜಿಲ್ಲೆಯ ಮುಖ್ಯ ಜಿಲ್ಲಾ ಅಧಿಕಾರಿ ಇಂದ್ರದೇವ್ ಯಾದವ್, ‘ರಾಜಧಾನಿಯಿಂದ ಗೌರ್‌ಗೆ ತೆರಳುತ್ತಿದ್ದ ಕಠ್ಮಂಡು ಮೂಲದ ಏಂಜೆಲ್ ಮತ್ತು ಗಣಪತಿ ಡಿಲಕ್ಸ್ ಬಸ್‌ಗಳು ಕೊಚ್ಚಿಹೋಗಿವೆ. ರಕ್ಷಣೆ ಮತ್ತು ಶೋಧ ಕಾರ್ಯ ನಡೆದಿದೆ ಎಂದು ತಿಳಿಸಿದರು.

ಒಂದು ಬಸ್‌ನಲ್ಲಿದ್ದ ಮೂವರು ಪ್ರಯಾಣಿಕರು ಹೊರಗೆ ಜಿಗಿದು ಪಾರಾಗಿದ್ದಾರೆ. ಬಸ್‌ನಲ್ಲಿ 7 ಮಂದಿ ಭಾರತೀಯರು ಇದ್ದರು. ನಾಪತ್ತೆಯಾಗಿರುವ ಭಾರತೀಯರನ್ನು ಸುರೇಂದ್ರ ಶಾ, ಸಂತೋಶ್ ಠಾಕೂರ್, ಅದಿತ್ ಮಿಯಾನ್, ಸುನಿಲ್, ಶಾನವಾಜ್ ಅಲಂ, ಅನ್ಸಾರಿ ಎಂದು ಗುರುತಿಸಲಾಗಿದೆ. ಇನ್ನೊಬ್ಬರ ವಿವರ ತಿಳಿದುಬಂದಿಲ್ಲ.

ಪ್ರಧಾನಿ ಪುಷ್ಪ ಕಮಲ್ ದಹಲ್ ‘ಪ್ರಚಂಡ’ ಅವರು ಘಟನೆ ಕುರಿತು ವಿಷಾದ ವ್ಯಕ್ತಪಡಿಸಿದ್ದು, ನಾಪತ್ತೆಯಾದವರ ರಕ್ಷಣೆಗೆ ಶೋಧ ಕಾರ್ಯ ಚುರುಕುಗೊಳಿಸಬೇಕು ಎಂದು ಸೂಚನೆ ನೀಡಿದ್ದಾರೆ.

ಕಾವೇರಿ ನೀರಿಗಾಗಿ ಪ್ರಾಧಿಕಾರಕ್ಕೆ ಮೇಲ್ಮನವಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ತಮಿಳುನಾಡಿಗೆ ಪ್ರತಿದಿನ ಒಂದು ಟಿಎಂಸಿ ಅಡಿ ನೀರು ಬಿಡುಗಡೆ ಮಾಡುವಂತೆ ಕಾವೇರಿ ನೀರು ನಿಯಂತ್ರಣ ಸಮಿತಿಯ ಆದೇಶವನ್ನು ವಿರೋಧಿಸಿ, ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರಕ್ಕೆ ಮೇಲ್ಮನವಿ ಸಲ್ಲಿಸಲು ರಾಜ್ಯ ಸರ್ಕಾರ ಮುಂದಾಗಿದೆ.

ಸಮಿತಿ ಆದೇಶಕ್ಕೆ ಸಂಬಂಧಿಸಿದಂತೆ ಸಚಿವರು, ಹಿರಿಯ ಅಧಿಕಾರಿಗಳ ಜತೆ ಸಭೆ ನಡೆಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ಬಳಿಕ ಈ ವಿಷಯ ತಿಳಿಸಿದರು.ರಾಜ್ಯದ ಮುಂದಿನ ನಡೆ ಏನಿರಬೇಕು ಎಂಬ ಬಗ್ಗೆ ಇದೇ 14ರಂದು ಸರ್ವಪಕ್ಷಗಳ ಸಭೆ ನಡೆಸಿ ಅಂತಿಮ ತೀರ್ಮಾನ ಪ್ರಕಟಿಸಲಾಗುವುದು ಎಂದು ಹೇಳಿದರು.

‘ಈ ಬಾರಿ ವಾಡಿಕೆ ಮಳೆ ಆಗಬಹುದು ಎಂಬುದಾಗಿ ಹವಾಮಾನ ಇಲಾಖೆಯ ಮುನ್ಸೂಚನೆ ಇದ್ದರೂ ಮಳೆಯ ಅಭಾವದಿಂದ ಒಳಹರಿವಿನಲ್ಲಿ ಶೇ 28ರಷ್ಟು ಕೊರತೆ ಇದೆ. ಈ ವಿಚಾರವನ್ನು ಸಿಡಬ್ಲ್ಯುಸಿ ಗಮನಕ್ಕೆ ತಂದಿದ್ದೇವು’ ಎಂದು ಹೇಳಿದರು.

7ನೇ ಪುಟ ನೋಡಿ

ಚಿನಕುರುಳಿ

ಪ್ರಕಾಶ್ ಶೆಟ್ಟಿ

INTERNATIONAL CENTRE FOR THEORETICAL SCIENCES
Tata Institute of Fundamental Research
No 151, Shivakote, Hessarghatta Hobli, Bengaluru (North)-560089, India, Tel : +91-80-46536000
An Autonomous Institute of the Department of Atomic Energy Government of India and a Deemed to be University

WALK-IN RECRUITMENT NOTICE

Advertisement No: ICTS-Notice-2024/06 Date: 13 July 2024

The Centre is looking for highly motivated and self-driven individuals for an appointment for the below posts at its Bengaluru Campus.

Sr. No.	Position	Section	No. of post(s)	Upper age limit (as on 1st July 2024)	Consolidated Monthly Emoluments
1	Library Trainee	Library	01	28	22000
2	Clerk Trainee	Accounts, Purchase & Stores	04	28	22000
3	Clerk Trainee	Program Office	02	28	22000
4	Technical Trainee	Laboratory	01	28	23000

Interested candidates should report for the selection process on **Monday, 22 July 2024 at 10:00 am** with a copy of their CV and relevant original certificates stating their educational qualifications, and experience along with a photocopy of these documents. For more information please visit the website **www.icts.res.in**

Head Administration and Finance

ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ನಿ., ಕೋಲಾರ
(ಅಂಚೆ ಪೆಟ್ಟಿಗೆ ಸಂಖ್ಯೆ: 11, ಡಿ.ಸಿ.ಸಿ. ಬ್ಯಾಂಕ್ ರಸ್ತೆ, ಕೋಲಾರ)
Email: kolardccb@yahoo.com | Phone: 08152-222042
ಸಂಖ್ಯೆ: ಕೆಸಿಡಿಸಿಸಿಬಿ:ಲೆ.ವಿ.: :2024–25 ದಿನಾಂಕ: 10.07.2024

ಟೆಂಡರ್ ಪ್ರಕಟಣೆ

ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959ರ ಕಲಂ 63ರಂತೆ ಹಾಗೂ ಬ್ಯಾಂಕಿಂಗ್ ರೆಗ್ಯುಲೇಷನ್ ಕಾಯ್ದೆ 1949ರ ಕಲಂ 30(1)(ಎ) ಗೊಳಪಟ್ಟು ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕಿನ 13 ಶಾಖೆಗಳು ಹಾಗೂ ಕೇಂದ್ರ ಕಛೇರಿಯ 2024–25ನೇ ಹಣಕಾಸು ವರ್ಷದ ಶಾಸನಬದ್ಧ ಲೆಕ್ಕಪರಿಶೋಧನೆ ಕೈಗೊಳ್ಳಲು ಅರ್ಹ ಲೆಕ್ಕಪರಿಶೋಧಕರನ್ನು ಆಯ್ಕೆ ಮಾಡಿಕೊಳ್ಳಲು ದರಪಟ್ಟಿ ಹಾಗೂ ಒಪ್ಪಿಗೆ ಪತ್ರವನ್ನು ಆಹ್ವಾನಿಸಲಾಗಿದೆ.

Eligibility Norms

1. ಶಾಸನಬದ್ಧ ಲೆಕ್ಕಪರಿಶೋಧನೆ ಕೈಗೊಳ್ಳಲು ಲೆಕ್ಕಪರಿಶೋಧಕರನ್ನು ಆಯ್ಕೆ ಮಾಡಿಕೊಳ್ಳಲು ಭಾರತೀಯ ರಿಸರ್ವ್ ಬ್ಯಾಂಕ್ ಹೊರಡಿಸಿರುವ ಮಾನದಂಡಗಳ ಪತ್ರ ಸಂಖ್ಯೆ: RBI/2023-24/113 Ref No. DOS.ARG/SEC.8/08.91.001/2023-24, Dated January 15, 2024ರ ಪಾಲನೆ ಆಗಿರಬೇಕು.
2. NABARD ಪತ್ರ ಸಂಖ್ಯೆ: NB.HO.IDD//241-271/Pol-29/2024-25, Dated 26 June 2024ರ ಪಾಲನೆ ಆಗಿರುಬೇಕು.
3. NABARD E-Mail ದಿನಾಂಕ: ಜೂನ್ 26, 2024ರಲ್ಲಿ ಸೂಚಿಸಿರುವಂತೆ NABARDನ Panel ನಲ್ಲಿ "ಎ" ಮತ್ತು "ಬಿ" ಕೆಟಗರಿ ಯಲ್ಲಿರುವ ಅರ್ಹ Chartered Accountants ಸಂಸ್ಥೆಯವರು ದರಪಟ್ಟಿ ಮತ್ತು ಒಪ್ಪಿಗೆ ಪತ್ರವನ್ನು ನೀಡಬಹುದಾಗಿರುತ್ತದೆ.
4. ಕರ್ನಾಟಕ ರಾಜ್ಯ ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಇಲಾಖೆ, ಸಹಕಾರ ಸಂಘಗಳ ಲೆಕ್ಕಪರಿಶೋಧನಾ ನಿರ್ದೇಶಕರ ಕಛೇರಿ, ಬೆಂಗಳೂರುರವರ ಆದೇಶ ಸಂಖ್ಯೆ: ಎ.ಡಿ.ಎಫ್./ ಎ.ಡಿ.ಸಿ./52/2012–13, ದಿನಾಂಕ: 21.09.2013 ರ ಮಾರ್ಗಸೂಚಿ ಸಂಖ್ಯೆ: 4 ರಂತೆ ಬ್ಯಾಂಕಿನ ದುಡಿಯುವ ಬಂಡವಾಳ ರೂ. 100.00 ಕೋಟಿಗಳನ್ನು ಮೀರಿರುವುದರಿಂದ ಗರಿಷ್ಠ ರೂ. 10.00 ಲಕ್ಷಗಳ ಶುಲ್ಕದ ಮಿತಿಗೆ ಧರಪಟ್ಟಿ ಒಳಪಟ್ಟಿರತಕ್ಕದ್ದು ಹಾಗೂ ಬ್ಯಾಂಕಿನ ಶಾಸನಬದ್ಧ ಲೆಕ್ಕಪರಿಶೋಧನೆ ಕೈಗೊಳ್ಳಲು ಆಸಕ್ತಿ ಇರುವ ಬಗ್ಗೆ ಒಪ್ಪಿಗೆ ಪತ್ರವನ್ನು ಹಾಗೂ ಕಂಡಿಕೆ 01, 02 ಮತ್ತು 03 ರಲ್ಲಿ ತಿಳಿಸಿರುವಂತೆ ಅರ್ಹತೆ ಹೊಂದಿರುವುದಕ್ಕೆ ದಾಖಲೆಗಳನ್ನು ನೀಡತಕ್ಕದ್ದು.
5. ಆಯ್ಕೆ ಮಾಡಿಕೊಳ್ಳುವ ಅಂತಿಮ ಅಧಿಕಾರ ಭಾರತೀಯ ರಿಸರ್ವ್ ಬ್ಯಾಂಕ್‌ನ ಅನುಮೋಧನೆ/ ಬ್ಯಾಂಕಿನ ಸರ್ವ ಸದಸ್ಯರ ಮಹಾಸಭೆ/ ಬ್ಯಾಂಕಿನ ಮಾನ್ಯ ಆಡಳಿತಾಧಿಕಾರಿಗಳು/ ಮುಖ್ಯಕಾರ್ಯನಿರ್ವಹಣಾಧಿಕಾರಿಗಳು ಕಾಯ್ದಿರಿಸಿಕೊಂಡಿರುತ್ತಾರೆ.

(ಹೆಚ್ಚಿನ ಮಾಹಿತಿ ಅವಶ್ಯಕತೆ ಇದ್ದಲ್ಲಿ ಬ್ಯಾಂಕಿನ ಕೇಂದ್ರ ಕಛೇರಿ ದೂರವಾಣಿ ಸಂಖ್ಯೆ: 08152–222042 ಸಂಪರ್ಕಿಸಿ ಅಥವಾ ಖುದ್ದು ಹಾಜರಾಗಿ ಪಡೆಯಲು ಕೋರಿದೆ) ಮೇಲ್ಕಂಡ ಅಂಶಗಳನ್ನೊಳಗೊಂಡಂತೆ ಆಸಕ್ತಿ ಉಳ್ಳ ಸಂಸ್ಥೆಯವರು ಮುಚ್ಚಿದ ಲಕೋಟೆಯಲ್ಲಿ ದಿನಾಂಕ: 20.07.2024ರ ಶನಿವಾರ ಸಂಜೆ 4.00 ಘಂಟೆ ಒಳಗಾಗಿ ಈ ಕೆಳಸಹಿದಾರರಿಗೆ ಸಲ್ಲಿಸತಕ್ಕದ್ದು.

ಸಹಿ/–
ಮುಖ್ಯ ಕಾರ್ಯನಿರ್ವಹಣಾಧಿಕಾರಿ
ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ನಿ., ಕೋಲಾರ

ಆರು ಜಿಲ್ಲೆಗಳಿಗೆ 'ಆರೆಂಜ್ ಅಲರ್ಟ್'

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ವಿವಿಧೆಡೆ ಮುಂದಿನ ಮೂರು ದಿನಗಳು ಭಾರಿ ಮಳೆಯಾಗುವ ಮುನ್ಸೂಚನೆ ನೀಡಿರುವ ಹವಾಮಾನ ಇಲಾಖೆ, ಶನಿವಾರ ಆರು ಜಿಲ್ಲೆಗಳಿಗೆ 'ಆರೆಂಜ್ ಅಲರ್ಟ್' ಘೋಷಿಸಿದೆ.

ಉತ್ತರ ಕನ್ನಡ, ಉಡುಪಿ, ದಕ್ಷಿಣ ಕನ್ನಡ, ಕೊಡಗು, ಚಿಕ್ಕಮಗಳೂರು ಹಾಗೂ ಶಿವಮೊಗ್ಗ ಜಿಲ್ಲೆಗೆ 'ಆರೆಂಜ್ ಅಲರ್ಟ್' ನೀಡಲಾಗಿದೆ. ಈ ಜಿಲ್ಲೆಗಳಲ್ಲಿ 40ರಿಂದ 50 ಕಿ.ಮೀ. ವೇಗದಲ್ಲಿ ಗಾಳಿ ಸಹಿತ ಧಾರಾಕಾರ ಮಳೆಯಾಗುವ ಸಾಧ್ಯತೆಯಿದೆ. ಬೆಳಗಾವಿ ಜಿಲ್ಲೆಗೆ 'ಯೆಲ್ಲೊ ಅಲರ್ಟ್' ಘೋಷಿಸಲಾಗಿದೆ. ಈ ಜಿಲ್ಲೆಯಲ್ಲಿ ಗುಡುಗು ಸಹಿತ ಭಾರಿ ಮಳೆಯ ಜೊತೆಗೆ 30ರಿಂದ 40 ಕಿ.ಮೀ. ವೇಗದಲ್ಲಿ ಗಾಳಿ ಬೀಸುವ ಸಂಭವವಿದೆ ಎಂದು ಇಲಾಖೆ ತಿಳಿಸಿದೆ.

ಉತ್ತರ ಒಳನಾಡಿನ ಬಾಗಲಕೋಟೆ, ಬೀದರ್, ಧಾರವಾಡ, ಗದಗ, ಹಾವೇರಿ, ಕಲಬುರಗಿ, ಕೊಪ್ಪಳ, ರಾಯಚೂರು, ವಿಜಯಪುರ ಹಾಗೂ ಯಾದಗಿರಿ ಜಿಲ್ಲೆಯ ಹಲವೆಡೆ 30ರಿಂದ 40 ಕಿ.ಮೀ. ವೇಗದಲ್ಲಿ ಗಾಳಿ ಸಹಿತ ಸಾಧಾರಣ ಮಳೆಯಾಗುವ ಸಾಧ್ಯತೆಯಿದೆ. ದಕ್ಷಿಣ ಒಳನಾಡಿನ ಬಳ್ಳಾರಿ, ಬೆಂಗಳೂರು ಗ್ರಾಮಾಂತರ, ಬೆಂಗಳೂರು ನಗರ, ಚಾಮರಾಜನಗರ, ಚಿಕ್ಕಬಳ್ಳಾಪುರ, ಚಿತ್ರದುರ್ಗ, ದಾವಣಗೆರೆ, ಹಾಸನ, ಕೋಲಾರ, ಮಂಡ್ಯ, ಮೈಸೂರು, ರಾಮನಗರ, ತುಮಕೂರು ಹಾಗೂ ವಿಜಯನಗರ ಜಿಲ್ಲೆಯ ಹಲವೆಡೆ 40ರಿಂದ 50 ಕಿ.ಮೀ. ವೇಗದಲ್ಲಿ ಗಾಳಿ ಸಹಿತ ಸಾಧಾರಣ ಮಳೆಯಾಗುವ ಸಾಧ್ಯತೆಯಿದೆ ಎಂದು ಇಲಾಖೆ ಮುನ್ಸೂಚನೆ ನೀಡಿದೆ.

ಭಾನುವಾರ ಆರು ಜಿಲ್ಲೆಗಳಿಗೆ 'ಆರೆಂಜ್ ಅಲರ್ಟ್' ಹಾಗೂ ಏಳು ಜಿಲ್ಲೆಗಳಿಗೆ 'ಯೆಲ್ಲೊ ಅಲರ್ಟ್' ಘೋಷಿಸಲಾಗಿದೆ.

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ
(ಸಿಐಎನ್ : ಯು40109ಕೆಎ1999ಎಸ್‌ಜಿಸಿ025521)
ಸಂಖ್ಯೆ: ಅಇಂ(ವಿ)/ಪ್ರ (ನಿ)/ಬೆಂಮಕ್ಷೇವ(ಉ)/ಕಾನಿಇಂ(ಕ)/ಕ–2/24–25/2192–94 ದಿನಾಂಕ : 09.07.2024

ಸಾರ್ವಜನಿಕರ ಸುರಕ್ಷತಾ ಹಿತಾಸಕ್ತಿ ಪ್ರಕಟಣೆ

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ (ಕವಿಪ್ರನಿನಿ)ದ ವಿದ್ಯುತ್ ಮೇಲು ಮಾರ್ಗಗಳ (ಓವರ್ ಹೆಡ್ ಲೈನ್ಸ್ ಮಾರ್ಗದ) ಕೆಳಗೆ ಕಟ್ಟಡಗಳನ್ನು ನಿರ್ಮಿಸುವುದು ಹಾಗೂ ಪಕ್ಕದಲ್ಲಿ ಹಾದುಹೋಗುವ ಸಂದರ್ಭಗಳಲ್ಲಿ ಸೂಕ್ತ ಅಂತರ ಕಾಪಾಡದೇ ಕಟ್ಟಡ ಕಟ್ಟುವುದು, CEA (Measures relating to safety and electric supply) Regulations ಅನಬಂಧನೆಗಳನ್ವಯ ನಿಷೇಧಿಸಲಾಗಿರುತ್ತದೆ. ನಿಬಂಧನೆಗಳನ್ನು ಉಲ್ಲಂಘಿಸಿ ಕಟ್ಟಡಗಳನ್ನು ಸುರಕ್ಷತಾ ಅಂತರ ಕಾಪಡದೇ ನಿರ್ಮಿಸುವುದು, ನಿರ್ಮಿಸಿರುವ ಕಟ್ಟಡಗಳಲ್ಲಿ ವಾಸಿಸುತ್ತಿರುವುದು ಹಾಗೂ ಹಾಗೆ ನಿಯಮಬಾಹಿರವಾಗಿ ನಿರ್ಮಿಸುವ ಕಟ್ಟಡಗಳ ಚಾವಣಿಗಳ ಮೇಲೆ ಇತರೆ ಚಟುವಟಿಕೆಗಳಲ್ಲಿ ಭಾಗಿಯಾಗುತ್ತಿರುವುದು, ವಿದ್ಯುತ್ ಗೋಪುರಗಳಿಗೆ ಹೊಂದಿಕೊಂಡಂತೆ ಕಟ್ಟಡಗಳನ್ನು/ತಾತ್ಕಾಲಿಕ ಶೆಡ್‌ಗಳನ್ನು ನಿರ್ಮಿಸುವುದು ಮತ್ತು ಗೋಪುರಗಳಿಗೆ ಬ್ಯಾನರ್‌ಗಳು ಮತ್ತು ಬಂಟಿಂಗ್‌ಗಳನ್ನು ಕಟ್ಟುವುದು, ವಿದ್ಯುತ್ ಮಾರ್ಗಗಳ ಸನಿಹದಲ್ಲಿ ಗಾಳಿಪಟ ಹಾರಿಸುವುದು ಮತ್ತು ಬಟ್ಟೆಗಳನ್ನು ಒಣಗಿಸುವುದು ಅತ್ಯಂತ ಅಪಾಯಕಾರಿಯಾಗಿರುತ್ತದೆ ಮತ್ತು ಇಂತಹ ಚಟುವಟಿಕೆಗಳಿಂದ ವಿದ್ಯುತ್ ಅಪಘಾತಗಳು ಸಂಭವಿಸಿ ಪ್ರಾಣ ಹಾನಿ ಮತ್ತು ಆಸ್ತಿ ಪಾಸ್ತಿಗಳಿಗೆ ನಷ್ಟ ಸಂಭವಿಸುತ್ತಿವೆ.

ಆದ್ದರಿಂದ ಸಿ.ಇ.ಎ ಅಧಿನಿಯಮಗಳನುಸಾರ ಅಧಿಕ ಒತ್ತಡ ವಿದ್ಯುತ್ ಮಾರ್ಗಗಳಿಂದ ಕನಿಷ್ಠ ಸಮಾನಾಂತರವನ್ನು ಕಡ್ಡಾಯವಾಗಿ ಪಾಲಿಸುವುದು ಎಲ್ಲಾ ಸಾರ್ವಜನಿಕರ ಹೊಣೆಯಾಗಿದ್ದು, ಸುರಕ್ಷತಾ ದೃಷ್ಟಿಯಿಂದ ಅಸುರಕ್ಷಿತ ಕಟ್ಟಡದ ಭಾಗಗಳನ್ನು ತೆರವುಗೊಳಿಸಲು ಕೋರಲಾಗಿದೆ ಮತ್ತು ಅಧಿಕ ವಿದ್ಯುತ್ ಮಾರ್ಗಗಳ ಆಸುಪಾಸಿನಲ್ಲಿ ನಿರ್ಮಿಸಲಾಗಿರುವ ಕಟ್ಟಡಗಳಿಗೆ ಕನಿಷ್ಠ ಸಮಾನಾಂತರಗಳನ್ನು CEA (Measures relating to safety and electric supply) Regulations 2010/2023 ಅನ್ವಯ ಈ ಕೆಳಗೆ ತಿಳಿಸಿರುವಂತೆ ಸುರಕ್ಷತಾ ಅಂತರವನ್ನು ಕಾಪಾಡಲು ಕೋರಲಾಗಿದೆ ಮತ್ತು ಮೇಲೆ ತಿಳಿಸಿರುವ ಅಸುರಕ್ಷತಾ ಚಟುವಟಿಕೆಗಳನ್ನು ಮಾಡದಂತೆ ಕೋರಲಾಗಿದೆ.

	66 ಕೆವಿ	220 ಕೆವಿ	400 ಕೆವಿ
ಕನಿಷ್ಠ ಸಮಾನಾಂತರ	2.3 ಮೀ	3.8 ಮೀ	5.6 ಮೀ

ನಿಯಮಬಾಹಿರವಾಗಿ ನಿರ್ಮಿಸಿರುವ/ನಿರ್ಮಿಸುತ್ತಿರುವ ಇಂತಹ ಕಟ್ಟಡಗಳು ಹಾಗೂ ಅಸುರಕ್ಷಿತ ಚಟುವಟಿಕೆಗಳಿಂದ ಆಗುವ ವಿದ್ಯುತ್ ಅಪಘಾತಗಳಿಂದ ಸಾರ್ವಜನಿಕರಿಗೆ ಪ್ರಾಣ ಹಾನಿ ಹಾಗೂ ಆಸ್ತಿಪಾಸ್ತಿಗೆ ನಷ್ಟವಾದಲ್ಲಿ ಹಾಗೂ ಇನ್ನಿತರೆ ಯಾವುದೇ ಅವಘಡಗಳಿಗೆ ಕವಿಪ್ರನಿನಿಯು ಯಾವುದೇ ರೀತಿ ಜವಾಬ್ದಾರಿಯಾಗಿರುವುದಿಲ್ಲ ಹಾಗೂ ಇಂತಹ ಅವಘಡಗಳಿಗೆ ಸಂಬಂಧಪಟ್ಟ ಕಟ್ಟಡಗಳ ಮಾಲೀಕರು/ಕಟ್ಟಡದಲ್ಲಿ ವಾಸಿಸುವವರು ಮತ್ತು ಈ ರೀತಿಯ ಕಟ್ಟಡಗಳಿಗೆ ಅಗತ್ಯ ಸೌಕರ್ಯ ಕಲ್ಪಿಸುವ ಇಲಾಖೆಗಳೇ ನೇರ ಹೊಣೆಯಾಗಿರುತ್ತಾರೆ ಎಂದು ಈ ಮೂಲಕ ತಿಳಿಸಿದೆ.

ಸಾರ್ವಜನಿಕರ ಹಿತದೃಷ್ಟಿಯಿಂದ ಈ ಪ್ರಕಟಣೆ ನೀಡಲಾಗಿದೆ.

ಸಹಿ/– ಅಧೀಕ್ಷಕ ಇಂಜಿನಿಯರ್ (ವಿ), ಪ್ರಸರಣ (ನಿರ್ವಹಣೆ),
ಬೆಂ.ಮ.ಕ್ಷೇ.ವ, ಉತ್ತರ ವೃತ್ತ, ಕ.ವಿ.ಪ್ರ.ನಿ.ನಿ., ಆನಂದರಾವ್ ವೃತ್ತ, ಬೆಂಗಳೂರು–09

ಮಳೆ: ಹಲವು ರಸ್ತೆಗಳು ಜಲಾವೃತ

ವಾಹನ ಸಂಚಾರಕ್ಕೆ ಅಡ್ಡಿ • ದಕ್ಷಿಣ, ಪಶ್ಚಿಮ ಭಾಗದಲ್ಲಿ ಅತಿಹೆಚ್ಚಿನ ವರ್ಷಧಾರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಶುಕ್ರವಾರ ಮಧ್ಯಾಹ್ನದಿಂದ ರಾತ್ರಿವರೆಗೆ ಹಲವೆಡೆ ಭಾರಿ ಮಳೆಯಾಯಿತು. ಹಲವು ರಸ್ತೆಗಳು ಜಲಾವೃತಗೊಂಡು ವಾಹನ ಸಂಚಾರಕ್ಕೆ ತೊಂದರೆಯಾಯಿತು.

ಮಧ್ಯಾಹ್ನ ಆರಂಭವಾದ ಮಳೆ ಸಂಜೆ ವೇಳೆಗೆ ಹೆಚ್ಚಾಗಿ ಸುರಿಯಿತು. ಇದರಿಂದ ರಸ್ತೆಗಳಲ್ಲಿ ಹೆಚ್ಚು ನೀರು ನಿಂತು ವಾಹನ ದಟ್ಟಣೆ ಉಂಟಾಯಿತು. ರಸ್ತೆ ನೀರು ಚರಂಡಿಗಳಲ್ಲಿ ಹರಿಯದ ಸಮಸ್ಯೆ ಉಂಟಾಯಿತು. ಸಂಚಾರ ಸುಗಮಗೊಳಿಸಲು ಪೊಲೀಸರು ಪರದಾಡಿದರು.

198 ವಾರ್ಡ್‌ಗಳ ಪೈಕಿ 138 ವಾರ್ಡ್ ವ್ಯಾಪ್ತಿಯಲ್ಲಿ ಮಳೆಯಾಗಿದೆ. ಬೆಂಗಳೂರು ದಕ್ಷಿಣ, ಪಶ್ಚಿಮ ಭಾಗದಲ್ಲಿ ಅತಿಹೆಚ್ಚು ಮಳೆಯಾಯಿತು. ಅರಮನೆ ನಗರ, ರಾಜರಾಜೇಶ್ವರಿನಗರ, ನಾಯಂಡಹಳ್ಳಿ, ಕೆಂಗೇರಿ, ಹೆಮ್ಮಿಗೆಪುರ, ನಾಗರಬಾವಿ, ಹೆರೋಹಳ್ಳಿ, ಉತ್ತರಹಳ್ಳಿ, ವಸಂತಪುರ, ಗೊಟ್ಟಿಗೆರೆ, ಬೇಗೂರು, ಯಲಚೇನಹಳ್ಳಿ, ಬಿಟಿಎಂ ಲೇಔಟ್, ವಿವೇಕಹಳ್ಳಿ, ಪುಟ್ಟೇನಹಳ್ಳಿ, ಶಾಕಾಂಬರಿನಗರ, ಶ್ರೀನಗರ, ವಿದ್ಯಾಪೀಠ, ಹನುಮಂತನಗರ, ಚಾಮರಾಜಪೇಟೆ, ವಿಶ್ವೇಶ್ವರಪುರ, ರಾಯಪುರ, ಹೊಸಹಳ್ಳಿ, ವಿಜಯನಗರ, ಹಂಪಿನಗರ, ರಾಜಾಜಿನಗರ, ಮಲ್ಲೇಶ್ವರ, ಶಾಂತಲಾನಗರ ಸುತ್ತಮುತ್ತ ಪ್ರದೇಶಗಳಲ್ಲಿ ಒಂದು ಸೆಂಟಿ ಮೀಟರ್‌ನಿಂದ ಮೂರು ಸೆಂ.ಮೀನಷ್ಟು ಮಳೆಯಾಗಿದೆ.

ಕಂಟೋನ್ಮೆಂಟ್ ಸಮೀಪದ ಕೆಳಸೇತುವೆಯಲ್ಲಿ ಶುಕ್ರವಾರ ಮಳೆ ನೀರು ನಿಂತು ವಾಹನ ಸಂಚಾರಕ್ಕೆ ಅಡ್ಡಿಯಾಗಿತ್ತು –ಪ್ರಜಾವಾಣಿ ಚಿತ್ರ / ಬಿ.ಕೆ.ಜನಾರ್ದನ್

ಕಾಮರಾಜ ರಸ್ತೆಯ ವಿಕ್ಟರ್ ದೇವಸ್ಥಾನದ ಬಳಿ, ಮಹದೇವಪುರದ ಲೋರಿ ಜಂಕ್ಷನ್, ಹೊಸೂರು ರಸ್ತೆ ಸಮೀಪದ ವೀರಣ್ಣಪಾಳ್ಯ ಜಂಕ್ಷನ್, ಮಾನ್ಯತಾ ಟೆಕ್‌ಪಾರ್ಕ್ ಬಳಿಯ ವೀರಣ್ಣಪಾಳ್ಯ ಮೇಲ್ಸೇತುವೆ, ಪೀಣ್ಯ ಮೇಲ್ಸೇತುವೆ, ಕ್ವೀನ್ಸ್ ರಸ್ತೆಯಿಂದ ಅನಿಲ್ ಕುಂಬ್ಳೆ ವೃತ್ತ, ಹೆಬ್ಬಾಳ ಮೇಲ್ಸೇತುವೆಯಿಂದ ಕಸ್ತೂರಿನಗರ ಕಡೆಗೆ, ಎಲೆಕ್ಟ್ರಾನಿಕ್ ಸಿಟಿ ಎದುರಿನ ಹೊಸ ವೀರಸಂದ್ರ, ಸಂಜಯನಗರ ಆಸ್ಪತ್ರೆಯಿಂದ ವಿಮಾನ ನಿಲ್ದಾಣ ರಸ್ತೆ, ಸ್ಯಾಂಕಿ ರಸ್ತೆ- ಭಾಷ್ಯಂ ವೃತ್ತ, ಪೀಣ್ಯ ಅಯ್ಯಪ್ಪ ದೇವಸ್ಥಾನ ರಸ್ತೆ, ಗದ್ದಲಹಳ್ಳಿಯಿಂದ ಬಾಗಲೂರು ಕಡೆಯ ರಸ್ತೆ, ಹುಣಸಮಾರನಹಳ್ಳಿ ಸರ್ವೀಸ್ ರಸ್ತೆಯಿಂದ ವಿಮಾನ ನಿಲ್ದಾಣದ ಕಡೆಯ ರಸ್ತೆಯಲ್ಲಿ ಮಳೆ ನೀರು ನಿಂತು ವಾಹನ ಸಂಚಾರಕ್ಕೆ ಅಡಚಣೆಯಾಯಿತು. ನಿಧಾನಗತಿಯ ಸಂಚಾರದಿಂದ ವಾಹನ ದಟ್ಟಣೆ ಉಂಟಾಗಿತ್ತು.

ಹಡ್ಸನ್ ವೃತ್ತದಲ್ಲಿ ಮರದ ದೊಡ್ಡ ಕೊಂಬೆ, ತಿಲಕನಗರ ಮುಖ್ಯರಸ್ತೆಯಲ್ಲಿ ಮರ ರಸ್ತೆಗೆ ಬಿದ್ದು ವಾಹನ ಸಂಚಾರಕ್ಕೆ ಅಡಚಣೆಯಾಗಿತ್ತು.

ಐದು ದ್ವಿಚಕ್ರ ವಾಹನ ವಶ

ಬೆಂಗಳೂರು: ನಗರದ ವಿವಿಧೆಡೆ ದ್ವಿಚಕ್ರ ವಾಹನಗಳನ್ನು ಕಳವು ಮಾಡುತ್ತಿದ್ದ ಆರೋಪಿಯನ್ನು ಬಸವನಗುಡಿ ಪೊಲೀಸ್ ಠಾಣೆ ಪೊಲೀಸರು ಬಂಧಿಸಿದ್ದಾರೆ. ಆರೋಪಿಯಿಂದ ₹ 3 ಲಕ್ಷ ಮೌಲ್ಯದ ಐದು ದ್ವಿಚಕ್ರ ವಾಹನಗಳನ್ನು ವಶಪಡಿಸಿಕೊಳ್ಳಲಾಗಿದೆ.

ಠಾಣಾ ವ್ಯಾಪ್ತಿಯ ಮಲ್ಲಿಕಾರ್ಜುನ ದೇವಸ್ಥಾನದ ಮುಂಭಾಗದ ರಸ್ತೆಯಲ್ಲಿ ನಿಲ್ಲಿಸಿದ್ದ ವಾಹನವನ್ನು ಜೂನ್ 6ರಂದು ಕಳವು ಮಾಡಲಾಗಿತ್ತು. ತನಿಖೆ ನಡೆಸಿದ ಪೊಲೀಸರು, ಪ್ಯಾಲೇಸ್ ಗುಟ್ಟಹಳ್ಳಿಯ ಅರಮನೆ ಮೈದಾನದ ಬಳಿ ಆರೋಪಿಯನ್ನು ಬಂಧಿಸಿ, ವಿಚಾರಣೆ ನಡೆಸಿದರು. ಹಲವು ಕಡೆ ವಾಹನಗಳನ್ನು ಕಳವು ಮಾಡಿರುವುದಾಗಿ ಆತ ಒಪ್ಪಿಕೊಂಡಿದ್ದಾನೆ.

ಈತನ ಬಂಧನದಿಂದ ಬಸವನಗುಡಿ ಪೊಲೀಸ್ ಠಾಣೆ , ಬ್ಯಾಟರಾಯನಪುರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಡೆದಿದ್ದ ಬೈಕ್ ಕಳವು ಪ್ರಕರಣಗಳು ಪತ್ತೆಯಾಗಿವೆ ಎಂದು ಹೇಳಿದರು.

ಹಣಕಾಸು ಇಲಾಖೆ ಅಧಿಕಾರಿಗಳ ಜತೆ ಸಭೆ

ಬೆಂಗಳೂರು: ಅರಣ್ಯ ಸಂರಕ್ಷಣೆಗೆ ಸಂಬಂಧಿಸಿದಂತೆ ವಿವಿಧ ಕಾಮಗಾರಿ-ಗಳನ್ನು ಕೈಗೊಳ್ಳಲು ಅರಣ್ಯ ಇಲಾಖೆಗೆ ಹೆಚ್ಚುವರಿ ಹಣದ ಅಗತ್ಯವಿದೆ ಎಂದು ಅರಣ್ಯ ಸಚಿವ ಈಶ್ವರ ಬಿ.ಖಂಡ್ರೆ ಅವರು ಹಣಕಾಸು ಇಲಾಖೆ ಅಧಿಕಾರಿಗಳಿಗೆ ಹೇಳಿದರು.

ವಿಕಾಸಸೌಧದಲ್ಲಿ ನಡೆದ ಸಭೆಯಲ್ಲಿ ಖಂಡ್ರೆ ಅವರು ಹಣಕಾಸು ಇಲಾಖೆಯ ವೆಚ್ಚ ವಿಭಾಗದ ಕಾರ್ಯದರ್ಶಿ, ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಜತೆ ಚರ್ಚೆ ನಡೆಸಿದರು.

ಪ್ರೇಯಸಿಯ 3 ವರ್ಷದ ಮಗುವಿನ ಹತ್ಯೆ ಮಾಡಿ ಪರಾರಿ

ಮಗು ಕೊಲೆ: ಆರೋಪಿ ಸೆರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರೇಯಸಿಯ ಮೂರು ವರ್ಷದ ಮಗುವನ್ನು ಕೊಂದಿದ್ದ ಆರೋಪಿಯನ್ನು ಬೊಮ್ಮನಹಳ್ಳಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

ವಿರಾಟನಗರ ನಿವಾಸಿ ಮೈಕಲ್ ರಾಜ್(38) ಬಂಧಿತ ಆರೋಪಿ.

'ಜುಲೈ 6ರಂದು ಪ್ರೇಯಸಿಯ ಮೂರು ವರ್ಷದ ಮಗುವನ್ನು ಮೈಕಲ್ ರಾಜ್ ಕೊಲೆ ಮಾಡಿ ಪರಾರಿ ಆಗಿದ್ದರು. ಪ್ರಕರಣ ದಾಖಲು ಮಾಡಿಕೊಂಡು ಆರೋಪಿಯನ್ನು ಬಂಧಿಸಲಾಯಿತು' ಎಂದು ಪೊಲೀಸರು ಹೇಳಿದರು.

'ಮೃತ ಮಗುವಿನ ತಾಯಿ ರಮ್ಯಾ ಅವರು ಆರು ವರ್ಷಗಳ ಹಿಂದೆ ಮದುವೆ ಆಗಿದ್ದರು. ದಂಪತಿಗೆ ಮಗು ಇತ್ತು. ಈ ಮಧ್ಯೆ ಕೌಟುಂಬಿಕ ವಿಚಾರವಾಗಿ ಗಲಾಟೆ ನಡೆದು, ಆ ಮಹಿಳೆ ತವರು ಮನೆ ಸೇರಿದ್ದರು. ಈ ಮನೆ ಮುಂಭಾಗದಲ್ಲಿ ಆರೋಪಿ ಮೈಕಲ್ ರಾಜ್ ಗ್ಯಾರೇಜ್ ನಡೆಸುತ್ತಿದ್ದರು. ಇಬ್ಬರೂ ಪರಸ್ಪರ ಪರಿಚಯವಾಗಿ ಸ್ನೇಹಿತರಾಗಿದ್ದರು' ಎಂದು ಪೊಲೀಸರು ಹೇಳಿದರು.

'ಕೆಲವು ತಿಂಗಳಿಂದ ಆರೋಪಿ, ಮಹಿಳೆ ಹಾಗೂ ಆಕೆಯ ಮಗು ಬೊಮ್ಮನ ಹಳ್ಳಿಯ ವಿರಾಟನಗರದಲ್ಲಿ ಬಾಡಿಗೆ ಮನೆಯಲ್ಲಿ ವಾಸವಾಗಿದ್ದರು. ಮನೆಯಲ್ಲಿ ಮಗು ಹೆಚ್ಚು ಹಠ ಮಾಡುವುದು, ಜೋರಾಗಿ ಅಳುತ್ತಿತ್ತು. ಆರೋಪಿಗೆ ತನ್ನ ಪ್ರೇಯಸಿ ಜತೆ ಖುಷಿಯಿಂದ ಇರಲು ಸಾಧ್ಯವಾಗಿರಲಿಲ್ಲ. ಜುಲೈ 6ರಂದು ಮಹಿಳೆ ಹೊರಗೆ ತೆರಳಿದ್ದ ಸಂದರ್ಭದಲ್ಲಿ ಕೋಪಗೊಂಡಿದ್ದ ಆರೋಪಿ, ಮಗುವಿನ ಕಪಾಳಕ್ಕೆ ಹೊಡೆದು ಕೊಲೆ ಮಾಡಿದ್ದರು' ಎಂದು ಪೊಲೀಸರು ಹೇಳಿದರು.

ಅತ್ತೆ ಮನೆಯಲ್ಲಿ ಚಿನ್ನ ಕದ್ದ ಅಳಿಯನ ಸೆರೆ

ಬೆಂಗಳೂರು: ಅತ್ತೆಯ ಮನೆಯಲ್ಲಿ ಚಿನ್ನಾಭರಣ ಕಳವು ಮಾಡಿದ್ದ ಆರೋಪಿಯನ್ನು ಬಂಧಿಸಿರುವ ರಾಜಗೋಪಾಲನಗರ ಠಾಣೆ ಪೊಲೀಸರು, ₹3.8 ಲಕ್ಷ ಮೌಲ್ಯದ 70 ಗ್ರಾಂ. ತೂಕದ ಚಿನ್ನ ವಶಪಡಿಸಿಕೊಂಡಿದ್ದಾರೆ.

ಕಮಲನಗರದ ನಿವಾಸಿ ಪರಶುರಾಮ (29) ಬಂಧಿತ ಆರೋಪಿ. ಠಾಣಾ ವ್ಯಾಪ್ತಿಯ ಲಗ್ಗೆರೆಯಲ್ಲಿ ವಾಸವಿದ್ದ ನಾಗಮ್ಮ ಅವರು ತಮ್ಮ ಮಗಳನ್ನು ಪರಶುರಾಮನಿಗೆ ಕೊಟ್ಟು ಮದುವೆ ಮಾಡಿದ್ದರು. ಈತ ಕೆಲಸವಿಲ್ಲದೆ ಓಡಾಡಿಕೊಂಡಿದ್ದ. ಜುಲೈ 6 ರಂದು ನಾಗಮ್ಮ ಮತ್ತು ಮಗಳು ದೇವಸ್ಥಾನಕ್ಕೆ ತೆರಳಿದ್ದರು. ಆ ಸಂದರ್ಭದಲ್ಲಿ ಆರೋಪಿಯು ಮನೆಯ ಕೊಠಡಿಯಲ್ಲಿದ್ದ ಬೀರುವಿನಿಂದ 70 ಗ್ರಾಂ. ತೂಕದ ಆಭರಣ ಕಳವು ಮಾಡಿ ಪರಾರಿಯಾಗಿದ್ದ ಎಂದು ಪೊಲೀಸರು ತಿಳಿಸಿದರು.

ಲಗ್ಗೆರೆ ಮುಖ್ಯರಸ್ತೆಯ ಏಟ್ರಿಯಾ ಹೋಟೆಲ್ ಬಳಿ ಆರೋಪಿಯನ್ನು ವಶಕ್ಕೆ ಪಡೆಯಲಾಯಿತು. ಕಳ್ಳತನ ಮಾಡಿರುವುದಾಗಿ ವಿಚಾರಣೆ ವೇಳೆ ಒಪ್ಪಿಕೊಂಡಿದ್ದಾನೆ. ಬಳಿಕ ಆತ ವಾಸವಿದ್ದ ಮನೆಯಲ್ಲಿ ಚಿನ್ನಾಭರಣಗಳನ್ನು ವಶಪಡಿಸಿಕೊಳ್ಳಲಾಯಿತು ಎಂದು ಮಾಹಿತಿ ನೀಡಿದರು.

ಇಬ್ಬರ ಬಂಧನ: ದೇವನಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ದ್ವಿಚಕ್ರ ವಾಹನಗಳನ್ನು ಕಳವು ಮಾಡಿದ್ದ ಇಬ್ಬರು ಆರೋಪಿಗಳನ್ನು ಬಂಧಿಸಿ, ₹80 ಸಾವಿರ ಮೌಲ್ಯದ ಎರಡು ಬೈಕ್‌ಗಳನ್ನು ವಶಪಡಿಸಿಕೊಳ್ಳಲಾಗಿದೆ.

ಡಿಮಾರ್ಟ್ ಮುಂಭಾಗದ ಬೈಕ್ ಸರ್ವಿಸ್ ಶಾಪ್‌ನಲ್ಲಿ ವಾಹನಗಳ ಮಾಲೀಕರು ಸರ್ವಿಸ್‌ಗಾಗಿ ಬಿಟ್ಟು ಹೋಗಿದ್ದರು. ಸರ್ವಿಸ್ ಆದ ಬಳಿಕ ಶಾಪ್ ಮಾಲೀಕ, ಅಲ್ಲಿಯೇ ವಾಹನಗಳನ್ನು ನಿಲ್ಲಿಸಿದ್ದರು. ಬೆಳಿಗ್ಗೆ ಬಂದು ನೋಡಿದಾಗ ಕಳ್ಳತನವಾಗಿದ್ದವು. ಖಚಿತ ಮಾಹಿತಿ ಮೇರೆಗೆ ಹುಣಸಮಾರನಹಳ್ಳಿ ಬಸ್ ನಿಲ್ದಾಣದ ಬಳಿ ಆರೋಪಿಗಳನ್ನು ಬಂಧಿಸಲಾಗಿದೆ ಎಂದು ಪೊಲೀಸರು ತಿಳಿಸಿದರು.

ರೈಲುಗಳ ಸಂಚಾರದಲ್ಲಿ ವ್ಯತ್ಯಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಿಟ್ಟೂರು– ಸಂಪಿಗೆ ರೋಡ್ ನಿಲ್ದಾಣಗಳ ನಡುವಿನ ಲೆವೆಲ್ ಕ್ರಾಸಿಂಗ್ 62ರಲ್ಲಿ ಕಾಮಗಾರಿ ಕೈಗೊಂಡಿರುವುದರಿಂದ ಕೆಲವು ರೈಲುಗಳ ಸಂಚಾರದಲ್ಲಿ ಬದಲಾವಣೆ ಮಾಡಲಾಗಿದೆ.

ತುಮಕೂರು - ಚಾಮರಾಜನಗರ, ಚಾಮರಾಜನಗರ-ಮೈಸೂರು, ಚಾಮರಾಜನಗರ-ಯಶವಂತಪುರ–ಚಾಮರಾಜನಗರ, ತುಮಕೂರು-ಕೆಎಸ್‌ಆರ್ ಬೆಂಗಳೂರು–ತುಮಕೂರು, ಯಶವಂತಪುರ-ಶಿವಮೊಗ್ಗ-ಯಶವಂತ-ಪುರ ರೈಲುಗಳನ್ನು ಜುಲೈ 18 ಮತ್ತು 25 ರಂದು ರದ್ದು ಪಡಿಸಲಾಗಿದೆ.

ಜುಲೈ 18 ಮತ್ತು 25ರಂದು ಕೆಎಸ್‌ಆರ್ ಬೆಂಗಳೂರು- ತುಮಕೂರು ನಿಲ್ದಾಣಗಳ ನಡುವೆ ಸಂಚರಿಸುವ ರೈಲುಗಳನ್ನು ಹಿರೇಹಳ್ಳಿ-ತುಮಕೂರು ನಡುವೆ ಭಾಗಶಃ ರದ್ದುಗೊಳಿಸಲಾಗಿದೆ. ತಾಳಗುಪ್ಪ-ಕೆಎಸ್‌ಆರ್ ಬೆಂಗಳೂರು ರೈಲು, ಕೆಎಸ್‌ಆರ್ ಬೆಂಗಳೂರು-ಧಾರವಾಡ-ಕೆಎಸ್‌ಆರ್ ಬೆಂಗಳೂರು ರೈಲುಗಳನ್ನು ಅರಸೀಕೆರೆ-ಕೆಎಸ್‌ಆರ್ ಬೆಂಗಳೂರು ನಿಲ್ದಾಣಗಳ ನಡುವೆ ಭಾಗಶಃ ರದ್ದು ಮಾಡಲಾಗಿದೆ.

ಜುಲೈ 17 ಮತ್ತು 24ರಂದು ವಾಸ್ಕೋ ಡ ಗಾಮಾ - ಯಶವಂತ-ಪುರ ರೈಲು ಅರಸೀಕೆರೆ, ಹಾಸನ, ನೆಲಮಂಗಲ, ಯಶವಂತಪುರ ಮಾರ್ಗದ ಮೂಲಕ ಸಂಚರಿಸಲಿದೆ. ತಿಪಟೂರು ಮತ್ತು ತುಮಕೂರು ನಿಲ್ದಾಣ ಗಳಲ್ಲಿ ನಿಲುಗಡೆ ಇರುವುದಿಲ್ಲ.



ಜುಲೈ 18 ಮತ್ತು 25 ರಂದು ಹೊರಡುವ ಮೈಸೂರು - ವಾರಾಣಸಿ ಮತ್ತು ಯಶವಂತಪುರ-ಜೈಪುರ ರೈಲುಗಳು ಯಶವಂತಪುರ, ನೆಲಮಂಗಲ, ಹಾಸನ, ಅರಸೀಕೆರೆ ಮಾರ್ಗದ ಮೂಲಕ ಸಂಚರಿಸಲಿವೆ. ತುಮಕೂರು ನಿಲ್ದಾಣದಲ್ಲಿ ನಿಲುಗಡೆ ಇರುವುದಿಲ್ಲ. ಮೈಸೂರು-ಬೆಳಗಾವಿ ರೈಲು ಯಶವಂತಪುರ, ನೆಲಮಂಗಲ, ಹಾಸನ, ಅರಸೀಕೆರೆ ಮಾರ್ಗದ ಮೂಲಕ ಸಂಚರಿಸಲಿದೆ. ತಿಪಟೂರು ಮತ್ತು ತುಮಕೂರು ನಿಲ್ದಾಣಗಳಲ್ಲಿ ನಿಲುಗಡೆ ಇರುವುದಿಲ್ಲ. ಮೈಸೂರು-ಉದಯಪುರ ಸಿಟಿ ರೈಲು ಕೆಎಸ್‌ಆರ್ ಬೆಂಗಳೂರು, ಯಶವಂತಪುರ, ನೆಲಮಂಗಲ, ಹಾಸನ, ಅರಸೀಕೆರೆ, ದಾವಣಗೆರೆ ಮೂಲಕ ಸಂಚರಿಸಲಿದೆ.

ಜುಲೈ 16 ಮತ್ತು 23ರಂದು ಬಿಕಾನೇರ್-ಯಶವಂತಪುರ ರೈಲನ್ನು ಮಾರ್ಗದಲ್ಲಿ ಎರಡೂವರೆ ಗಂಟೆ, ಜುಲೈ 18 ಮತ್ತು 25 ರಂದು ಯಶವಂತ ಪುರ-ಹಜರತ್ ನಿಜಾಮುದ್ದೀನ್ ರೈಲು 50 ನಿಮಿಷ, ಕೆಎಸ್‌ಆರ್ ಬೆಂಗಳೂರು- ತಾಳಗುಪ್ಪ ರೈಲು 10 ನಿಮಿಷ, ಬೆಳಗಾವಿ - ಮೈಸೂರು ರೈಲು 55 ನಿಮಿಷ, ಚಾಮರಾಜನಗರ-ತುಮಕೂರು ರೈಲುಗಳನ್ನು ಎರಡು ಗಂಟೆ ಸಮಯ ಮಾರ್ಗ ಮಧ್ಯೆ ನಿಯಂತ್ರಿಸಲಾಗುತ್ತದೆ

ಜುಲೈ 18 ಮತ್ತು 25 ರಂದು ಯಶವಂತಪುರ-ವಾಸ್ಕೋ ಡ ಗಾಮಾ ರೈಲು ಯಶವಂತಪುರ-ದಿಂದ 60 ನಿಮಿಷ, ಜುಲೈ 24 ರಂದು ತುಮಕೂರು-ಶಿವಮೊಗ್ಗ ರೈಲು ತುಮಕೂರಿನಿಂದ 85 ನಿಮಿಷ ತಡವಾಗಿ ಹೊರಡಲಿದೆ ಎಂದು ನೈರುತ್ಯ ರೈಲ್ವೆ ಸಾರ್ವಜನಿಕ ಸಂಪರ್ಕಾಧಿಕಾರಿ ತಿಳಿಸಿದ್ದಾರೆ.

ಉದ್ಘಾಟನೆಗೆ ನೀಡದ ಆಹ್ವಾನ: ಖಂಡನೆ

ಬೆಂಗಳೂರು: ಡಾ. ಬಾಬು ಜಗಜೀವನರಾಂ ಸಂಶೋಧನಾ ಮತ್ತು ತರಬೇತಿ ಸಂಸ್ಥೆಯ ಕಟ್ಟಡದ ಉದ್ಘಾಟನೆಗೆ ಸಾಹಿತಿ ಡಾ. ಎಲ್. ಹನುಮಂತಯ್ಯ ಅವರನ್ನು ಆಹ್ವಾನಿಸದಿ-ರುವುದಕ್ಕೆ ರಾಜ್ಯ ಮಾದಿಗ ಸಂಘಟನೆಗಳ ಒಕ್ಕೂಟದ ಅಧ್ಯಕ್ಷ ಕೇಶವಮೂರ್ತಿ ಖಂಡಿಸಿದ್ದಾರೆ.

'ಹಿರಿಯ ಸಾಹಿತಿಗಳಾದ ದೇವನೂರ ಮಹಾದೇವ ಮತ್ತು ಸಿದ್ದಲಿಂಗಯ್ಯ ಅವರ ಸಮಕಾಲೀನರಾದ ಹನುಮಂತಯ್ಯ ಅವರನ್ನು ಅವರನ್ನು ನಿರ್ಲಕ್ಷ್ಯ ಮಾಡುತ್ತಿರುವ ಕಾಂಗ್ರೆಸ್ ಪಕ್ಷದ ನಡವ-ಳಿಕೆಯಲ್ಲಿ ಕುತಂತ್ರ ಅಡಗಿದೆ. ಬಾಬೂಜಿ ಅವರ ಸಂಪುಟಗಳನ್ನು ಕನ್ನಡಕ್ಕೆ ತರಲು ಹನುಮಂತಯ್ಯ ಅವರೇ ಕಾರಣಕರ್ತರು' ಎಂದು ಹೇಳಿಕೆಯಲ್ಲಿ ತಿಳಿಸಿದ್ದಾರೆ.

ನೈಋತ್ಯ ರೈಲ್ವೆ
ಅರ್ಜಿ ಅಧಿಸೂಚನೆ ಸಂಖ್ಯೆ 210/ಹಾಲ್ಟ್/ ಬಿಇಎಂಎಲ್/ 2024/ಬೆಂಗಳೂರು ವಿಭಾಗ ದಿನಾಂಕ: 05.07.2024

ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳ ಸಹಿದಾರರು ದೊಡ್ಡಜಾಲ ರೈಲು ಹಾಲ್ಟ್ ನಿಲ್ದಾಣದಲ್ಲಿ ಕಮಿಷನ್ ಆಧಾರದ ಮೇಲೆ ಕಾಯ್ದಿರಿಸದ ಟಿಕೆಟ್‌ಗಳನ್ನು ನೀಡಲು ನಿಲ್ದಾಣ ಮತ್ತು ಸುತ್ತಮುತ್ತ ವಾಸಿಸುವ ವಿದ್ಯಾವಂತ ನಿರುದ್ಯೋಗಿಗಳಿಂದ ಹಾಲ್ಟ್ ಏಜೆಂಟ್ ನೇಮಕಕ್ಕಾಗಿ ಮೊಹರು ಮಾಡಿದ ಅರ್ಜಿಗಳನ್ನು ಆಹ್ವಾನಿಸಿದ್ದಾರೆ.
ಈ ಹುದ್ದೆಯು ಐದು (05) ವರ್ಷಗಳ ಅವಧಿಗೆ ಅಥವಾ ನಿಲ್ದಾಣ ಮೇಲ್ದರ್ಜೆಗೇರುವವರೆಗೆ ಯಾವುದು ಮೊದಲು ಅಲ್ಲಿಯವರೆ.

ನಿಲ್ದಾಣ	ವಿಭಾಗ
ಬಿಇಎಂಎಲ್ ನಗರ	ಬಂಗಾರಪೇಟೆ–ಮಾರಿಕುಪ್ಪಂ

ದಿನಾಂಕದಿಂದ ಕಾರ್ಯವನ್ನು ಪ್ರಾರಂಭಿಸುವುದನ್ನು ಆಡಳಿತದಿಂದ ಮುಂದೆ ಸೂಚಿಸಲಾಗುತ್ತದೆ.
ನಿಯಮಗಳು ಮತ್ತು ಷರತುಗಳು ಮತ್ತು ಅರ್ಜಿ ನಮೂನೆ: ಅರ್ಜಿ ನಮೊನೆ ಮತ್ತು ಅರ್ಹತೆ/ಸಾಮಾನ್ಯ ನಿಯಮಗಳು ಮತ್ತು ಷರತ್ತುಗೆಳು ಇತ್ಯಾದಿಗಳನ್ನು www.swr.indianrailways.gov.in ವೆಬ್‌ಸೈಟ್‌ನಿಂದ ಡೌನ್‌ಲೋಡ್ ಮಾಡಬಹುದು:

ಅರ್ಜಿ ಸಲ್ಲಿಸುವ ಕೊನೆಯ ದಿನಾಂಕ: 29.07.2024 ರಂದು 16:00 ಗಂಟೆಯವರೆಗೆ

ವಿವರಗಳಿಗಾಗಿ www.swr.indianrailways.gov.inಗೆ ಲಾಗಿನ್ ಮಾಡಿ

ಹಿರಿಯ ವಿಭಾಗೀಯ ವಾಣಿಜ್ಯ ವ್ಯವಸ್ಥಾಪಕರು ಬೆಂಗಳೂರು
ಪಿಯುಬಿ/248 /ಎಎಡಿ360/ಪಿಆರ್ ಬಿ/ಎಸ್ ಡಬ್ಲ್ಯೂ ಆರ್/2024–25
S.W.Railways SWRRLY SWRRLY

ಅಲಿ ಯಾವರ್ ಜಂಗ್ ರಾಷ್ಟ್ರೀಯ ವಾಕ್–ಶ್ರವಣ ದೋಷ ಸಂಸ್ಥೆ (ದಿವ್ಯಾಂಗನ್)
[ವಿಕಲಚೇತನರ ಸಬಲೀಕರಣ ಇಲಾಖೆ (ದಿವ್ಯಾಂಗನ್), ಭಾರತ ಸರ್ಕಾರದ ಸಾಮಾಜಿಕ ನ್ಯಾಯ ಸಚಿವಾಲಯ, ಬಾಂದ್ರಾ ರೆಕ್ಲಮೇಷನ್ (ಡಬ್ಲ್ಯೂ), ಮುಂಬೈ 400 0501]
AYJNISHD

ಉದ್ಯೋಗ ಸೂಚನೆ

ಎವೈಜೆಎನ್‌ಐಎಸ್‌ಎಚ್‌ಡಿ (ಡಿ) ಮುಂಬೈ ಕಚೇರಿ ಮತ್ತು ಸಿಕಂದರಾಬಾದ್, ಕೋಲ್ಕತಾ, ನೋಯ್ಡಾ ಮತ್ತು ಸಿಆರ್‌ಸಿ, ಭೋಪಾಲ್‌ನಲ್ಲಿರುವ ತನ್ನ ಪ್ರಾದೇಶಿಕ ಕೇಂದ್ರಗಳಲ್ಲಿ ವಿವಿಧ ಹುದ್ದೆಗಳಿಗೆ ನೇರ ನೇಮಕಾತಿ ಆಧಾರದ ಮೇಲೆ ಅರ್ಜಿಗಳನ್ನು ಆಹ್ವಾನಿಸಿದೆ.

ನಿಗದಿತ ನಮೂನೆಯಲ್ಲಿ ಅರ್ಜಿಗಳನ್ನು ತುಂಬಿ, ನಿಗದಿತ ಶುಲ್ಕ, ಎಲ್ಲಾ ಶೈಕ್ಷಣಿಕ ಪ್ರಮಾಣಪತ್ರಗಳ ಸ್ವಯಂ–ದೃಢೀಕರಿಸಿದ ಫೋಟೋಕಾಪಿಗಳು ಮತ್ತು ಅನುಭವ ಪ್ರಮಾಣಪತ್ರಗಳೊಂದಿಗೆ ಎಂಪ್ಲಾಯ್ಮೆಂಟ್ ನ್ಯೂಸ್‌ನಲ್ಲಿ ಜಾಹೀರಾತು ಪ್ರಕಟವಾದ ದಿನಾಂಕದಿಂದ 21 ದಿನಗಳ ಒಳಗೆ ರಿಜಿಸ್ಟರ್ / ಸ್ಪೀಡ್ ಪೋಸ್ಟ್ ಮೂಲಕ ಈ ಕಚೇರಿಗೆ ತಲುಪಿಸಬೇಕು.
2. ವಯಸ್ಸಿನ ಮಿತಿ, ಅಗತ್ಯ ವಿದ್ಯಾರ್ಹತೆ, ಅನುಭವ ಮತ್ತು ಮೀಸಲಾತಿ ಇತ್ಯಾದಿಗಳಿಗೆ ಸಂಬಂಧಿಸಿದ ವಿವರಗಳು ಮತ್ತು ಅರ್ಜಿಯ ನಿಗದಿತ ನಮೂನೆಗಳು ಲಭ್ಯವಿದ್ದು, ಅವುಗಳನ್ನು https://crcbhopal.nic.in ಅಥವಾ http/www.crcahmedabad.org ನಿಂದ ಡೌನ್ಲೋಡ್ ಮಾಡಬಹುದು.

cbc 38107/11/0005/2425 ನಿರ್ದೇಶಕರು

SOBHA LIMITED

CIN : L45201KA1995PLC018475
Regd. Office: 'SOBHA'
Sarjapur – Marathahalli Outer Ring Road (ORR), Devarabisanahalli, Bellandur Post
Bangalore - 560 103
Ph: +91-80-49320000
email: investors@sobha.com
www.sobha.com

SOBHA — PASSION AT WORK

NOTICE TO THE MEMBERS OF THE COMPANY REGARDING 29TH ANNUAL GENERAL MEETING

NOTICE is hereby given that the 29th Annual General Meeting (AGM) of the members of the Company will be held on Wednesday, the 07th day of August 2024 at 3.00 P.M. (IST) through Video Conferencing (VC) facility / Other Audio-Visual Means (OVAM), in compliance with all applicable provisions of the Companies Act, 2013 and Rules made thereunder and the Securities and Exchange Board of India (SEBI) (Listing Obligations and Disclosure Requirements) Regulations, 2015, read with General Circulars Nos. 14/2020 dated 8 April 2020, 17/2020 dated 13 April 2020, 20/2020 dated 5 May 2020 read with other relevant circulars including General Circular Nos. 10/2022 dated 28 December 2022 and 09/2023 dated September 25, 2023, issued by the Ministry of Corporate Affairs (MCA) and Circular Nos. SEBI/HO/CFD/CMD1/CIR/P/2020/79 dated 12 May 2020, SEBI/HO/CFD/CMD2/CIR/P/2021/11 dated 15 January 2021 read with other relevant circulars including SEBI/HO/CFD/POD-2/P/CIR/2023/4 dated 5 January 2023 and SEBI/HO/CFD/PoD-2/P/CIR/2023/167 dated October 07, 2023 issued by SEBI.

In compliance with the aforesaid MCA and SEBI Circulars, the requirements of sending physical copy of the Notice of AGM and Annual Report to the Members have been dispensed. Accordingly, the Notice of AGM along with the Annual Report 2023-24 will be sent only through electronic mode to those Members whose email addresses are registered with the Company/ Depositories. Keeping in view the above, the Members of the Company holding shares in physical form or who have not registered their email addresses are hereby requested to get their email addresses registered in the records of the Company for receipt of notice and to cast their vote through remote e-voting.

Members who have not registered their email addresses with the Company are requested to follow the below steps for registering their email addresses:

1. In case shares are held in physical mode, and who have not registered their bank details can get the same registered with Link Intime India Private Limited, by clicking the link: https://linkintime.co.in/emailreg/email_register.html at their web site www.linkintime.co.in at the Investor Services tab by choosing the E-mail / Bank Registration heading and follow the registration process as guided therein. The members are requested to provide details such as Name, Folio Number, Certificate number, PAN, e-mail id along with the copy of the cheque leaf with the first named shareholders name imprinted at the face of the cheque leaf containing bank name and branch, type of account, bank account number, MICR details and IFSC code in PDF or JPEG format. In case of any query, a member may send an e-mail to RTA at rnt.helpdesk@linkintime. co.in On submission of the shareholders details an OTP will be received by the shareholder which needs to be entered in the link for verification.
2. In case shares are held in dematerialized mode and who have not registered their e-mail addresses may temporarily get their e-mail addresses registered with Link Intime India Private Limited by clicking the link: https://linkintime.co.in/emailreg/email_register.html at their web site www.linkintime.co.in at the Investor Services tab by choosing the E-mail Registration heading and follow the registration process as guided therein. The members are requested to provide details such as Name, DPID, Client ID/ PAN, mobile number and e-mail id. In case of any query, a member may send an e-mail to RTA at rnt.helpdesk@linkintime.co.in On submission of the shareholders details, an OTP will be received by the shareholder which needs to be entered in the link for verification.

Manner of registering mandate for receiving Dividend:

Members are requested to register/update their complete bank details:

a. with their Depository Participant(s) with whom they maintain their Demat Accounts, if shares are held in dematerialized mode, submitting forms and documents as maybe required by the Depository participant (s); and
b. with the Company/ LIIPL by e-mailing at investors@sobha.com or rnt.helpdesk@linintime.co.in, if shares are held in physical mode, by submitting: (i) Scanned copy of signed request letter along with Form ISR-1 which shall contain Member's name, folio number, complete address, bank details (Bank Account number, Bank and Brach Name and address, IFSC, MICR details); (ii) copy of cancelled cheque leaf bearing the name of Member; (iii) self-attested copy of the PAN card and (iv) self-attested copy of address proof.

The Company is providing its members the facility to exercise their votes electronically through the electronic voting (e-voting) facility provided by the Link Intime India Private Limited (LIIPL). The manner of voting remotely by members holding shares in dematerialized mode, physical mode and for members who have not registered their email addresses is provided in the instructions for e-voting section of the Notice of AGM. Copy of the AGM Notice will be made available at the Company's website www.sobha.com, websites of the Stock Exchanges i.e. BSE Limited and National Stock Exchange of India Limited at www.bseindia.com and www.nseindia.com respectively.

By order of the Board
for Sobha Limited
Sd/-
Bijan Kumar Dash
Company Secretary and Chief Compliance Officer

Bengaluru, India
July 12, 2024

ಜಾಹೀರಾತು: ಸ್ವಯಂ ಪ್ರೇರಿತ ಪಿಐಎಲ್

ಮುಖ್ಯ ಕಾರ್ಯದರ್ಶಿ, ಮುಖ್ಯ ಆಯುಕ್ತ, ಪೊಲೀಸ್ ಕಮಿಷನರ್‌ಗೆ ನೋಟಿಸ್ ಜಾರಿಗೆ ಹೈಕೋರ್ಟ್ ಆದೇಶ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಅನಧಿಕೃತ ಜಾಹೀರಾತುಗಳ ಹಾವಳಿಯನ್ನು ಗಂಭೀರವಾಗಿ ಪರಿಗಣಿಸಿದ ಹೈಕೋರ್ಟ್
- ನ್ಯಾಯಾಂಗ ನಿಂದನೆಯಡಿ ಏಕೆ ಕ್ರಮ ಜರುಗಿಸಬಾರದು ಎಂದು ಪ್ರಶ್ನೆ
- ಆಕ್ಷೇಪಣೆ ಸಲ್ಲಿಸಲು ರಾಜ್ಯ ಸರ್ಕಾರ, ಬಿಬಿಎಂಪಿ, ನಗರ ಪೊಲೀಸರಿಗೆ ನಿರ್ದೇಶನ

ಹೈಕೋರ್ಟ್ ಸುದ್ದಿ

ಬೆಂಗಳೂರು: ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ವ್ಯಾಪ್ತಿಯಲ್ಲಿ ಅನಧಿಕೃತ ಜಾಹೀರಾತು ಫಲಕಗಳು, ಫ್ಲೆಕ್ಸ್ ಹಾಗೂ ಹೋರ್ಡಿಂಗ್‌ಗಳ ಹಾವಳಿಯನ್ನು ಗಂಭೀರವಾಗಿ ಪರಿಗಣಿಸಿರುವ ಹೈಕೋರ್ಟ್, ಸ್ವಯಂ ಪ್ರೇರಿತ ಸಾರ್ವಜನಿಕ ಹಿತಾಸಕ್ತಿ ಅರ್ಜಿ (ಪಿಐಎಲ್) ದಾಖಲಿಸಿಕೊಂಡಿದೆ.

ಈ ಸಂಬಂಧ ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ, ಬಿಬಿಎಂಪಿ ಮುಖ್ಯ ಆಯುಕ್ತ ಹಾಗೂ ನಗರ ಪೊಲೀಸ್ ಕಮಿಷನರ್ ಅವರಿಗೆ ನೋಟಿಸ್ ಜಾರಿಗೊಳಿಸಲು ಮುಖ್ಯ ನ್ಯಾಯಮೂರ್ತಿ ನೇತೃತ್ವದ ಪೀಠವು ಆದೇಶಿಸಿದೆ.

‘ನ್ಯಾಯಾಲಯದ ಆದೇಶ ಪಾಲಿಸುವಲ್ಲಿ ವಿಫಲವಾಗಿರುವ ನಿಮ್ಮ ವಿರುದ್ಧ ನ್ಯಾಯಾಂಗ ನಿಂದನೆಯಡಿ ಯಾಕೆ ಕ್ರಮ ಜರುಗಿಸಬಾರದು ಎಂಬ ಬಗ್ಗೆ ವಿವರಣೆ ನೀಡಿ’ ಎಂದು ಪಾಲಿಕೆಯ ಮುಖ್ಯ ಆಯುಕ್ತರು ಹಾಗೂ ನಗರ ಪೊಲೀಸ್ ಆಯುಕ್ತರಿಗೆ ತಾಕೀತು ಮಾಡಿದೆ.

‘ನಗರದಲ್ಲಿ ಅನಧಿಕೃತ ಫ್ಲೆಕ್ಸ್, ಬ್ಯಾನರ್ ಮತ್ತು ಹೋರ್ಡಿಂಗ್‌ಗಳ ಹಾವಳಿ ತಡೆಯಲು ರಾಜ್ಯ ಸರ್ಕಾರ ಮತ್ತು ಬಿಬಿಎಂಪಿಗೆ ನಿರ್ದೇಶಿಸಬೇಕು’ ಎಂದು ಕೋರಿ ಮಾಯಿಗೇಗೌಡ ಹಾಗೂ ಇತರರು 2017 ಮತ್ತು 2019ರಲ್ಲಿ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಗಳನ್ನು ಮುಖ್ಯ ನ್ಯಾಯಮೂರ್ತಿ ಎನ್.ವಿ. ಅಂಜಾರಿಯಾ ನೇತೃತ್ವದ ವಿಭಾಗೀಯ ನ್ಯಾಯಪೀಠ ಶುಕ್ರವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಮುಖ್ಯ ನ್ಯಾಯಮೂರ್ತಿಗಳು, ‘ಈಗಾಗಲೇ 2017, 2018 ಮತ್ತು 2022ರಲ್ಲಿ ಸಲ್ಲಿಸಲಾಗಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಗಳ ಜೊತೆಗೆ ಇದೇ 11ರಂದು ಇಂಗ್ಲಿಷ್ ದಿನಪತ್ರಿಕೆಯೊಂದರಲ್ಲಿ ಪ್ರಕಟವಾಗಿರುವ ಸುದ್ದಿಯನ್ನು ಆಧರಿಸಿ ನ್ಯಾಯಾಲಯ ಈ ಸ್ವಯಂ ಪ್ರೇರಿತ ಸಾರ್ವಜನಿಕ ಹಿತಾಸಕ್ತಿ ಅರ್ಜಿ ದಾಖಲಿಸಿಕೊಳ್ಳುತ್ತಿದೆ’ ಎಂದು ತಿಳಿಸಿದರು.

‘ಹೈಕೋರ್ಟ್‌ನ ಹಲವು ಆದೇಶಗಳ ಹೊರತಾಗಿಯೂ ಬೆಂಗಳೂರು ಮಹಾನಗರದಲ್ಲಿ ಅನಧಿಕೃತ ಜಾಹೀರಾತು ಫಲಕಗಳು, ಫ್ಲೆಕ್ಸ್ ಹಾಗೂ ಹೋರ್ಡಿಂಗ್‌ಗಳ ಹಾವಳಿ ಮುಂದುವರಿದಿದೆ’ ಎಂಬ ಪತ್ರಿಕೆಯ ವರದಿಯನ್ನು ನ್ಯಾಯಪೀಠ ಉಲ್ಲೇಖಿಸಿದೆ.

‘ಹೈಕೋರ್ಟ್ 2017ರಿಂದ ಕಾಲಕಾಲಕ್ಕೆ ಅನೇಕ ಆದೇಶ ಮತ್ತು ನಿರ್ದೇಶನಗಳನ್ನು ನೀಡುತ್ತಾ ಬಂದಿದೆ. 2024ರ ಜನವರಿ 8ರಂದು ವಿವರವಾದ ಆದೇಶವನ್ನೇ ಹೊರಡಿಸಿದೆ. ಆದರೂ ಪ್ರಯೋಜನವಾಗಿಲ್ಲ’ ಎಂಬ ಅಂಶವನ್ನು ನ್ಯಾಯಪೀಠ ವಿವರಿಸಿದೆ.

‘ಬಿಬಿಎಂಪಿ 6.8 ಲಕ್ಷ ಅನಧಿಕೃತ ಬ್ಯಾನರ್, ಹೋರ್ಡಿಂಗ್‌ಗಳನ್ನು ತೆರವುಗೊಳಿಸಿದೆ ಎಂದು ಪತ್ರಿಕೆಯ ವರದಿಯಲ್ಲಿ ತಿಳಿಸಲಾಗಿದೆ. ಇದು ನಗರದಲ್ಲಿ ಸಾರ್ವಜನಿಕ ರಸ್ತೆ, ಪಾದಚಾರಿ ಮಾರ್ಗಗಳಲ್ಲಿ ಅನಧಿಕೃತ ಬ್ಯಾನರ್, ಫ್ಲೆಕ್ಸ್ ಹಾಕುವ ಪ್ರವೃತ್ತಿ ಎಗ್ಗಿಲ್ಲದೆ ಮುಂದುವರಿದಿದೆ ಎನ್ನುವುದನ್ನು ಸಾಕ್ಷೀಕರಿಸುತ್ತದೆ. ಜೊತೆಗೆ ನ್ಯಾಯಾಲಯದ ಆದೇಶಗಳ ಬಗ್ಗೆ ಪಾಲಿಕೆ, ನಗರ ಪೊಲೀಸರು ನಿರ್ಲಕ್ಷ್ಯ ತೋರಿಸುತ್ತಿದ್ದಾರೆ ಎಂಬುದನ್ನೂ ಪುಷ್ಟೀಕರಿಸುತ್ತದೆ. ಹಾಗಾಗಿ, ಸ್ವಯಂಪ್ರೇರಿತ ಪಿಐಎಲ್ ದಾಖಲಿಸಿಕೊಳ್ಳಲಾಗುತ್ತಿದೆ’ ಎಂದು ನ್ಯಾಯಪೀಠ ತಿಳಿಸಿದೆ.

ಅರ್ಜಿಗೆ ಸಂಬಂಧಿಸಿದಂತೆ ಆಕ್ಷೇಪಣೆ ಸಲ್ಲಿಸಲು ರಾಜ್ಯ ಸರ್ಕಾರ, ಬಿಬಿಎಂಪಿ ಮತ್ತು ನಗರ ಪೊಲೀಸ್ ಕಮಿಷನರ್ ಅವರಿಗೆ ನಿರ್ದೇಶಿಸಿದ ನ್ಯಾಯಪೀಠ ವಿಚಾರಣೆಯನ್ನು ಇದೇ 26ಕ್ಕೆ ಮುಂದೂಡಿದೆ.

ಪವರ್ ಟಿವಿ: ಹೈಕೋರ್ಟ್ ಆದೇಶಕ್ಕೆ ಸುಪ್ರೀಂ ತಡೆ

ನವದೆಹಲಿ: ಪರವಾನಗಿ ನವೀಕರಿಸದ ಆರೋಪದ ಹಿನ್ನೆಲೆಯಲ್ಲಿ ಕರ್ನಾಟಕದ ಪವರ್ ಟಿ.ವಿ ಚಾನಲ್ ಕಾರ್ಯಕ್ರಮಗಳ ಪ್ರಸಾರ ಸ್ಥಗಿತಗೊಳಿಸಿ ಹೈಕೋರ್ಟ್ ಏಕಸದಸ್ಯ ನ್ಯಾಯಪೀಠ ನೀಡಿದ್ದ ಮಧ್ಯಂತರ ನಿರ್ದೇಶನಕ್ಕೆ ಸುಪ್ರೀಂ ಕೋರ್ಟ್ ಶುಕ್ರವಾರ ತಡೆಯಾಜ್ಞೆ ನೀಡಿದೆ.

ಹೈಕೋರ್ಟ್ ಆದೇಶ ಪ್ರಶ್ನಿಸಿ, ‘ಮೆಸರ್ಸ್ ಪವರ್ ಸ್ಮಾರ್ಟ್ ಮೀಡಿಯಾ ಪ್ರೈವೇಟ್ ಲಿಮಿಟೆಡ್ ಕಂಪನಿ’, ‘ಮೆಸರ್ಸ್ ಮಿಟ್‌ಕಾನ್ ಇನ್‌ಫ್ರಾ ಪ್ರಾಜೆಕ್ಟ್ಸ್ ಪ್ರೈವೇಟ್ ಲಿಮಿಟೆಡ್ ಕಂಪನಿ’ ಸಲ್ಲಿಸಿದ್ದ ವಿಶೇಷ ಮೇಲ್ಮನವಿಯ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ಮತ್ತು ನ್ಯಾಯಮೂರ್ತಿಗಳಾದ ಜೆ.ಬಿ. ಪಾರ್ದಿವಾಲಾ ಮತ್ತು ಮನೋಜ್ ಮಿಶ್ರಾ ಅವರ ಪೀಠವು, ‘ಇದು ಸಂಪೂರ್ಣ ರಾಜಕೀಯ ದ್ವೇಷವಲ್ಲದೆ ಬೇರೇನೂ ಅಲ್ಲ’ ಎಂದು ಅಭಿಪ್ರಾಯಪಟ್ಟಿತು.

‘ನಾವು ವಾಕ್ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯ ರಕ್ಷಿಸಲು ಒಲವು ಹೊಂದಿದ್ದೇವೆ. ಇದು ರಾಜಕೀಯ ದ್ವೇಷದ ಸರಳ ಪ್ರಕರಣದಂತೆ ತೋರುತ್ತಿದೆ. ಅರ್ಜಿದಾರರನ್ನು ರಕ್ಷಿಸದಿದ್ದರೆ ಈ ನ್ಯಾಯಾಲಯವು ತನ್ನ ಕರ್ತವ್ಯದಲ್ಲಿ ವಿಫಲಗೊಳ್ಳುತ್ತದೆ’ ಎಂದು ಪೀಠ ಹೇಳಿತು. ನ್ಯಾಯಾಲಯವು ಕೇಂದ್ರ ಸರ್ಕಾರ ಮತ್ತು ಇತರರಿಗೆ ನೋಟಿಸ್ ಜಾರಿ ಮಾಡಿತು. ವಿಚಾರಣೆಯನ್ನು ಸೋಮವಾರಕ್ಕೆ ಮುಂದೂಡಲಾಗಿದೆ.

ಪ್ರಕರಣವೇನು?: ‘ನಮ್ಮ ವಿರುದ್ಧ ಪವರ್ ಟಿ.ವಿ ಮಾನಹಾನಿಕರ ಸುದ್ದಿಗಳನ್ನು ಪ್ರಸಾರ ಮಾಡುತ್ತಿದೆ’ ಎಂದು ಆರೋಪಿಸಿ ಜೆಡಿಎಸ್‌ನ ವಿಧಾನ ಪರಿಷತ್ ಮಾಜಿ ಸದಸ್ಯ ಎಚ್.ಎಂ.ರಮೇಶ್ ಗೌಡ, ಅವರ ಪತ್ನಿ ಡಾ.ಎ.ರಮ್ಯಾ ರಮೇಶ್ ಹಾಗೂ ಐಪಿಎಸ್ ಅಧಿಕಾರಿ ಬಿ.ಆರ್.ರವಿಕಾಂತೇಗೌಡ ಸಲ್ಲಿಸಿದ್ದ ರಿಟ್ ಅರ್ಜಿಗಳನ್ನು ನ್ಯಾಯಮೂರ್ತಿ ಎಸ್.ಆರ್. ಕೃಷ್ಣಕುಮಾರ್ ಅವರಿದ್ದ ಏಕಸದಸ್ಯ ನ್ಯಾಯಪೀಠ ವಿಚಾರಣೆ ನಡೆಸಿತ್ತು.

‘ಪವರ್ ಟಿ.ವಿ.ಚಾನಲ್, ಕೇಬಲ್ ಟೆಲಿವಿಷನ್ ನೆಟ್‌ವರ್ಕ್‌ಗಳ (ನಿಯಂತ್ರಣ) ಕಾಯ್ದೆ–1995ರ ಆದೇಶ ಉಲ್ಲಂಘಿಸಿರುವ ಕಾರಣ ಸುದ್ದಿ ಸೇರಿದಂತೆ ಯಾವುದೇ ಕಾರ್ಯಕ್ರಮಗಳನ್ನು ಜುಲೈ 8ರವರೆಗೆ ಪ್ರಸಾರ ಮಾಡಬಾರದು’ ಎಂದು ಜೂನ್ 25ರಂದು ಆದೇಶಿಸಿತ್ತು.

ಬ್ಯಾಂಕ್ ಗ್ಯಾರಂಟಿ ಸಮರ್ಥನೀಯವಲ್ಲ: ಹೈಕೋರ್ಟ್

‘ಆರೋಪಿಗಳಿಗೆ ಜಾಮೀನು ಮಂಜೂರು ಮಾಡಲು ಬ್ಯಾಂಕ್ ಗ್ಯಾರಂಟಿ ಒದಗಿಸಬೇಕು ಎಂಬ ಷರತ್ತು ವಿಧಿಸುವುದಕ್ಕೆ ಕಾನೂನಿನಲ್ಲಿ ಅವಕಾಶವಿಲ್ಲ’ ಎಂದು ಹೈಕೋರ್ಟ್ ಅಭಿಪ್ರಾಯಪಟ್ಟಿದೆ.

ಈ ಸಂಬಂಧ ನಗರದ ವೈಭವ್ ರಾಜ್ ಉತ್ಸವ್ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ.

‘ಜಾಮೀನು ಮಂಜೂರು ವೇಳೆ ವಿಚಾರಣಾ ನ್ಯಾಯಾಲಯಗಳು ಬ್ಯಾಂಕ್ ಗ್ಯಾರಂಟಿ ನೀಡುವ ಷರತ್ತು ವಿಧಿಸುತ್ತಿರುವ ಪ್ರಕರಣಗಳು ಕಂಡು ಬರುತ್ತಿವೆ. ಇದಕ್ಕೆ ಕಾನೂನಿನಲ್ಲಿ ಅವಕಾಶವಿಲ್ಲ. ಬ್ಯಾಂಕ್ ಗ್ಯಾರಂಟಿ ಹೊರತುಪಡಿಸಿ ಇತರೆ ಕಾನೂನು ಬದ್ಧ ಷರತ್ತುಗಳನ್ನು ವಿಧಿಸುವ ಅವಕಾಶ ಮುಕ್ತವಾಗಿರಲಿದೆ’ ಎಂದು ನ್ಯಾಯಪೀಠ ತಿಳಿಸಿದೆ. ಅಪರಾಧ ಪ್ರಕರಣವೊಂದರಲ್ಲಿ ಜಾಮೀನು ಮಂಜೂರು ಮಾಡಿದ್ದ ವಿಚಾರಣಾ ನ್ಯಾಯಾಲಯ ಅರ್ಜಿದಾರರಿಗೆ ₹50 ಲಕ್ಷ ಮೊತ್ತದ ಬ್ಯಾಂಕ್ ಗ್ಯಾರಂಟಿ ಷರತ್ತು ವಿಧಿಸಿತ್ತು. ಇದನ್ನು ಪ್ರಶ್ನಿಸಿ ಅರ್ಜಿದಾರರು ಹೈಕೋರ್ಟ್ ಮೆಟ್ಟಿಲೇರಿದ್ದರು.



ಅನಂತ್ ಅಂಬಾನಿ ಮತ್ತು ರಾಧಿಕಾ ಮರ್ಚೆಂಟ್ ವಿವಾಹ ಸಂಭ್ರಮಾಚರಣೆ

ನಗರದ ಬೈಯಪ್ಪನಹಳ್ಳಿ ರೈಲು ನಿಲ್ದಾಣದ ರನ್ನಿಂಗ್ ರೂಂನಲ್ಲಿರುವ ವ್ಯಾಯಾಮ ಪರಿಕರಗಳು

ಲೋಕೊ ಪೈಲೆಟ್‌ಗಳಿಗೆ ರನ್ನಿಂಗ್ ರೂಂ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಲೋಕೊ ಪೈಲೆಟ್‌ಗಳಿಗೆ ವಿಶ್ರಾಂತಿ ತೆಗೆದುಕೊಳ್ಳಲು 22 ರನ್ನಿಂಗ್ ರೂಂಗಳನ್ನು (ತಾತ್ಕಾಲಿಕ ವಿಶ್ರಾಂತಿ ಕೊಠಡಿ) ಸ್ಥಾಪಿಸಲು ನೈರುತ್ಯ ರೈಲ್ವೆ ನಿರ್ಧರಿಸಿದೆ.

ಬೆಂಗಳೂರು ವಿಭಾಗದಲ್ಲಿ 191 ವಸತಿ ಸೌಕರ್ಯಗಳು ಮತ್ತು ಲೋಕೊ ಪೈಲೆಟ್‌ಗಳು (ರೈಲು ಚಾಲಕರು) ತಾತ್ಕಾಲಿಕ ವಿಶ್ರಾಂತಿ ಪಡೆಯಲು 4 ರನ್ನಿಂಗ್ ರೂಂಗಳಿವೆ. ಕೆಎಸ್‌ಆರ್ ಬೆಂಗಳೂರು, ಎಸ್‌ಎಂವಿಟಿ ಬೆಂಗಳೂರು, ಯಶವಂತಪುರ, ಬಂಗಾರಪೇಟೆ ರೈಲು ನಿಲ್ದಾಣಗಳಲ್ಲಿ ಈ ವ್ಯವಸ್ಥೆ ಇದೆ. ನೈರುತ್ಯ ರೈಲ್ವೆ ರೈಲ್ವೆ ವ್ಯಾಪ್ತಿಯಲ್ಲಿ 505 ಹಾಸಿಗೆಗಳ ಸಾಮರ್ಥ್ಯ ಹೊಂದಿರುವ 14 ರನ್ನಿಂಗ್ ಕೊಠಡಿಗಳನ್ನು ಸ್ಥಾಪಿಸಲು ಯೋಜಿಸಲಾಗಿದೆ. 274 ಹಾಸಿಗೆಗಳ ಸಾಮರ್ಥ್ಯದ 8 ರನ್ನಿಂಗ್ ಕೊಠಡಿಗಳನ್ನು ಮಂಜೂರು ಮಾಡಲು ಪ್ರಸ್ತಾವ ಸಲ್ಲಿಸಲಾಗಿದೆ ಎಂದು ನೈರುತ್ಯ ರೈಲ್ವೆ ಬೆಂಗಳೂರು ವಿಭಾಗದ ಸಾರ್ವಜನಿಕ ಸಂಪರ್ಕಾಧಿಕಾರಿ ತ್ರಿನೇತ್ರ ಕೆ.ಆರ್. ತಿಳಿಸಿದರು.

ರೈಲ್ವೆ ಸಿಬ್ಬಂದಿ ಮೂಲ ಸ್ಟೇಷನ್‌ಗಳಿಂದ ದೂರವಿದ್ದಾಗ ಅಲ್ಲಿ ವಿಶ್ರಾಂತಿ ತೆಗೆದುಕೊಳ್ಳಲು ಈ ವ್ಯವಸ್ಥೆ ಇರುತ್ತದೆ. ಹವಾನಿಯಂತ್ರಿತ ಕೊಠಡಿ, ರಿಯಾಯಿತಿ ದರದಲ್ಲಿ ಆಹಾರ, ಅನಿಯಮಿತ ಸಮಯದಲ್ಲಿ ಪಾಳಿಗಳನ್ನು ಆರಂಭಿಸುವ ಸಿಬ್ಬಂದಿಗೆ ಆಹಾರದ ಪೊಟ್ಟಣಗಳನ್ನು ಇಲ್ಲಿ ಒದಗಿಸಲಾಗುತ್ತದೆ. ಕಾಲು ಮಸಾಜ್ ಮಾಡುವ ಮಷಿನ್, ಚೆಸ್, ಕೇರಂ ಬೋರ್ಡ್ ಸೌಕರ್ಯಗಳಿವೆ ಎಂದು ವಿವರಿಸಿದರು.

ನಿಗದಿತ ವಿಶ್ರಾಂತಿ ಅವಧಿ ಪೂರ್ಣಗೊಳಿಸುವವರೆಗೆ ಯಾವುದೇ ರನ್ನಿಂಗ್ ಸಿಬ್ಬಂದಿಯನ್ನು ಕರ್ತವ್ಯಕ್ಕೆ ಕರೆಯುವುದಿಲ್ಲ. ಸಿಬ್ಬಂದಿ ಮತ್ತು ಪ್ರಯಾಣಿಕರ ಸುರಕ್ಷತೆಗಾಗಿ ಈ ನೀತಿಯನ್ನು ಕಟ್ಟುನಿಟ್ಟಾಗಿ ಪಾಲಿಸಲಾಗುತ್ತಿದೆ ಎಂದು ತಿಳಿಸಿದರು.

ಇದೇ 15 ರಿಂದ 9 ದಿನಗಳು ನಡೆಯಲಿದೆ ಅಧಿವೇಶನ

ವಿಧಾನಸಭೆ: ಶಾಸಕರ ಹಾಜರಾತಿ ಮೇಲೆ ‘ಎಐ’ ಕಣ್ಗಾವಲು!

ಪ್ರಜಾವಾಣಿ ವಾರ್ತೆ

ಬೆಂಗಳೂರು: ಈ ಬಾರಿಯ ಅಧಿವೇಶನದಲ್ಲಿ ಶಾಸಕರ ಹಾಜರಾತಿ ಮೇಲೆ ಕೃತಕ ಬುದ್ಧಿಮತ್ತೆ (ಎಐ) ತಂತ್ರಜ್ಞಾನದ ಕಣ್ಗಾವಲು ಇರಲಿದೆ.

ಶುಕ್ರವಾರ ಜಂಟಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ವಿಧಾನ ಸಭಾಧ್ಯಕ್ಷ ಯು.ಟಿ.ಖಾದರ್ ಮತ್ತು ವಿಧಾನಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಅವರು ಈ ಮಾಹಿತಿ ನೀಡಿದರು.

ಅಧಿವೇಶನದ ವೇಳೆಯಲ್ಲಿ ಶಾಸಕರು ಕಲಾಪಕ್ಕೆ ಎಷ್ಟು ಹೊತ್ತಿಗೆ ಬರುತ್ತಾರೆ, ಎಷ್ಟು ಹೊತ್ತಿಗೆ ಹೊರಗೆ ಹೋಗುತ್ತಾರೆ ಮತ್ತು ಸದನದಲ್ಲಿ ಎಷ್ಟು ಹೊತ್ತು ಕುಳಿತುಕೊಳ್ಳುತ್ತಾರೆ ಎಂಬ ಮಾಹಿತಿ ತಿಳಿದುಕೊಳ್ಳಲು ಕೃತಕ ಬುದ್ಧಿಮತ್ತೆ ಆಧಾರಿತ (ಎಐ) ಹೊಸ ತಂತ್ರಜ್ಞಾನವನ್ನು ಬಳಸಲಾಗುವುದು. ಶಾಸಕರ ಚಲನವಲನವನ್ನು ಕ್ಯಾಮೆರಾಗಳಲ್ಲಿ ಸೆರೆ ಹಿಡಿಯಲಾಗುವುದು ಎಂದು ವಿವರಿಸಿದರು.

ಕಳೆದ ಬಾರಿಯಂತೆ ಈ ಬಾರಿಯೂ ವಿಧಾನಸಭಾ ಅಧಿವೇಶನದಲ್ಲಿ ಸಮಯಕ್ಕೆ ಸರಿಯಾಗಿ ಹಾಜರಾಗುವ ಶಾಸಕರಿಗೆ ಟೀ ಕಪ್, ಕ್ರೀಡೆಗೆ ಪ್ರೋತ್ಸಾಹ ನೀಡಲು ಶಾಸಕರು ಮತ್ತು ವಿಧಾನಮಂಡಲ ಸಿಬ್ಬಂದಿಗೆ ವಿಧಾನಮಂಡಲ ಕಪ್ ನೀಡುವುದಾಗಿ ಪ್ರಕಟಿಸಿದರು.

ವಿಧಾನಸಭೆ ಪ್ರವೇಶ ದ್ವಾರದ ಬಳಿ, ಕಬ್ಬಿಣದ ಗ್ರಿಲ್ ರೀತಿ ಇತ್ತು. ಅಲ್ಲಿ ಬೀಟೆ ಮರದಿಂದ ಮಾಡಿದ ದ್ವಾರವನ್ನು ಅಳವಡಿಸಲಾಗುವುದು. ಅದನ್ನು ಜು.15 ರಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಉದ್ಘಾಟಿಸಲಿದ್ದಾರೆ ಎಂದರು.

ಇದೇ 20 ರಂದು ವಿಧಾನಸೌಧದ ಬ್ಯಾಂಕ್ವೆಂಟ್ ಹಾಲ್‌ನಲ್ಲಿ ಚೆಸ್ ಸ್ಪರ್ಧೆ ಏರ್ಪಡಿಸಲಾಗಿದೆ. ಇದರಲ್ಲಿ ವಿಧಾನಸಭೆ, ವಿಧಾನಪರಿಷತ್ ಸದಸ್ಯರು ಭಾಗವಹಿಸಬಹುದು. ಗೆದ್ದವರಿಗೆ ಬಹುಮಾನ ನೀಡಲಾಗುವುದು ಎಂದು ಹೇಳಿದರು.

ಇದೇ 15ರಿಂದ ನಡೆಯಲಿರುವ 9 ದಿನಗಳ ಅಧಿವೇಶನದಲ್ಲಿ ಪ್ರಶ್ನೋತ್ತರ, ಶೂನ್ಯವೇಳೆ, ನಿಲುವಳಿ ಸೂಚನೆಗಳಿಗೆ ಅವಕಾಶ ಇರಲಿದೆ ಎಂದರು.

ಏಳು ವೈದ್ಯರಿಗೆ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವೈದ್ಯರ ದಿನದ ಪ್ರಯುಕ್ತ ಭಾರತೀಯ ವೈದ್ಯಕೀಯ ಸಂಘದ (ಐಎಂಎ) ಬೆಂಗಳೂರು ಘಟಕ ನೀಡುವ ಪ್ರಶಸ್ತಿಗೆ ಏಳು ವೈದ್ಯರು ಆಯ್ಕೆಯಾಗಿದ್ದಾರೆ.

ಡಾ. ವೇಣುಗೋಪಾಲ್ ಕೆ., ಡಾ.ಎ.ಎಸ್. ವೆಂಕಟಾಚಲಪತಿ, ಡಾ.ಟಿ. ಎಸ್. ಚನ್ನಪ್ಪ, ಡಾ.ರೇಖಾ ರಾಜೇಂದ್ರ ಕುಮಾರ್, ಡಾ. ರಮೇಶ್ ಕೃಷ್ಣ ಕೆ., ಡಾ.ವಿ. ನಾರಾಯಣಸ್ವಾಮಿ ಹಾಗೂ ಡಾ. ರಂಗನಾಥ್ ಸಿ.ಎನ್. ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ.

ಘಟಕವು ಇದೇ ಶನಿವಾರ ಸಂಜೆ ಸಂಜೆ 6 ಗಂಟೆಗೆ ಲಾ ಮಾರ್ವೆಲ್ಲ ಹೋಟೆಲ್‌ನಲ್ಲಿ ಪ್ರಶಸ್ತಿ ಪ್ರದಾನ ಸಮಾರಂಭ ಹಮ್ಮಿಕೊಂಡಿದೆ. ಮುಖ್ಯ ಅತಿಥಿಯಾಗಿ ಸಂಸದ ಹಾಗೂ ಹೃದ್ರೋಗ ತಜ್ಞ ಡಾ.ಸಿ.ಎನ್. ಮಂಜುನಾಥ್ ಪಾಲ್ಗೊಳ್ಳಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

‘ಮುಖ್ಯಮಂತ್ರಿ ವಿರುದ್ಧ ಷಡ್ಯಂತ್ರ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಸರ್ಕಾರದ ವಿರುದ್ಧ ಆರೋಪ ಮಾಡಲು ಯಾವ ವಿಷಯಗಳೂ ಇಲ್ಲದ ಕಾರಣ ಬಿಜೆಪಿ ಮುಖಂಡರು ಮುಡಾ ಪ್ರಕರಣದ ನೆಪದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ವೈಯಕ್ತಿಕ ತೇಜೋವಧೆ ಶುರು ಮಾಡಿದ್ದಾರೆ ಎಂದು ರಾಮ ಮನೋಹರ ಲೋಹಿಯಾ ಚಿಂತಕರ ಚಾವಡಿ ಅಧ್ಯಕ್ಷ ಬಿ.ಎಸ್. ಶಿವಣ್ಣ ಆರೋಪಿಸಿದ್ದಾರೆ.

‘ದೇವರಾಜು ಅರಸು ವಿರುದ್ಧವೂ ಹಿಂದೆ ಇಂಥದ್ದೇ ಆರೋಪ ಮಾಡಲಾಗಿತ್ತು. ಇದು ಪಾಳೆಗಾರಿಕೆ ಶಕ್ತಿಗಳ ಷಡ್ಯಂತ್ರ’ ಎಂದು ತಿಳಿಸಿದ್ದಾರೆ.

ಕಾನೂನಾತ್ಮಕವಾಗಿ ಮುಖ್ಯಮಂತ್ರಿಯವರ ಪತ್ನಿ ನಿವೇಶನ ಪಡೆದುಕೊಂಡಿದ್ದಾರೆ. ತಾಂತ್ರಿಕವಾಗಿ ಎಲ್ಲ ನಿಯಮ ಪಾಲನೆ ಮಾಡಲಾಗಿದೆ. ಆದರೂ ಬಿಜೆಪಿಗೆ ಹಿಂದುಳಿದ ವರ್ಗಗಳ ಮೇಲೆ ಇರುವ ಅಸಹಿಷ್ಣುತೆಯ ಭಾಗವಾಗಿ ಮುಖ್ಯಮಂತ್ರಿ ವಿರುದ್ಧ ಮುಗಿಬಿದ್ದಿದ್ದಾರೆ ಎಂದು ದೂರಿದ್ದಾರೆ.

ಇಂದು ಎಂಜಿನಿಯರಿಂಗ್ ಸಮಾವೇಶ

ಬೆಂಗಳೂರು: ದಯಾನಂದ ಸಾಗರ್ ಎಂಜಿನಿಯರಿಂಗ್ ಕಾಲೇಜು ಇದೇ ಶನಿವಾರ ತನ್ನ ಕ್ಯಾಂಪಸ್‌ನಲ್ಲಿ ಎಂಜಿನಿಯರಿಂಗ್ ಸಮಾವೇಶ ಹಮ್ಮಿಕೊಂಡಿದೆ.

‘ಶಿಕ್ಷಣ, ಸಂಶೋಧನೆ ಹಾಗೂ ಉದ್ಯಮ ತಜ್ಞರು ಒಂದೇ ವೇದಿಕೆಯಲ್ಲಿ ಸಮಾಗಮ ಆಗಲಿದ್ದಾರೆ ಎಂದು ಕಾಲೇಜಿನ ಪ್ರಕಟಣೆ ತಿಳಿಸಿದೆ.

ಈ ಸಮಾವೇಶದಲ್ಲಿ ಉದ್ಯಮ ಕ್ಷೇತ್ರದ 50 ತಜ್ಞರು ಭಾಗವಹಿಸಿ, ವೃತ್ತಿಯ ಅನುಭವಗಳನ್ನು ಹಂಚಿಕೊಳ್ಳುತ್ತಾರೆ. ಉದ್ಯೋಗದ ಭರವಸೆ ಒದಗಿಸಲು ಈ ಸಮಾವೇಶ ಸಹಕಾರಿಯಾಗಲಿದೆ ಎಂದು ಹೇಳಿದೆ.

ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು
ಆಡಳಿತಾಧಿಕಾರಿಗಳ ಕಛೇರಿ, ಗಾ.ಕೃ.ವಿ.ಕೇ., ಬೆಂಗಳೂರು–560065
ನಂ.ಎಡ/ಆರ್.ಟಿ./11/65/ಅಧಿಕಾರಿ ಹುದ್ದೆಗಳು/2024–25 ದಿನಾಂಕ:11–07–2024
ಪ್ರಕಟಣೆ
ವಿಷಯ: ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದಲ್ಲಿ, ಅಧಿಕಾರಿ ಹುದ್ದೆಗಳಿಗೆ ನೇಮಕಾತಿ.
ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದಲ್ಲಿ ಈ ಕೆಳಕಂಡ ಅಧಿಕಾರಿ ಹುದ್ದೆಗಳನ್ನು ತುಂಬಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. **1. ಡೀನ್ (ಕೃಷಿ), ಹಾಸನ, 2. ಡೀನ್ (ಕೃಷಿ), ಮಂಡ್ಯ,** ವೇತನ ಶ್ರೇಣಿ ರೂ.1,44,200–2,18,200. ವಿದ್ಯಾರ್ಹತೆ, ಸ್ಕೋರ್ ಕಾರ್ಡ್ ಮತ್ತು ಅರ್ಜಿ ನಮೂನೆಯನ್ನು ವಿಶ್ವವಿದ್ಯಾನಿಲಯದ ವೆಬ್‌ಸೈಟ್ (www.uasbangalore.edu.in) ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. ಭರ್ತಿ ಮಾಡಲಾದ ಅರ್ಜಿಗಳನ್ನು ಸ್ವೀಕರಿಸಲು ಕಡೆಯ ದಿನಾಂಕ: 09–08–2024.
ಆದೇಶದ ಮೇರೆಗೆ
ಆಡಳಿತಾಧಿಕಾರಿಗಳು

ನಗರದಲ್ಲಿ ನಡೆದ ಸಮಾರಂಭದಲ್ಲಿ ಕೇಂದ್ರ ಸಾಹಿತ್ಯ ಅಕಾಡೆಮಿ ವತಿಯಿಂದ 24 ಮಂದಿಗೆ ಅನುವಾದ ಪ್ರಶಸ್ತಿ ಪ್ರದಾನ ಮಾಡಲಾಯಿತು. ಅಕಾಡೆಮಿ ಕಾರ್ಯದರ್ಶಿ ಕೆ.ಶ್ರೀನಿವಾಸರಾವ್, ಸಾಹಿತಿ ಚಂದ್ರಶೇಖರ ಕಂಬಾರ, ಅಕಾಡೆಮಿ ಅಧ್ಯಕ್ಷ ಮಾಧವ್ ಕೌಶಿಕ್, ಉಪಾಧ್ಯಕ್ಷೆ ಕುಮುದ್ ಶರ್ಮಾ ಹಾಜರಿದ್ದರು –ಪ್ರಜಾವಾಣಿ ಚಿತ್ರ

ಅನುವಾದದ ಕೆಲಸ ಸುಲಭವಲ್ಲ: ಚಂದ್ರಶೇಖರ ಕಂಬಾರ

24 ಮಂದಿಗೆ ಅನುವಾದ ಪ್ರಶಸ್ತಿ ಪ್ರದಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಭಾರತೀಯ ಸಾಹಿತ್ಯಕ್ಕೆ ಅನುವಾದಕರು ಸಾಕಷ್ಟು ಕೊಡುಗೆ ನೀಡಿದ್ದಾರೆ. ಅನುವಾದದ ಕೆಲಸ ಅಷ್ಟು ಸುಲಭವಲ್ಲ. ಒಂದು ಕೃತಿಯನ್ನು ಅರ್ಥ ಮಾಡಿಕೊಂಡು ಭಾಷಾಂತರ ಮಾಡುವ ದೊಡ್ಡ ಜವಾಬ್ದಾರಿ ಅವರ ಮೇಲಿದೆ’ ಎಂದು ಸಾಹಿತಿ ಚಂದ್ರಶೇಖರ ಕಂಬಾರ ಹೇಳಿದರು.

ಕೇಂದ್ರ ಸಾಹಿತ್ಯ ಅಕಾಡೆಮಿ ಶುಕ್ರವಾರ ಏರ್ಪಡಿಸಿದ್ದ ಅನುವಾದ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಮಾತನಾಡಿದ ಅವರು, ‘ಪ್ರಸ್ತುತ ಅನುವಾದದ ಕೆಲಸ ಸವಾಲಿನದ್ದಾಗಿದೆ. ಪಕ್ಕದ ರಾಜ್ಯ ಹಾಗೂ ಹೊರದೇಶಗಳ ಸಾಹಿತ್ಯವನ್ನು ತಿಳಿದುಕೊಳ್ಳಲು ಓದುಗರು ಕಾತರರಿಂದ ಇರುತ್ತಾರೆ. ಉತ್ತಮ ಬಾಂಧವ್ಯ ವೃದ್ಧಿಗೆ ಇದು ಸಹಕಾರಿಯಾಗಲಿದೆ’ ಎಂದು ಅಭಿಪ್ರಾಯಪಟ್ಟರು.

ಅಕಾಡೆಮಿ ಅಧ್ಯಕ್ಷ ಮಾಧವ್ ಕೌಶಿಕ್ ಮಾತನಾಡಿ, ‘ಭಾರತದಲ್ಲಿ ಹಲವು ಭಾಷೆಗಳಲ್ಲಿ ಜನರು ಮಾತನಾಡುತ್ತಾರೆ. ಅನ್ಯ ಭಾಷೆಯ ಸಾಹಿತ್ಯವನ್ನು ನಮಗೆ ತಿಳಿಸುವ ಕೆಲಸವನ್ನು ಅನುವಾದಕರು ಮಾಡುತ್ತಾರೆ. ಭಾಷಾಂತರಕಾರ ಎಷ್ಟು ಮುಖ್ಯ ಎಂಬುದು ಸಮಾಜಕ್ಕೆ ಈಗ ಅರ್ಥವಾಗಿದೆ’ ಎಂದರು.

ಇದೇ ವೇಳೆ ಮಾಧವ್ ಕೌಶಿಕ್ ಹಾಗೂ ಉಪಾಧ್ಯಕ್ಷೆ ಕುಮುದ್ ಶರ್ಮಾ ಅವರು 24 ಮಂದಿಗೆ ಅನುವಾದ ಪ್ರಶಸ್ತಿ 2023 ಪ್ರದಾನ ಮಾಡಿದರು. ಫಲಕ ಮತ್ತು ₹50 ಸಾವಿರ ನಗದು ನೀಡಲಾಯಿತು.

ಪ್ರಶಸ್ತಿ ವಿಜೇತರು: ಲಕ್ಷ್ಯ ಜ್ಯೋತಿ ಗಗೈ ಸಂದಿಕೈ (ಅಸ್ಸಾಮೀ), ಮೃಣ್ಮಯ್ ಪ್ರಾಮಾಣಿಕ್ (ಬಂಗಾಳಿ), ಅಂಬಿಕಾಗಿರಿ ಹಾಜೋವಾರಿ (ಬೋಡೊ), ಸುಷ್ಮಾ ರಾಣಿ (ಡೋಗ್ರಿ), ದಿ.ನವನೀತ ದೇವ ಸೇನ್ (ಇಂಗ್ಲಿಷ್), ಮಿನಲ್ ಜಯಂತಿಲಾಲ್ ದವೆ (ಗುಜರಾತಿ), ರೀತಾರಾಣಿ ಪಾಲಿವಾಲ್ (ಹಿಂದಿ), ಕೆ.ಕೆ.ಗಂಗಾಧರನ್ (ಕನ್ನಡ), ಗುಲ್ಜಾರ್ ಅಹಮದ್ ರಾಥೆರ್ (ಕಶ್ಮೀರಿ), ಸುನೇತ್ರ ಗಜಾನನ ಜೋಗ್ (ಕೊಂಕಣಿ), ಮೇನಕಾ ಮಲ್ಲಿಕ್ (ಮೈಥಿಲಿ), ಪಿ.ಕೆ.ರಾಧಾಮಣಿ (ಮಲೆಯಾಳಂ), ಲಾಯಿಶ್ರಮ್ ಸೋಮೋರೆಂದ್ರೊ (ಮಣಿಪುರಿ), ಅಭಯ್ ಸದಾವರ್ತೆ (ಮರಾಠಿ), ಛತ್ರಮಾನ್ ಸುಬ್ಬ (ನೇಪಾಳಿ), ಬಂಗಾಳಿ ನಂದ (ಒಡಿಯಾ), ಜಗದೀಶ್ ರಾಯ್ ಕುಲರಿಯನ್ (ಪಂಜಾಬಿ), ನಾಗರತ್ನ ಹೆಗಡೆ (ಸಂಸ್ಕೃತ), ವೀರ ಪ್ರತಾಪ ಮುರ್ಮು (ಸಂತಾಲಿ), ಭಗವಾನ್ ಬಾಬಣಿ ‘ಬಂದೋ’ (ಸಿಂಧಿ), ಕಣ್ಣಯ್ಯನ್ ದಕ್ಷಿಣಾಮೂರ್ತಿ (ತಮಿಳು), ಸುರೇಂದ್ರ ನಾಗರಾಜು ‘ಎಲನಾಗ’ (ತೆಲುಗು), ಮೊಹಮ್ಮದ್ ಅಹಸನ್ ‘ಅಹಸನ್ ಅಯ್ಯುಬೀ’ (ಉರ್ದು) ಹಾಗೂ ಭವರ್ ಲಾಲ್ ‘ಭ್ರಮರ್’ (ರಾಜಸ್ಥಾನಿ).

ಸಂಶೋಧನೆ, ಅಭಿವೃದ್ಧಿ ಕಾರ್ಯಗಳಿಗಾಗಿ ರಾಮಯ್ಯ ಆಸ್ಪತ್ರೆಯ ಸಹಭಾಗಿತ್ವ

ನ್ಯೂಯಾರ್ಕ್ ಆಸ್ಪತ್ರೆಯೊಂದಿಗೆ ಒಪ್ಪಂದ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಿಕಿತ್ಸೆಯಲ್ಲಿ ಹೊಸ ವಿಧಾನಗಳನ್ನು ರೂಪಿಸಲು ಸಹಭಾಗಿತ್ವದಲ್ಲಿ ಸಂಶೋಧನಾ ಮತ್ತು ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳುವ ಸಂಬಂಧ ನಗರದ ರಾಮಯ್ಯ ಆಸ್ಪತ್ರೆಯ ಸಮೂಹ ಸಂಸ್ಥೆ ಮತ್ತು ನ್ಯೂಯಾರ್ಕ್‌ನ ಮೌಂಟ್ ಸೈನಾಯ್ ಆಸ್ಪತ್ರೆಗಳು ಶುಕ್ರವಾರ ಒಪ್ಪಂದ ಮಾಡಿಕೊಂಡಿವೆ.

‘ಮೌಂಟ್ ಸೈನಾಯ್ ಆಸ್ಪತ್ರೆಯು 150 ವರ್ಷಗಳಿಂದ ನ್ಯೂಯಾರ್ಕ್‌ನಲ್ಲಿ ವೈದ್ಯಕೀಯ ಸೇವೆಯನ್ನು ಒದಗಿಸುತ್ತಿದೆ. ಅಮೆರಿಕದ ಅತ್ಯುನ್ನತ ಆಸ್ಪತ್ರೆಗಳ ಪಟ್ಟಿಯಲ್ಲಿ 6ನೇ ಶ್ರೇಯಾಂಕದಲ್ಲಿದೆ. ಸಂಸ್ಥೆಯು ಹೊಸ ಚಿಕಿತ್ಸಾ ವಿಧಾನಗಳನ್ನು ಅಭಿವೃದ್ಧಿಪಡಿಸಲು ಹೆಸರುವಾಸಿಯಾಗಿದೆ. ರಾಮಯ್ಯ ಆಸ್ಪತ್ರೆಯಲ್ಲೂ ಅಂತಹ ಸಂಶೋಧನೆ ಮತ್ತು ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲು ಈ ಒಪ್ಪಂದ ನೆರವಾಗಲಿದೆ. ನಮ್ಮಲ್ಲಿ ಚಿಕಿತ್ಸೆ ಪಡೆಯುವವರಿಗೆ ಅದರ ಪ್ರಯೋಜನ ಸಿಗಲಿದೆ’ ಎಂದು ಗೋಕುಲ ಶೈಕ್ಷಣಿಕ ಪ್ರತಿಷ್ಠಾನದ ಅಧ್ಯಕ್ಷ ಎಂ.ಆರ್. ಜಯರಾಮ್ ಹೇಳಿದರು.

ಗೋಕುಲ ಶೈಕ್ಷಣಿಕ ಪ್ರತಿಷ್ಠಾನದ ಅಧ್ಯಕ್ಷ ಎಂ.ಆರ್.ಜಯರಾಮ್ ಮತ್ತು ಮೌಂಟ್ ಸೈನಾಯ್ ಆಸ್ಪತ್ರೆಯ ಅಧ್ಯಕ್ಷ ಡಾ.ಸ್ಜಾಬಿ ಡೊರೊಟೊವಿಕ್ಸ್ ಒಪ್ಪಂದ ಪತ್ರವನ್ನು ಪರಸ್ಪರ ವಿನಿಮಯ ಮಾಡಿಕೊಂಡರು. ಮೌಂಟ್ ಸಿನಾಯ್ ಆಸ್ಪತ್ರೆ ಅಧ್ಯಕ್ಷ ಡಾ. ಡೇವಿಡ್ ಎಲ್. ರೀಚ್(ಎಡದಿಂದ ಮೊದಲನೆಯವರು), ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಮತ್ತು ರಾಜ್ಯದ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಇದ್ದರು –ಪ್ರಜಾವಾಣಿ ಚಿತ್ರ

ಕೇಂದ್ರ ಆಹಾರ ಮತ್ತು ನಾಗರಿಕ ಸರಬರಾಜು ಖಾತೆ ಸಚಿವ ಪ್ರಲ್ಹಾದ ಜೋಶಿ ಮಾತನಾಡಿ, ‘ಅಮೆರಿಕದಲ್ಲಿ ಒಬ್ಬ ವೈದ್ಯ ದಿನವೊಂದರಲ್ಲಿ 5–6 ರೋಗಿಗಳನ್ನು ಪರೀಕ್ಷಿಸುತ್ತಾರೆ. ಆದರೆ, ಭಾರತದಲ್ಲಿ ಒಬ್ಬ ವೈದ್ಯ ದಿನಕ್ಕೆ 50–60 ರೋಗಿಗಳನ್ನು ಪರಿಶೀಲಿಸುತ್ತಾರೆ. ಹೀಗಾಗಿಯೇ ಇಲ್ಲಿನ ವೈದ್ಯರು ಹೆಚ್ಚು ಪರಿಣತರಾಗಿರುತ್ತಾರೆ. ಆ ಪರಿಣತಿ ಮತ್ತು ಸೈನಾಯ್ ಆಸ್ಪತ್ರೆಯ ಸಂಶೋಧನೆ ಮತ್ತು ಅಭಿವೃದ್ಧಿ ವಿಭಾಗ ಸೇರಿದರೆ, ನಮ್ಮಲ್ಲಿ ಚಿಕಿತ್ಸೆ ಪಡೆಯುವವರಿಗೆ ಅನುಕೂಲವಾಗಲಿದೆ’ ಎಂದರು.

ರಾಜ್ಯದ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಮಾತನಾಡಿ, ‘ಜಗತ್ತಿನ ಅತ್ಯುತ್ತಮ ಆಸ್ಪತ್ರೆಯು ಭಾರತದ ಆಸ್ಪತ್ರೆಯೊಂದಿಗೆ ಒಪ್ಪಂದ ಮಾಡಿಕೊಳ್ಳುತ್ತಿರುವುದು ಇಲ್ಲಿ ಹೊಸ ಅವಕಾಶಗಳನ್ನು ತೆರೆಯಲಿದೆ’ ಎಂದರು.

*Limited period offer. Call your nearest Hero dealership now.
Visit us in **BANGALORE:** Vittal Mallya Road — RT KRISHNA AUTOS, 7428411021 | Bommanahalli — VIDA HUB RT KRISHNA AUTO, 8762865999 | Banashankari — SAI MOTORS, 7428412219 | J P Nagar — SAI MOTORS, 9035024284 | Kanakapura Main Road — SAI MOTORS, 8904677394 | Yeshwanthpur — SAI BIKES, 7428411869 | Nagarabhavi — SAI BIKES PREMIA, 7428412128 | Banaswadi Ring Road — BHAGATH MOTORS, 7428408355 | K R Puram — BHAGATH MOTORS, 9900349199 | Electronic City — RT KRISHNA AUTOS, 9865262136 | Rajajinagar — MAX MOTORS, 7428409766 | Magadi Main Road — POORNA MOTORS, 7428409953 | Lal Bagh Main Road — PRAKASH MOTORS, 7428410886 | Magadi Road — RT KRISHNA AUTOS, 8762058999 | Bellary Road — BIMAL MOTORS, 7428408801 | Singsandra — RT KRISHNA AUTOS PREMIA, 7428411368 | BTM Layout — V3S MOTORS, 9035007999 | **TUMKUR:** Sira Gate — SAI WHEELZ, 9289922986 | BH Road — SAI WHEELZ, 7676016623 | Kunigal — SAI WHEELZ, 9164972652 | Tiptur — SAI WHEELZ, 9164840456. **Certified range by Govt. certified agency. Real-world range of 110 km. Certified and Real-world range may vary depending on riding style, road/vehicle conditions, and vehicle models.

ಈಜಿಪುರ ಎಲಿವೇಟಡ್ ಕಾರಿಡಾರ್: ಮುಖ್ಯಮಂತ್ರಿ ಸೂಚನೆಯಿಂದ ಚುರುಕುಗೊಂಡ ಕೆಲಸ

ವೇಗ ಪಡೆದ 7 ವರ್ಷದ ಕಾಮಗಾರಿ

• ಆರ್. ಮಂಜುನಾಥ್

₹250 ಕೋಟಿ ಈಜಿಪುರ ಎಲಿವೇಟೆಡ್ ಕಾರಿಡಾರ್‌ಗೆ ಒಟ್ಟು ವೆಚ್ಚ

17 ನವೆಂಬರ್ 2023 ಅರ್ಧಕ್ಕೆ ನಿಂತ ಕಾಮಗಾರಿ ಮರು ಆರಂಭಕ್ಕೆ ಕಾರ್ಯಾದೇಶ

20 ತಿಂಗಳು ಕಾಮಗಾರಿ ಮುಗಿಸಲು ನೀಡಲಾಗಿರುವ ಗಡುವು

₹6 ಕೋಟಿ ಗುತ್ತಿಗೆದಾರರಿಗೆ ಹಣ ಬಿಡುಗಡೆ

ಗುತ್ತಿಗೆದಾರರು: ಬಿಎಸ್‌ಸಿಪಿಎಲ್ ಇನ್‌ಫ್ರಾಸ್ಟ್ರಕ್ಚರ್

ಬೆಂಗಳೂರು: ಏಳು ವರ್ಷದ ಹಿಂದೆ ಆರಂಭವಾಗಿ ನಿಧಾನಗತಿಯಲ್ಲಿದ್ದ ಈಜಿಪುರ 'ಎಲಿವೇಟಡ್ ಕಾರಿಡಾರ್' ಕಾಮಗಾರಿ ಎರಡು ವರ್ಷ ಸ್ಥಗಿತಗೊಂಡಿತ್ತು. ಹೊಸ ಗುತ್ತಿಗೆದಾರರು ಬಂದಮೇಲೂ ಪ್ರಗತಿ ಕಾಣದ ಕಾಮಗಾರಿ, ಮುಖ್ಯಮಂತ್ರಿಯವರ ಸೂಚನೆಯಿಂದ ಚುರುಕು ಪಡೆದುಕೊಂಡಿದೆ.

ಕೋರಮಂಗಲ, ಈಜಿಪುರ, ಸೇಂಟ್ಸ್ ಜಾನ್ಸ್ ಆಸ್ಪತ್ರೆ ಸುತ್ತಮುತ್ತಲ ಪ್ರದೇಶದಲ್ಲಿ 2017ರಿಂದ ವಾಹನ ದಟ್ಟಣೆ ಅನುಭವಿಸುತ್ತಿದ್ದ ಜನರು, ಮೇಲ್ಸೇತುವೆ ಕೆಲಸ ಬೇಗ ನಡೆಯಬೇಕೆಂದು ಆಗಾಗ್ಗೆ ಒತ್ತಾಯಿಸುತ್ತಲೇ ಇದ್ದರು. ಆದರೆ, ಗುತ್ತಿಗೆದಾರರ ಬದಲಾವಣೆ, ಸ್ಥಳೀಯ ಸಮಸ್ಯೆಗಳು ಕಾಮಗಾರಿಯ ವೇಗವನ್ನು ತಡೆದವು. ಮುಖ್ಯಮಂತ್ರಿ ಸಿದ್ದರಾಮಯ್ಯ ನಗರ ಪ್ರದಕ್ಷಿಣೆ ಸಂದರ್ಭದಲ್ಲಿ ಕಟ್ಟಪ್ಪಣೆ ಮಾಡಿದ್ದರಿಂದ, ಬಿಬಿಎಂಪಿ ಎಂಜಿನಿಯರ್‌ಗಳು ಕೆಲಸ ಮಾಡಲು ಆರಂಭಿಸಿದರು.

'ಈಜಿಪುರ ಮೇಲ್ಸೇತುವೆ ಬಾಕಿ ಕಾಮಗಾರಿಯನ್ನು ಮುಗಿಸಲು ಸಾಕಷ್ಟು ಬಾರಿ ಸಚಿವರು, ಸ್ಥಳೀಯ ಶಾಸಕರೂ ಆದ ರಾಮಲಿಂಗಾರೆಡ್ಡಿ ಅವರೊಂದಿಗೆ ಸಮಾಲೋಚನೆ ನಡೆಸಿದ್ದೇವೆ. ಬಿಜೆಪಿ ಸರ್ಕಾರ ಇದ್ದಾಗ ಕಾಮಗಾರಿ ಸ್ಥಗಿತಗೊಂಡಿತ್ತು. ರಾಮಲಿಂಗಾರೆಡ್ಡಿ ಅವರೂ ನಮ್ಮೊಂದಿಗೆ ಸೇರಿಕೊಂಡು ಪ್ರತಿಭಟನೆ ನಡೆಸಿದ್ದರು. ಇದೀಗ ಕಾಮಗಾರಿ ವೇಗ ಪಡೆದುಕೊಂಡಿದೆ' ಎಂದು ಸ್ಥಳೀಯ ನಿವಾಸಿಗಳ ಸಂಘ ಸಂಸ್ಥೆಗಳು ಸದಸ್ಯರು ಹೇಳಿದರು.

'ಏಳು ವರ್ಷಗಳಿಂದ ಕಾಮಗಾರಿ ನಡೆಯುತ್ತಿದ್ದ ವಾಹನ ದಟ್ಟಣೆ ಅತಿಯಾಗಿದೆ. ಆಸ್ಪತ್ರೆ, ಶಾಲೆ–ಕಾಲೇಜು, ಕಚೇರಿಗಳಿಗೆ ಹೋಗಲು

ಈಜಿಪುರ ಮೇಲ್ಸೇತುವೆಗೆ ಮಡಿವಾಳದ ಕಡೆಯಿಂದ ಸಂಪರ್ಕ ಒದಗಿಸುವ ರ‍್ಯಾಂಪ್ ಕಾಮಗಾರಿ ನಡೆಯುತ್ತಿದೆ

ಬಿಬಿಎಂಪಿ ಕಾಮಗಾರಿ ಮುಗಿಸೋದು ಯಾವಾಗ ರೀ?

ಸಮಸ್ಯೆಯಾಗುತ್ತದೆ. ನಿಗದಿತ ಅವಧಿಗೂ ಮುನ್ನ, ಬಿಬಿಎಂಪಿ ಎಂಜಿನಿಯರ್‌ಗಳು ಕಾಮಗಾರಿ ಮುಗಿಸಲಿ' ಎಂದು ಈಜಿಪುರ ರಾಮರಾಜು ಒತ್ತಾಯಿಸಿದರು.

ಕೋರಮಂಗಲ ಹೊರ ವರ್ತುಲ ರಸ್ತೆಯಲ್ಲಿ (ಈಜಿಪುರ) ಎಲಿವೇಟೆಡ್ ಕಾರಿಡಾರ್ 2.5 ಕಿ.ಮೀ. ಉದ್ದದ ಮೇಲ್ಸೇತುವೆಯಾಗಿದೆ. ಪುರಭವನದಿಂದ ಸಿರ್ಸಿ ವೃತ್ತದವರೆಗಿನ ಮೇಲ್ಸೇತುವೆಯ ನಂತರ ಅತಿ ಉದ್ದದ ಮೇಲ್ಸೇತುವೆ ಇದಾಗಿದೆ. ಈಜಿಪುರ ಕಾರಿಡಾರ್ ಯೋಜನೆಯನ್ನು 2014ರಲ್ಲಿ ರೂಪಿಸಲಾಗಿತ್ತು. 2017ರಲ್ಲಿ ₹157.66 ಕೋಟಿಗೆ ಸಿಂಪ್ಲೆಕ್ಸ್ ಇನ್‌ಫ್ರಾಸ್ಟ್ರಕ್ಚರ್ ಸಂಸ್ಥೆಗೆ ಗುತ್ತಿಗೆ ನೀಡಲಾಗಿತ್ತು. 2019ರೊಳಗೆ ಯೋಜನೆ ಪೂರ್ಣಗೊಳ್ಳಬೇಕಾಗಿತ್ತು. ಆದರೆ, ಗುತ್ತಿಗೆದಾರರು ವಿಳಂಬ ಮಾಡಿದರು.

ಹೈಕೋರ್ಟ್‌ಗೆ ಆದಿನಾರಾಯಣ ಶೆಟ್ಟಿ ಎಂಬುವವರು ರಿಟ್ ಸಲ್ಲಿಸಿದರು. ನಾಲ್ಕು ವರ್ಷ ಏಳು ತಿಂಗಳಾದರೂ ಶೇ 42ರಷ್ಟು ಮಾತ್ರ ಕಾಮಗಾರಿ ಮುಗಿದಿತ್ತು. ₹75.11 ಕೋಟಿ ಹಣವನ್ನೂ ಅವರಿಗೆ ಪಾವತಿಸಲಾಗಿತ್ತು. ಹೈಕೋರ್ಟ್ ಗುತ್ತಿಗೆಯನ್ನು 2022ರಲ್ಲಿ ರದ್ದು ಮಾಡಿತು. ಮೂರು ತಿಂಗಳಲ್ಲಿ ಹೊಸ ಟೆಂಡರ್ ಕರೆಯಲು ಸೂಚಿಸಿತು.

ಬಿಬಿಎಂಪಿಯ ವಿಳಂಬ ನೀತಿಯಿಂದ ಟೆಂಡರ್ ಆಹ್ವಾನ ನಿಧಾನವಾಯಿತು. ಅರ್ಧಕ್ಕೆ ನಿಂತ ಕೆಲಸವನ್ನು ಮುಂದುವರಿಸಲು ಸಾಕಷ್ಟು ಗುತ್ತಿಗೆದಾರರು ಆಸಕ್ತಿ ತೋರಲಿಲ್ಲ. ನಾಲ್ಕನೇ ಬಾರಿಗೆ ಆಹ್ವಾನಿಸಲಾಗಿದ್ದ ಟೆಂಡರ್ ಅನ್ನು 2023ರ ಮಾರ್ಚ್‌ನಲ್ಲಿ ಒಪ್ಪಿಗೆ ನೀಡಲಾಗಿತ್ತು. ಗುತ್ತಿಗೆದಾರರೊಂದಿಗೆ ಮಾತುಕತೆ ನಡೆಸಿ, ಅದನ್ನು ಆಗಸ್ಟ್‌ನಲ್ಲಿ ಸಚಿವ ಸಂಪುಟದ ಅನುಮೋದನೆಗೆ ಸಲ್ಲಿಸಲಾಗಿತ್ತು. ಸೆಪ್ಟೆಂಬರ್ 7ರಂದು ಅನುಮೋದನೆ ದೊರೆತರೂ, ₹176.11 ಕೋಟಿಗೆ ಬಿಎಸ್‌ಸಿಪಿಎಲ್ ಇನ್‌ಫ್ರಾಸ್ಟ್ರಕ್ಚರ್ ಸಂಸ್ಥೆಯೊಂದಿಗೆ 'ಟರ್ನ್ ಕೀ ಲಂಪ್‌ಸಮ್' ಗುತ್ತಿಗೆಯ ಒಪ್ಪಂದವನ್ನು ನವೆಂಬರ್ 17ರಂದು ಮಾಡಿಕೊಂಡು ಕಾರ್ಯಾದೇಶ ನೀಡಲಾಗಿದೆ.

ಗುತ್ತಿಗೆ ರದ್ದು, ಹೊಸ ಟೆಂಡರ್, ಹೊಸ ಗುತ್ತಿಗೆದಾರರಿಗೆ ಕಾರ್ಯಾದೇಶ ನೀಡುವ ಪ್ರಕ್ರಿಯೆಗಳಲ್ಲಿ ಬಿಬಿಎಂಪಿ ಅಧಿಕಾರಿಗಳ ವಿಳಂಬದಿಂದ ಈಜಿಪುರ ಮೇಲ್ಸೇತುವೆ ಕಾಮಗಾರಿ ನಿಧಾನಗತಿಯಲ್ಲಿದೆ. ಈಗಲಾದರೂ ಕ್ಷಿಪ್ರವಾಗಿ ಕಾಮಗಾರಿ ನಡೆಸಲಿ ಎಂಬುದು ಸ್ಥಳೀಯರ ಆಗ್ರಹ.

ಸಮಸ್ಯೆಗಳು ನಿವಾರಣೆಯಾಗಿವೆ



'ಈಜಿಪುರ ಮೇಲ್ಸೇತುವೆ ಕಾಮಗಾರಿಗೆ ಗುತ್ತಿಗೆದಾರರಿಗೆ ಹಣ ಬಿಡುಗಡೆ, ಭೂಸ್ವಾಧೀನ ಸೇರಿದಂತೆ ಹಲವು ಸಮಸ್ಯೆಗಳಿದ್ದವು. ಬಿಬಿಎಂಪಿ ಮುಖ್ಯ ಆಯುಕ್ತರೊಂದಿಗೆ ಸಭೆ ನಡೆಸಿ, ಸಮಸ್ಯೆಗಳನ್ನು ಪರಿಹರಿಸಲಾಗಿದೆ. ಕಾಮಗಾರಿ ವೇಗವಾಗಿ ನಡೆಯುತ್ತಿದ್ದು, ಬೇಗ ಪೂರ್ಣಗೊಳಿಸಲು ಸೂಚಿಸಲಾಗಿದೆ' ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಹೇಳಿದರು.

ಈಜಿಪುರ ಮೇಲ್ಸೇತುವೆ ಕಾಮಗಾರಿ ಚುರುಕುಗೊಂಡಿದ್ದು, ಪಿಲ್ಲರ್ ಮೇಲೆ ಗರ್ಡರ್ ಅಳವಡಿಸುವ ಕಾರ್ಯ ಆರಂಭವಾಗಿದೆ

ಲೋಕಾಯುಕ್ತ ನ್ಯಾಯಮೂರ್ತಿ ಬಿ.ಎಸ್‌.ಪಾಟೀಲ, ಉಪ ಲೋಕಾಯುಕ್ತರಾದ ನ್ಯಾಯಮೂರ್ತಿ ಕೆ.ಎನ್‌.ಫಣೀಂದ್ರ ಮತ್ತು ನ್ಯಾಯಮೂರ್ತಿ ಬಿ.ವೀರಪ್ಪ ಅವರು ಚಿಕ್ಕಬಾಣಾವರ ಕೆರೆ ಸಮೀಪ ಕಸ ವಿಲೇವಾರಿ ಸಮಸ್ಯೆ ಬಗ್ಗೆ ಸ್ಥಳ ಪರಿಶೀಲಿಸಿದರು

ಕಸ ತೆಗೆಯಲು ಗಡುವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಿಕ್ಕಬಾಣವರ ಕೆರೆಯ ಸಮೀಪ ಇರುವ ಕಸದ ರಾಶಿಯನ್ನು ಶೀಘ್ರವೇ ತೆರವು ಮಾಡಿ, ವಾರದೊಳಗೆ ವರದಿ ನೀಡುವಂತೆ ಸಂಬಂಧಿತ ಅಧಿಕಾರಿಗಳಿಗೆ ಲೋಕಾಯುಕ್ತರು ಶುಕ್ರವಾರ ಗಡುವು ನೀಡಿದರು.

ಘನ ತ್ಯಾಜ್ಯ ವಿಲೇವಾರಿಯಲ್ಲಿ ಕರ್ತವ್ಯಲೋಪ ಮತ್ತು ದುರಾಡಳಿತದ ಆರೋಪದಡಿ ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಅಡಿಯಲ್ಲಿ ಸ್ವಯಂ ಪ್ರೇರಿತ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಲಾಗುತ್ತಿದೆ. ಅದರ ಭಾಗವಾಗಿ ಲೋಕಾಯುಕ್ತ ನ್ಯಾಯಮೂರ್ತಿ ಬಿ.ಎಸ್. ಪಾಟೀಲ ಮತ್ತು ಉಪ ಲೋಕಾಯುಕ್ತರಾದ ನ್ಯಾಯಮೂರ್ತಿ ಕೆ.ಎನ್. ಫಣೀಂದ್ರ ಹಾಗೂ ನ್ಯಾಯಮೂರ್ತಿ ಬಿ. ವೀರಪ್ಪ ಅವರು ನಗರದ ಹಲವೆಡೆ ಧಿಡೀರ್ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಕೆರೆ ಸುತ್ತಮುತ್ತ ಬಿದ್ದಿದ್ದ ಸುಮಾರು 300 ಟನ್ ಕಸವನ್ನು ತೆರವು ಮಾಡಲಾಗಿದೆ ಎಂದು ಪುರಸಭೆ ಅಧಿಕಾರಿಗಳು ವರದಿ ಸಲ್ಲಿಸಿದ್ದರು. ಅದನ್ನು ಪರಿಶೀಲಿಸುವ ಸಲುವಾಗಿ ಮೂವರೂ ಸ್ಥಳಕ್ಕೆ ಭೇಟಿ ನೀಡಿದರು. ಅಪಾರ ಪ್ರಮಾಣದ ಕಸದ ರಾಶಿ ಕಂಡ ಲೋಕಾಯುಕ್ತರು ಅಧಿಕಾರಿಗಳನ್ನು ಸ್ಥಳಕ್ಕೆ ಕರೆಸಿದರು. 'ಇದು ನಾಲ್ಕೈದು ದಿನಗಳ ಹಿಂದೆ ಬಿದ್ದಿರುವ ಕಸವಷ್ಟೇ' ಎಂದು ಅಧಿಕಾರಿಗಳು ಉತ್ತರಿಸಿದಾಗ, ಅವರು ಸ್ಥಳೀಯರಲ್ಲಿ ಆ ಬಗ್ಗೆ ವಿಚಾರಿಸಿದರು.

'ಕಸ ಹಲವು ದಿನಗಳಿಂದ ಇಲ್ಲೇ ಬಿದ್ದಿದೆ' ಎಂದು ಸ್ಥಳೀಯರು ಹೇಳಿದರೆ, 'ಒಂದು ವರ್ಷದಿಂದಲೂ ಕಸ ಹೀಗೆಯೇ ಬಿದ್ದಿದೆ' ಎಂದು ಶಾಲಾ ವಿದ್ಯಾರ್ಥಿಗಳು ತಿಳಿಸಿದರು. ನಂತರ ಲೋಕಯುಕ್ತರು, '1 ವಾರದ ಒಳಗೆ ಕಸವನ್ನು ತೆರವು ಮಾಡಿ ವರದಿ ಸಲ್ಲಿಸಿ' ಎಂದು ಅಧಿಕಾರಿಗಳಿಗೆ ತಾಕೀತು ಮಾಡಿದರು.

ಕಮ್ಮಗೊಂಡನಹಳ್ಳಿ, ಅಬ್ಬಿಗೆರೆಯಲ್ಲಿ ಕಸದ ವಿಲೇವಾರಿ ಸಂಬಂಧ ದೂರಿನಲ್ಲಿ ಉಲ್ಲೇಖಿಸಲಾಗಿದ್ದ ಸ್ಥಳಗಳಿಗೆ, ರಾಜರಾಜೇಶ್ವರಿ ನಗರ ವಲಯ ವ್ಯಾಪ್ತಿಯ ಕೆಲ ಪ್ರದೇಶಗಳಿಗೂ ಲೋಕಾಯುಕ್ತರು ಭೇಟಿ ನೀಡಿ, ಪರಿಶೀಲನೆ ನಡೆಸಿದರು.

ಅಭಿವೃದ್ಧಿ ಕಾಮಗಾರಿ ವಿವರಕ್ಕೆ ಸೂಚನೆ

ಚಿಕ್ಕಬಾಣಾವರ ಕೆರೆ ಒತ್ತುವರಿಗೆ ಸಂಬಂಧಿಸಿದಂತೆ ಲೋಕಾಯುಕ್ತರು ಸ್ವಯಂಪ್ರೇರಿತ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ. ಈ ಸಂಬಂಧವೂ ಲೋಕಾಯುಕ್ತರು ಪರಿಶೀಲನೆ ನಡೆಸಿದರು.

ಸ್ಥಳಕ್ಕೆ ಭೇಟಿ ನೀಡಿದ ವೇಳೆ ಕೆರೆ ಅಭಿವೃದ್ಧಿ ಕಾಮಗಾರಿಗಳು ನಡೆಯುತ್ತಿದ್ದವು. ಕೆರೆಯ ಹೂಳು ತೆರವು, ಕೆರೆದಂಡೆಯಲ್ಲಿ ಉದ್ಯಾನ ಮತ್ತು ಪಾದಚಾರಿ ಮಾರ್ಗ ನಿರ್ಮಾಣ ಕಾಮಗಾರಿಗಳನ್ನು ನಡೆಸಲಾಗುತ್ತಿದೆ. ಲೋಕಾಯುಕ್ತರು ಅಧಿಕಾರಿಗಳಿಂದ ಆ ಬಗ್ಗೆ ಮಾಹಿತಿ ಪಡೆದುಕೊಂಡರು.

ಪ್ರಶಸ್ತಿ ಪ್ರದಾನ ಬೆಂಗಳೂರಿನಲ್ಲಿ ಶುಕ್ರವಾರ ಆಂಗ್ಲೋ ಇಂಡಿಯನ್ ಯೂನಿಟಿ ಸೆಂಟರ್ ಆಯೋಜಿಸಿದ್ದ ಸಮಾರಂಭದಲ್ಲಿ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಶುಶ್ರೂಷಣಾ ಕ್ಷೇತ್ರದಲ್ಲಿ ಸೇವೆ ಸಲ್ಲಿಸಿದ ಸಾಧಕರಿಗೆ ಫ್ಲಾರೆನ್ಸ್ ನೈಟಿಂಗೇಲ್ ಪ್ರಶಸ್ತಿ ಪ್ರದಾನ ಮಾಡಿದರು

ಸರ್ಕಾರದ ನಡೆ ವಿರುದ್ಧ ಕಾಂಗ್ರೆಸ್ ಪದಾಧಿಕಾರಿಗಳ ದೂರು

ಕಾರ್ಯಕರ್ತರ ಕಡೆಗಣನೆಯಿಂದಲೇ ಸೋಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದ ನಂತರ ಕಾರ್ಯಕರ್ತರು, ಸ್ಥಳೀಯ ಮುಖಂಡರನ್ನು ಕಡೆಗಣಿಸಿದ್ದೇ ಲೋಕಸಭಾ ಚುನಾವಣೆಯಲ್ಲಿ ಪಕ್ಷದ ಹಿನ್ನಡೆಗೆ ಕಾರಣ ಎಂದು ಕೆಪಿಸಿಸಿ ಪದಾಧಿಕಾರಿಗಳು ಅಹವಾಲು ಮಂಡಿಸಿದ್ದಾರೆ.

ಸೋಲಿನ ಪರಾಮರ್ಶೆಗೆ ಎಐಸಿಸಿ ನಾಯಕ ಮಧುಸೂದನ್ ಮಿಸ್ತ್ರಿ ನೇತೃತ್ವದಲ್ಲಿ ರಚಿಸಲಾದ ಸತ್ಯ ಶೋಧನಾ ಸಮಿತಿ ಮುಂದೆ ಬಹುತೇಕ ಪದಾಧಿಕಾರಿಗಳು ಈ ಅಸಮಾಧಾನ ಹೊರಹಾಕಿದ್ದಾರೆ.

ವಿಧಾನಸಭಾ ಚುನಾವಣೆಯ ಪೂರ್ವದಲ್ಲಿದ್ದ ಪಕ್ಷದ ನಾಯಕರು ಮತ್ತು ಕಾರ್ಯಕರ್ತರ ನಡುವಿನ ಹೊಂದಾಣಿಕೆ ಲೋಕಸಭಾ ಚುನಾವಣೆಯ ವೇಳೆ ಕಾಣಲಿಲ್ಲ. ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ರಚನೆಯಾದ ನಂತರ ಬಹುತೇಕ ಸಚಿವರು ಹಾಗೂ ಶಾಸಕರು ಪಕ್ಷದ ಸ್ಥಳೀಯ ನಾಯಕರು, ಕಾರ್ಯಕರ್ತರಿಗಿಂತ ಐದು 'ಗ್ಯಾರಂಟಿ' ಯೋಜನೆಗಳನ್ನೇ ಅತಿಯಾಗಿ ನೆಚ್ಚಿಕೊಂಡರು. ಗೆಲುವಿನ ದಡ ಸೇರಲು ಗ್ಯಾರಂಟಿ ಯೋಜನೆಯ ಲಾಭ ಪಡೆದ ಫಲಾನುಭವಿಗಳ ಮತಗಳು ನೆರವಾಗುತ್ತವೆ ಎಂದು ನಂಬಿದರು. 'ಗ್ಯಾರಂಟಿ' ಯೋಜನೆಗಳ ಮೇಲಿನ ಅತಿಯಾದ ವಿಶ್ವಾಸ, ಸರ್ಕಾರ ಮತ್ತು ಪಕ್ಷದ ಕಾರ್ಯಕರ್ತರ ನಡುವಿನ ಬಾಂಧವ್ಯವನ್ನು ಸಡಿಲಗೊಳಿಸಿತು. ಇದರಿಂದ ಹಲವು ಸಚಿವರು, ಶಾಸಕರ ಕ್ಷೇತ್ರಗಳಲ್ಲೂ ಹಿನ್ನಡೆ ಅನುಭವಿಸಬೇಕಾಯಿತು ಎಂದು ಕಾರಣಗಳನ್ನು ನೀಡಿದ್ದಾರೆ.

ಸರ್ಕಾರ ಅಸ್ತಿತ್ವಕ್ಕೆ ಬಂದ ನಂತರ ಶಾಸಕರಿಗೆ ಸಿಕ್ಕ ಮನ್ನಣೆ ಪಕ್ಷದ ಮುಖಂಡರು, ಕಾರ್ಯಕರ್ತರಿಗೆ ಸಿಗಲಿಲ್ಲ. ನಿಗಮ–ಮಂಡಳಿಗಳ ನೇಮಕದಲ್ಲೂ ಕಡೆಗಣಿಸಲಾಯಿತು. ವರಿಷ್ಠರು ಕಾರ್ಯಕರ್ತರಿಗೂ ಸಮಾನ ಆದ್ಯತೆ ನೀಡಲು ಸೂಚಿಸಿದರೂ, ಕಾಟಾಚಾರಕ್ಕೆ ಒಂದಷ್ಟು ನೇಮಕಾತಿ ಮಾಡಲಾಯಿತು. ಸರ್ಕಾರವು ಪಕ್ಷವನ್ನೇ ವಿಶ್ವಾಸಕ್ಕೇ ತೆಗೆದುಕೊಳ್ಳಿಲ್ಲ ಎಂದು ನೋವು ತೋಡಿಕೊಂಡಿದ್ದಾರೆ.

ಸಭೆಯ ನಂತರ ಸುದ್ದಿಗಾರರ ಜತೆ ಮಾತನಾಡಿದ ಕೆಪಿಸಿಸಿ ಕಾರ್ಯಾಧ್ಯಕ್ಷ ವಿನಯ್ ಕುಲಕರ್ಣಿ, 'ಗ್ಯಾರಂಟಿ ಯೋಜನೆಗಳ ಯಶಸ್ವಿ ಅನುಷ್ಠಾನದ ಫಲವಾಗಿ ಕಾಂಗ್ರೆಸ್ ಅಭ್ಯರ್ಥಿಗಳು ಗೆದ್ದೆಗೆಲ್ಲುತ್ತಾರೆ ಎಂಬ ವಿಶ್ವಾಸವಿತ್ತು. ಆದರೆ, ನಿರೀಕ್ಷಿತ ಪ್ರಮಾಣದಲ್ಲಿ ಫಲ ಸಿಗಲಿಲ್ಲ. ಹಲವು ಸಚಿವರು, ಶಾಸಕರ ಕ್ಷೇತ್ರಗಳಲ್ಲೂ ಹಿನ್ನಡೆಯಾಗಿದೆ' ಎಂದರು.

'ಧಾರವಾಡ ಲೋಕಸಭಾ ಚುನಾವಣೆಗೆ ಹಿಂದೆ ನಾನೂ ಸ್ಪರ್ಧಿಸಿದ್ದೆ. ಈ ಬಾರಿ ಹೊಸ ಅಭ್ಯರ್ಥಿ ಕಣಕ್ಕೆ ಇಳಿಸಲಾಗಿತ್ತು. ಸಾಕಷ್ಟು ಪ್ರಯತ್ನಪಟ್ಟರೂ ಗೆಲುವು ಪಡೆಯಲು ಆಗಲಿಲ್ಲ. ಹಾಗಂತ ಜಿಲ್ಲೆಯಲ್ಲಿ ಯಾರೂ ಹೊಂದಾಣಿಕೆ ರಾಜಕೀಯ ಮಾಡಿಲ್ಲ. ನೇಹಾ ಕೊಲೆ ಪ್ರಕರಣವನ್ನು ಬಿಜೆಪಿ ರಾಜಕೀಯಕ್ಕೆ ಬಳಸಿಕೊಂಡಿತು. ಅವರ ತಂದೆ ಕಾಂಗ್ರೆಸ್ ಮುಖಂಡರಾದರೂ, ಅವರನ್ನೂ ದಾರಿ ತಪ್ಪಿಸಿದರು' ಎಂದು ಬೇಸರ ತೋಡಿಕೊಂಡರು.

ಹೊಂದಾಣಿಕೆ ರಾಜಕೀಯ ನಡೆದಿಲ್ಲ: ಶಿವಕುಮಾರ್

ಲೋಕಸಭಾ ಚುನಾವಣೆಯಲ್ಲಿ ಹೊಂದಾಣಿಕೆ ರಾಜಕೀಯ ನಡೆದಿಲ್ಲ. ಎಲ್ಲ ಕ್ಷೇತ್ರಗಳಲ್ಲೂ ಪಕ್ಷದ ಮುಖಂಡರು, ಕಾರ್ಯಕರ್ತರು ಒಟ್ಟಾಗಿ ದುಡಿದಿದ್ದಾರೆ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಹೇಳಿದರು.

ಸುದ್ದಿಗಾರರ ಜೊತೆ ಶುಕ್ರವಾರ ಮಾತನಾಡಿದ ಅವರು, 'ಚುನಾವಣೆಯ ಸಮಯದಲ್ಲಿ ತಳಮಟ್ಟದ ಪರಿಸ್ಥಿತಿಯನ್ನು ಸರಿಯಾಗಿ ಗ್ರಹಿಸಲು ಆಗಲಿಲ್ಲ. ಎಲ್ಲ ನಾಯಕರು, ಕಾರ್ಯಕರ್ತರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಒಗ್ಗಟ್ಟಾಗಿ ಕೆಲಸ ಮಾಡಬೇಕು ಎನ್ನುವ ಕಾರಣಕ್ಕಾಗಿಯೇ ಕೆಲ ಸಚಿವರ ಕುಟುಂಬದ ಸದಸ್ಯರಿಗೆ ಟಿಕೆಟ್ ನೀಡಿದೆವು. ಈ ತಂತ್ರ ಒಂದಷ್ಟು ಫಲ ಕೊಟ್ಟಿದೆ. ಒಂದಷ್ಟು ಅಭ್ಯರ್ಥಿಗಳು ಸೋತಿರಬಹುದು. ಆದರೆ, ಅವರು ಮುಂದೆ ಪಕ್ಷಕ್ಕೆ ದೊಡ್ಡ ಆಸ್ತಿಯಾಗುವರು' ಎಂದು ವಿಶ್ವಾಸ ವ್ಯಕ್ತಪಡಿಸಿದರು.

'ಗೆದ್ದ ಅಭ್ಯರ್ಥಿಗಳು, ಸೋತವರು, ಮುಖಂಡರು, ಕಾರ್ಯಕರ್ತರು ಎಐಸಿಸಿ ಸತ್ಯಶೋಧನಾ ಸಮಿತಿ ಮುಂದೆ ತಮ್ಮ ಅಭಿಪ್ರಾಯ ಮಂಡಿಸಿದ್ದಾರೆ. ಎಲ್ಲರ ಅಹವಾಲು ಪರಿಗಣಿಸಿ, ಪಕ್ಷವನ್ನು ಮತ್ತಷ್ಟು ಬಲಪಡಿಸಲು ಯೋಜನೆ ರೂಪಿಸುತ್ತೇವೆ' ಎಂದು ಹೇಳಿದರು.

ಐಡಿಬಿಐ ಬ್ಯಾಂಕ್ ಅಧಿಕಾರಿಗಳ ವಿರುದ್ಧ ದೂರು

ಪ್ರವಾಸೋದ್ಯಮ ಇಲಾಖೆ: ಬ್ಯಾಂಕ್ ಖಾತೆಯಲ್ಲಿದ್ದ ₹2.43 ಕೋಟಿ ನಾಪತ್ತೆ

• ಬಸವರಾಜ ಹವಾಲ್ದಾರ

ಬಾಗಲಕೋಟೆ: ನಗರದ ಐಡಿಬಿಐ ಬ್ಯಾಂಕ್‌ನಲ್ಲಿ ಪ್ರವಾಸೋದ್ಯಮ ಇಲಾಖೆಗೆ ಸೇರಿದ ಮೂರು ಖಾತೆಗಳಲ್ಲಿದ್ದ ₹2.43 ಕೋಟಿ ಹಣವನ್ನು ಇಲಾಖೆಯ ಅಧಿಕಾರಿಗಳ ಗಮನಕ್ಕೆ ಬಾರದೇ ತೆಗೆಯಲಾಗಿದೆ.

'2021ರಿಂದ 2024ರವರೆಗೆ ಮೂರು ಖಾತೆಗಳಲ್ಲಿದ್ದ ಹಣವನ್ನು ಹಲವು ಬಾರಿ ಬ್ಯಾಂಕ್ ಅಧಿಕಾರಿಗಳು ಇಲಾಖೆಯ ಅಧಿಕಾರಿಗಳ ಗಮನಕ್ಕೆ ತಾರದೇ ಪಡೆದಿದ್ದಾರೆ (ವಿತ್‌ಡ್ರಾ)' ಎಂದು ಪ್ರವಾಸೋದ್ಯಮ ಇಲಾಖೆಯ ಪ್ರಭಾರ ಉಪನಿರ್ದೇಶಕ ಗೋಪಾಲ ಹಿತ್ತಲಮನಿ ಅವರು ಬಾಗಲಕೋಟೆಯ ಸಿಇಎನ್ ಠಾಣೆಗೆ ದೂರು ನೀಡಿದ್ದಾರೆ.

ಜಿಲ್ಲಾ ಪ್ರವಾಸೋದ್ಯಮ ಅಭಿವೃದ್ಧಿ ಸಮಿತಿ ಹೆಸರಿನಲ್ಲಿ ಐಡಿಬಿಐ ಬ್ಯಾಂಕ್‌ನಲ್ಲಿ ಮೂರು ಖಾತೆಗಳಿವೆ. ಒಂದು ಖಾತೆಯಲ್ಲಿ ₹1.01 ಕೋಟಿ, ಎರಡನೇ ಖಾತೆಯಲ್ಲಿ ₹1.35 ಕೋಟಿ ಮತ್ತು ಮೂರನೇ ಖಾತೆಯಲ್ಲಿ ₹10.43 ಲಕ್ಷ ಹಣವಿತ್ತು. ಆದರೆ, ಈಗ ಈ ಖಾತೆಗಳಲ್ಲಿ ₹2,915 ಮಾತ್ರ ಉಳಿದಿದೆ.

'ಮೂರು ವರ್ಷಗಳಲ್ಲಿ ಎರಡು ಖಾತೆಗಳಿಂದ 20ಕ್ಕೂ ಹೆಚ್ಚು ಸಲ ಬೇರೆ, ಬೇರೆ ಖಾತೆಗಳಿಗೆ ಹಣ ವರ್ಗಾವಣೆ ಆಗಿದೆ. ಇನ್ನೊಂದು ಖಾತೆಯಿಂದ ಒಂದೇ ಬಾರಿ ಹಣ ವರ್ಗಾವಣೆ ಮಾಡಲಾಗಿದೆ. ಕೆಲ ಬಾರಿ ಪ್ರವಾಸೋದ್ಯಮ ಇಲಾಖೆ ಖಾತೆಯಿಂದ ಹಣ ತೆಗೆದು, ನಂತರದಲ್ಲಿ ಜಮಾ ಕೂಡ ಮಾಡಲಾಗಿದೆ. ಆದರೆ, ಹಣ ತೆಗೆದಿದ್ದು ಮತ್ತು ಜಮಾ ಮಾಡಿದ್ದು ಯಾರು ಎಂಬುದು ನಿಗೂಢ' ಎಂದು ಪ್ರವಾಸೋದ್ಯಮ ಇಲಾಖೆ ಅಧಿಕಾರಿಗಳು ಹೇಳುತ್ತಾರೆ.

ಪ್ರಕರಣ ಬೆಳಕಿಗೆ ಬಂದದ್ದು ಹೇಗೆ: ಜುಲೈ 2ರಂದು ಇಲಾಖೆಯ ಖಾತೆಯೊಂದರ ಬ್ಯಾಂಕ್ ಸ್ಟೇಟ್‌ಮೆಂಟ್ ಪಡೆದುಕೊಳ್ಳಲಾಗಿತ್ತು. ಅದರಲ್ಲಿ ₹1.63 ಕೋಟಿ ಇದೆ ಎಂದು ನೀಡಲಾಗಿತ್ತು. ಇಲಾಖೆಗೆ ಬಂದು ನೀಡಿರುವ ಚೆಕ್‌ಗಳನ್ನು ಪರಿಶೀಲಿಸಿದಾಗ ಹಣದಲ್ಲಿ ವ್ಯತ್ಯಾಸವಿರುವುದು ಗಮನಕ್ಕೆ ಬಂದಿದೆ. ಮರುದಿನ ಬ್ಯಾಂಕಿಗೆ ಹೋಗಿ ಕ್ಲರ್ಕ್ ಬಳಿ ಸ್ಟೇಟ್‌ಮೆಂಟ್ ತೆಗೆಸಿದಾಗ ಆ ಖಾತೆಯಲ್ಲಿ ಕೇವಲ ₹2,915 ಇರುವುದು ಗೊತ್ತಾಗಿದೆ. ಈ ವ್ಯತ್ಯಾಸದಿಂದ ಅನುಮಾನ ಬಂದು ಪರಿಶೀಲಿಸಿದಾಗ ಪ್ರಕರಣ ಗೊತ್ತಾಗಿದೆ.

> ಪ್ರವಾಸೋದ್ಯಮ ಇಲಾಖೆಯಲ್ಲಿನ ಖಾತೆಗಳಲ್ಲಿನ ಹಣ ನಾಪತ್ತೆಯಾದ ಬಗ್ಗೆ ತನಿಖೆ ನಡೆದಿದೆ. ಬ್ಯಾಂಕ್ ದಾಖಲೆ ಪರಿಶೀಲಿಸಲಾಗುವುದು
>
> **ಅಮರನಾಥ ರೆಡ್ಡಿ,** ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ, ಬಾಗಲಕೋಟೆ

ಚಿನ್ನದ ಗಣಿಯಲ್ಲಿ ಭೂಕುಸಿತ: ಕಾರ್ಮಿಕ ಸಾವು

ಪ್ರಜಾವಾಣಿ ವಾರ್ತೆ

ಹಟ್ಟಿಚಿನ್ನದಗಣಿ (ರಾಯಚೂರು ಜಿಲ್ಲೆ): ಹಟ್ಟಿ ಚಿನ್ನದ ಗಣಿ ಕಂಪನಿಯ ಆವರಣದಲ್ಲೇ ಇರುವ ಮಲ್ಲಪ್ಪ ಶಾಫ್ಟ್‌ನ ಭೂಮಿಯ ಕೆಳಮೈ ವಿಭಾಗದಲ್ಲಿ ಶುಕ್ರವಾರ ಬೆಳಗಿನ ಜಾವ 3.30ಕ್ಕೆ ಭೂಕುಸಿತವಾಗಿ ಕಾರ್ಮಿಕ ಮೌನೇಶ (48) ಮೃತಪಟ್ಟಿದ್ದು, ಐವರು ಗಾಯಗೊಂಡಿದ್ದಾರೆ.

'₹50 ಲಕ್ಷ ಪರಿಹಾರ ಕೊಡ ಬೇಕು' ಎಂದು ಕಾರ್ಮಿಕರು ಪಟ್ಟು ಹಿಡಿದ್ದರು. ಗಣಿ ಕಂಪನಿ ನಿಗಮದ ಅಧ್ಯಕ್ಷ ಜೆ.ಟಿ. ಪಾಟೀಲ ಅವರು ಮೃತ ಕಾರ್ಮಿಕನ ಕುಟುಂಬದ ಜತೆ ಮಾತುಕತೆ ನಡೆಸಿ ₹5 ಲಕ್ಷ ಪರಿಹಾರ ನೀಡಲಾಗುವುದು ಎಂದರು. ಮೃತ ಕಾರ್ಮಿಕನ ಪುತ್ರ ಪುರುಷೋತ್ತಮ ಅವರಿಗೆ ಸ್ಥಳದಲ್ಲೇ ನೇಮಕಾತಿ ಆದೇಶ ಪತ್ರ ನೀಡಿದರು.

ಬಿಜೆಪಿ–ಜೆಡಿಎಸ್ ಜಂಟಿ ಹೋರಾಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇದೇ 15 ರಂದು ಆರಂಭವಾಗುವ ಅಧಿವೇಶನದಲ್ಲಿ ಬಿಜೆಪಿ–ಜೆಡಿಎಸ್ ಜಂಟಿಯಾಗಿ ರಾಜ್ಯ ಸರ್ಕಾರದ ವಿರುದ್ಧ ಹೋರಾಡಲು ತೀರ್ಮಾನಿಸಲಾಗಿದೆ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ ಮತ್ತು ಕೇಂದ್ರ ಭಾರಿ ಕೈಗಾರಿಕೆ ಉಕ್ಕು ಸಚಿವ ಎಚ್.ಡಿ.ಕುಮಾರಸ್ವಾಮಿ ತಿಳಿಸಿದರು.

ಬಿಜೆಪಿ– ಜೆಡಿಎಸ್ ನಾಯಕರ ಸಮನ್ವಯ ಸಮಿತಿ ಸಭೆಯ ಬಳಿಕ ಅವರು ಸುದ್ದಿಗಾರರ ಜತೆ ಮಾತನಾಡಿ, ಈವರೆಗೆ ಬಿಜೆಪಿ ಮತ್ತು ಜೆಡಿಎಸ್ ಪ್ರತ್ಯೇಕವಾಗಿ ಹೋರಾಟ ಮಾಡುತ್ತಿತ್ತು. ಇನ್ನು ಮುಂದೆ ಎನ್‌ಡಿಎ ಆಗಿ ಸದನದ ಒಳಗೆ, ಹೊರಗೆ ಹೋರಾಟ ನಡೆಸುತ್ತೇವೆ ಎಂದರು.

ಸರ್ಕಾರ ಪ್ರಮುಖ ಹಗರಣಗಳನ್ನು ತಾರ್ಕಿಕ ಅಂತ್ಯ ಮುಟ್ಟಿಸುವವರೆಗೆ ಹೋರಾಟ ಮುಂದುವರೆಸುತ್ತೇವೆ. ಸಿದ್ದರಾಮಯ್ಯ ನೇತೃತ್ವದ ಸರ್ಕಾರ ಸಂಪೂರ್ಣ ಭ್ರಷ್ಟಾಚಾರದಲ್ಲಿ ಮುಳುಗಿದೆ. ಜನ ಛೀಮಾರಿ ಹಾಕುತ್ತಿದ್ದಾರೆ. ದಲಿತರ ಹಣ, ದಲಿತರ ಭೂಮಿಯನ್ನು ಈ ಸರ್ಕಾರ ಲೂಟಿ ಮಾಡುತ್ತಿದೆ. ಸರ್ಕಾರವನ್ನು ಮನೆಗೆ ಕಳುಹಿಸುವರೆಗೆ ಎನ್‌ಡಿಎ ವಿರಮಿಸುವುದಿಲ್ಲ ಎಂದು ಅಶೋಕ ಹೇಳಿದರು.

ಕೇಂದ್ರದ ಭಾರೀ ಕೈಗಾರಿಕೆ ಮತ್ತು ಉಕ್ಕು ಖಾತೆ ಸಚಿವ ಎಚ್.ಡಿ.ಕುಮಾರಸ್ವಾಮಿ ಮಾತನಾಡಿ, ಕಾಂಗ್ರೆಸ್ ಅಧಿಕಾರಕ್ಕೆ ಬಂದ ಮೇಲೆ ಅಭಿವೃದ್ಧಿ ವಿಷಯದಲ್ಲಿ ರಾಜ್ಯ 10 ವರ್ಷಗಳಷ್ಟು ಹಿಂದಕ್ಕೆ ಹೋಗಿದೆ ಎಂದು ವಾಗ್ದಾಳಿ ನಡೆಸಿದರು. ಈ ಸರ್ಕಾರ ಆರಂಭದಿಂದಲೂ ಹಗರಣಗಳಲ್ಲಿಯೇ ಮುಳುಗಿದೆ. ಮುಡಾ ಹಗರಣ, ವಾಲ್ಮೀಕಿ ನಿಗಮದ ಹಗರಣ, ವರ್ಗಾವಣೆ ದಂಧೆ, ಪರಿಶಿಷ್ಟ ಜಾತಿ ವರ್ಗ ಹಣ ದುರ್ಬಳಕೆ, ರೈತರ ಆತ್ಮಹತ್ಯೆ ಪ್ರಕರಣಗಳು ಸೇರಿದಂತೆ ಅನೇಕ ವಿಷಯಗಳ ಬಗ್ಗೆ ಆರ್.ಅಶೋಕ ನೇತೃತ್ವದಲ್ಲಿ ಸದನದಲ್ಲಿ ಹೋರಾಟ ನಡೆಯಲಿದೆ ಎಂದರು.

'ರೀಡೂ ಲೆಕ್ಕದಲ್ಲೇ ₹62 ಕೋಟಿ ಕೇಳಿದ್ದಾರೆ'

'ಮುಡಾ ಪ್ರಕರಣದಲ್ಲಿ ಮುಖ್ಯಮಂತ್ರಿಯಿಂದಲೇ ಕಾನೂನು ಬಾಹಿರ ಚಟುವಟಿಕೆ ನಡೆದಿದೆ. ₹62 ಕೋಟಿ ಪರಿಹಾರ ಯಾವ ಆಧಾರದಲ್ಲಿ ಅವರು ಕೇಳಿದರು' ಎಂದು ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಪ್ರಶ್ನಿಸಿದರು.

'ಎಷ್ಟು ಜನ ಭೂಮಿ ಕಳೆದುಕೊಂಡವರಿಗೆ ಇವರು ಯಾವ ರೀತಿಯಲ್ಲಿ ಪರಿಹಾರ ಕೊಟ್ಟಿದ್ದಾರೆ. ಅರ್ಕಾವತಿ ರೀಡೂ ಹಗರಣ ಮಾಡಿದ್ದರಲ್ಲ, ಅಲ್ಲಿ ₹300 ರಿಂದ ₹400 ಕೋಟಿ ಕೋಟಿ ನಡೆದಿತ್ತಲ್ಲ. ಆ ಲೆಕ್ಕಾಚಾರದಲ್ಲಿ ₹62 ಕೋಟಿ ಕೇಳಿರಬೇಕು ಎನ್ನುವುದು ನನ್ನ ಅಭಿಪ್ರಾಯ' ಎಂದರು.

ನಿಧನ ವಾರ್ತೆ

ಆಲ್ಫೋನ್ಸ್ ಮಾಥಾಯಿಸ್

ಬೆಂಗಳೂರು: ನಿವೃತ್ತ ಆರ್ಚ್‌ಬಿಷಪ್ ಆಲ್ಫೋನ್ಸ್ ಮಥಾಯ್ಸ್ (96) ಅವರು ನಗರದಲ್ಲಿ ಜುಲೈ 10ರಂದು ನಿಧನರಾದರು.

1964ರಲ್ಲಿ ಚಿಕ್ಕಮಗಳೂರಿನಲ್ಲಿ ಮೊದಲ ಬಿಷಪ್ ಆಗಿದ್ದ ಆಲ್ಫೋನ್ಸ್ ಅವರು, 1986ರಲ್ಲಿ 'ಬೆಂಗಳೂರಿನ ಆರ್ಚ್‌ಬಿಷಪ್' ಆಗಿ ಸೇವೆ ಸಲ್ಲಿಸಿದ್ದರು.

ಸೇಂಟ್ ಫ್ರಾನ್ಸಿಸ್ ಕ್ಸೇವಿಯರ್ ಕೆಥೆಡ್ರಲ್‌ನಲ್ಲಿ (ಕ್ವೀವ್‌ಲ್ಯಾಂಡ್ ಟೌನ್) ಮಥಾಯಿಸ್ ಅವರ ಪಾರ್ಥಿವ ಶರೀರವನ್ನು ಜುಲೈ 15ರವರೆಗೆ ಸಾರ್ವಜನಿಕರ ದರ್ಶನಕ್ಕೆ ಇಡಲಾಗಿದೆ. ಸೋಮವಾರ 10.30ರ ನಂತರ ಅಂತಿಮ ವಿಧಿವಿಧಾನ ನಡೆಯಲಿವೆ.

ನಗರದಲ್ಲಿ ಇಂದು

ಉತ್ಥಾನ ಪ್ರಬಂಧ ಸ್ಪರ್ಧೆ ಬಹುಮಾನ ವಿತರಣಾ ಸಮಾರಂಭ: ಉಪಸ್ಥಿತಿ: ಇ. ಭಾಸ್ಕರನ್, ಗಿರೀಶ್ ದೊಡ್ಡಮನಿ, ಚಂದ್ರಶೇಖರ ಜಾಗೀರದಾರ್, ದಿನೇಶ್ ಹೆಗ್ಡೆ, ಆಯೋಜನೆ: ಉತ್ಥಾನ, ಸ್ಥಳ: ಕೇಶವ ಶಿಲ್ಪ, ರಾಷ್ಟ್ರೋತ್ಥಾನ ಪರಿಷತ್, ಕೆಂಪೇಗೌಡ ನಗರ, ಬೆಳಿಗ್ಗೆ 9

ಉಪನ್ಯಾಸ–ಪ್ರವಚನ–ಭರತನಾಟ್ಯ: 'ಮನುಷ್ಯ ಸ್ವಭಾವ ಮತ್ತು ದೇಹ ಭಾಷೆ' ವಿಷಯದ ಬಗ್ಗೆ ಉಪನ್ಯಾಸ: ಧೀರೇಂದ್ರ ನಾಗರಹಳ್ಳಿ, 'ಸ್ವ–ಧ್ಯಾನ' ವಿಷಯದ ಬಗ್ಗೆ ಪ್ರವಚನ: ಬಿ. ಶ್ರೀನಿವಾಸನ್, ಭರತನಾಟ್ಯ: ಸಂಧ್ಯಾ ಶ್ರೀನಿವಾಸನ್, ಮನೋಜ್ಞಾ ಘನಲಿಂಗ, ಆಯೋಜನೆ ಹಾಗೂ ಸ್ಥಳ: ಕ.ವಿ.ಪ್ರ.ನಿ.ನಿ. ಲೆಕ್ಕಾಧಿಕಾರಿಗಳ ಸಂಘ, ಆನಂದರಾವ್ ವೃತ್ತ, ಬೆಳಿಗ್ಗೆ 10

ನೀಟ್ ಪರೀಕ್ಷೆಯಲ್ಲಿ ನಡೆದ ಮಹಾ ವಂಚನೆ ವಿರುದ್ಧ ಸಮಾವೇಶ: ಅತಿಥಿಗಳು: ಪ್ರೊ.ರವಿವರ್ಮ ಕುಮಾರ್, ಪ್ರೊ. ಜವಾಹರ್ ನೇಸನ್, ಎನ್. ಪ್ರಭುದೇವ್, ಅಬ್ದುಲ್ ಸುಭಾನ್, ಪ್ರೊ.ಎ.ಮುರಿಗೆಪ್ಪ, ಪ್ರೊ. ಅಲ್ಲಮಪ್ರಭು ಬೆಟ್ಟದೂರು, ಡಾ. ಆಶಾ ಬೆನಕಪ್ಪ, ಆರ್.ಎಲ್. ಮೌರ್ಯನ್, ಡಾ.ವೈ.ಸಿ. ಯೋಗಾನಂದ ರೆಡ್ಡಿ, ವಿ.ಎನ್. ರಾಜಶೇಖರ್, ಎಸ್.ಜಿ. ಮಹೇಶ್, ಆಯೋಜನೆ: ಅಖಿಲ ಭಾರತ ಶಿಕ್ಷಣ ಉಳಿಸಿ ಸಮಿತಿ, ಸ್ಥಳ: ಕೊಂಡಜ್ಜಿ ಬಸಪ್ಪ ಸಭಾಂಗಣ, ಅರಮನೆ ರಸ್ತೆ, ಬೆಳಿಗ್ಗೆ 10.30

ಸಂವಿಧಾನ ಓದು–ಭಾಷಣ ತರಬೇತಿ ಶಿಬಿರ: ಉದ್ಘಾಟನೆ: ನ್ಯಾ.ಎಚ್.ಎನ್. ನಾಗಮೋಹನದಾಸ್, ಉಪಸ್ಥಿತಿ: ರಾಜಪ್ಪ ದಳವಾಯಿ, ಎಂ.ಎಸ್. ಆಶಾದೇವಿ, ಎಚ್.ಎಲ್. ಪುಷ್ಪ, ಎನ್.ಆರ್. ವಿಶುಕುಮಾರ್, ಶಿವಪ್ಪ ಅರಿವು, ಶ್ರೀಪಾದ್ ಭಟ್, ಆಂಜನೇಯ ರೆಡ್ಡಿ, ಕೆ.ಆರ್. ವೆಂಕಟೇಶ್ ಗೌಡ, ಗೋವಿಂದಪ್ಪ, ಕೆ. ಷರೀಫಾ, ಆಯೋಜನೆ: ಸಂವಿಧಾನ ಓದು ಅಭಿಯಾನ–ಕರ್ನಾಟಕ, ಸ್ಥಳ: ಆಶೀರ್ವಾದ, ಸೇಂಟ್ ಮಾರ್ಕ್ಸ್ ರಸ್ತೆ, ಬೆಳಿಗ್ಗೆ 10.30

ನಾಗಮೋಹನ ದಾಸ್

ಮಣಿ ಕೃಷ್ಣಸ್ವಾಮಿ ಸ್ಮರಣಾರ್ಥ ಕರ್ನಾಟಕ ಶಾಸ್ತ್ರೀಯ ಸಂಗೀತ ಕಛೇರಿ: ಗಾಯನ: ಆರ್.ಎ. ರಮಾಮಣಿ, ವಾದ್ಯ ಸಹಕಾರ: ವೈಭವ ರಮಣಿ, ಅರ್ಜುನ್ ಕುಮಾರ್, ಜಿ. ಓಂಕಾರ್, ಆಯೋಜನೆ: ಪೂರ್ವಿ ಸಂಗೀತ ಅಕಾಡೆಮಿ, ಸುನಾದ ಭಾರತಿ, ಸ್ಥಳ: ಸೇವಾಸದನ, ಮಲ್ಲೇಶ್ವರ, ಬೆಳಿಗ್ಗೆ 10.30

ಪ್ರಸನ್ನ ಕುಮಾರ್ ನಿರ್ದೇಶನದ 'ಅನಿರೀಕ್ಷಿತ' ಕಿರುಚಿತ್ರ ಬಿಡುಗಡೆ: ಮುಖ್ಯ ಅತಿಥಿ: ಪಿ. ಶೇಷಾದ್ರಿ, ಅಧ್ಯಕ್ಷತೆ: ಸತ್ಯಮೂರ್ತಿ, ಆಯೋಜನೆ: ಅಮೆಚೂರ್ ಕಲ್ಚರಲ್ ಅಕಾಡೆಮಿ, ಸ್ಥಳ: ಜೆ.ಪಿ.ನಗರ ಕ್ಲಬ್, ಜೆ.ಪಿ.ನಗರ, ಬೆಳಿಗ್ಗೆ 11

ಗೊರೂರು ಸಂಸ್ಮರಣೆ ಹಾಗೂ ಮಹಾತ್ಮ ಗಾಂಧಿ ವ್ಯಕ್ತಿ ವಿಚಾರಗಳ ಪ್ರಸ್ತುತತೆ: ಉದ್ಘಾಟನೆ: ಅಶೋಕ್ ಹಾರನಹಳ್ಳಿ, ಅಧ್ಯಕ್ಷತೆ: ವೂಡೇ ಪಿ. ಕೃಷ್ಣ, ದತ್ತಿ ಉಪನ್ಯಾಸ: ಎಚ್.ಎನ್. ಮುರಳೀಧರ್, ಮುಖ್ಯ ಅತಿಥಿಗಳು: ಮಹೇಶ ಜೋಶಿ, ವಾಸಂತಿ ಲಕ್ಷ್ಮೀಮೂರ್ತಿ ಗೊರೂರು, ಸುಂದರೇಶ್ ಡಿ. ಉಡುವರೆ, ಆಯೋಜನೆ: ಕರ್ನಾಟಕ ಗಾಂಧೀ ಸ್ಮಾರಕ ನಿಧಿ, ಸ್ಥಳ: ಮಹದೇವದೇಸಾಯಿ ಸಭಾಂಗಣ, 2ನೇ ಮಹಡಿ, ಗಾಂಧಿ ಭವನ, ಬೆಳಿಗ್ಗೆ 11

'ಅಭಿವ್ಯಕ್ತಿ' ಉದ್ಘಾಟನಾ ಸಮಾರಂಭ: ಉದ್ಘಾಟನಾ ಭಾಷಣ: ವಿವೇಕ್ ಶಾನಭಾಗ್, ಅಧ್ಯಕ್ಷೀಯ ಭಾಷಣ: ಮಾಧವ್ ಕೌಶಿಕ್, ಪ್ರಾಸ್ತಾವಿಕ ನುಡಿ: ಮನು ಬಳಿಗಾರ್, ಕವಿಗೋಷ್ಠಿ ಅಧ್ಯಕ್ಷತೆ: ಎಚ್.ಎಸ್. ಶಿವಪ್ರಕಾಶ್, ಆಯೋಜನೆ ಹಾಗೂ ಸ್ಥಳ: ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಾದೇಶಿಕ ಕಚೇರಿ, ಕಲಾ ಗ್ರಾಮದ ಎದುರು, ಹಳೆ ಹೊರವರ್ತುಲ ರಸ್ತೆ, ಜ್ಞಾನಜ್ಯೋತಿ ನಗರ, ಮಧ್ಯಾಹ್ನ 2

ಬೀರಪ್ಪ 85 ಅಭಿನಂದನೆ ಮತ್ತು 'ಸರಿಕೆ' ಗ್ರಂಥ ಬಿಡುಗಡೆ: ಸಿದ್ದರಾಮಯ್ಯ, ಸಾನ್ನಿಧ್ಯ: ಸಿದ್ಧರಾಮಾನಂದ ಸ್ವಾಮೀಜಿ, ಕಿರುಚಿತ್ರ ಬಿಡುಗಡೆ: ರಾಮಲಿಂಗಾರೆಡ್ಡಿ, ಮುಖ್ಯ ಅತಿಥಿ: ಬೈರತಿ ಸುರೇಶ್, ಅಧ್ಯಕ್ಷತೆ: ಎಚ್.ಎಂ. ರೇವಣ್ಣ, ಕೃತಿ ಬಗ್ಗೆ ಮಾತು: ಓಂಕಾರ ಕಾಕಡೆ, ಗೌರವ ಸಮರ್ಪಣೆ: ಬೀರಪ್ಪ, ಆಯೋಜನೆ: ಬೀರಪ್ಪ 85 ಅಭಿನಂದನಾ ಸಮಿತಿ, ಸ್ಥಳ: ಡಿ.ದೇವರಾಜ ಅರಸು ಭವನ, ವಸಂತನಗರ, ಮಧ್ಯಾಹ್ನ 3

ಪದಗ್ರಹಣ, ಕಾರ್ಯಚಟುವಟಿಕೆಗಳ ಉದ್ಘಾಟನೆ, ಪ್ರತಿಭಾ ಪುರಸ್ಕಾರ, ಗೌರವ ಸಮರ್ಪಣೆ ಸಮಾರಂಭ: ಸಾನ್ನಿಧ್ಯ: ನಿರ್ಮಲಾನಂದನಾಥ ಸ್ವಾಮೀಜಿ, ಉದ್ಘಾಟನೆ: ಮಹೇಶ ಜೋಶಿ, ಅಧ್ಯಕ್ಷತೆ: ಎಂ. ಕೃಷ್ಣಪ್ಪ, ಪ್ರತಿಭಾ ಪುರಸ್ಕಾರ: ಪ್ರಿಯಾಕೃಷ್ಣ, ಸದಸ್ಯತ್ವ ಅಭಿಯಾನಕ್ಕೆ ಚಾಲನೆ: ಜಿ.ಎಸ್. ಸಿದ್ದಲಿಂಗಯ್ಯ, ಪುಸ್ತಕ ಮಳಿಗೆ ಉದ್ಘಾಟನೆ: ಮಾನಸ, ಆಯೋಜನೆ: ಕನ್ನಡ ಸಾಹಿತ್ಯ ಪರಿಷತ್ತಿನ ವಿಜಯನಗರ ವಿಧಾನಸಭೆ ಕ್ಷೇತ್ರ ಘಟಕ, ಸ್ಥಳ: ಆದಿಚುಂಚನಗಿರಿ ಸಮುದಾಯ ಭವನ. ವಿಜಯನಗರ, ಸಂಜೆ 4

ಪದಗ್ರಹಣ, ಕಾರ್ಯಚಟುವಟಿಕೆಗಳ ಉದ್ಘಾಟನೆ, ಪ್ರತಿಭಾ ಪುರಸ್ಕಾರ, ಗೌರವ ಸಮರ್ಪಣೆ ಸಮಾರಂಭ: ಸಾನ್ನಿಧ್ಯ: ನಿರ್ಮಲಾ ನಂದನಾಥ ಸ್ವಾಮೀಜಿ, ಉದ್ಘಾಟನೆ: ಮಹೇಶ ಜೋಶಿ, ಅಧ್ಯಕ್ಷತೆ: ಎಂ. ಕೃಷ್ಣಪ್ಪ, ಪ್ರತಿಭಾ ಪುರಸ್ಕಾರ: ಪ್ರಿಯಾಕೃಷ್ಣ, ಸದಸ್ಯತ್ವ ಅಭಿಯಾನಕ್ಕೆ ಚಾಲನೆ: ಜಿ.ಎಸ್. ಸಿದ್ದಲಿಂಗಯ್ಯ, ಪುಸ್ತಕ ಮಳಿಗೆ ಉದ್ಘಾಟನೆ: ಮಾನಸ, ಆಯೋಜನೆ: ಕನ್ನಡ ಸಾಹಿತ್ಯ ಪರಿಷತ್ತಿನ ವಿಜಯನಗರ ವಿಧಾನಸಭೆ ಕ್ಷೇತ್ರ ಘಟಕ, ಸ್ಥಳ: ಆದಿಚುಂಚನಗಿರಿ ಸಮುದಾಯ ಭವನ. ವಿಜಯನಗರ, ಸಂಜೆ 4

ನಿರ್ಮಲಾನಂದನಾಥ ಸ್ವಾಮೀಜಿ

ದತ್ತಿ ಉಪನ್ಯಾಸ: 'ಕನ್ನಡ ಸಾಹಿತ್ಯಕ್ಕೆ ಸಮೇತನಹಳ್ಳಿ ರಾಮರಾಯರ ಕೊಡುಗೆ' ವಿಷಯದ ಬಗ್ಗೆ, ಉಪನ್ಯಾಸಕರು: ವತ್ಸಲಾ ಮೋಹನ್, ಅಧ್ಯಕ್ಷತೆ: ಬೈರಮಂಗಲ ರಾಮೇಗೌಡ, ಆಯೋಜನೆ: ಬಿ.ಎಂ.ಶ್ರೀ. ಪ್ರತಿಷ್ಠಾನ, ಸ್ಥಳ: ಎಂ.ವಿ.ಸೀ. ಸಭಾಂಗಣ, ಬಿ.ಎಂ. ಶ್ರೀ. ಕಲಾಭವನ, ಎನ್.ಆರ್. ಕಾಲೊನಿ, ಸಂಜೆ 5

'ತ್ರಿದಳ' ಕಲಾ ಪ್ರದರ್ಶನ ಉದ್ಘಾಟನೆ: ದಿನೇಶ್ ಗುಂಡೂರಾವ್, ಮುಖ್ಯ ಅತಿಥಿಗಳು: ಪ.ಸ. ಕುಮಾರ್, ನಳಿನಿ ಮಾಳವೀಯ, ಅಧ್ಯಕ್ಷತೆ: ಬಿ.ಎಲ್. ಶಂಕರ್, ಕಲಾವಿದರು: ಬಾಲು ಸದಲಗೆ, ಕರಿಯಪ್ಪ ಹಂಚಿನಮನಿ, ಅಶೋಕ್ ನೆಲ್ಲೇಗಿ, ಸ್ಥಳ: ಕರ್ನಾಟಕ ಚಿತ್ರಕಲಾ ಪರಿಷತ್ತು, ಕುಮಾರಕೃಪ ರಸ್ತೆ, ಸಂಜೆ 5

ಒಂದು ವರ್ಷದ ಸಂಭ್ರಮಾಚರಣೆ ಹಾಗೂ ವೈದ್ಯರ ದಿನಾಚರಣೆ: ಮುಖ್ಯ ಅತಿಥಿಗಳು: ದಿನೇಶ್ ಗುಂಡೂರಾವ್, ಡಾ.ಸಿ.ಎನ್. ಮಂಜುನಾಥ್, ಎಸ್. ಟಿ. ಸೋಮಶೇಖರ್, ಮುನಿರತ್ನ, ಆಯೋಜನೆ ಹಾಗೂ ಸ್ಥಳ: ಬೆಂಗಳೂರು ಹಾಸ್ಪಿಟಲ್ಸ್, ಕೆಂಗೇರಿ, ಸಂಜೆ 5.30

ಎಂದೂ ಮರೆಯದ ಹಾಡುಗಳ ಗಾಯನ, ಕಲಾವಿದರು ಹಾಗೂ ಕಲಾ ಪೋಷಕರಿಗೆ ಅಭಿನಂದನಾ ಸಮಾರಂಭ: ಉದ್ಘಾಟನೆ: ಮದನ್ ಪಟೇಲ್, ಅಧ್ಯಕ್ಷತೆ: ರಾಮ್‌ಸಿಂಗ್, ಮುಖ್ಯ ಅತಿಥಿಗಳು: ಎಚ್. ಎನ್. ಗಂಗಾಧರ್, ಕುಮಾರಸ್ವಾಮಿ, ಶೋಭಾ ಪದ್ಮನಾಭ, ಆಯೋಜನೆ: ಸಂಸ್ಕೃತಿ ಸೌರಭ ಟ್ರಸ್ಟ್, ಸ್ಥಳ: ಗಾಂಧಿ ಸಾಹಿತ್ಯ ಸಂಘ, 8ನೇ ಅಡ್ಡರಸ್ತೆ, ಮಲ್ಲೇಶ್ವರ, ಸಂಜೆ 5.30

ದಿವ್ಯಶ್ರೀ ವಿಶ್ವನಾಥ್ ಭರತನಾಟ್ಯ ರಂಗಪ್ರವೇಶ: ಅತಿಥಿಗಳು: ಮೀನಾಕ್ಷಿ ಕೃಷ್ಣ ಬೈರೇಗೌಡ, ಕೃಷ್ಣ ಬೈರೇಗೌಡ, ರಾಜಶ್ರೀ ನಾಗರಾಜ್, ಎಂ. ನಾಗರಾಜ್ ಯಾದವ್, ಎಸ್. ನಂಜುಂಡ ರಾವ್, ಆಯೋಜನೆ: ಆರಾಧನಾ ನೃತ್ಯ ಶಾಲೆ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಸಂಜೆ 5.30

ಬೆಂಗಳೂರು ಕಿರುನಾಟಕೋತ್ಸವ: ಮುಖ್ಯ ಅತಿಥಿಗಳು: ಧರಣಿದೇವಿ ಮಾಲಗತ್ತಿ, ಕೆ.ವಿ. ನಾಗರಾಜಮೂರ್ತಿ, ರವೀಂದ್ರ ಭಟ್ಟ, ವೀರಕಪುತ್ರ ಶ್ರೀನಿವಾಸ, ಬನಶಂಕರಿ ವಿ. ಅಂಗಡಿ, ಆಯೋಜನೆ: ಪ್ರವರ ಥಿಯೇಟರ್, ಅಶ್ವಘೋಷ ಥಿಯೇಟರ್ ಟ್ರಸ್ಟ್, ಸ್ಥಳ: ಕೆಇಎ ಪ್ರಭಾತ್ ರಂಗಮಂದಿರ, ಬಸವೇಶ್ವರ ನಗರ, ಸಂಜೆ 5.45

ವೈದ್ಯರ ದಿನ ಹಾಗೂ ಪ್ರಶಸ್ತಿ ಪ್ರದಾನ ಸಮಾರಂಭ: ಮುಖ್ಯ ಅತಿಥಿ: ಡಾ.ಸಿ.ಎನ್. ಮಂಜುನಾಥ್, ಗೌರವ ಅತಿಥಿಗಳು: ಡಾ.ವೈ.ಸಿ. ಯೋಗಾನಂದರೆಡ್ಡಿ, ಡಾ. ಶ್ರೀನಿವಾಸ್ ಎಸ್., ಅಧ್ಯಕ್ಷತೆ: ಡಾ. ಮಧುಶಂಕರ್ ಎಲ್., ಆಯೋಜನೆ: ಭಾರತೀಯ ವೈದ್ಯಕೀಯ ಸಂಘದ (ಐಎಂಎ) ಬೆಂಗಳೂರು ಘಟಕ, ಸ್ಥಳ: ಲಾ ಮಾರ್ವೆಲ್ಲ ಹೋಟೆಲ್, ಸಂಜೆ 6

'ಬಾಯ್ ತುಂಬ ನಕ್ಬಿಡಿ' ಹಾಗೂ 'ಅನುಮಾನದ ಅವಾಂತರ' ನಾಟಕಗಳ ಪ್ರದರ್ಶನ: ಆಯೋಜನೆ: ಅಂತರಂಗ ಬಹಿರಂಗ, ಸ್ಥಳ: ಸೇವಾ ಸದನ, ಮಲ್ಲೇಶ್ವರ, ಸಂಜೆ 4.30 ಹಾಗೂ ಸಂಜೆ 7

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ
nagaradalli_indu@prajavani.co.in

ಬಸ್ ಡಿಕ್ಕಿಯಾಗಿ ಪಾದ ಕಳೆದುಕೊಂಡಿದ್ದ ಮಹಿಳೆಗೆ ಹೆಚ್ಚುವರಿ ಪರಿಹಾರ

'ಸುಪ್ರೀಂ'ನಲ್ಲಿ ಬಾಕಿ ಇದ್ದ ಪ್ರಕರಣ ಇತ್ಯರ್ಥ

• ಎಂ.ಎನ್.ಯೋಗೇಶ್

ಚಿತ್ರದುರ್ಗ: ಸುಪ್ರೀಂ ಕೋರ್ಟ್‌ನಲ್ಲಿ ವಿಚಾರಣಾ ಹಂತದಲ್ಲಿದ್ದ ಮೋಟಾರು ವಾಹನ ಅಪಘಾತ (ಎಂಎಸಿ) ಪ್ರಕರಣವೊಂದನ್ನು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದಿಂದ ನಡೆಸಲಾದ 'ವಿಶೇಷ ಲೋಕ ಅದಾಲತ್' ಮೂಲಕ ಶುಕ್ರವಾರ ಇತ್ಯರ್ಥಗೊಳಿಸಲಾಯಿತು.

2018ರಲ್ಲಿ ಕೆಎಸ್‌ಆರ್‌ಟಿಸಿ ಬಸ್ ಡಿಕ್ಕಿಯಾಗಿ ಎಡಗಾಲಿನ ಪಾದ ಕಳೆದುಕೊಂಡಿದ್ದ ಮಹಿಳೆಗೆ ಹೆಚ್ಚುವರಿ ಪರಿಹಾರ ನೀಡುವ ಮೂಲಕ ಪ್ರಕರಣಕ್ಕೆ ಅಂತ್ಯ ಹಾಡಲಾಯಿತು.

'ಸುಪ್ರೀಂ ಕೋರ್ಟ್‌ಗೆ 75 ವರ್ಷ ತುಂಬಿದ ಹಿನ್ನೆಲೆಯಲ್ಲಿ ದೇಶದಾದ್ಯಂತ 13 ಸಾವಿರ ಪ್ರಕರಣಗಳನ್ನು ಸಂಧಾನದ ಮೂಲಕ ಇತ್ಯರ್ಥಗೊಳಿಸುವಂತೆ ಸೂಚನೆ ನೀಡಲಾಗಿತ್ತು. ಅದರಂತೆ ಸುಪ್ರೀಂ ಕೋರ್ಟ್‌ನಲ್ಲಿ ಬಾಕಿ ಉಳಿದಿದ್ದ ಜಿಲ್ಲೆಯ ರಂಗಮ್ಮ ಮತ್ತು ಕೆಎಸ್‌ಆರ್‌ಟಿಸಿ ನಡುವಣ ಪ್ರಕರಣವನ್ನು ಇತ್ಯರ್ಥಗೊಳಿಸಿರುವುದು ಸಂತಸ ತಂದಿದೆ' ಎಂದು ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶ ರೋಣ ವಾಸುದೇವ ತಿಳಿಸಿದರು.

ಪ್ರಕರಣದ ವಿವರ: 2018ರಲ್ಲಿ ದಾವಣಗೆರೆ ಜಿಲ್ಲೆ, ಚನ್ನಗಿರಿ ತಾಲ್ಲೂಕು ಗರಗ ಗ್ರಾಮದ ರಂಗಮ್ಮ ಅವರು ಶಿವಮೊಗ್ಗದಲ್ಲಿ ರಸ್ತೆ ದಾಟುವಾಗ ಸಾರಿಗೆ ಸಂಸ್ಥೆಯ ಬಸ್‌ವೊಂದು ಡಿಕ್ಕಿ ಹೊಡೆದು ಅವರ ಕಾಲಿನ ಮೇಲೆ ಹರಿದಿತ್ತು. ಇದರಿಂದ ಎಡಗಾಲಿನ ಪಾದ ತುಂಡಾಗಿತ್ತು. ತವರು ಜಿಲ್ಲೆ, ಚಿತ್ರದುರ್ಗದ 1ನೇ ಹೆಚ್ಚುವರಿ ಸಿವಿಲ್ ನ್ಯಾಯಾಲಯದಲ್ಲಿ ಅವರು ಈ ಸಂಬಂಧ ದಾವೆ ಹೂಡಿದ್ದರು. ವಿಚಾರಣೆ ನಡೆಸಿದ್ದ ನ್ಯಾಯಾಧೀಶರು ಗಾಯಾಳುವಿಗೆ ₹2 ಲಕ್ಷ ಪರಿಹಾರ ನೀಡುವಂತೆ ಆದೇಶಿಸಿದ್ದರು.

ಹೆಚ್ಚು ಪರಿಹಾರಕ್ಕಾಗಿ ರಂಗಮ್ಮ 2019ರಲ್ಲಿ ಹೈಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿದ್ದರು. ಹೈಕೋರ್ಟ್, ಪರಿಹಾರ ಮೊತ್ತವನ್ನು ₹4.51 ಲಕ್ಷಕ್ಕೆ ಹೆಚ್ಚಿಸಿ ತೀರ್ಪು ನೀಡಿತ್ತು. 2022ರಲ್ಲಿ ಈ ತೀರ್ಪಿನ ವಿರುದ್ಧ ರಂಗಮ್ಮ ಸುಪ್ರೀಂ ಕೋರ್ಟ್‌ನಲ್ಲಿ ಮೇಲ್ಮನವಿ ಸಲ್ಲಿಸಿದ್ದರು. ವಿಚಾರಣೆ ಬಾಕಿ ಉಳಿದಿರುವ ಹಂತದಲ್ಲಿ ವಿಶೇಷ ಲೋಕ ಅದಾಲತ್ ನಡೆಸಲಾಗಿದ್ದು ವಾರದಿಂದ ನಡೆದ ಸಂಧಾನದಲ್ಲಿ ಕೆಎಸ್‌ಆರ್‌ಟಿಸಿ ಅಧಿಕಾರಿಗಳು ₹7.51 ಲಕ್ಷ ಪರಿಹಾರ ನೀಡಲು ಒಪ್ಪಿದರು. ರಂಗಮ್ಮ ಪರ ವಕೀಲರಾದ ಆರ್.ಕೃಷ್ಣ ಮತ್ತು ಜೆ.ಮಹಾಂತೇಶ್ ವಾದ ಮಂಡಿಸಿದ್ದರು.

'ಪ್ರಕರಣ ಇತ್ಯರ್ಥಗೊಳಿಸುವಂತೆ ಪಕ್ಷಗಾರರ ಮನವೊಲಿಸಲು ಯಶಸ್ವಿಯಾಗಿದ್ದೇವೆ' ಎಂದು ಹಿರಿಯ ಸಿವಿಲ್ ನ್ಯಾಯಾಧೀಶ ಎಂ.ವಿಜಯ್ ತಿಳಿಸಿದರು.

ಕಾಡಾನೆ ದಾಳಿ: ಅರಣ್ಯ ರಕ್ಷಕ ಸಾವು

ಆನೇಕಲ್: ಕಾಡಾನೆ ದಾಳಿಯಿಂದಾಗಿ ಅರಣ್ಯ ರಕ್ಷಕರೊಬ್ಬರು ಮೃತಪಟ್ಟಿರುವ ಘಟನೆ ಬನ್ನೇರುಘಟ್ಟ ಸಮೀಪದ ಹಕ್ಕಿಪಿಕ್ಕಿ ಕಾಲೊನಿ ಬಳಿ ಗುರುವಾರ ಮಧ್ಯರಾತ್ರಿ ನಡೆದಿದೆ.

ಮೃತರನ್ನು ಅರಣ್ಯ ರಕ್ಷಕ ಚಿಕ್ಕಮಾದಯ್ಯ ಎಂದು ಗುರುತಿಸಲಾಗಿದೆ. ಕಳೆದ 20 ವರ್ಷಗಳಿಂದ ಅರಣ್ಯ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದರು. ಗುರುವಾರ ರಾತ್ರಿ ಹಕ್ಕಿಪಿಕ್ಕಿ ಕಾಲೊನಿ ಸಮೀಪ ಕಾಡಾನೆಯೊಂದು ಕಾಣಿಸಿಕೊಂಡಿದ್ದು ಕಾಡಿಗಟ್ಟುವ ಸಂದರ್ಭದಲ್ಲಿ ಏಕಾಏಕಿ ದಾಳಿ ನಡೆಸಿದೆ. ದಾಳಿಯಿಂದಾಗಿ ಚಿಕ್ಕ ಮಾದಯ್ಯ ಸ್ಥಳದಲ್ಲೇ ಮೃತಪಟ್ಟಿದ್ದಾರೆ.

ಅರಣ್ಯ ಇಲಾಖೆ ಹಿರಿಯ ಅಧಿಕಾರಿಗಳು ಕುಟುಂಬದವರನ್ನು ಸಂತೈಸಿ ಮೃತ ದೇಹವನ್ನು ವಿಕ್ಟೋರಿಯಾ ಆಸ್ಪತ್ರೆಗೆ ಸ್ಥಳಾಂತರಿಸಿದರು. ಆಸ್ಪತ್ರೆಗೆ ಅರಣ್ಯ ಸಚಿವ ಈಶ್ವರ ಖಂಡ್ರೆ ಭೇಟಿ ನೀಡಿ, ಮೃತರ ಕುಟುಂಬಕ್ಕೆ ₹25ಲಕ್ಷ ಪರಿಹಾರ ನೀಡುವ ಭರವಸೆ ನೀಡಿದರು. ಜತೆಗೆ ಅರಣ್ಯ ಇಲಾಖೆಯಲ್ಲಿ ಕುಟುಂಬದ ಸದಸ್ಯರೊಬ್ಬರಿಗೆ ಕೆಲಸ ನೀಡುವುದಾಗಿ ಹೇಳಿದರು.

ಮಗಿ ಮನೆಯಲ್ಲಿ ₹23 ಲಕ್ಷ ಮೌಲ್ಯದ ಚಿನ್ನಾಭರಣ ಪತ್ತೆ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- ಬಸವರಾಜ ಮಗಿ ಅವರ ಪಾಳಾದ ಮನೆ ಮೇಲೆ ನಡೆದಿದ್ದ ದಾಳಿ
- 352 ಗ್ರಾಂ. ಚಿನ್ನ ಹಾಗೂ 4.87 ಕೆ.ಜಿ ಬೆಳ್ಳಿ ವಶ

ಕಲಬುರಗಿ: ಬಿಬಿಎಂಪಿ ಮಹದೇವಪುರ ವಿಭಾಗದ ಕಂದಾಯ ಅಧಿಕಾರಿ ಬಸವರಾಜ ಮಗಿ ಅವರ ತವರು ಗ್ರಾಮ ಪಾಳಾದ ಮನೆಯ ಅಲ್ಮೆರಾದಿಂದ ಲೋಕಾಯುಕ್ತ ಪೊಲೀಸರಿಗೆ ಶುಕ್ರವಾರ ₹23 ಲಕ್ಷ ಮೌಲ್ಯದ ಚಿನ್ನಾಭರಣ ಪತ್ತೆಯಾಗಿದೆ.

ಬಸವರಾಜ ಅವರಿಗೆ ಸಂಬಂಧಿಸಿದ ನಾಲ್ಕು ಕಡೆಗಳಲ್ಲಿ ಗುರುವಾರ ಏಕಕಾಲದಲ್ಲಿ ದಾಳಿ ನಡೆಸಲಾಗಿತ್ತು. ಅವುಗಳ ಪೈಕಿ ಎಂಬಿ ನಗರದ ನಿವಾಸದಲ್ಲಿ ಕ್ಯಾಸಿನೊ ಕಾಯಿನ್‌ಗಳು ಪತ್ತೆಯಾಗಿದ್ದವು. ಉಳಿದ ಕಡೆಗಳಲ್ಲಿ ಕೆಲ ದಾಖಲಾತಿಗಳು ಸಿಕ್ಕಿದ್ದವು.

ಪಾಳಾದ ಮನೆಯ ಅಲ್ಮೆರಾಕ್ಕೆ ಬೀಗ ಹಾಕಲಾಗಿತ್ತು. ಅದರ ಬೀಗ ತರುವಂತೆ ಬಸವರಾಜ ಅವರಿಗೆ ಲೋಕಾಯುಕ್ತ ಅಧಿಕಾರಿಗಳು ಸೂಚಿಸಿದ್ದರು. ಹೀಗಾಗಿ, ಬೆಂಗಳೂರಿನಲ್ಲಿದ್ದ ಬಸವರಾಜ ಅವರ ತಾಯಿ ಕೀ ತೆಗೆದುಕೊಂಡು ಶುಕ್ರವಾರ ಬೆಳಿಗ್ಗೆ ಪಾಳಾದ ಮನೆಗೆ ಬಂದರು. ಅಲ್ಮೆರಾದ ಕೀ ತೆರೆದು ನೋಡಿದಾಗ 352 ಗ್ರಾಂ. ಚಿನ್ನ (₹20.09 ಲಕ್ಷ) ಹಾಗೂ 4.87 ಕೆ.ಜಿ ಬೆಳ್ಳಿ (₹2.91 ಲಕ್ಷ) ಸೇರಿ ಒಟ್ಟು ₹23 ಲಕ್ಷ ಮೌಲ್ಯದ ಚಿನ್ನಾಭರಣ ಸಿಕ್ಕಿವೆ ಎಂದು ಮೂಲಗಳು ತಿಳಿಸಿವೆ.

ಗುರುವಾರ ಬೆಳಿಗ್ಗೆ ದಾಳಿ ಮಾಡಿದ ಅಧಿಕಾರಿಗಳು ತಪಾಸಣೆ ಮುಗಿಯುವವರೆಗೂ ಪಾಳಾದ ಮನೆಯಲ್ಲಿ ಉಳಿದುಕೊಂಡಿದ್ದರು. ಶುಕ್ರವಾರ ಸಂಜೆ 4 ಗಂಟೆವರೆಗೂ ಕಾರ್ಯಾಚರಣೆ ಮಾಡಿದ್ದಾರೆ.

ದಾಳಿಯ ತಂಡದಲ್ಲಿ ಲೋಕಾಯುಕ್ತ ಇನ್‌ಸ್ಪೆಕ್ಟರ್ ಹಣಮಂತ ಸಣ್ಣಮನಿ, ಕಾನ್‌ಸ್ಟೆಬಲ್‌ಗಳಾದ ಸರಸ್ವತಿ, ಜಯಶ್ರೀ, ಗಂಗಾಧರ ಇದ್ದರು.

ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ, ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ತುಮಕೂರು.

ಪೋಷಕರ ಪತ್ತೆಗಾಗಿ ಪ್ರಕಟಣೆ

ಈ ಭಾವಚಿತ್ರದಲ್ಲಿರುವ ಸುಮಾರು ಒಂದು ವರ್ಷ 3 ತಿಂಗಳ ಹೆಣ್ಣು ಮಗುವು ಮಕ್ಕಳ ಮಾರಾಟ ಜಾಲದಲ್ಲಿ ಪತ್ತೆಯಾಗಿದ್ದು, ಮಗುವು ಬಿಳಿ ಬಣ್ಣ, ದುಂಡು ಮುಖವುಳ್ಳದ್ದಾಗಿದ್ದು, ಸದರಿ ಪ್ರಕರಣದಲ್ಲಿ ಗುಬ್ಬಿ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದ್ದು, ಮಗುವನ್ನು ಮಕ್ಕಳ ಕಲ್ಯಾಣ ಸಮಿತಿ ವಶಕ್ಕೆ ಪಡೆಯಲಾಗಿರುತ್ತದೆ. ಮಗುವಿನ ಪೋಷಕರು ಯಾರೆಂದು ತಿಳಿದಿರುವುದಿಲ್ಲ. ಮಗುವಿನ ಪೋಷಕರು ಯಾರಾದರು ಇದ್ದಲ್ಲಿ ಕೂಡಲೇ ಮಕ್ಕಳ ಕಲ್ಯಾಣ ಸಮಿತಿ, ತುಮಕೂರು ಅಥವಾ ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ಉಪನಿರ್ದೇಶಕರ ಕಛೇರಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಜಿಲ್ಲಾ ಬಾಲಭವನ, ಎಂ.ಜಿ ರಸ್ತೆ, ತುಮಕೂರು ದೂರವಾಣಿ ಸಂಖ್ಯೆ: 0816-2956699 ಕಛೇರಿಯನ್ನು ಸಂಪರ್ಕಿಸಲು ಕೋರಿದೆ.

ಸ್ಥಳ:ತುಮಕೂರು
ದಿನಾಂಕ: 10.07.2024

ಸಹಿ/- ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ, ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ತುಮಕೂರು.

DIPR/TUM/143/KSMCA/2024-25

ಉಪ ಅರಣ್ಯ ಸಂರಕ್ಷಣಾಧಿಕಾರಿ ಕಚೇರಿ, ಸಾಮಾಜಿಕ ಅರಣ್ಯ ವಿಭಾಗ, ಶಿವಮೊಗ್ಗ

ದೂರವಾಣಿ ಸಂಖ್ಯೆ:08182-223900 e-mail: dcfsfsmg@gmail.com

ಸಂ:ಅ:ಟಿ:ಸಾ.ಅ.ವಿ/ಟೆಂಡರ್:01/24-25 ದಿ: 12.07.2024

ಸಂಕ್ಷಿಪ್ತ ಮರು ಟೆಂಡರ್ ಪ್ರಕಟಣೆ (ಇ-ಪ್ರೊಕ್ಯೂರ್‌ಮೆಂಟ್ ಮುಖಾಂತರ)

2024-25 ನೇ ಸಾಲಿನಲ್ಲಿ ಉಪ ಅರಣ್ಯ ಸಂರಕ್ಷಣಾಧಿಕಾರಿ ಸಾಮಾಜಿಕ ಅರಣ್ಯ ವಿಭಾಗ, ಶಿವಮೊಗ್ಗ ವಿಭಾಗದ ವಲಯಗಳಲ್ಲಿ ಸಾಮಾಜಿಕ ಅರಣ್ಯ ಯೋಜನೆಯಡಿ ನೆಡುತೋಪು ಪೋಷಣೆ ಮತ್ತು ನೆಡುತೋಪು ನಿರ್ಮಾಣ ಕಾಮಗಾರಿಗಳನ್ನು ಕೈಗೊಳ್ಳಲು ಪ್ರಸ್ತುತ ಆರ್ಥಿಕ ವರ್ಷದಲ್ಲಿ ಅರಣ್ಯ ಇಲಾಖೆಯಲ್ಲಿ ನೋಂದಾಯಿಸಿಕೊಂಡಿರುವ ಹಾಗೂ ಮರು-ಟೆಂಡರ್ ಅಧಿಸೂಚನೆಯಲ್ಲಿ ಸೂಚಿಸಿರುವ ಕಾಮಗಾರಿಗಳನ್ನು ನಿರ್ವಹಿಸಿ ಅನುಭವ ಇರುವ ಅರ್ಹ ಅರಣ್ಯ ಗುತ್ತಿಗೆದಾರರಿಂದ ಮರು-ಟೆಂಡರನ್ನು ಆಹ್ವಾನಿಸಲಾಗಿದ್ದು, ಅರ್ಹ ಗುತ್ತಿಗೆದಾರರು ದಿನಾಂಕ: 22/07/2024 ರಂದು 4.30 ಗಂಟೆಯೊಳಗೆ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಸಲ್ಲಿಸಬಹುದಾಗಿರುತ್ತದೆ. ಮರು-ಟೆಂಡರ್‌ನ ಸಂಪೂರ್ಣ ಮಾಹಿತಿಯನ್ನು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಪಡೆಯಬಹುದಾಗಿರುತ್ತದೆ ಹಾಗೂ ಹೆಚ್ಚಿನ ಮಾಹಿತಿಗಾಗಿ ಕಚೇರಿ ವೇಳೆಯಲ್ಲಿ ಈ ಕಚೇರಿಯನ್ನು ಸಂಪರ್ಕಿಸಬಹುದಾಗಿದೆ. (ಕಛೇರಿ ದೂರವಾಣಿ ಸಂಖ್ಯೆ: 08182-223900)

ಸಹಿ/- ಉಪ ಅರಣ್ಯ ಸಂರಕ್ಷಣಾಧಿಕಾರಿ ಸಾಮಾಜಿಕ ಅರಣ್ಯ ವಿಭಾಗ, ಶಿವಮೊಗ್ಗ

ವಾ.ಸಾ.ಸಂ.ಇ/ಕೆ.ಎಸ್.ಎಂ.ಸಿ.ಎ/ಶಿ/68/07/24-25/259

ರೈಲು ಗಾಲಿ ಕಾರ್ಖಾನೆ

ಯಲಹಂಕ, ಬೆಂಗಳೂರು – 560 064. ವೆಬ್‌ಸೈಟ್: www.rwf.indianrailways.gov.in

ಟೆಂಡರು ಸೂಚನೆ ಸಂ.: ಸಂ.: ಆರ್‌ಡಬ್ಲ್ಯೂಎಫ್/ಡಬ್ಲ್ಯೂ/24–25/06 ದಿನಾಂಕ: 12.07.2024

ಇ–ಟೆಂಡರ್‌ಗಳು: ಭಾರತದ ರಾಷ್ಟ್ರಪತಿಗಳ ಪರವಾಗಿ, ಉಪ ಮುಖ್ಯ ಇಂಜಿನಿಯರ್ ಕೆಳಗಿನ ಕಾಮಗಾರಿಗಳಿಗಾಗಿ ಎಲೆಕ್ಟ್ರಾನಿಕ್ ಟೆಂಡರುಗಳನ್ನು ಆನ್‌ಲೈನ್ ವೆಬ್‌ಸೈಟ್ http://www.ireps.gov.in (Works) ಮೂಲಕ ಆಹ್ವಾನಿಸಿದ್ದಾರೆ.

ಕ್ರ.ಸಂ.	ಟೆಂಡರು ಸಂ. ಮತ್ತು ವಿವರಣೆ	ಅಂದಾಜು ಮೌಲ್ಯ ₹ ಗಳಲ್ಲಿ
1	ಡಬ್ಲ್ಯೂ.496/ಆರ್‌ಡಬ್ಲ್ಯೂಎಫ್/ವೈಎನ್‌ಕೆ/1034. ಆರ್‌ಡಬ್ಲ್ಯೂಎಫ್ ಕಾರ್ಖಾನೆ ಒಳಗಿನ ಆವರಣದ ಇಎಂಎಂಎಸ್ ಹಿಂಭಾಗದಲ್ಲಿ ಟ್ರೇಡ್ ಆಕ್ಸಲ್ ಸ್ಟಾಕಿಂಗ್ ಮಾಡಲು ಬಿಟುಮಿನಸ್ ಫ್ಲೋರಿಂಗ್‌ನ ವ್ಯವಸ್ಥೆ.	1,30,30,984.03
2	ಡಬ್ಲ್ಯೂ.496/ಆರ್‌ಡಬ್ಲ್ಯೂಎಫ್/ವೈಎನ್‌ಕೆ/1035. ಆರ್‌ಡಬ್ಲ್ಯೂಎಫ್‌ನ ಟಿಟಿಸಿಯ ಬಳಿ ಕಾರ್ ಪಾರ್ಕಿಂಗ್‌ನ ವ್ಯವಸ್ಥೆ.	23,68,062.00
3	ಡಬ್ಲ್ಯೂ.496/ಆರ್‌ಡಬ್ಲ್ಯೂಎಫ್/ವೈಎನ್‌ಕೆ/1036. ಆರ್‌ಡಬ್ಲ್ಯೂಎಫ್ ಆಕ್ಸಲ್ ಮಶೀನ್ ಶಾಪ್‌ಗೆ ಹೊಂದಿಕೊಂಡಿರುವ ಚರಂಡಿ ಮತ್ತು ಆಕ್ಸಲ್‌ಗಳ ಶೇಖರಣೆ ಸ್ಥಳಕ್ಕೆ ಹೆವಿ ಡ್ಯೂಟಿ ಪೇವರ್ ಬ್ಲಾಕ್ ಫ್ಲೋರಿಂಗ್‌ನ ವ್ಯವಸ್ಥೆ.	25,81,526.83

ಅಂತಿಮ ದಿನಾಂಕ & ಸಮಯ: 19.08.2024, ಬೆಳಿಗ್ಗೆ 11.00 ಗಂಟೆಗೆ. ಉಪ ಮುಖ್ಯ ಇಂಜಿನಿಯರ್

ಕರ್ನಾಟಕ ಸರ್ಕಾರ

ಜಿಲ್ಲಾಧಿಕಾರಿಗಳ ಕಾರ್ಯಾಲಯ, (ಜಿಲ್ಲಾ ನಗರಾಭಿವೃದ್ಧಿ ಕೋಶ)

ಕೊಠಡಿ ಸಂಖ್ಯೆ. 123, ಜಿಲ್ಲಾಡಳಿತ ಭವನ, ಗದಗ–582101

Ph & Fax : 08372-231877, Email : dudc_gdg@yahoo.co.in

No.DUDC/DVP/SBM-2.O/CR-18/2023-24 DATED: 11-07-2024

ಅಲ್ಪಾವಧಿ ಟೆಂಡರ್ ಪ್ರಕಟಣೆ

ಜಿಲ್ಲಾಧಿಕಾರಿಗಳ ಕಾರ್ಯಾಲಯ ಗದಗದ ಜಿಲ್ಲಾ ನಗಾರಭಿವೃದ್ಧಿ ಕೋಶ ಗದಗದಿಂದ ಗದಗ ಜಿಲ್ಲೆಯ ಪಾರಂಪರಿಕ ತ್ಯಾಜ್ಯ ನಿರ್ವಹಣೆಗೆ ಸಂಬಂಧಿಸಿದಂತೆ ಗದಗ–ಬೆಟಗೇರಿ ನಗರಸಭೆ, ಪುರಸಭೆ ಗಜೇಂದ್ರಗಡ & ನರಗುಂದ ಸ್ಥಳೀಯ ಸಂಸ್ಥೆಗಳ ಕ್ಲಸ್ಟರ್ ಮಾದರಿಯಲ್ಲಿ ಸ್ವಚ್ಛ ಭಾರತ ಮಿಷನ್(ನಗರ) 2.0 ಅಡಿಯಲ್ಲಿ ಕೆಟಿಪಿಪಿ ಅಧಿನಿಯಮ 1999 ನಿಯಮ 2000ರನ್ವಯ ಟೆಂಡರ್ ಆಹ್ವಾನಿಸಿದ್ದು ಸದರ ವಿವರ ಈ ರೀತಿ ಇರುತ್ತದೆ. ಅಂದಾಜು ಮೊತ್ತ ರೂ. **890.59** ಲಕ್ಷಗಳು ಇಂಡೆಂಟ್ ನಂ. DMA/2023-24/OW/WORK_INDENT6824/CALL-2 ರಲ್ಲಿ ಟೆಂಡರ್ ಆಹ್ವಾನಿಸಲಾಗಿರುತ್ತದೆ. ಬಿಡ್ಡುದಾರರು ಟೆಂಡರ್ ವಿವರಗಳನ್ನು KPP portal ರಲ್ಲಿ ಪಡೆದು, ಸಂಬಂಧಿಸಿದ ಇಎಂಡಿ ಟೆಂಡರ್ ಫೀ ಗಳನ್ನು electronic ಪದ್ಧತಿಯಲ್ಲಿ ತುಂಬಿ ಈ ಕೆಳಗೆ ನಿಗಧಿಪಡಿಸಿದ ದಿನಾಂಕಗಳನ್ನು ಟೆಂಡರ್ www.kppp.karnataka.gov.in. ಸಲ್ಲಿಸಬಹುದಾಗಿದೆ. ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ : **09–08–2024** up to 17.30 hrs. ಟೆಂಡರ್ ತಾಂತ್ರಿಕ ಬಿಡ್ಡ ತೆರೆಯುವ ದಿನಾಂಕ : **12–08–2024** up to 11.00 hrs ಸದರಿ ಟೆಂಡರ್‌ಗೆ ಸಂಬಂಧಿಸಿದಂತೆ ದಿನಾಂಕ ಹಾಗೂ ಇತರೆ ಬದಲಾವಣೆಗಳಾದಲ್ಲಿ www.kppp.karnataka.gov.in. ಪ್ರಕಟಿಸಲಾಗುವುದು. ಪತ್ರಿಕಾ ಪ್ರಕಟಣೆಯಲ್ಲಿ ಪ್ರಕಟಿಸಲಾಗುವುದಿಲ್ಲ.

ಸಹಿ/- ಯೋಜನಾ ನಿರ್ದೇಶಕರು, ಜಿಲ್ಲಾ ನಗರಾಭಿವೃದ್ಧಿ ಕೋಶ, ಗದಗ.

ವಾಸಾಸಂಇ/ಗದಗ/ಕೆಎಸ್‌ಎಂಸಿಎ/89/2024–25

ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ, ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ತುಮಕೂರು.

ಪೋಷಕರ ಪತ್ತೆಗಾಗಿ ಪ್ರಕಟಣೆ

ಈ ಭಾವಚಿತ್ರದಲ್ಲಿರುವ ಸುಮಾರು ಒಂದು ವರ್ಷ 6 ತಿಂಗಳ ಹೆಣ್ಣು ಮಗುವು ಮಕ್ಕಳ ಮಾರಾಟ ಜಾಲದಲ್ಲಿ ಪತ್ತೆಯಾಗಿದ್ದು, ಮಗುವು ಕಂದು ಬಣ್ಣ, ದುಂಡು ಮುಖವುಳ್ಳದ್ದಾಗಿದ್ದು, ಸದರಿ ಪ್ರಕರಣದಲ್ಲಿ ಗುಬ್ಬಿ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದ್ದು, ಮಗುವನ್ನು ಮಕ್ಕಳ ಕಲ್ಯಾಣ ಸಮಿತಿ ವಶಕ್ಕೆ ಪಡೆಯಲಾಗಿರುತ್ತದೆ. ಮಗುವಿನ ಪೋಷಕರು ಯಾರೆಂದು ತಿಳಿದಿರುವುದಿಲ್ಲ. ಮಗುವಿನ ಪೋಷಕರು ಯಾರಾದರು ಇದ್ದಲ್ಲಿ ಕೂಡಲೇ **ಮಕ್ಕಳ ಕಲ್ಯಾಣ ಸಮಿತಿ, ತುಮಕೂರು ಅಥವಾ ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ಉಪನಿರ್ದೇಶಕರ ಕಛೇರಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಜಿಲ್ಲಾ ಬಾಲಭವನ, ಎಂ.ಜಿ ರಸ್ತೆ, ತುಮಕೂರು ದೂರವಾಣಿ ಸಂಖ್ಯೆ: 0816–2956699** ಕಛೇರಿಯನ್ನು ಸಂಪರ್ಕಿಸಲು ಕೋರಿದೆ.

ಸ್ಥಳ:ತುಮಕೂರು
ದಿನಾಂಕ: 10.07.2024

ಸಹಿ/- ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ, ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ತುಮಕೂರು.

DIPR/TUM/144/KSMCA/2024-25

ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮ: ಕಾಮಗಾರಿ ವಿಭಾಗ ಬಳ್ಳಾರಿ.

ಸಂಖ್ಯೆ: ಕಕರಸಾನಿ/ಕಾನಿಅ/ಕಾವಿಬ/ತಾಂತ್ರಿಕ/ 377/2024–25 ದಿನಾಂಕ:10.07.2024

ತಿದ್ದುಪಡಿ ಪ್ರಕಟಣೆ–1

ಇ–ಪ್ರೊಕ್ಯೂಮೆಂಟ್ ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ 18, 19, 20, 21, 22 & 23/ 2024–25 ರ ಕಾಮಗಾರಿ ಕೆಲಸಕ್ಕೆ ಇ–ಪ್ರೊಕ್ಯೂಮೆಂಟ್ ಮುಖಾಂತರ ಟೆಂಡರ್‌ನ್ನು ದಿನಾಂಕ: 14–06–2024 ರಂದು "ಪ್ರಜಾವಾಣಿ" & "ವಿಜಯ ಕರ್ನಾಟಕ" ದಿನಪತ್ರಿಕೆಯಲ್ಲಿ ಆಹ್ವಾನಿಸಲಾಗಿತ್ತು. ಆದರೆ ಸದರಿ ಕಾಮಗಾರಿಗಳನ್ನು ತಾತ್ಕಾಲಿಕವಾಗಿ ತಡೆಹಿಡಿಯಲಾಗಿದೆ. ಹೆಚ್ಚಿನ ವಿವರಗಳಿಗಾಗಿ ಸಹಾಯವಾಣಿ ದೂರವಾಣಿ ಸಂಖ್ಯೆ: +91 80 46010000, +91 80 68948777, 080–22230960, 080–22234115 **ಅಥವಾ 08392–294828, 9972039797 ಮುಖಾಂತರ ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ.**

ಸಹಿ/- ಕಾರ್ಯನಿರ್ವಾಹಕ ಅಭಿಯಂತರರು, ಕ.ಕ.ರ.ಸಾ.ನಿಗಮ, ಕಾಮಗಾರಿ ವಿಭಾಗ, ಬಳ್ಳಾರಿ

ಡಿಐಪಿಆರ್/ಬಳ್ಳಾರಿ/231/ಕೆಎಸ್‌ಎಂಸಿಎ/2024–25

ಕರ್ನಾಟಕ ಸರ್ಕಾರ

ಉಪನಿರ್ದೇಶಕರ ಕಛೇರಿ, ಶಾಲಾ ಶಿಕ್ಷಣ ಇಲಾಖೆ. ಮಂಡ್ಯ ಜಿಲ್ಲೆ, ಮಂಡ್ಯ.

ಸಂಖ್ಯೆ:ಇ4(ಅ3)/5351/ಅ.ಗೈ.ಹಾ/28/2015–16 ದಿ:08.07.2024

ಪತ್ರಿಕಾ ಪ್ರಕಟಣೆ

ಶ್ರೀಮತಿ ಭಾಗ್ಯಜ್ಯೋತಿ.ಎ.ಜಿ, ಸಹ ಶಿಕ್ಷಕರು, ಸರ್ಕಾರಿ ಪ್ರೌಢಶಾಲೆ, ಸಣಬ ಬಡಾವಣೆ, ಪಾಂಡವಪುರ ತಾಲ್ಲೂಕು, ಮಂಡ್ಯ ಜಿಲ್ಲೆ ಆದ ನೀವು ದಿನಾಂಕ: **09.06.2014** ರಿಂದ ನಿರಂತರ ಅನಧಿಕೃತ ಗೈರು ಹಾಜರಾಗಿದ್ದು, ನಂತರ ದಿನಾಂಕ **23.12.2019** ರಂದು ಇಲಾಖಾ ಅನುಮತಿ ಪಡೆದು ಶಾಲಾ ಕರ್ತವ್ಯಕ್ಕೆ ಹಾಜರಾಗಿ ದಿನಾಂಕ:**24.12.2019** ರಿಂದ ಈ ತನಕ ಶಾಲಾ ಕರ್ತವ್ಯಕ್ಕೆ ಅನಧಿಕೃತ ಗೈರು ಹಾಜರಾಗಿರುತ್ತೀರಿ. ನಿಮ್ಮ ಈ ಅನಧಿಕೃತ ಗೈರು ಹಾಜರಿ ಸಂಬಂಧದಲ್ಲಿ ನಿಮ್ಮ ವಿರುದ್ಧ ಶಿಸ್ತು ವ್ಯವಹರಣೆಗಾಗಿ ಮಾಡಲಾದ ಎಲ್ಲಾ ಪತ್ರಗಳು ನೀವು ವಿಳಾಸದಲ್ಲಿ ಲಭ್ಯವಿಲ್ಲವೆಂಬ ಹಿಂಬರಹದೊಂದಿಗೆ ವಾಪಸ್ಸಾಗಿರುತ್ತವೆ. ನಿಮ್ಮ ಅನಧಿಕೃತ ಗೈರು ಹಾಜರಿ ಅವಧಿ ಸುದೀರ್ಘವಾಗಿರುವುದರಿಂದ ಈ ಪ್ರಕಟಣೆ ಹೊರಡಿಸಿದ 30 ದಿನಗಳೊಳಗಾಗಿ ಕರ್ತವ್ಯಕ್ಕೆ ಹಾಜರಾಗತಕ್ಕದ್ದು, ತಪ್ಪಿದ್ದಲ್ಲಿ ಕರ್ನಾಟಕ ಸಿವಿಲ್ ಸೇವಾ ನಿಯಮ ನಿಯಮ 108 ಮತ್ತು ಸಿ.ಸಿ.ಎ ನಿಯಮ 1957ರ ನಿಯಮ 8 ಉಪನಿಯಮ VIII ರಂತೆ ಕ್ರಮ ಜರುಗಿಸಲಾಗುವುದು ಎಂದು ತಿಳಿಯತಕ್ಕದ್ದು.

ಸಹಿ/–ಉಪ ನಿರ್ದೇಶಕರು, ಶಾಲಾ ಶಿಕ್ಷಣ ಇಲಾಖೆ, ಮಂಡ್ಯ

ವಾಸಾಸಂಇ/ಸನಿ–ಮಂ/ಕೆಎಸ್‌ಎಂಸಿ&ಎ/169/2024–25

Office of the Deputy Conservator of Forests
Bengaluru Urban Division, Aranya Bhavan Annexe, 18th Cross, Malleshwaram, Bengaluru - 560003.
Ph: 080 23343464, Email: dcfurban82@yahoo.co.in

No. A9/treecutting/CR-142,169/20-21&166/2021-22 Date: 11.07.2024

BRIEF SALE NOTIFICATION

It is hereby notified for the general information of the public that the following kind and quantity of timber forest produce stocked and lotted in the **Tenke Depot, Jarakabande, Nagaruru and Kadugodi Nursery, Bengaluru Urban Division, Bengaluru** as mentioned below will be sold by e-tender-cum-auction mode through MSTC Ltd., on the online platform **"www.mstcecommerce.com"**. The sale conducting authority is Deputy Conservator of Forests, Bengaluru (Urban) Division Bengaluru.

Quantity of Material

Depot details	Date of e-tender	Kind	Forest Produce
Tenke Depot, Jarakabande	08.08.2024	Eucalyptus and Other mixed variety	Timber: 55.604 Cum Poles: 1352 No's Billettes: 4.5 cum
			Beete - Timber: 1.888 Cum Poles: 68 No's Billettes: 0.855 cum
Tenke Depot, Nagaruru Nursery		Eucalyptus and Other	Timber: 17.091 Cum Poles: 1487 No's
Tenke Depot, Kadugodi Nursery		Mixed variety	Timber: 4.593 Cum

Inspection of logs by the bidders 01.08.2024 to 07.08.2024 between 11.00 am to 4.00 pm at 1. Tenke Depot, Jarakabande Sandal Godown, Kammagondanhalli, Bengaluru. 2. Tenke Depot, Nagaruru Nursery, near BDA Complex, RMC Main Road, Aluru Pachayat, Bengaluru 3. Tenke Depot, Kadugodi Nursery, Sy no. 1 of Kadugodi, Bidarahalli Hobli, Bengaluru East Taluk, Bengaluru.

The e-tender-cum auction is subject to terms and conditions uploaded on the website **www.mstcecommerce.com** Date of e-tender-cum-auction **8th August 2024,** Ist Session 10.00 to 10.45 hrs., IInd Session 12.00 to 12.45 hrs., IIIrd Session 14.00 to 14.45 hrs. Every Registered bidders shall pay an Earnest money deposit (EMD) of Rs.l0,000/- for all lots/or any lot. The black listed bidders. defaulters, Minors, insolvent persons will not be permitted to participate in the sale.

Deputy Conservator of Forests
Bengaluru Urban Division, Bengaluru

DIPR/CP/AAA/912/2024-25

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರ ಕಚೇರಿ, ಪುಲಿಕೇಶಿನಗರ ವಿಭಾಗ, ಬೃಬೆಂಮಪಾಲಿಕೆ ಕಚೇರಿ ಕಟ್ಟಡ, ರಾಬರ್ಟ್‌ಸನ್ ರಸ್ತೆ, ಫ್ರೇಜರ್ ಟೌನ್, ಬೆಂಗಳೂರು

ಸಂಖ್ಯೆ:ಕಾಪಾಅ/ಪುಲಿಕೇಶಿನಗರ/ಟೆಂಡರ್/05/2024–25 ದಿನಾಂಕ: 12.07.2024

ಅಲ್ಪಾವಧಿ ಟೆಂಡರ್‌ಗಾಗಿ ಆಹ್ವಾನ (ದ್ವಿಲಕೋಟೆ)

(ಕೆಪಿಪಿ ಪೋರ್ಟಲ್ https://kppp.karnataka.gov.in ಮೂಲಕ ಮಾತ್ರ)

ಕಾರ್ಯಪಾಲಕ ಅಭಿಯಂತರರು, (ಪುಲಿಕೇಶಿನಗರ ವಿಭಾಗ) ಬೃ.ಬೆಂ.ಮ.ಪಾಲಿಕೆ ಬೆಂಗಳೂರು ಇವರು ಬೃ.ಬೆಂ.ಮ.ಪಾಲಿಕೆ ಅಥವಾ ತತ್ಸಮಾನವಾಗಿ ಸಿ.ಪಿ.ಡಬ್ಲ್ಯೂ.ಡಿ/ಕೆ.ಪಿ.ಡಬ್ಲ್ಯೂ.ಡಿ/ರೈಲ್ವೇಸ್/ಎಂ.ಇ.ಎಸ್/ರಾಷ್ಟ್ರೀಯ ಹೆದ್ದಾರಿ ಅಥವಾ ಯಾವುದೇ ರಾಜ್ಯ ಸರ್ಕಾರಿ ಸಂಸ್ಥೆಗಳಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಈ ಕೆಳಕಂಡ ಕಾಮಗಾರಿಗಳಿಗಾಗಿ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ. **(ಸ್ಟ್ಯಾಂಡರ್ಡ್ ಟೆಂಡರ್ ದಾಖಲೆ ಕೆಡಬ್ಲ್ಯೂ–4)**

ಕಾಮಗಾರಿಗಳ ಹೆಸರು
ವಾರ್ಡ್ ಸಂಖ್ಯೆ–70ರ ಕುಶಾಲನಗರ ಹೆಚ್.ಬಿ ಬಡಾವಣೆ, ಪಿ & ಟಿ ಕಾಲೋನಿ, ಮುಸ್ಲಿಂ ಕಾಲೋನಿ ವಾಟರ್ ಟ್ಯಾಂಕ್, ವಾರ್ಡ್ ಸಂಖ್ಯೆ–78ರ ಕುಶಾಲನಗರ ಬಸಪ್ಪ ಲೇನ್ ಅಡ್ಡರಸ್ತೆ, ಎ.ಕೆ ಕಾಲೋನಿ ಅಡ್ಡರಸ್ತೆ, ಮೋದಿ ರಸ್ತೆಯ 1 ರಿಂದ 5ನೇ ಅಡ್ಡ ರಸ್ತೆಗಳು, ಮೋದಿ ರಸ್ತೆಯ 6 ರಿಂದ 10ನೇ ಅಡ್ಡರಸ್ತೆಗಳು, ಗೋವಾ ಗಾರ್ಡನ್ ಅಡ್ಡರಸ್ತೆ, ವಾರ್ಡ್ ಸಂಖ್ಯೆ–79 ಸಗಾಯಪುಂರಂನ ಎಸ್.ಕೆ ಗಾರ್ಡನ್ ಬಿಲಾಲ್ ನಗರ ಮುಖ್ಯರಸ್ತೆ, ರಮಾಬಾಯಿ ಕಾಲೋನಿ, ಡೇವಿಸ್ ರಸ್ತೆ ಮತ್ತು ಕಂದಸ್ವಾಮಿ ಮುಖ್ಯರಸ್ತೆ, 12, 13, 14ನೇ ಗಿಡ್ಡಪ್ಪ ಬ್ಲಾಕ್ ಮತ್ತು ಸುತ್ತಮುತ್ತಲ ಪ್ರದೇಶಗಳಲ್ಲಿ ರಸ್ತೆಗಳು ಮತ್ತು ಚರಂಡಿಗಳಿಗೆ ಸಮಗ್ರ ಅಭಿವೃದ್ಧಿ ಮಾಡುವುದು ಹಾಗೂ ವಾರ್ಡ್ ಸಂಖ್ಯೆ–74 ಕಾವಲ್‌ಭೈರಸಂದ್ರದಲ್ಲಿ ವಾರ್ಡ್ ಕಚೇರಿ ಆವರಣದಲ್ಲಿ ವಿವಿದೋದ್ದೇಶ ಕಟ್ಟಡ ನಿರ್ಮಾಣ ಹಾಗೂ ಹೆಚ್ಚುವರಿ ಕಾಮಗಾರಿಗಳನ್ನು ಮಾಡುವುದು. ಪ್ಯಾಕೇಜ್ ಸಂ.01 (ಸರ್ಕಾರಿ ಕ್ರ.ಸಂ: 1,2,6,4 ಅನುಬಂಧ–4) **ಕಾಮಗಾರಿಗಿಟ್ಟ ಅಂದಾಜು ಮೊತ್ತ (ರೂ ಲಕ್ಷಗಳಲ್ಲಿ): 1500.00, ಇಎಂಡಿ (ರೂಗಳಲ್ಲಿ): 1500000.00**
ವಾರ್ಡ್ ಸಂಖ್ಯೆ–77ರ ಕರಿಯಮ್ಮ ಲೇನ್, ಪಂಜಪ್ಪ ಲೇನ್, ವಿಮಾನ ರಸ್ತೆ, ಈದ್ಗಾ ಮುಖ್ಯರಸ್ತೆ ಅಡ್ಡರಸ್ತೆ, ಮುನಿನಾಗಪ್ಪ ಬಡಾವಣೆ, ಬಂಗಾರಗಿರಿ ಅಡ್ಡರಸ್ತೆ, ವಾರ್ಡ್ ಸಂಖ್ಯೆ–76 ಮುನೇಶ್ವರನಗರದ ಡಿ.ಜೆ ಹಳ್ಳಿ ಕರೀಮ್ ಸಾಬ್ ಲೇನ್, ಅಂಥೋನಿ ಚರ್ಚ್, ಅಯೋಧಾ ದಾಸ್, ಜಾನಿಬಾಯಿ ಲೇನ್ ಕಾಂಪೌಂಡ್, ಮುನೇಶ್ವರನಗರ ಅಡ್ಡರಸ್ತೆಗಳು ಮತ್ತು ಸುತ್ತಮುತ್ತಲ ಪ್ರದೇಶಗಳಲ್ಲಿ ರಸ್ತೆಗಳು ಮತ್ತು ಚರಂಡಿಗಳಿಗೆ ಸಮಗ್ರ ಅಭಿವೃದ್ಧಿ ಮಾಡುವುದು ಪ್ಯಾಕೇಜ್ ಸಂ.02 (ಸರ್ಕಾರಿ ಕ್ರ.ಸಂ: 5, 3 ಅನುಬಂಧ–4) **ಕಾಮಗಾರಿಗಿಟ್ಟ ಅಂದಾಜು ಮೊತ್ತ (ರೂ ಲಕ್ಷಗಳಲ್ಲಿ): 1000.00 ಇಎಂಡಿ (ರೂಗಳಲ್ಲಿ): 1500000.00**

ಟೆಂಡರ್ ವೇಳಾಪಟ್ಟಿ: (1) ಟೆಂಡರ್ ದಾಖಲೆಗಳನ್ನು ಕರ್ನಾಟಕ ಸರ್ಕಾರದ ಕೆಪಿಪಿಪಿ ಪೋರ್ಟಲ್‌ನಲ್ಲಿ ದಿನಾಂಕ **19.07.2024**ರ ಸಂಜೆ **4:00** ಗಂಟೆಯಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. (2) ಟೆಂಡರ್‌ಗಳನ್ನು ಕೆಪಿಪಿಪಿ ಪೋರ್ಟಲ್ ಮುಖಾಂತರ ಸಲ್ಲಿಸಲು ಕೊನೆಯ ದಿನಾಂಕ **08.08.2024**ರ ಸಂಜೆ **4:00** ಗಂಟೆಯವರೆಗೆ ಅಥವಾ ಮುಂಚಿತವಾಗಿ. (3) ಬಿಡ್ ಪೂರ್ವಭಾವಿ ಸಭೆಯನ್ನು ದಿನಾಂಕ **24.07.2024**ರ ಸಂಜೆ **4:00** ಗಂಟೆಗೆ ನಡೆಸಲಾಗುವುದು. (4) ತಾಂತ್ರಿಕ ಬಿಡ್‌ಗಳನ್ನು ದಿನಾಂಕ **09.08.2024**ರ ಸಂಜೆ **4:30** ಗಂಟೆಗೆ ಸಾಧ್ಯವಾದಲ್ಲಿ ಅಥವಾ ಮುಂದಿನ ಕೆಲಸದ ದಿನದಂದು ತೆರೆಯಲಾಗುವುದು.

ಸಹಿ/- ಕಾರ್ಯಪಾಲಕ ಅಭಿಯಂತರರು, ಪುಲಿಕೇಶಿನಗರ ವಿಭಾಗ

ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ, ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ತುಮಕೂರು.

ಪೋಷಕರ ಪತ್ತೆಗಾಗಿ ಪ್ರಕಟಣೆ

ಈ ಭಾವಚಿತ್ರದಲ್ಲಿರುವ ಸುಮಾರು ಒಂದು ವರ್ಷ 2 ತಿಂಗಳ ಹೆಣ್ಣು ಮಗುವು ಮಕ್ಕಳ ಮಾರಾಟ ಜಾಲದಲ್ಲಿ ಪತ್ತೆಯಾಗಿದ್ದು, ಮಗುವು ಕಂದು ಬಣ್ಣ, ದುಂಡು ಮುಖವುಳ್ಳದ್ದಾಗಿದ್ದು, ಸದರಿ ಪ್ರಕರಣದಲ್ಲಿ ಗುಬ್ಬಿ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದ್ದು, ಮಗುವನ್ನು ಮಕ್ಕಳ ಕಲ್ಯಾಣ ಸಮಿತಿ ವಶಕ್ಕೆ ಪಡೆಯಲಾಗಿರುತ್ತದೆ. ಮಗುವಿನ ಪೋಷಕರು ಯಾರೆಂದು ತಿಳಿದಿರುವುದಿಲ್ಲ. ಮಗುವಿನ ಪೋಷಕರು ಯಾರಾದರು ಇದ್ದಲ್ಲಿ ಕೂಡಲೇ ಮಕ್ಕಳ ಕಲ್ಯಾಣ ಸಮಿತಿ, ತುಮಕೂರು ಅಥವಾ ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ಉಪನಿರ್ದೇಶಕರ ಕಛೇರಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಜಿಲ್ಲಾ ಬಾಲಭವನ, ಎಂ.ಜಿ ರಸ್ತೆ, ತುಮಕೂರು ದೂರವಾಣಿ ಸಂಖ್ಯೆ: 0816–2956699 ಕಛೇರಿಯನ್ನು ಸಂಪರ್ಕಿಸಲು ಕೋರಿದೆ.

ಸ್ಥಳ:ತುಮಕೂರು
ದಿನಾಂಕ: 10.07.2024

ಸಹಿ/- ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ, ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ತುಮಕೂರು.

DIPR/TUM/145/KSMCA/2024-25

ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ, ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ತುಮಕೂರು.

ಪೋಷಕರ ಪತ್ತೆಗಾಗಿ ಪ್ರಕಟಣೆ

ಈ ಭಾವಚಿತ್ರದಲ್ಲಿರುವ ಸುಮಾರು ಒಂದು ವರ್ಷ 6 ತಿಂಗಳ ಹೆಣ್ಣು ಮಗುವು ಮಕ್ಕಳ ಮಾರಾಟ ಜಾಲದಲ್ಲಿ ಪತ್ತೆಯಾಗಿದ್ದು, ಮಗುವು ಬಿಳಿ ಬಣ್ಣ, ದುಂಡು ಮುಖವುಳ್ಳದ್ದಾಗಿದ್ದು, ಸದರಿ ಪ್ರಕರಣದಲ್ಲಿ ಗುಬ್ಬಿ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದ್ದು, ಮಗುವನ್ನು ಮಕ್ಕಳ ಕಲ್ಯಾಣ ಸಮಿತಿ ವಶಕ್ಕೆ ಪಡೆಯಲಾಗಿರುತ್ತದೆ. ಮಗುವಿನ ಪೋಷಕರು ಯಾರೆಂದು ತಿಳಿದಿರುವುದಿಲ್ಲ. ಮಗುವಿನ ಪೋಷಕರು ಯಾರಾದರು ಇದ್ದಲ್ಲಿ ಕೂಡಲೇ ಮಕ್ಕಳ ಕಲ್ಯಾಣ ಸಮಿತಿ, ತುಮಕೂರು ಅಥವಾ ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ಉಪನಿರ್ದೇಶಕರ ಕಛೇರಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಜಿಲ್ಲಾ ಬಾಲಭವನ, ಎಂ.ಜಿ ರಸ್ತೆ, ತುಮಕೂರು ದೂರವಾಣಿ ಸಂಖ್ಯೆ: 0816–2956699 ಕಛೇರಿಯನ್ನು ಸಂಪರ್ಕಿಸಲು ಕೋರಿದೆ.

ಸ್ಥಳ:ತುಮಕೂರು
ದಿನಾಂಕ: 10.07.2024

ಸಹಿ/- ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ, ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ತುಮಕೂರು.

DIPR/TUM/146/KSMCA/2024-25

ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ, ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ತುಮಕೂರು.

ಪೋಷಕರ ಪತ್ತೆಗಾಗಿ ಪ್ರಕಟಣೆ

ಈ ಭಾವಚಿತ್ರದಲ್ಲಿರುವ ಸುಮಾರು 6 ತಿಂಗಳ ಹೆಣ್ಣು ಮಗುವು ಮಕ್ಕಳ ಮಾರಾಟ ಜಾಲದಲ್ಲಿ ಪತ್ತೆಯಾಗಿದ್ದು, ಮಗುವು ಬಿಳಿ ಬಣ್ಣ, ದುಂಡು ಮುಖವುಳ್ಳದ್ದಾಗಿದ್ದು, ಸದರಿ ಪ್ರಕರಣದಲ್ಲಿ ಗುಬ್ಬಿ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದ್ದು, ಮಗುವನ್ನು ಮಕ್ಕಳ ಕಲ್ಯಾಣ ಸಮಿತಿ ವಶಕ್ಕೆ ಪಡೆಯಲಾಗಿರುತ್ತದೆ. ಮಗುವಿನ ಪೋಷಕರು ಯಾರೆಂದು ತಿಳಿದಿರುವುದಿಲ್ಲ. ಮಗುವಿನ ಪೋಷಕರು ಯಾರಾದರು ಇದ್ದಲ್ಲಿ ಕೂಡಲೇ ಮಕ್ಕಳ ಕಲ್ಯಾಣ ಸಮಿತಿ, ತುಮಕೂರು ಅಥವಾ ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ಉಪನಿರ್ದೇಶಕರ ಕಛೇರಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಜಿಲ್ಲಾ ಬಾಲಭವನ, ಎಂ.ಜಿ ರಸ್ತೆ, ತುಮಕೂರು ದೂರವಾಣಿ ಸಂಖ್ಯೆ: 0816–2956699 ಕಛೇರಿಯನ್ನು ಸಂಪರ್ಕಿಸಲು ಕೋರಿದೆ.

ಸ್ಥಳ:ತುಮಕೂರು
ದಿನಾಂಕ: 10.07.2024

ಸಹಿ/- ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ, ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ತುಮಕೂರು.

DIPR/TUM/142/KSMCA/2024-25

ಸಾರ್ವಜನಿಕ ಪ್ರಕಟಣೆ

ಈ ಮೂಲಕ ಸಾಮಾನ್ಯ ಸಾರ್ವಜನಿಕರಿಗೆ ತಿಳಿಸುವುದು ಏನೆಂದರೆ ಕಂಪನಿಗಳ ಕಾಯ್ದೆ, 2013ರ ನಿಯಮಗಳ ಅಡಿಯಲ್ಲಿ ಸ್ಥಾಪನೆಗೊಂಡಿರುವ ಅಧಿಕೃತ ಸಹಿದಾರರಾಗಿ ಶ್ರೀ ಕಂಚರ್ಲ ರಾಮ ಪ್ರಸಾದ್‌ರವರು ಪ್ರತಿನಿಧಿಸುತ್ತಿರುವ ದೇವನಾ ವೆಂಚರ್ಸ್ ಪ್ರೈವೇಟ್ ಲಿಮಿಟೆಡ್ ಎಂಬ ನಾವು, ಇಲ್ಲಿ ಕೆಳಗಿನ ಷೆಡ್ಯೂಲ್‌ನಲ್ಲಿ ಉಲ್ಲೇಖಿಸಲಾಗಿರುವ ಮತ್ತು ಇಲ್ಲಿ ಇನ್ನುಮುಂದೆ 'ಷೆಡ್ಯೂಲ್ ಪ್ರಾಪರ್ಟಿ' ಎನ್ನಲಾಗುವ ಸ್ವತ್ತನ್ನು ವ್ಯವಸ್ಥಾಪಕ ಪಾಲುದಾರರಾಗಿ ಶ್ರೀ ಎನ್. ಪದ್ಮನಾಭನ್ ಎಂಬುವರು ಪ್ರತಿನಿಧಿಸುತ್ತಿರುವ ಇಂಡ್‌ಆಟೋ ಫಿಲ್ಟರ್ಸ್ ಇವರಿಂದ ಖರೀದಿಸಲು ಉದ್ದೇಶಿಸಿರುತ್ತೇವೆ.

ಸದರಿ 'ಷೆಡ್ಯೂಲ್ ಪ್ರಾಪರ್ಟಿ' ಖರೀದಿಗೆ ಸಂಬಂಧಿಸಿದಂತೆ ಯಾರಿಗಾದರೂ ಯಾವುದೇ ರೀತಿಯ ಮಾರಾಟ, ವಿನಿಮಯ, ಅಡಮಾನ ಚಾರ್ಜ್, ಉಡುಗೊರೆ, ನಿರ್ವಹಣೆ ಅನುವಂಶಿಕ, ಸ್ವಾಧೀನ, ಭೋಗ್ಯ, ಬಾಡಿಗೆ ಅಥವಾ ಫಲಾನುಭವ ಹಿತಾಸಕ್ತಿಗಳು, ವರ್ಗಾವಣೆ ಮುಂತಾದ ರೀತಿಯ ಆಕ್ಷೇಪಣೆ, ಕ್ಲೇಮ್‌ಗಳಿದ್ದಲ್ಲಿ, ಅಂತಹವರು ಈ ಪ್ರಲಟಣೆಯು ಪ್ರಕಟಗೊಂಡ ದಿನಾಂಕದಿಂದ 7 ದಿನಗಳೊಳಗೆ, ತಮ್ಮ ಆಕ್ಷೇಪಣೆಗಳು ಮತ್ತು ಕ್ಲೇಮ್‌ಗಳನ್ನು, ಎಲ್ಲಾ ಅಗತ್ಯ ಪೂರಕ ದಾಖಲಾತಿಗಳ ಸಮೇತ, ಲಿಖಿತ ರೂಪದಲ್ಲಿ ಬರೆದು, ಈ ಕೆಳಗಿನ ಸಹಿದಾರರಿಗೆ ತಿಳಿಸತಕ್ಕದ್ದು. ಇಲ್ಲವಾದಲ್ಲಿ ಯಾವುದೇ ಆಕ್ಷೇಪಣೆಗಳು ಇರುವುದಿಲ್ಲ ಎಂದು ಪರಿಗಣಿಸುತ್ತ, ವ್ಯವಹಾರವನ್ನು ಪೂರ್ಣಗೊಳಿಸಲಾಗುತ್ತದೆ ಮತ್ತು ನಂತರದಲ್ಲಿ ಎದುರಾಗುವ ಯಾವುದೇ ಕ್ಲೇಮ್‌ಗಳು ಗಣನೆಗೆ ಬರುವುದಿಲ್ಲ ಮತ್ತು ಅಂತವುಗಳನ್ನು ಪರಿಗಣಿಸಲಾಗುವುದಿಲ್ಲ.

ಷೆಡ್ಯೂಲ್

ಷೆಡ್ಯೂಲ್ ಪ್ರಾಪರ್ಟಿಯ ವಿವರ

ದ್ಯಾವಸಂದ್ರ ಗ್ರಾಮ, ಕೃಷ್ಣರಾಜಪುರಂ ಹೋಬಳಿ, ಬೆಂಗಳೂರು ದಕ್ಷಿಣ ತಾಲ್ಲೂಕು, ಬೆಂಗಳೂರು ಜಿಲ್ಲೆ ವಿಳಾಸದ ಸರ್ವೆ ನಂ. 36ರಲ್ಲಿ ಸಂಯೋಜಿತ, ದ್ಯಾವಸಂದ್ರ ಕೈಗಾರಿಕಾ ಪ್ರದೇಶ 1ನೇ ಹಂತದಲ್ಲಿ ಸ್ಥಿತಗೊಂಡಿರುವ 0.751 ಎಕರೆ (3041 ಚದರ ಮೀಟರ್‌ಗೆ ಸಮನಾದ) ಜಮೀನು, ಅದರಲ್ಲಿನ 2000 ಚದರ ಅಡಿ ಕಟ್ಟಡ ಸೇರಿರುವ, ಪ್ಲಾಟ್ ನಂ. 2ಡಿ–1 ಹೊಂದಿರುವ ಸ್ಥಿರಾಸ್ತಿಯ ಎಲ್ಲ ಬೂಭಾಗಗಳು ಸೇರಿರುತ್ತವೆ.

ಸದರಿ ಸ್ವತ್ತಿನ ಚಕ್ಕುಬಂದಿ :

ಪೂರ್ವಕ್ಕೆ : ರಸ್ತೆ
ಪಶ್ಚಿಮಕ್ಕೆ : ಪ್ಲಾಟ್ ನಂ. 1
ಉತ್ತರಕ್ಕೆ : ಪ್ಲಾಟ್ ನಂ. 2ಡಿ2; ಮತ್ತು
ದಕ್ಷಿಣಕ್ಕೆ : ಪ್ಲಾಟ್ ನಂ. 2ಇ4

ದಿನಾಂಕ: 13.07.2024
ಸ್ಥಳ: ಬೆಂಗಳೂರು

ದೇವನಾ ವೆಂಚರ್ಸ್ ಪ್ರೈವೇಟ್ ಲಿಮಿಟೆಡ್
ಅದರ ಅಧಿಕೃತ ಸಹಿದಾರರಿಂದ ಪ್ರತಿನಿಧಿಸಲಾಗುತ್ತಿದೆ
ಶ್ರೀ ಕಂಚಾರ್ಲ ರಾಮ್ ಪ್ರಸಾದ್
ಕಚೇರಿ ನಂ.–17, 2ನೇ ಎ ಮುಖ್ಯ, ಎಚ್‌ಐಜಿ ಡಾಲರ್ ಕಾಲೋನಿ, ಅರ್‌ಎಮ್‌ವಿ ವಿಸ್ತರಣೆ II ಹಂತ
ಬೆಂಗಳೂರು – 560 094
ಮೊಬೈಲ್ : +91 98481 89004

ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ

ನಂ. 16 ಸಿ–1, ಮಿಲ್ಲರ್ಸ್ ಟ್ಯಾಂಕ್ ಬೆಡ್ ಏರಿಯಾ, ವಸಂತನಗರ, ಬೆಂಗಳೂರು–560052. ಫೋನ್: 080–22268677/78/79 ಫ್ಯಾಕ್ಸ್: 080–22268667
ಇ–ಮೇಲ್: kerc-ka@nic.in ವೆಬ್‌ಸೈಟ್: https://kerc.karnataka.gov.in

ಸಂಖ್ಯೆ: ಕವಿನಿಆ/ಇ/01/20/24/355 ದಿನಾಂಕ: 10–07–2024

ಅಧಿಸೂಚನೆ

ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗವು **ವಿದ್ಯುಚ್ಛಕ್ತಿ ಲೋಕಪಾಲರು ಹುದ್ದೆಯನ್ನು** ಗುತ್ತಿಗೆ ಆಧಾರದ ಮೇಲೆ ಭರ್ತಿ ಮಾಡಲು ಅರ್ಜಿಗಳನ್ನು ಆಹ್ವಾನಿಸಿದೆ. ಗುತ್ತಿಗೆಯ ಅವಧಿಯು ಪ್ರಾರಂಭಿಕವಾಗಿ ಒಂದು ವರ್ಷವಿದ್ದು, ಆಯೋಗದ ವಿವೇಚನೆಯಂತೆ ವಿಸ್ತರಿಸಬಹುದು. ಆಯ್ಕೆಯಾದ ಅಭ್ಯರ್ಥಿಗೆ ಮಾಸಿಕ ರೂ. 80,000/–ಗಳ ಕ್ರೋಢೀಕೃತ ಸಂಭಾವನೆಯನ್ನು ನೀಡಲಾಗುವುದು. ಅಭ್ಯರ್ಥಿಯು ಹೊಂದಿರತಕ್ಕ ವಿದ್ಯಾರ್ಹತೆ ಹಾಗೂ ಅನುಭವದ ವಿವರ ಈ ಕೆಳಕಂಡಂತಿದೆ:

1) ಮನ್ನಣೆ ಪಡೆದ ವಿಶ್ವವಿದ್ಯಾಲಯದಿಂದ ಪದವಿ ಹೊಂದಿರಬೇಕು.
2) ವಿದ್ಯುಚ್ಛಕ್ತಿ ಸರಬರಾಜು ಮತ್ತು ವಿತರಣೆ ಹಣಕಾಸು, ಕಾನೂನು ಮತ್ತು ಆಡಳಿತ ವಿಭಾಗದಲ್ಲಿನ ಎಲೆಕ್ಟ್ರಿಕಲ್ ಇಂಜಿನಿಯರಿಂಗ್‌ನ ಸಮಸ್ಯೆಗಳನ್ನು ನಿಭಾಯಿಸುವಲ್ಲಿ ಸಾಕಷ್ಟು ಜ್ಞಾನವನ್ನು ಹೊಂದಿರುವ ಮತ್ತು ಸಾಮರ್ಥ್ಯವನ್ನು ತೋರಿಸಿರುವ ಸಾಮರ್ಥ್ಯ, ಸಮಗ್ರತೆಯನ್ನು ಹೊಂದಿರತಕ್ಕದ್ದು.
3) ವಿದ್ಯುಚ್ಛಕ್ತಿ ಸರಬರಾಜು ಮತ್ತು ವಿತರಣೆ ಹಣಕಾಸು, ಕಾನೂನು ಮತ್ತು ಆಡಳಿತ ಇವುಗಳಲ್ಲಿ 25 ವರ್ಷಗಳ ಅನುಭವ ಹೊಂದಿರಬೇಕು.
4) ಕನ್ನಡ ಭಾಷೆಯಲ್ಲಿ ಕಾರ್ಯನಿರ್ವಹಿಸಲು ಜ್ಞಾನ ಹೊಂದಿರಬೇಕು.
5) ವಯಸ್ಸು 65 ವರ್ಷಗಳಿಗೆ ಮೀರಿರಬಾರದು.

ಟಿಪ್ಪಣಿ: ಕಾನೂನು ಹಿನ್ನೆಲೆಯುಳ್ಳ ಅಭ್ಯರ್ಥಿಗಳಿಗೆ ಆದ್ಯತೆ ನೀಡಲಾಗುವುದು.

ಅರ್ಜಿಗಳನ್ನು ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ ಕಛೇರಿಯಲ್ಲಿ ಅಥವಾ ಆಯೋಗದ ವೆಬ್‌ಸೈಟ್: **https://kerc.karnataka.gov.in** ನಿಂದ ಪಡೆಯಬಹುದು. ಭರ್ತಿ ಮಾಡಿದ ಅರ್ಜಿಯ ಜೊತೆಗೆ **ಕಾರ್ಯದರ್ಶಿ, ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ** ಇವರ ಹೆಸರಿಗೆ ಪಡೆದ **ರೂ. 1000/–** ಗಳ ಡಿಮ್ಯಾಂಡ್ ಡ್ರಾಫ್ಟ್‌ನ್ನು (ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡಗಳಿಗೆ **ರೂ. 100/–** ಗಳು) ಹಾಗೂ ಹುದ್ದೆಗೆ ಸಂಬಂಧಪಟ್ಟ ಅರ್ಹತಾ ಪತ್ರಗಳ ಪ್ರತಿಗಳೊಂದಿಗೆ ದಿನಾಂಕ: **31–07–2024 ರಂದು ಅಥವಾ ಇದಕ್ಕೆ ಮುಂಚಿತವಾಗಿ** ಕಾರ್ಯದರ್ಶಿಯವರಿಗೆ ತಲುಪುವಂತೆ ಕಳುಹಿಸಿಕೊಡುವುದು.

ಸಹಿ/– ಕಾರ್ಯದರ್ಶಿ
ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ ಪರವಾಗಿ

ವಾಸಾಸಂಇ/ವಾ.ಪ್ರ/909/2024–25

ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ

4ನೇ ಟಿ ಬ್ಲಾಕ್, ಜಯನಗರ, ಬೆಂಗಳೂರು – 560 041
ದೂ: 080–26961928 ಫ್ಯಾಕ್ಸ್–080–26961929

ಸಂಖ್ಯೆ:ರಾಗಾವಿ/ಪ್ರೊಕ್/ಎಸ್‌ಜಿ&ಹೆಚ್‌ಕೆ/112/2023–24 ದಿನಾಂಕ:11.07.2024

ಇ–ಟೆಂಡರ್ ಪ್ರಕಟಣೆ (ಆರ್‌ಎಫ್‌ಪಿ)

ಕುಲಸಚಿವರು, ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯಕ್ಕೆ ಭದ್ರತಾ, ಹೌಸ್‌ಕೀಪಿಂಗ್ ಮತ್ತು ಮೀನಿಯಲ್ ಸೇವೆಗಳನ್ನು ಒದಗಿಸಲು ಟೆಂಡರನ್ನು ಆಹ್ವಾನಿಸಿದ್ದಾರೆ. ಸೇವೆಗಳ ಬಗ್ಗೆ ಹೆಚ್ಚಿನ ವಿವರಗಳನ್ನು ಲಗತ್ತಿಸಿರುವ ಉಲ್ಲೇಖಿತ ಷರತ್ತುಗಳಲ್ಲಿ ಒದಗಿಸಲಾಗಿದೆ. **(Tender Reference Number: RGUHSK /2024-25/SE0012)**

ಟೆಂಡರ್ ದಾಖಲೆಗಳು ಡೌನ್‌ಲೋಡ್ ಮಾಡಲು ಲಭ್ಯತೆ	11/07/2024
ಟೆಂಡರ್ ವಿಚಾರಣೆ/ಆಕ್ಷೇಪಣೆಗಳಿಗೆ ಕೊನೆಯ ದಿನಾಂಕ ಮತ್ತು ಸಮಯ	24/07/2024 5:30 ಗಂಟೆಗೆ
ಬಿಡ್ ಪೂರ್ವಭಾವಿ ಸಭೆಯ ದಿನಾಂಕ	25/07/2024 11:30 ಗಂಟೆಗೆ
ಟೆಂಡರ್ ಸ್ವೀಕರಿಸುವ ಕೊನೆಯ ದಿನಾಂಕ ಮತ್ತು ಸಮಯ	12/08/2024 5:30 ಗಂಟೆಗೆ
ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ	14/08/2024 11:30 ಗಂಟೆಗೆ
ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ	17/08/2024 11:30 ಗಂಟೆಗೆ

ಹೆಚ್ಚಿನ ಮಾಹಿತಿಗಳನ್ನು **https://kppp.karnataka.gov.in** ನಿಂದ ಪಡೆದುಕೊಳ್ಳಬಹುದು.

ಸಹಿ/– ಕುಲಸಚಿವರು

ಡಿಐಪಿಆರ್/ಸ್ಪೆಕ್ಟ್ರಮ್/902/2024–25

ಪ್ರಜಾವಾಣಿ ಶನಿವಾರ, 13 ಜುಲೈ 2024

ಭೂಮಿಕಾ

ಮಹಿಳೆಯ ಆಪ್ತ ಸಂಗಾತಿ

ರ್‍ಯಾಲಿಯಲ್ಲಿ ಪಾಲ್ಗೊಂಡಿದ್ದ ಮಹಿಳೆಯರ ತಂಡ

ಸೇನಾ ನಾರಿ ಬೈಕ್ ಬೆನ್ನೇರಿ...

ಕಾರ್ಗಿಲ್ ವಿಜಯ ದಿನದ ಗೌರವಾರ್ಥ ಈಚೆಗಷ್ಟೇ ಭಾರತೀಯ ಸೇನೆಯು 25 ಮಹಿಳೆಯರ ‘ಆಲ್ ವುಮನ್ ಬೈಕ್ ರ್‍ಯಾಲಿ’ ಆಯೋಜಿಸಿತ್ತು. ಎರಡು ಸಾವಿರ ಕಿ.ಮೀ. ಮಾರ್ಗದ ಈ ರ್‍ಯಾಲಿಯಲ್ಲಿ ಪಾಲ್ಗೊಂಡಿದ್ದ ಬೆಂಗಳೂರಿನ ಇಬ್ಬರು ಮಹಿಳಾ ಸೇನಾಧಿಕಾರಿಗಳ ಅನುಭವ ಕಥನ ಇಲ್ಲಿದೆ.

ಮಂಜುಶ್ರೀ ಎಂ. ಕಡಕೋಳ

ಜುಲೈ 26. ಭಾರತೀಯ ಸೇನಾ ಇತಿಹಾಸದಲ್ಲಿ ಮರೆಯಲಾಗದ ದಿನ. ಅಂದು ಭಾರತ ಕಾರ್ಗಿಲ್ ಯುದ್ಧದಲ್ಲಿ ವಿಜಯ ಸಾಧಿಸಿದ ದಿನ. ಇಪ್ಪತ್ತೈದು ವರ್ಷಗಳ ಹಿಂದಿನ ಆ ದಿನ ಇಂದಿಗೂ ದೇಶಪ್ರೇಮಿಗಳ ಮನದಲ್ಲಿ ಹಸಿರಾಗಿದೆ. ಕಾರ್ಗಿಲ್ ಯುದ್ಧದಲ್ಲಿ ಹುತಾತ್ಮರಾದವರಿಗೆ ಗೌರವ ಸಲ್ಲಿಸಲು ಭಾರತೀಯ ಸೇನೆ ಈಚೆಗಷ್ಟೇ ಟಿವಿಎಸ್ ಮೋಟಾರ್ ಕಂಪನಿ ಜತೆಗೂಡಿ 25 ಮಹಿಳಾ ಬೈಕರ್‌ಗಳ ವಿಶಿಷ್ಟ ರ್‍ಯಾಲಿ ಆಯೋಜಿಸಿತ್ತು.

ಸುಮಾರು ಎರಡು ಸಾವಿರ ಕಿ.ಮೀ. ಮಾರ್ಗದ ಬೈಕ್ ರ್‍ಯಾಲಿಯಲ್ಲಿ ಭಾರತೀಯ ಸೇನೆಯ ವಿವಿಧ ವಿಭಾಗಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಮಹಿಳೆಯರು ಸೇರಿದಂತೆ ವಿವಿಧ ಕ್ಷೇತ್ರಗಳ 25 ಮಹಿಳೆಯರು ಪಾಲ್ಗೊಂಡಿದ್ದು ವಿಶೇಷ. ಲೇಹ್‌ನಿಂದ ಆರಂಭವಾದ ರ್‍ಯಾಲಿ ಲಡಾಕ್‌ನ ವಿವಿಧ ಸ್ಥಳಗಳ ಮೂಲಕ ಕಾರ್ಗಿಲ್ ಹುತಾತ್ಮರ ಸ್ಮಾರಕಕ್ಕೆ ತಲುಪುವ ಗುರಿ ಹೊಂದಿತ್ತು. ಜುಲೈ 4ರಿಂದ ಲೇಹ್‌ನಲ್ಲಿ ಆರಂಭವಾದ ಈ ಬೈಕ್ ರ್‍ಯಾಲಿಯಲ್ಲಿ ಸೇನೆಯಲ್ಲಿ ಸೇವೆ ಸಲ್ಲಿಸುತ್ತಿರುವ ಬೆಂಗಳೂರಿನ ಇಬ್ಬರು ಮಹಿಳೆಯರು ಭಾಗವಹಿಸಿದ್ದು ವಿಶೇಷ. ದುರ್ಗಮ ಹಾದಿಯಲ್ಲಿ ಬೈಕ್ ಸವಾರಿ ನಡೆಸಿದ್ದರ ಬಗ್ಗೆ ಬೆಂಗಳೂರಿನ ಪ್ರಿಯಾ ಮಿಶ್ರಾ ಹಾಗೂ ವೃಷ್ಟಿ ಎಂ.ಪಿ. ಅವರು ತಮ್ಮ ಅನುಭವ ಕಥನವನ್ನು ಹಂಚಿಕೊಂಡಿದ್ದಾರೆ.

ಕನಸು ಈಡೇರಿಸಿದ ರ್‍ಯಾಲಿ: ಪ್ರಿಯಾ ಮಿಶ್ರಾ

ಜೀವನದಲ್ಲಿ ಒಮ್ಮೆಯಾದರೂ ಲಡಾಕ್‌ಗೆ ಬೈಕ್‌ನಲ್ಲಿ ಹೋಗಬೇಕೆನ್ನುವುದು ಬಹುತೇಕ ಬೈಕರ್‌ಗಳ ಕನಸು. ಆ ಕನಸನ್ನು ನನ್ನ ಪಾಲಿಗೆ ನನಸು ಮಾಡಿದ್ದು ಭಾರತೀಯ ಸೇನೆ. 25 ಮಹಿಳೆಯರಿದ್ದ ನಮ್ಮ ತಂಡದಲ್ಲಿ ಟ್ರ್ಯಾಕ್ ರೇಸರ್, ಬೈಕ್ ರೈಡರ್ಸ್, ಈಗಾಗಲೇ ಇಂಥ ಹಲವು ಬೈಕ್ ರ್‍ಯಾಲಿಗಳಲ್ಲಿ ಪಾಲ್ಗೊಂಡ ಅನುಭವಿಗಳೂ ಇದ್ದರು. ಇಂಥ ತಂಡದಲ್ಲಿ ನಾನೂ ಒಬ್ಬಳಾಗಿದ್ದು ಹೆಮ್ಮೆಯ ಸಂಗತಿ. ‘ನಾರಿಶಕ್ತಿ’ ಎನ್ನುವ ಘೋಷವಾಕ್ಯದಡಿ ಆಯೋಜನೆಯಾಗಿದ್ದ ಈ ರ್‍ಯಾಲಿ ನನ್ನ ಪಾಲಿಗೆ ಅನುಭವದ ಗಣಿಯನ್ನೇ ತೆರೆದಿಟ್ಟಿತು. ಸೇನಾಧಿಕಾರಿಗಳು, ಉದ್ಯಮಿಗಳು, ಸರ್ವೀಸ್ ಆಫೀಸರ್‌ಗಳ ಪತ್ನಿಯರು, ಗೃಹಿಣಿಯರು ಹೀಗೆ ಸಮಾಜದ ವಿವಿಧ ಸ್ತರದ ಮಹಿಳೆಯರ ಒಡನಾಟ ದಕ್ಕಿತ್ತು. ನಮ್ಮೆಲ್ಲರ ಕನಸುಗಳು ಒಂಥರ್ದಲ್ಲಿ ನನಸಾಗಿ ಪರಿವರ್ತನೆಯಾಗಿದ್ದವು. ದೇಶಕ್ಕಾಗಿ ಹುತಾತ್ಮರಾದವರಿಗೆ ನಾರಿಶಕ್ತಿಯ ಮೂಲಕ ಗೌರವ ಸಲ್ಲಿಸುವ ಅಪೂರ್ವ ಅವಕಾಶ ನಮ್ಮದಾಗಿತ್ತು. 2 ಸಾವಿರ ಕಿ.ಮೀ ಹಾದಿ ಸಾಗುವುದು ಸುಲಭವಲ್ಲ. ಅದರಲ್ಲೂ 19 ಸಾವಿರ ಅಡಿಗಳಷ್ಟು ಎತ್ತರದಲ್ಲಿ ಬೈಕ್ ಸವಾರಿ ನಡೆಸಿದ್ದು ರೋಮಾಂಚನ ಮೂಡಿಸಿತ್ತು. ಭಾರತೀಯ ಸೇನೆಯ ಪ್ರೋತ್ಸಾಹ, ಮಾರ್ಗದರ್ಶನ ಬೆನ್ನಿಗೆ ಇದ್ದದ್ದು ನಮಗೆ ಮತ್ತಷ್ಟು ಹುರುಪು ಮೂಡಿಸಿತ್ತು.

ಚಳಿಯ ವಾತಾವರಣದಲ್ಲಿ 12 ದಿನಗಳ ಕಾಲ ಬೈಕ್ ಸವಾರಿ ಮಾಡುವುದು ಎಂಥವರಿಗೂ ಕಠಿಣವೇ. ನಿತ್ಯವೂ ನಮ್ಮ ವೈದ್ಯಕೀಯ ತಪಾಸಣೆ ನಡೆಯುತ್ತಿತ್ತು. ಅದರ ಆಧಾರದಲ್ಲೇ ನಮ್ಮ ರ್‍ಯಾಲಿ ಸಾಗುತ್ತಿತ್ತು. ಕಚ್ಚಾ ರಸ್ತೆಗಳು, ನದಿಯ ಮೂಲಕ ಹಾದುಹೋಗುವಾಗ ನಮ್ಮ ವಾಹನ ಚಾಲನೆಯ ಕೌಶಲ ನೆರವಿಗೆ ಬರುತ್ತಿತ್ತು. ದಣಿವಾದಾಗ ಎನರ್ಜಿ ಬಾರ್, ಎಳನೀರು, ಚಾಕೊಲೇಟ್ ನಮ್ಮ ಪಾಲಿಗೆ ಸಂಜೀವಿನಿಯಾಗಿದ್ದವು. ಕಾರ್ಗಿಲ್ ಯುದ್ಧ ಸ್ಮಾರಕದಲ್ಲಿ ರ್‍ಯಾಲಿ ಮುಕ್ತಾಯಗೊಳ್ಳುವ ಮುನ್ನ ಖರ್ದುಂಗ್ ಲಾ ಮತ್ತು ಉಮ್ಲಿಂಗ್ ಲಾ ಪಾಸ್‌ಗಳನ್ನು ದಾಟಬೇಕಿತ್ತು. ಇದು ತುಂಬಾ ಚಳಿಯಿರುವ ಪ್ರದೇಶ. ನಮ್ಮಲ್ಲಿನ ಕೆಲವರಿಗೆ ತಲೆನೋವು ಕಾಣಿಸಿಕೊಂಡರೆ, ಮತ್ತೆ ಕೆಲವರಲ್ಲಿ ಸುಸ್ತು ಕಾಣಿಸಿಕೊಂಡಿತ್ತು. ಆದರೆ, ಭಾರತೀಯ ಸೇನೆ ಮತ್ತು ಟಿವಿಎಸ್ ಮೋಟಾರ್ ಕಂಪನಿ ನೀಡಿದ ಮಾರ್ಗದರ್ಶನ ನೆರವಿಗೆ ಬಂತು. ಅಂಥದ್ದೇ ಮತ್ತೊಂದು ರೋಚಕ ಹಾದಿ ದೊಡ್ಡದೊಂದು ನದಿಯ ಮೂಲಕ ಹಾದು ಹೋಗುವಾಗ ಎದುರಾಗಿತ್ತು. ಅದನ್ನು ಸಾಹಸಮಯವಾಗಿ ಎದುರಿಸಿದೆವು. ಇಲ್ಲೆಲ್ಲ ಸೇನೆಯ ಸಮಯ ಪ್ರಜ್ಞೆ, ಶಿಸ್ತುಪಾಲನೆ ನಮ್ಮನ್ನು ಕಾಪಾಡಿದವು. ಕಷ್ಟದ ಹಾದಿಯಲ್ಲಿ, ಕಠಿಣ ಸನ್ನಿವೇಶಗಳಲ್ಲಿ ಸೇನೆ ನಮ್ಮನ್ನು ಹುರಿದುಂಬಿಸುತ್ತಿದ್ದ ರೀತಿ ಮರೆಯಲಾಗದ್ದು. ಹುತಾತ್ಮರ ಸ್ಮಾರಕಗಳನ್ನು ಹಾದು ಹೋಗುವಾಗ ಅವರ ಬಲಿದಾನ ನೆನಪಾಗಿ ಕಣ್ಣಂಚಿನಲ್ಲಿ ನೀರಾಡುತ್ತಿತ್ತು. ಯುದ್ಧದ ಕೊನೆ ಕ್ಷಣದಲ್ಲಿ ಅವರು ಎದುರಿಸಿದ ಸವಾಲು, ಸಾಯುವ ಮುನ್ನ ಅವರ ಮನದಲ್ಲಿ ನೆನಪಾಗಿರಬಹುದಾದ ಕುಟುಂಬ ಇವೆಲ್ಲವೂ ಮನದೊಳಗೆ ಸುಳಿದು ಕಣ್ಣೀರು ಜಿನುಗುತ್ತಿತ್ತು. ಹುತಾತ್ಮರಿಗೆ ಗೌರವ ಸಲ್ಲಿಸಲು ಮಹಿಳೆಯರಿಗೆ ಅವಕಾಶ ಕೊಟ್ಟ ಸೇನೆ ಆಯೋಜಿಸಿದ್ದ ಈ ರ್‍ಯಾಲಿ ಅವಿಸ್ಮರಣೀಯ.

ಅಡೆತಡೆ ಮೀರಿ ಮುನ್ನುಗ್ಗಿ: ವೃಷ್ಟಿ ಎಂ.ಪಿ.

ಬೈಕ್ ರ್‍ಯಾಲಿ ಮಹಿಳೆಯರಿಗಲ್ಲ ಎಂಬ ಮನೋಭಾವ ಹಲವರದ್ದು. ಆದರೆ, ಸೂಕ್ತ ತರಬೇತಿ ನೀಡಿದರೆ ನಾವೂ ಬೈಕ್ ರ್‍ಯಾಲಿಯಲ್ಲಿ ಪಾಲ್ಗೊಳ್ಳಬಹುದು ಎಂಬ ಆತ್ಮವಿಶ್ವಾಸ ಮೂಡಿಸಿದ್ದು ಭಾರತೀಯ ಸೇನೆ. ಪ್ರತಿಕೂಲ ಸನ್ನಿವೇಶದಲ್ಲೂ ಅಡೆತಡೆ ಮೀರಿ, ಮುನ್ನುಗ್ಗಿ ಗಮ್ಯ ಸ್ಥಾನ ತಲುಪುವುದು ಹೇಗೆ ಎನ್ನುವುದನ್ನು ಸೇನೆ ಕಲಿಸಿತು. ಅನುಭವಿ ಬೈಕ್ ರೈಡರ್‌ಗಳಿದ್ದ ನಮ್ಮ ತಂಡದಲ್ಲಿ ಪ್ರತಿ ಮಹಿಳೆಗೂ ಬೈಕ್ ತಂತ್ರಜ್ಞಾನದ ಅರಿವಿತ್ತು. ದೂರದ ಪ್ರಯಾಣಕ್ಕೆ ಬೇಕಾದ ಸಿದ್ಧತೆಯ ಜತೆಗೆ ಮಾರ್ಗಮಧ್ಯೆ ಎದುರಾಗಬಹುದಾದ ಸವಾಲುಗಳನ್ನು ಎದುರಿಸುವುದು ಸುಲಭವಾಗಿರಲಿಲ್ಲ. ಆದರೆ, ಸವಾಲು ಮೆಟ್ಟಿ ಮುನ್ನುಗ್ಗುವುದು ಕಠಿಣವಲ್ಲ ಎಂಬುದನ್ನೂ ರ್‍ಯಾಲಿ ಮನವರಿಕೆ ಮಾಡಿಕೊಟ್ಟಿತು. ಹೆಣ್ಣುಮಕ್ಕಳಲ್ಲೂ ಸಾಮರ್ಥ್ಯವಿದೆ. ಆದರೆ ಅವರಿಗೆ ತರಬೇತಿ ಬೇಕಷ್ಟೇ. ದೈಹಿಕ ಫಿಟ್‌ನೆಸ್ ಜತೆಗೆ ಮಾನಸಿಕ ಫಿಟ್‌ನೆಸ್ ಕೂಡಾ ಅಗತ್ಯ. ಈ ರ್‍ಯಾಲಿ ವಿವಿಧ ಕ್ಷೇತ್ರದ ಮಹಿಳೆಯರಿಗೆ ಅದ್ಭುತವಾದ ಅವಕಾಶ ಒದಗಿಸಿದೆ. ಮುಂದಿನ ದಿನಗಳಲ್ಲೂ ಮಹಿಳೆಯರಿಗೆ ಸೇನೆಯಲ್ಲಿ ಹೆಚ್ಚಿನ ಅವಕಾಶ ಸಿಗುತ್ತದೆ ಎಂಬ ನಂಬಿಕೆ ನನ್ನದು.

ಚೊಂಗೆ

ರಸಾಸ್ವಾದ

ಮೊಹರಂ ವಿಶೇಷ: ಚೊಂಗೆ, ಕಿಚಡಿ

ಸುಷ್ಮಾ ಸವಸುದ್ದಿ

ಮೊಹರಂ ತ್ಯಾಗ, ಬಲಿದಾನದ ಸ್ಮರಣೆಯ ಪ್ರತೀಕವಷ್ಟೇ ಅಲ್ಲ. ಅದು ಹಿಂದೂ– ಮುಸ್ಲಿಮರ ಭಾವೈಕ್ಯ ಸಾರುವ ಹಬ್ಬವೂ ಹೌದು. ಮೊಹರಂ ಹಬ್ಬ ಮಾಂಸಾಹಾರ ಪ್ರಿಯರಿಗಷ್ಟೇ ಅಲ್ಲದೇ, ಸಸ್ಯಾಹಾರಿಗಳಿಗೂ ಬಾಯಲ್ಲಿ ನೀರುಣಿಸುತ್ತದೆ. ಮೊಹರಂ ಸಮೀಪಿಸುತ್ತಿದ್ದು, ಹಬ್ಬದ ವಿಶೇಷ ಅಡುಗೆಯಾದ ಚೊಂಗೆ ಮತ್ತು ಕಿಚಡಿ ತಯಾರಿಸುವ ವಿಧಾನ ಇಲ್ಲಿದೆ

ಕಿಚಡಿ

ಬೇಕಾಗುವ ಸಾಮಗ್ರಿಗಳು: ಅಕ್ಕಿ, ತೊಗರಿ ಬೇಳೆ, ಈರುಳ್ಳಿ, ಕೊತ್ತಂಬರಿ, ಹಸಿ ಮೆಣಸಿನಕಾಯಿ, ಕರಿಬೇವು, ಚಕ್ಕೆ, ಲವಂಗ, ಬೆಳ್ಳುಳ್ಳಿ ಎಳಸು, ಉಪ್ಪು, ಅರಿಶಿಣ, ಎಣ್ಣೆ, ತುಪ್ಪ

ಮಾಡುವ ವಿಧಾನ: ಅಕ್ಕಿ ಮತ್ತು ತೊಗರಿ ಬೆಳೆಯನ್ನು ಒಂದು ಪಾತ್ರೆಯಲ್ಲಿ ಬೆರೆಸಿ, ತೊಳೆಯಬೇಕು. ಕೊಬ್ಬರಿ, ಲವಂಗ, ಚಕ್ಕೆ, ಬೆಳ್ಳುಳ್ಳಿಯನ್ನು ಮಿಕ್ಸಿಗೆ ಹಾಕಿ ರುಬ್ಬಿಕೊಳ್ಳಬೇಕು.

ಕುಕ್ಕರನ್ನು ಒಲೆ ಮೇಲಿಟ್ಟು, ಎಣ್ಣೆ, ಸ್ವಲ್ಪ ತುಪ್ಪ ಹಾಕಿ, ಕಾಯ್ದ ನಂತರ ಸಾಸಿವೆ, ಜೀರಿಗೆ, ಕರಿಬೇವು, ದೊಡ್ಡ ಗಾತ್ರದಲ್ಲಿ ಹೆಂಚಿದ ಈರುಳ್ಳಿ, ಹಸಿ ಮೆಣಸಿನಕಾಯಿ, ಅರಿಶಿಣ ಹಾಕಿ ಸ್ವಲ್ಪ ಕಂದು ಬಣ್ಣಕ್ಕೆ ಬರುವವರೆಗೆ ಚೆನ್ನಾಗಿ ಬೇಯಿಸಬೇಕು. ನಂತರ ತೊಳೆದಿಟ್ಟ ಅಕ್ಕಿ ಮತ್ತೆ ಬೆಳೆಯನ್ನು ಕುಕ್ಕರ್‌ಗೆ ಹಾಕಿ ಸರಿಯಾಗಿ ಮಿಕ್ಸ್ ಮಾಡಬೇಕು. ನಂತರ ರುಬ್ಬಿಟ್ಟುಕೊಂಡ ಕೊಬ್ಬರಿಯನ್ನು ಅದಕ್ಕೆ ಹಾಕಿ ಚೆನ್ನಾಗಿ ಎಲ್ಲವನ್ನು ಮಿಕ್ಸ್ ಮಾಡಿಕೊಂಡು ಕುಕ್ಕರ್ ಬಾಯಿ ಹಾಕಿ ಮೂರು ವಿಜಲ್ ಕೂಗಿಸಿದರೇ ಕಿಚಡಿ ರೆಡಿ.

ಚೊಂಗೆ

ಬೇಕಾಗುವ ಸಾಮಗ್ರಿಗಳು: 1 ಕಪ್ ಗೋಧಿ ಹಿಟ್ಟು, ತುರಿದ ಕೊಬ್ಬರಿ, ಬೆಲ್ಲ, ಸ್ವಲ್ಪ ಸೋಂಪು, ಸ್ವಲ್ಪ ಗಸಗಸೆ, ಏಲಕ್ಕಿ ಪುಡಿ, ಉಪ್ಪು ಎಣ್ಣೆ.

ಮಾಡುವ ವಿಧಾನ: ಗೋಧಿ ಹಿಟ್ಟಿಗೆ ಸ್ವಲ್ಪ ಉಪ್ಪು, ನೀರು ಹಾಕಿ ಹದವಾಗಿ ನಾದಿಕೊಂಡು, 10 ನಿಮಿಷ ಹಾಗೇ ಬಿಡಬೇಕು. ಒಂದು ಪಾತ್ರೆಯಲ್ಲಿ ಸ್ವಲ್ಪ ನೀರು ಹಾಕಿ ಬೆಲ್ಲ ಕರಗಿಸಿ ಪಾಕ ಮಾಡಬೇಕು. ಬಿಸಿ ಪಾಕಕ್ಕೆ ಏಲಕ್ಕಿ ಪುಡಿ ಹಾಕಬೇಕು. ಚಪಾತಿ ಲಟ್ಟಿಸಿಕೊಳ್ಳಬೇಕು, ಅದನ್ನು ರೋಲ್ ಮಾಡಿ ಮತ್ತೊಮ್ಮೆ ಉಳ್ಳಿ ಮಾಡಿ, ಚಿಕ್ಕದಾಗಿ, ದಪ್ಪ ಇರುವಂತೆ ಲಟ್ಟಿಸಿಕೊಳ್ಳಬೇಕು. ಅದನ್ನು ಬೇಯಿಸಿ, ಅದರ ಒಂದು ಬದಿಗೆ ಪಾನಕ, ಕೊಬ್ಬರಿ, ಸೋಂಪು, ಗಸಗಸೆ ಹಾಕಿದರೆ ಚೊಂಗೆ ತಯಾರು.

ಗರ್ಭಧಾರಣೆ ಯೋಜಿತವಾಗಿರಲಿ

ಸ್ಪಂದನ

ಡಾ. ವೀಣಾ ಎಸ್. ಭಟ್

- **ನಾನು ಬ್ಯಾಂಕ್ ಉದ್ಯೋಗಿ, 30 ವರ್ಷಗಳು. 25ನೇ ವರ್ಷಕ್ಕೆ ಮದುವೆಯಾಗಿ, ಆರು ತಿಂಗಳ ಒಳಗೆ ಗರ್ಭಧಾರಣೆಯಾಯಿತು. ವೃತ್ತಿಯ ಕಾರಣಕ್ಕೆ ಗರ್ಭಪಾತ ಆಗಲು ಮಾತ್ರೆಗಳನ್ನು ತೆಗೆದುಕೊಂಡಿದ್ದೆ. ಸರಿಯಾಗಿ ಗರ್ಭಪಾತವಾಗಿಲ್ಲವೆಂದು ಆಸ್ಪತ್ರೆಯಲ್ಲಿ ಡಿ ಅಂಡ್ ಸಿ ಮಾಡಿದ್ದರು. ನಂತರ ಒಂದು ವರ್ಷ ಓಸಿ ಪಿಲ್ಸ್ ತೆಗೆದುಕೊಳ್ಳುತ್ತಿದ್ದೆ. ಈಗ ಮೂರು ವರ್ಷಗಳಿಂದ ಮಗು ಬೇಕೆಂದು ಪ್ರಯತ್ನಿಸುತ್ತಿದ್ದೇವೆ. ವೈದ್ಯರು ಚಿಕಿತ್ಸೆ ಕೊಡುತ್ತಿದ್ದಾರೆ, ಆದರೂ ಮಕ್ಕಳಾಗುತ್ತಿಲ್ಲ. ನನಗೆ ಭಯವಾಗುತ್ತಿದೆ ನಾನೂ ಐವಿಎಫ್ ಗೆ ಮೊರೆ ಹೋಗಬೇಕಾ?**

ಉತ್ತರ: ನೀವು ಮೊದಲ ಗರ್ಭಧಾರಣೆಯಲ್ಲೇ ಗರ್ಭಪಾತ ಮಾಡಿಸಿದ್ದು ಸರಿಯಲ್ಲ. ಯಾಕೆಂದರೆ ಮದುವೆಯಾದ ಒಂದೆರಡು ವರ್ಷದೊಳಗೆ ಅಂದರೆ ನಿಮಗೆ 27 ವರ್ಷವಾಗುವುದರೊಳಗೆ ನೀವು ಮಗು ಪಡೆದಿದ್ದರೆ ಒಳ್ಳೆಯದಿತ್ತು. 28 ವರ್ಷಗಳ ನಂತರ ಫಲವಂತಿಕೆ ಕಡಿಮೆಯಾಗುತ್ತಾ ಹೋಗುತ್ತದೆ. ನೀವು ವಿದ್ಯಾವಂತರು, ತಿಳಿದವರು ಹಾಗೆಯೇ ಮದುವೆಗೆ ಮೊದಲೇ ಅಥವಾ ಮದುವೆಯಾದ ತಕ್ಷಣವೇ ಸಂತಾನ ನಿಯಂತ್ರಣ ಕ್ರಮಗಳನ್ನು ಅಳವಡಿಸಿಕೊಳಬಹುದಿತ್ತಲ್ಲವೆ? ವೈದ್ಯರನ್ನು ಸಂಪರ್ಕಿಸಿ ಸೂಕ್ತ ಮಾರ್ಗದರ್ಶನ ಪಡೆಯಬಹುದಿತ್ತು. ಮಗುವಾಗುವ ಪ್ರಕ್ರಿಯೆ ಅತ್ಯಂತ ಸಂಕೀರ್ಣ. ಮಕ್ಕಳಾಗದಿದ್ದಾಗಲೇ ಆ ಪ್ರಕ್ರಿಯೆಯ ಸಂಕೀರ್ಣತೆ ಹಾಗೂ ಪ್ರಾಮುಖ್ಯತೆಯ ಅರಿವಾಗುತ್ತದೆ. ಮದುವೆಯಾದ ಹೊಸತರಲ್ಲಿ ಬಹಳಷ್ಟು ದಂಪತಿಗಳು ಯೋಜಿತ ಗರ್ಭಧಾರಣೆ ಮಾಡಿಕೊಳ್ಳದೇ ಗರ್ಭಪಾತಕ್ಕೆ ಮುಂದಾಗುತ್ತಾರೆ. ಕೆಲವೊಮ್ಮೆ ವೈದ್ಯರ ಸಲಹೆಯನ್ನು ಧಿಕ್ಕರಿಸಿ ಸ್ವಯಂ ಗರ್ಭಪಾತ ಮಾತ್ರೆಗಳನ್ನು ತೆಗೆದುಕೊಳ್ಳುತ್ತಾರೆ. ಎಷ್ಟೋ ಬಾರಿ ಮಾತ್ರೆಗಳಿಂದ ಗರ್ಭಪಾತ ಸರಿಯಾಗಿ ಆಗದೆ ವೈದ್ಯರು ಆಸ್ಪತ್ರೆಯಲ್ಲಿ ಡಿ ಅಂಡ್ ಸಿ ಮಾಡಬೇಕಾಗಿ ಬರಬಹುದು. ಎಂಥ ಅತ್ಯಾಧುನಿಕ ಆಸ್ಪತ್ರೆಯಲ್ಲೇ, ಗರ್ಭಪಾತವಾಗಿದ್ದರೂ, ತಜ್ಞವೈದ್ಯರೇ ಚಿಕಿತ್ಸೆ ಕೊಟ್ಟರೂ ಮೊದಲ ಗರ್ಭಪಾತದ ನಂತರ ಗರ್ಭಕೋಶ, ಗರ್ಭನಾಳ ಸೋಂಕಾಗಿ ನಂತರ ಗರ್ಭನಾಳಕ್ಕೆ ತಡೆ ಉಂಟಾಗಬಹುದು. (ಟ್ಯೂಬಲ್ ಬ್ಲಾಕ್) ಹಾಗಾಗಿ ಮೊದಲನೇ ಗರ್ಭಪಾತಕ್ಕೆ ವೈದ್ಯರು ಅನುಮೋದಿಸುವುದಿಲ್ಲ.

ಮದುವೆಯಾಗುವ ಮೊದಲೇ ದಂಪತಿಗೆ ಮಕ್ಕಳಾಗುವ ಪ್ರಕ್ರಿಯೆಯ ಬಗ್ಗೆ, ಯೋಜಿತ ಗರ್ಭಧಾರಣೆಯ ಬಗ್ಗೆ ತೆಗೆದುಕೊಳ್ಳುವ ಮುಂಜಾಗ್ರತೆಗಳ ಬಗ್ಗೆ ತಿಳಿದಿರಬೇಕು. ಸಾಕಷ್ಟು ಮುಂಜಾಗ್ರತಾ ಕ್ರಮಗಳನ್ನು ಗಂಡ ಹೆಂಡತಿಯ ಲೈಂಗಿಕ ಸಂಪರ್ಕವಾಗುವ ಮೊದಲೇ ಅನುಸರಿಸಬೇಕು. ನೀವೀಗ ಆಗಿ ಹೋಗಿರುವ ಘಟನೆಯ ಬಗ್ಗೆ ಚಿಂತಿಸದೇ ಚಿಕಿತ್ಸೆಯನ್ನ ಮುಂದುವರಿಸಿರಿ. ನಿಮ್ಮ ಗರ್ಭನಾಳ ಹಾಗೂ ಗರ್ಭಕೋಶ ಸರಿ ಇದೆ ಎಂದು ಪರೀಕ್ಷಿಸಲು ಎಚ್.ಎಸ್.ಜಿ ಎಂಬ ಎಕ್ಸರೆ ಪರೀಕ್ಷೆ ಮಾಡಿಸಿ. ಅದರ ವರದಿಯಲ್ಲಿ ಗರ್ಭನಾಳ ಸರಿ ಇದೆ ಎಂದು ಬಂದರೆ ಚಿಂತಿಸಬೇಡಿ. ನೀವು ಪ್ರತಿ ತಿಂಗಳು ಮುಟ್ಟಾಗುತ್ತಿದ್ದಲ್ಲಿ ನಿಮಗೆ ಅಂಡೋತ್ಪತ್ತಿ ಸರಿಯಾಗಿ ಆಗುತ್ತಿದೆ ಎಂದೇ ಅರ್ಥ. ನೀವು 5 ಮಿ.ಗ್ರಾಂ ಫೋಲಿಕ್ ಆಸಿಡ್ ಮಾತ್ರೆಯನ್ನ ದಿನವೂ ತಪ್ಪದೇ ಸೇವಿಸುತ್ತಿರಿ.

ಋತು ಫಲಪ್ರದ ದಿನಗಳಲ್ಲಿ ಅಂದರೆ ಮುಟ್ಟಾಗಿ 8 ರಿಂದ 18 ದಿನದೊಳಗೆ ಲೈಂಗಿಕ ಸಂಪರ್ಕ ಪ್ರತಿ ಋತುಚಕ್ರದಲ್ಲೂ ಮಾಡಿದಾಗ ಗರ್ಭಧಾರಣೆ ಬೇಗನೆ ಆಗುವ ಸಂಭವ ಇದೆ. ತಜ್ಞವೈದ್ಯರನ್ನು ಸಂಪರ್ಕಿಸಿ, ಅವರ ಮೇಲ್ವಿಚಾರಣೆಯಲ್ಲಿ ಮಾತ್ರೆಗಳನ್ನು ತೆಗೆದುಕೊಳ್ಳುತ್ತಾ ಪ್ರಯತ್ನ ಮುಂದುವರಿಸಿ.

ಎಲ್ಲ ಪ್ರಯತ್ನಗಳೂ ಫಲಕಾರಿ ಆಗದಿದ್ದಾಗ ಮಾತ್ರ ಐವಿಎಫ್ (ಪ್ರನಾಳಶಿಶು) ಬಗ್ಗೆ ವೈದ್ಯರೇ ತಿಳಿಸುತ್ತಾರೆ. ನೀವು ಗರ್ಭಧಾರಣೆಯ ಬಗ್ಗೆ ಧನಾತ್ಮಕವಾಗಿದ್ದರೆ ಅದು ನಿಮ್ಮ ಫಲವಂತಿಕೆಯನ್ನು ಹೆಚ್ಚಿಸುತ್ತದೆ. ನಿಮಗೆ ಬೇಗನೆ ಮಗುವಾಗಲು ಸಾಧ್ಯವಾಗುತ್ತದೆ. ❖

ಮುಟ್ಟು, ಗರ್ಭಧಾರಣೆ, ಋತುಬಂಧ, ಹಾರ್ಮೋನ್ ಮುಂತಾದ ಸಮಸ್ಯೆಗಳ ಬಗ್ಗೆ ಪ್ರಶ್ನೆಗಳನ್ನು ನಮಗೆ ಕಳುಹಿಸಬಹುದು. ನಿಮ್ಮ ಪ್ರಶ್ನೆಗಳಿಗೆ ಪ್ರಸೂತಿ ಮತ್ತು ಸ್ತ್ರೀರೋಗತಜ್ಞೆ ಡಾ.ವೀಣಾ ಎಸ್. ಭಟ್ ಅವರು ಉತ್ತರಿಸಲಿದ್ದಾರೆ. ಪ್ರಶ್ನೆಗಳನ್ನು bhoomika@prajavani.co.inಗೆ ಕಳುಹಿಸಬಹುದು

ಬಳೆಗಳಲ್ಲಿ ಅವತರಿಸಿದ ಫ್ಯಾಷನ್

ಸ್ಮಿತಾ ಶಿರೂರ

ಬಳೆಗಳ ಗಣಗಣ, ಕಣಕಣ ಈಚೆಗೆ ಕಡಿಮೆಯಾಗಿದೆ. ಎಂದರೆ, ಬಳೆ ಹಾಕಿಕೊಳ್ಳುವ ಸಂಸ್ಕೃತಿ ಮಾಯವಾಗುತ್ತಿದೆ ಎಂದಲ್ಲ. ಕೈತುಂಬಾ ಬಳೆ ಇಡುವ, ಶಬ್ದ ಬರುವ ಗಾಜಿನ ಬಳೆಗಳನ್ನು ಧರಿಸುವ ರೂಢಿ ಸ್ವಲ್ಪ ಕಡಿಮೆಯಾಗಿದೆ. ಸಮಕಾಲೀನ ವಿನ್ಯಾಸಗಳಿಗೆ ಇಂದಿನ ಯುವಪೀಳಿಗೆ ಮಹತ್ವ ನೀಡುತ್ತಿದೆ. ಹೀಗಾಗಿ ಹೊಸ ವಸ್ತು, ವಿನ್ಯಾಸಕ್ಕಾಗಿ ಹುಡುಕಾಟ ನಿರಂತರ. ಪ್ಲಾಸ್ಟಿಕ್, ಮರ, ಸಿರಾಮಿಕ್, ಬಟ್ಟೆ, ರೇಷ್ಮೆ ಹಾಗೂ ಹೊಸ ಮಾದರಿಗಳಿಂದ ಮಾಡಿದಂಥ ಬಳೆಗಳು ಬೇಡಿಕೆ ಪಡೆಯುತ್ತಿವೆ.

ವೃತ್ತಾಕಾರ ಮೀರಿ ವಿವಿಧ ಆಕಾರಗಳಲ್ಲಿಯೂ ಬಳೆಗಳು ಮೂಡಿ ಬರುತ್ತಿವೆ. ಅಲೆಗಳು, ಚಿಪ್ಪಿನ ಆಕಾರದವು, ಎಲೆಗಳಂತೆ ಕಾಣುವ ಬಳೆಗಳು ಹೊಸ ಅಲೆಯನ್ನೇ ಸೃಷ್ಟಿಸಿವೆ. ಫ್ಯಾಷನ್ ಜಗತ್ತಿನ ಚಲನಶೀಲತೆಗೆ ವೇಗ ದೊರಕಿಸಿವೆ ಇಂಥ ನವೀನ ಪ್ರಯೋಗಗಳು. ವಿವಾಹ, ಕಚೇರಿ, ಸಭೆ, ಸಮಾರಂಭ, ಹಬ್ಬ, ಮಾರುಕಟ್ಟೆ, ಸ್ನೇಹಿತೆಯರ ಮನೆಗಳಿಗೆ ಹೋಗಬೇಕಾದಾಗೆಲ್ಲ ಯಾವ ಬಳೆ ಹಾಕಲಿ ಎಂಬ ಪ್ರಶ್ನೆ ನಾರಿಯ ಮನದಲ್ಲಿ ಬಂದೇ ಬರುತ್ತದೆ. ಸಂಪ್ರದಾಯದ ಹಂಗನ್ನು ಇಷ್ಟ ಪಡದವರೂ ಬಳೆಗಳ ಮೋಹದಿಂದ ಬಿಡಿಸಿಕೊಳ್ಳುವುದಿಲ್ಲ. ಕಾಲಕಾಲಕ್ಕೆ ಬಳೆಗಳು ನವೀನ ರೂಪ ತಳೆದು ಬರುತ್ತಿವೆ. ಆದರೆ ಹೆಣ್ಣುಮಕ್ಕಳಲ್ಲಿ ಇದರ ಕ್ರೇಜ್ ಕಡಿಮೆ ಆಗಿಲ್ಲ.

ಕಫ್ ಬ್ಯಾಂಗಲ್: ಮಾಡರ್ನ್ ಡ್ರೆಸ್ ಅದರಲ್ಲೂ ಕುರ್ತಾ ಹಾಗೂ ಚೂಡಿದಾರ್‌ಗಳಿಗೆ ಹೊಂದುವ ಕಫ್ ಬ್ಯಾಂಗಲ್ ಅನ್ನು ಇಷ್ಟ ಪಡದವರು ಇಲ್ಲ. ಇವು ಸಿಂಗಲ್ ಆಗಿಯೇ ಸುಂದರವಾಗಿ ಕಾಣುತ್ತವೆ.

ಪಂಜಾಬಿ ಚೂಡಾ: ಈಚೆಗೆ ಬಳೆಗಳಲ್ಲಿ ಪಂಜಾಬಿ ಚೂಡಾ ಮಾದರಿಯವು ಹೆಚ್ಚು ಸದ್ದು ಮಾಡುತ್ತಿದೆ. ಇವು ಕೆಂಪು– ಬಿಳಿ ಬಣ್ಣದ ಸಂಯೋಜನೆಯಲ್ಲಿ ಇರುವಂಥವು. ಬಳೆಗಳಿಗೆ ಜೋಲುವ ನಕ್ಷತ್ರ, ಕಿವಿಯೋಲೆ ಅಥವಾ ಥರಥರದ ಚಿತ್ತಾರಗಳು ಬಳೆಗಳ ಸೌಂದರ್ಯವನ್ನು ಇಮ್ಮಡಿಗೊಳಿಸುತ್ತವೆ. ವಿವಾಹ ಸಮಾರಂಭದಲ್ಲಿ ವಧು ಇದನ್ನು ಧರಿಸುವುದು ವಾಡಿಕೆ. ಆದರೆ ಉಳಿದ ಸಂದರ್ಭಕ್ಕೂ ತಕ್ಕಂತೆ ಚೂಡಾ ವಿನ್ಯಾಸಗೊಂಡಿವೆ. ಸಾಂಪ್ರದಾಯಿಕ ಡ್ರೆಸ್‌ಗಳಿಗೆ ಇದು ಸೂಕ್ತ.

ರೇಷ್ಮೆ ಎಳೆಗಳ ಬಳೆ: ಬಳೆಗಳಿಗೆ ರೇಷ್ಮೆ ದಾರಗಳನ್ನು ಸುತ್ತಿ ಅದರ ಮೇಲೆ ಕುಂದನ್ ವರ್ಕ್ ಮಾಡಿದ ಬಳೆಗಳು ದುಬಾರಿಯಾದರೂ ಚಿತ್ತಾಕರ್ಷಕವಾಗಿರುತ್ತವೆ. ರೇಷ್ಮೆ ಸೀರೆಗಳಿಗೆ ಅತ್ಯಂತ ಸೂಕ್ತ. ಇದೇ ಮಾದರಿಯಲ್ಲಿ ಹೂಗಳ ವಿನ್ಯಾಸ ಮಾಡಿದಂಥ ಬಳೆಗಳೂ ಮಾರುಕಟ್ಟೆಗೆ ಲಗ್ಗೆಯಿಟ್ಟು ಮಹಿಳೆಯರ ಮನಗೆದ್ದಿವೆ.

ಮುತ್ತಿನ ಬಳೆ: ಹೈದರಾಬಾದ್ ಮುತ್ತುಗಳ ಬಳೆಗಳು ಬಹಳ ಕಾಲದಿಂದಲೂ ಮಹಿಳೆಯರ ಮೆಚ್ಚುಗೆ ಗಳಿಸಿವೆ. ಈಗಲೂ ಇದರ ಮಹತ್ವ ಕಡಿಮೆ ಆಗಿಲ್ಲ. ಇದು ಸಹ ಸಾಂಪ್ರದಾಯಿಕ ಡ್ರೆಸ್‌ಗಳಿಗೆ ಹೆಚ್ಚಾಗಿ ಒಪ್ಪುವಂಥದ್ದು. ಅದರಲ್ಲೂ ಸೀರೆ, ಲೆಹೆಂಗಾಗಳಿಗೆ ಸೂಕ್ತ.

ಕರಕುಶಲ ಕಲೆ: ಹಿತ್ತಾಳೆಯ ಕರಕುಶಲ ಕೆತ್ತನೆ ಒಳಗೊಂಡ ದಪ್ಪ ಬಳೆಗಳು ವಿಶಿಷ್ಟ ಲುಕ್ ನೀಡುತ್ತವೆ. ಇವು ಮಾಡರ್ನ್ ಡ್ರೆಸ್ ಹಾಗೂ ಸಾಂಪ್ರದಾಯಿಕ ಎರಡೂ ರೀತಿಯ ಡ್ರೆಸ್‌ಗಳಿಗೆ ಒಪ್ಪುತ್ತದೆ.

ವಿವಿಧ ಲೋಹಗಳ ಮಿಶ್ರಣ ಮಾಡಿದ ಬಳೆಗಳೂ ಹೊಸ ಅವತಾರವೇ ಆಗಿದೆ. ಚಿನ್ನದೊಂದಿಗೆ ಬೆಳ್ಳಿ, ವೈಟ್ ಗೋಲ್ಡ್ ಜೊತೆ ರೋಸ್ ಗೋಲ್ಡ್, ಮ್ಯಾಟ್ ಫಿನಿಶ್ ಹಾಗೂ ಹೆಚ್ಚಿನ ಹೊಳಪು ಬರುವಂತೆ ಮಾಡಿದಂಥವು ಇವೆ. ಇಂಥ ಹಲವು ಹೊಸ ವೈವಿಧ್ಯಗಳು ಬಳೆಗಳನ್ನು ತಮಗೆ ಬೇಕಾದಂತೆ, ಬಟ್ಟೆಗೆ ಮ್ಯಾಚ್ ಆಗುವಂತೆ ಹೊಂದಿಸಿಕೊಳ್ಳುವಂಥ ಅವಕಾಶವನ್ನು ನೀಡಿವೆ.

ಆಕ್ಸಿಡೈಸ್ಡ್ ಸಿಲ್ವರ್ ಪ್ಲೇಟೆಡ್ ಬಳೆಗಳು, ಮುತ್ತುಗಳಿಂದ ತುಂಬಿದ ಗೋಲ್ಡ್ ಪ್ಲೇಟೆಡ್, ಆ್ಯಂಟಿಕ್ ಲುಕ್ ಇರುವಂಥವು, ಮಣಿಗಳು ಹುದುಗಿರುವ, ಕುಂದನ್‌ಗಳನ್ನು ಜೋಡಿಸಿದ ಗೋಲ್ಡ್ ಹಾಗೂ ಸಿಲ್ವರ್ ಪ್ಲೇಟೆಡ್, ವೆಲ್ವೆಟ್ ಸಿಲ್ವರ್ ಥ್ರೆಡ್, ವೆಲ್ವೆಟ್ ಗೋಲ್ಡ್ ಥ್ರೆಡ್, ಅಮೆರಿಕನ್ ಡೈಮಂಡ್, ಮಲ್ಟಿ ಕಲರ್ ಮೆಟಲ್ ಬಳೆಗಳು, ಝಿರ್ಕಾನ್ ರತ್ನ ಖಚಿತ ಬಳೆಗಳು, ಮಣಿಗಳನ್ನು ಜೋಡಿಸಿ ಮಾಡಿದಂಥ ಬಳೆಗಳು ಮಾರುಕಟ್ಟೆಯಲ್ಲಿ ಮಿಂಚುತ್ತಿವೆ.

ಒಂದೇ ಬಣ್ಣದ ಬಳೆ ತೊಡುವ ಕಾಲ ಹೋಗಿದೆ. ಹಲವು ಬಣ್ಣಗಳ ಬಳೆ ಸಂಯೋಜನೆ ಮಾಡಿ ಹಾಕಿಕೊಳ್ಳುವುದೇ ಈಗ ಫ್ಯಾಷನ್ ಆಗಿದೆ. ಕೈಗೆ ಸರಿಹೊಂದುವಂತೆ ಮಾಡುವ ತಂತ್ರಜ್ಞಾನವೂ ಬಂದಿರುವುದರಿಂದ ಬಳೆಗಳನ್ನು ಧರಿಸುವುದು ಈಗ ಮೊದಲಿಗಿಂತ ಸುಲಭ. ❖

ಮುಂದೆ ಬಂದ ಕಡಗ

ಇಂದಿಗೂ ದೇಶದ ಹಲವು ಭಾಗಗಳಲ್ಲಿ ಅಲ್ಲಿಯದ್ದೇ ಆದ ಬಳೆಗಳ ವಿಶೇಷತೆ ಉಳಿದುಕೊಂಡಿದೆ. ಅವುಗಳಿಗೆ ಈಗಲೂ ಬೇಡಿಕೆ ಸಹ ಇದೆ. ಕಡಿಮೆ ಬಳೆ ಇಟ್ಟುಕೊಳ್ಳುವುದು, ಒಂದೇ ಕೈಗೆ ಬಳೆ ಹಾಕುವುದೂ ಸಹ ಹೊಸ ಫ್ಯಾಷನ್. ಸಿಂಗಲ್ ಬಳೆ ಇಡುವುದು ಸಾಮಾನ್ಯವಾಗಿದ್ದರೆ, ಕಡಗ ಮಾದರಿಯಲ್ಲಿ ಈಗ ಬಳೆಯ ವೈವಿಧ್ಯತೆ ಅವತರಿಸಿದೆ.

ಶಾಸಕರ ಬದಲಿಗೆ ತಂತ್ರಜ್ಞರಿಗೆ ಅವಕಾಶ: ಐಎಎಸ್ ಅಧಿಕಾರಿ ನಿಯೋಜನೆಗೆ ಆಗ್ರಹ

ಮುಡಾ ಸಮಿತಿಗೆ ಸಿಗುವುದೇ ಕಾಯಕಲ್ಪ?

• ಆರ್. ಜಿತೇಂದ್ರ

ಮೈಸೂರು: ಮುಡಾ ಹಗರಣದಿಂದ ಮುಜುಗರಕ್ಕೆ ಒಳಗಾಗಿರುವ ರಾಜ್ಯ ಸರ್ಕಾರ ಈಗ ಇರುವ ಸಮಿತಿಯಿಂದ ಶಾಸಕರಿಗೆ ಗೇಟ್‌ಪಾಸ್ ನೀಡಿ, ಅವರ ಜಾಗದಲ್ಲಿ ತಂತ್ರಜ್ಞರಿಗೆ ಅವಕಾಶ ನೀಡಲು ಚಿಂತನೆ ನಡೆಸಿದೆ. ಮತ್ತೊಂದೆಡೆ, 'ಆಯುಕ್ತರ ಹುದ್ದೆಗೆ ಐಎಎಸ್ ದರ್ಜೆಯ ದಕ್ಷ ಅಧಿಕಾರಿಯನ್ನೇ ನೇಮಿಸಬೇಕು' ಎಂಬ ಕೂಗು ಸಹ ಜೋರಾಗಿದೆ.

ಪ್ರಸ್ತುತ ಮುಡಾ ಸಮಿತಿಯಲ್ಲಿ ವಿವಿಧ ಪಕ್ಷಗಳ 13 ಶಾಸಕರು ಹಾಗೂ ವಿಧಾನ ಪರಿಷತ್ ಸದಸ್ಯರಿದ್ದಾರೆ. ಅವರೊಟ್ಟಿಗೆ ಅಧಿಕಾರಿಗಳಿಗೆ ಮಾತ್ರ ಸ್ಥಾನ ಕಲ್ಪಿಸಲಾಗಿದೆ. ನಿರ್ಮಾಣ ಕ್ಷೇತ್ರದ ಯಾವುದೇ ತಂತ್ರಜ್ಞರು, ಅನುಭವಿಗಳು ಹಾಗೂ ಕಾನೂನು ತಜ್ಞರು ಸಮಿತಿಯಲ್ಲಿ ಸ್ಥಾನ ಪಡೆದಿಲ್ಲ.

'ಮುಡಾ ಯೋಜನಾ ಪ್ರದೇಶ (ಪ್ಲಾನಿಂಗ್ ಏರಿಯಾ) ಹಿಗ್ಗಿದೆಂತೆಲ್ಲ ಸಮಿತಿಯಲ್ಲಿ ಸದಸ್ಯರ ಸಂಖ್ಯೆ ಹೆಚ್ಚುತ್ತಿದೆ. ಕೇವಲ ಒಂದು ಗ್ರಾಮ ಮುಡಾಕ್ಕೆ ಒಳಪಟ್ಟರೂ ಅಂತಹ ಕ್ಷೇತ್ರದ ಶಾಸಕರಿಗೂ ಸದಸ್ಯತ್ವ ಸಿಗುತ್ತಿದೆ. ಕೆಲ ಶಾಸಕರು ಮುಡಾ ಸದಸ್ಯತ್ವಕ್ಕಾಗಿಯೇ ತಮ್ಮ ವಿಳಾಸ ಬದಲಿಸಿಕೊಂಡ ಉದಾಹರಣೆಗಳೂ ಇವೆ. ಇದರಿಂದ ಮುಡಾ ಮೇಲೆ ರಾಜಕೀಯ ಪ್ರಭಾವ ಹೆಚ್ಚಾಗುತ್ತಿದೆ. ಆದರೆ, ಅದರಿಂದ ಪ್ರಾಧಿಕಾರಕ್ಕೆ ಆಗಿರುವ ಪ್ರಯೋಜನ ಏನು' ಎಂದು ಮುಡಾದ ನಿವೃತ್ತ ಅಧಿಕಾರಿಯೊಬ್ಬರು ಪ್ರಶ್ನಿಸುತ್ತಾರೆ.

ಠೇವಣಿ: ನಿಯಮ ಉಲ್ಲಂಘಿಸಿಲ್ಲ

'ಮುಡಾ ಖಾತೆಯಲ್ಲಿದ್ದ ₹250 ಕೋಟಿ ಹಣವನ್ನು ಎಸ್‌ಬಿಐನಲ್ಲಿ ಠೇವಣಿ ಇಟ್ಟಿದ್ದರಲ್ಲಿ ಯಾವುದೇ ಅಕ್ರಮದ ಉದ್ದೇಶ ಇರಲಿಲ್ಲ. ಅದರಿಂದ ಮುಡಾಕ್ಕೆ ಬರುವ ಬಡ್ಡಿ ಹೆಚ್ಚಿಸುವುದಷ್ಟೇ ಉದ್ದೇಶವಾಗಿತ್ತು' ಎಂದು ಮುಡಾದ ಅಂದಿನ ಆಯುಕ್ತ ಡಿ.ಬಿ. ನಟೇಶ್ ಸ್ಪಷ್ಟನೆ ನೀಡಿದ್ದಾರೆ.

'ಪ್ರಜಾವಾಣಿ'ಯಲ್ಲಿ ಶುಕ್ರವಾರ ಪ್ರಕಟವಾದ ವರದಿಗೆ ಪ್ರತಿಕ್ರಿಯಿಸಿರುವ ಅವರು, 'ಈ ಮೊದಲು ಬೇರೆ ಬ್ಯಾಂಕ್‌ಗಳಲ್ಲಿ ಇದ್ದ ಠೇವಣಿಗೆ ವಾರ್ಷಿಕ ಕೇವಲ ಶೇ 1.75 ರಷ್ಟು ಬಡ್ಡಿ ಮಾತ್ರವೇ ಸಿಗುತ್ತಿತ್ತು. ಇ–ಟೆಂಡರ್ ಕರೆದರೂ ಕೆಲವು ಬ್ಯಾಂಕುಗಳು ಹೆಚ್ಚಿನ ಬಡ್ಡಿಗೆ ಆಸಕ್ತಿ ತೋರಿರಲಿಲ್ಲ. ಈ ನಡುವೆ ಎಸ್‌ಬಿಐ ಶೇ 3.75 ಬಡ್ಡಿ ನೀಡಲು ಮುಂದೆ ಬಂದಿತು. ಇದರಿಂದ ಮುಡಾಕ್ಕೆ ವಾರ್ಷಿಕ ₹7.5 ಕೋಟಿ ಬಡ್ಡಿ ಬರುವ ನಿರೀಕ್ಷೆ ಇತ್ತು. ಹೀಗಾಗಿಯೇ ಮುಡಾ ಆದಾಯ ಹೆಚ್ಚಿಸುವ ಸಲುವಾಗಿ ಕಾನೂನು ಬದ್ಧವಾಗಿಯೇ ಈ ನಿರ್ಧಾರ ಕೈಗೊಳ್ಳಲಾಗಿತ್ತು. ಇದನ್ನು ಅಂದಿನ ವರದಿಯಲ್ಲೇ ಉಲ್ಲೇಖಿಸಲಾಗಿದೆ' ಎಂದು ಸಮಜಾಯಿಷಿ ನೀಡಿದ್ದಾರೆ.

'ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಲ್ಲಿ ಎಲ್ಲ ಶಾಸಕರಿಗೆ ಸದಸ್ಯತ್ವದ ಅವಕಾಶ ಇಲ್ಲ. ಅಲ್ಲಿ ಸರ್ಕಾರ ತಜ್ಞರನ್ನು ನಾಮನಿರ್ದೇಶನ ಮಾಡುವ ಪದ್ಧತಿಯೂ ಇದೆ. ಅಂತಹ ನಿಯಮ ಮುಡಾದಲ್ಲೂ ಜಾರಿಗೆ ಬರಬೇಕು. ಕೇವಲ ಶಾಸಕರ ಬದಲಾಗಿ ನಿರ್ಮಾಣ ಮತ್ತು ವಿನ್ಯಾಸಕ್ಕೆ ಸಂಬಂಧಿಸಿದ ತಜ್ಞರು, ಕಾನೂನು ಪಂಡಿತರು ಇಂತಹ ಸಮಿತಿಗಳಲ್ಲಿ ಇರಬೇಕು. ಕಾಲಕಾಲಕ್ಕೆ ತಕ್ಕಂತೆ ಮಾರ್ಗದರ್ಶನ ನೀಡುವ, ಅಧಿಕಾರಿಗಳು ದಾರಿ ತಪ್ಪಿದಾಗ ಅವರ ಕಿವಿ ಹಿಂಡುವ ಸಾಮರ್ಥ್ಯ ಉಳ್ಳವರಿಗೆ ಆ ಅವಕಾಶ ಸಿಗಬೇಕು. ಅಕ್ರಮ ಬಡಾವಣೆಗಳಿಗೆ ಕಡಿವಾಣ ಹಾಕಿ, ಜನರಲ್ಲಿ ವಿಶ್ವಾಸ ಮೂಡಿಸುವ ಕೆಲಸ ಆಗಬೇಕು' ಎಂದು ಸಲಹೆ ನೀಡುತ್ತಾರೆ.

ಸಚಿವರ ಪ್ರಸ್ತಾವ– ಸ್ವಪಕ್ಷೀಯರ ವಿರೋಧ: ಮುಡಾ ಸಮಿತಿ ಪುನರ್ ರಚಿಸಿ 3–4 ಮಂದಿಗೆ ಮಾತ್ರ ಸದಸ್ಯತ್ವ ನೀಡುವ ಬಗ್ಗೆ ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್‌.ಸಿ. ಮಹದೇವಪ್ಪ ಈಚೆಗೆ ಪ್ರಸ್ತಾವ ಮಂಡಿಸಿದ್ದರು. 'ಮುಡಾ ಹಿಂದಿನಿಂದಲೂ ಗಬ್ಬೆದ್ದು ಹೋಗಿದ್ದು, ಅದನ್ನು ಸ್ವಚ್ಛ ಮಾಡುವೆ. ಮಹದೇವಪ್ಪ ಮಂಡಿಸಿದ ಪ್ರಸ್ತಾವದ ಬಗ್ಗೆ ಚಿಂತನೆ ನಡೆಸುತ್ತಿದ್ದೇನೆ' ಎಂದು ಸಿದ್ದರಾಮಯ್ಯ ಸಹ ಹೇಳಿದ್ದು, ಸಮಿತಿ ಪುನರ್‌ರಚನೆ ಬಗ್ಗೆ ನಿರೀಕ್ಷೆ ಹೆಚ್ಚಾಗಿದೆ. ಆದರೆ ಈ ಪ್ರಸ್ತಾವಕ್ಕೆ ಸ್ವಪಕ್ಷೀಯ ಶಾಸಕರೇ ವಿರೋಧ ವ್ಯಕ್ತಪಡಿಸುತ್ತಿದ್ದಾರೆ.

'ಮುಡಾಕ್ಕೆ ಸಂಬಂಧಿಸಿದಂತೆ ಶಾಸಕರು ಸಲಹೆ ನೀಡುತ್ತಿದ್ದೇವೆಯೇ ಹೊರತು ಪ್ರಭಾವ ಬೀರುವ ಕೆಲಸ ಮಾಡಿಲ್ಲ. ಇಂಥವರಿಗೇ ನಿವೇಶನ ಕೊಡಿ ಎಂದು ಯಾವ ಶಾಸಕರೂ ಹೇಳಿಲ್ಲ. ಸರ್ಕಾರ ಸಮಿತಿಯನ್ನು ಪುನರ್ ರಚನೆ ಮಾಡುವುದಾದರೆ ನಮ್ಮ ಸಹಮತವಿದೆ. ಶಾಸಕರಿದ್ದೇ ಅಧಿಕಾರಿಗಳದ್ದು ಈ ಮಟ್ಟಿನ ದರ್ಬಾರು. ಇನ್ನು ಶಾಸಕರಿಲ್ಲದಿದ್ದರೆ ಏನು ಕಥೆ' ಎಂದು ಪ್ರಶ್ನಿಸುತ್ತಾರೆ ಕಾಂಗ್ರೆಸ್ ಶಾಸಕ ಕೆ. ಹರೀಶ್ ಗೌಡ.

'ದಕ್ಷ ಅಧಿಕಾರಿ ಮುಡಾ ಆಯುಕ್ತರಾಗಲಿ'

ಮೈಸೂರನ್ನು ಸುಂದರ ನಗರಿಯನ್ನಾಗಿ ರೂಪಿಸುವ ದೂರದೃಷ್ಟಿಯೊಂದಿಗೆ ನಾಲ್ವಡಿ ಕೃಷ್ಣರಾಜ ಒಡೆಯರ್ 1904ರ ಜನವರಿ 1ರಂದು ನಗರಾಭಿವೃದ್ಧಿ ವಿಶ್ವಸ್ಥ ಮಂಡಳಿ ಸ್ಥಾಪಿಸಿದರು. ನಂತರ ಸಿಐಟಿಬಿ ಎಂದು ಮರುನಾಮಕರಣಗೊಂಡು, 1988ರ ಮೇ 16ರಂದು ಅದು ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರವಾಗಿ ಸ್ಥಾಪಿತವಾಯಿತು. ಸಾವಿರಾರು ಬಡವರ ಸ್ವಂತ ಸೂರಿನ ಕನಸು ನನಸಾಗಿಸಿದ್ದ ಮುಡಾ ಕ್ರಮೇಣ ತನ್ನ ಘನತೆ, ವಿಶ್ವಾಸಾರ್ಹತೆ ಎರಡನ್ನೂ ಕಳೆದುಕೊಳ್ಳುತ್ತ ಸಾಗಿದೆ. ಇದಕ್ಕೆ ಶಕ್ತಿ ತುಂಬಬಲ್ಲ ಸಮರ್ಥ ಅಧಿಕಾರಿಗಳನ್ನು ಸರ್ಕಾರ ನೇಮಿಸಬೇಕು ಎನ್ನುವುದು ಸಾರ್ವಜನಿಕರ ಒತ್ತಾಯವಾಗಿದೆ.

ಪಂಕಜ್‌ಕುಮಾರ್ ಪಾಂಡೆ, ಮಣಿವಣ್ಣನ್‌ರಂತಹ ಕೆಲವೇ ಮಂದಿ ಐಎಎಸ್ ಅಧಿಕಾರಿಗಳನ್ನು ಸರ್ಕಾರ ಮುಡಾ ಆಯುಕ್ತರನ್ನಾಗಿ ನೇಮಿಸಿತ್ತು. ಮುಡಾಕ್ಕೆ ಅಧ್ಯಕ್ಷರು ಇಲ್ಲದ ಸಂದರ್ಭಗಳಲ್ಲಿ ಮೈಸೂರಿನ ಜಿಲ್ಲಾಧಿಕಾರಿಗಳೇ ಅಧ್ಯಕ್ಷ ಹುದ್ದೆಯ ಜವಾಬ್ದಾರಿ ನಿರ್ವಹಿಸಿದ್ದು, ಆ ಸಂದರ್ಭ ಮುಡಾ ಐಎಎಸ್ ಅಧಿಕಾರಿಗಳ ಆಡಳಿತದಲ್ಲಿತ್ತು. ಉಳಿದ ಸಂದರ್ಭದಲ್ಲಿ ಕೆಎಎಸ್ ಅಧಿಕಾರಿಗಳೇ ಆಯುಕ್ತರ ಜವಾಬ್ದಾರಿ ನಿರ್ವಹಿಸಿದ್ದಾರೆ. ಅವರಲ್ಲೂ ಅನೇಕ ಉತ್ತಮ ಹೆಸರು ಮಾಡಿದ್ದಾರೆ. ಮತ್ತೆ ಕೆಲವರು ಅನ್ಯ ಕಾರಣಗಳಿಂದಾಗಿ ಸುದ್ದಿ ಆಗಿದ್ದಾರೆ.

'ಭೂಮಿ ಬೆಲೆ ಗಗನಕ್ಕೇರಿರುವ ಈ ದಿನಗಳಲ್ಲಿ ಮುಡಾ ಆಯುಕ್ತರ ಮೇಲೆ ಸಾಕಷ್ಟು ಒತ್ತಡ ಇದ್ದೇ ಇದೆ. ಕೆಎಎಸ್ ದರ್ಜೆ ಅಧಿಕಾರಿಗಳು ಅದನ್ನು ನಿಭಾಯಿಸುವುದು ಕಷ್ಟ. ಅದರ ಬದಲಿಗೆ ಒತ್ತಡಗಳಿಗೆ ಮಣಿಯದ ದಕ್ಷ ಐಎಎಸ್ ಅಧಿಕಾರಿಗಳನ್ನು ಆಯುಕ್ತರ ಹುದ್ದೆಗೆ ನಿಯೋಜಿಸಬೇಕು' ಎಂಬುದು ಸಾರ್ವಜನಿಕ ವಲಯದ ಅಭಿಪ್ರಾಯವಾಗಿದೆ.

ಮುಡಾ ಸಮಿತಿಯಿಂದ ಶಾಸಕರನ್ನು ಕೈ ಬಿಡುವ ನಿರ್ಧಾರ ಸರ್ಕಾರಕ್ಕೆ ಬಿಟ್ಟದ್ದು. ಆದರೆ ಈಗ ಅಕ್ರಮ ಎಸಗಿರುವವರು ಅಧಿಕಾರಿಗಳಾ ಅಥವಾ ಶಾಸಕರಾ?
ಜಿ.ಟಿ. ದೇವೇಗೌಡ, ಜೆಡಿಎಸ್ ಶಾಸಕ

ಮುಡಾ ಸಮಿತಿಯ ಪುನರ್ ರಚನೆಗೆ ನಮ್ಮ ಸಹಮತವಿದೆ. ಆದರೆ ಶಾಸಕರು ಸಮಿತಿಯಲ್ಲಿದ್ದೇ ಅಧಿಕಾರಿಗಳದ್ದು ಈ ಕಥೆ, ಇನ್ನು ಇರದಿದ್ದರೆ ಹೇಗೆ?
ಕೆ. ಹರೀಶ್ ಗೌಡ, ಕಾಂಗ್ರೆಸ್ ಶಾಸಕ

ಸದ್ಯದ ಪರಿಸ್ಥಿತಿಯಲ್ಲಿ ಮುಡಾಕ್ಕೆ ದಕ್ಷ ಅಧಿಕಾರಿಗಳ ಅಗತ್ಯ ಇದೆ. ಒತ್ತಡಗಳಿಗೆ ಮಣಿಯದ, ಐಎಎಸ್ ಅಧಿಕಾರಿಯನ್ನು ಸರ್ಕಾರ ಆಯುಕ್ತರ ಹುದ್ದೆಗೆ ನೇಮಿಸಬೇಕು
ಟಿ.ಎಸ್. ಶ್ರೀವತ್ಸ, ಬಿಜೆಪಿ ಶಾಸಕ

ಜಾತಿ ಹೆಸರಲ್ಲಿ ರಕ್ಷಣೆಗೆ ಸಿ.ಎಂ ಹತಾಶ ಯತ್ನ: ಅಶೋಕ ಟೀಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮುಡಾ ಭೂಹಗರಣದಲ್ಲಿ ಕಾನೂನಿನ ಕುಣಿಕೆ ಬಿಗಿಯಾಗುತ್ತಿದ್ದಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಜಾತಿ ಹೆಸರಿನಲ್ಲಿ ರಕ್ಷಣೆ ಪಡೆಯುವ ಹತಾಶ ಪ್ರಯತ್ನ ಮಾಡುತ್ತಿದ್ದಾರೆ' ಎಂದು ವಿಧಾನಸಭೆ ವಿರೋಧಪಕ್ಷದ ನಾಯಕ ಆರ್.ಅಶೋಕ ಟೀಕಿಸಿದ್ದಾರೆ.

ತಾವು ಹಿಂದುಳಿದ ವರ್ಗಕ್ಕೆ ಸೇರಿದ್ದೇನೆಂಬ ಕಾರಣಕ್ಕೆ ತಮ್ಮನ್ನು ಗುರಿಯಾಗಿಸಲಾಗಿದೆ ಎಂಬ ಸಿದ್ದರಾಮಯ್ಯ ಅವರ ಹೇಳಿಕೆಗೆ 'ಎಕ್ಸ್' ಮೂಲಕ ಅಶೋಕ ಪ್ರತಿಕ್ರಿಯಿಸಿದ್ದಾರೆ.

'ತಮ್ಮ ಇಡೀ ಜೀವನವನ್ನು 'ಅಹಿಂದ' ಸಮುದಾಯಗಳ ಬೆನ್ನಿನ ಮೇಲೆ ಸವಾರಿ ಮಾಡಿ ಅಧಿಕಾರ ಅನುಭವಿಸಿದ ಸಿದ್ದರಾಮಯ್ಯ, ದಲಿತರಿಗೆ, ಹಿಂದುಳಿದವರಿಗೆ ಮಾಡಿದ್ದಾದರೂ ಏನು? ದಲಿತರ ದುಡ್ಡು ಲೂಟಿ ಹೊಡೆದಿದ್ದು, ದಲಿತರ ಕುರ್ಚಿ ಕಿತ್ತುಕೊಂಡು ಅವರಿಗೆ ಮೋಸ ಮಾಡಿದ್ದು, ಇದಿಷ್ಟೇ ಅವರ ಸಾಧನೆ. ಉಪ್ಪು ತಿಂದವರು ನೀರು ಕುಡಿಯಲೇಬೇಕು. ಅವರ ಪಾಪದ ಕೊಡ ತುಂಬಿದೆ. ಪ್ರಾಯಶ್ಚಿತ ಕಾದಿದೆ' ಎಂದು ಹೇಳಿದ್ದಾರೆ.

ಸಿದ್ದರಾಮಯ್ಯ 2ನೇ ಬಾರಿ ಸಿ.ಎಂ ಆಗಿರುವುದನ್ನು ಸಹಿಸದೆ ಸುಳ್ಳು ಆರೋಪ ಮಾಡುತ್ತಿದ್ದಾರೆ. ಪದಚ್ಯುತಿಗೆ ಹುನ್ನಾರ ನಡೆಸುತ್ತಿದ್ದಾರೆ
ಡಾ.ಯತೀಂದ್ರ ಸಿದ್ದರಾಮಯ್ಯ
ವಿಧಾನ ಪರಿಷತ್ ಸದಸ್ಯ

ಹಗರಣದ ತನಿಖೆಯನ್ನು ಎಸ್‌ಐಟಿಗೆ ನೀಡಿದೆ. ವರದಿ ಬಂದ ನಂತರ ಮುಂದಿನ ತೀರ್ಮಾನ ತೆಗೆದುಕೊಳ್ಳಬೇಕು. ಈಗಲೇ ರಾಜೀನಾಮೆ ಕೇಳುವುದು ಸರಿಯಲ್ಲ
ಈ.ತುಕಾರಾಂ
ಬಳ್ಳಾರಿ ಸಂಸದ

'ಮುಡಾ ಭೂಹಗರಣದಲ್ಲಿ ತಮ್ಮನ್ನು ರಕ್ಷಿಸಿಕೊಳ್ಳಲು ಸುಮಾರು ಆರು ಕೋಟಿ ಕನ್ನಡಿಗರ ಮುಖ್ಯಮಂತ್ರಿ ಒಬಿಸಿ ಹಣೆಪಟ್ಟಿ ಬಳಸಿಕೊಳ್ಳುತ್ತಿರುವುದು ದುರದೃಷ್ಟಕರ. ಈ ಮೂಲಕ ಅವರು ಹಿಂದುಳಿದ ವರ್ಗಗಳ ಕನ್ನಡಿಗರನ್ನು ಅವಮಾನಿಸುತ್ತಿದ್ದಾರೆ. ಈ ಪ್ರಕರಣವನ್ನು ಸಿಬಿಐ ತನಿಖೆಗೆ ಒಪ್ಪಿಸುವುದೇ ಸೂಕ್ತ' ರಾಜ್ಯಸಭೆಯ ಬಿಜೆಪಿ ಸದಸ್ಯ ಲಹರ್ ಸಿಂಗ್ ಸಿರೋಯ ಎಂದು ಹೇಳಿದ್ದಾರೆ.

ಸಿದ್ದರಾಮಯ್ಯ ಸರ್ವಾಧಿಕಾರಿ: ಜೋಶಿ

ಬೆಂಗಳೂರು: 'ಮುಖ್ಯಮಂತ್ರಿ ಸಿದ್ದರಾಮಯ್ಯ ಒಬ್ಬ ಭಯಂಕರ ಸರ್ವಾಧಿಕಾರಿ, ಅಹಂಕಾರಿ ಮತ್ತು ಭ್ರಷ್ಟ. ಕಾಂಗ್ರೆಸ್ ಹೈಕಮಾಂಡ್ ಬಳಿ ಕಮಾಂಡ್ ಇದ್ದರೆ ಸಿದ್ದರಾಮಯ್ಯ ಅವರನ್ನು ತಕ್ಷಣ ಹುದ್ದೆಯಿಂದ ಕೆಳಕ್ಕೆ ಇಳಿಸಬೇಕು' ಎಂದು ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಆಗ್ರಹಿಸಿದರು.

ಮುಡಾ ಹಗರಣವನ್ನು ಖಂಡಿಸುವ ಹಕ್ಕೂ ನಮಗಿಲ್ಲವೇ? ಪ್ರಶ್ನಿಸುವುದೂ ತಪ್ಪು ಎನ್ನುವಂತೆ ಅವರು ವರ್ತಿಸುತ್ತಿದ್ದಾರೆ ಎಂದು ಅವರು ಕಿಡಿಕಾರಿದರು.

'ಮೈಸೂರು ಚಲೋ' ನಡೆಸಲು ಮುಂದಾದ ಬಿ.ವೈ. ವಿಜಯೇಂದ್ರ ಹಾಗೂ ಕಾರ್ಯಕರ್ತರನ್ನು ಬೆಂಗಳೂರಿನ ನೈಸ್ ರಸ್ತೆಯಲ್ಲಿ ಪೊಲೀಸರು ವಶಕ್ಕೆ ಪಡೆದರು

ವಿಜಯೇಂದ್ರ ವಶಕ್ಕೆ ಪಡೆದ ಪೊಲೀಸರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಡಾ ಹಗರಣ ಖಂಡಿಸಿ 'ಮೈಸೂರು ಚಲೋ'ಗೆ ಮುಂದಾಗಿದ್ದ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ, ಶಾಸಕ ಮುನಿರತ್ನ ಸೇರಿದಂತೆ ಹಲವು ಮುಖಂಡರು ಮತ್ತು ಕಾರ್ಯಕರ್ತರನ್ನು ಶುಕ್ರವಾರ ಬೆಳಿಗ್ಗೆ ಪೊಲೀಸರು ವಶಕ್ಕೆ ಪಡೆದು, ಬಳಿಕ ಬಿಡುಗಡೆ ಮಾಡಿದರು.

ಪೊಲೀಸರ ಕ್ರಮ ಖಂಡಿಸಿ ಕಾರ್ಯಕರ್ತರು ಧಿಕ್ಕಾರ ಕೂಗಿದರು. ಕಾರ್ಯಕರ್ತರು–ಪೊಲೀಸರ ಮಧ್ಯೆ ನೂಕಾಟ, ತಳ್ಳಾಟ ನಡೆಯಿತು. ದಾಸರಹಳ್ಳಿ ಬಳಿ ಶಾಸಕ ಮುನಿರಾಜು ಅವರನ್ನು ಪೊಲೀಸರು ವಶಕ್ಕೆ ಪಡೆದರು. ಕೆಂಗೇರಿ ಬಳಿ 80ಕ್ಕೂ ಹೆಚ್ಚು ಕಾರ್ಯಕರ್ತರನ್ನು ವಶಕ್ಕೆ ಪಡೆಯಲಾಯಿತು ಎಂದು ಪೊಲೀಸರು ಹೇಳಿದರು.

'ಕಾರ್ಯಕರ್ತರು ಮತ್ತು ಮುಖಂಡರನ್ನು ವಶಕ್ಕೆ ಪಡೆದಿರುವುದು ಖಂಡನೀಯ. ಕಾಂಗ್ರೆಸ್‌ನ ಪಾಪದ ಕೊಡ ತುಂಬಿದೆ. ದಲಿತರ ಹಣ ಲೂಟಿ ಮಾಡಲಾಗಿದೆ. ಅಲ್ಲದೇ ದಲಿತರು, ಬಡವರಿಗೆ ಮೀಸಲಿಟ್ಟ ನಿವೇಶನಗಳನ್ನು ಲಪಟಾಯಿಸಲಾಗಿದೆ. ಈ ಪ್ರಕರಣವನ್ನು ಸಿಬಿಐಗೆ ವಹಿಸಬೇಕು. ಮುಖ್ಯಮಂತ್ರಿ ರಾಜೀನಾಮೆ ಕೊಡಬೇಕು' ಎಂದು ವಿಜಯೇಂದ್ರ ಆಗ್ರಹಿಸಿದರು.

'ಮುಡಾದಲ್ಲಿ ಸಾವಿರಾರು ಕೋಟಿ ರೂಪಾಯಿಗೂ ಮೀರಿದ ಹಗರಣ ಬಯಲಾಗಿದೆ. ಇದರಿಂದ ಮುಖ್ಯಮಂತ್ರಿ ಆತಂಕಗೊಂಡಿದ್ದಾರೆ. ಅವರ ಆದೇಶದ ಮೇರೆಗೆ ಪೊಲೀಸರು ಪ್ರತಿಭಟನೆ ಹತ್ತಿಕ್ಕಿದ್ದಾರೆ' ಎಂದು ದೂರಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಪರವಾಗಿ ಸಚಿವ ಕೆ.ವೆಂಕಟೇಶ್ ನೇತೃತ್ವದಲ್ಲಿ ಬಲ ಪ್ರದರ್ಶನ

ಬಿಜೆಪಿಯ ದ್ವೇಷ ರಾಜಕಾರಣ: ಕಾಂಗ್ರೆಸ್ ಕಿಡಿ

ಪ್ರಜಾವಾಣಿ ವಾರ್ತೆ

ಮೈಸೂರು: 'ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ವಿರುದ್ಧ ಬಿಜೆಪಿ ದ್ವೇಷ ರಾಜಕಾರಣ ಮಾಡುತ್ತಿದೆ' ಎಂದು ಆರೋಪಿಸಿ ಕಾಂಗ್ರೆಸ್ ನಗರ ಮತ್ತು ಗ್ರಾಮಾಂತರ ಜಿಲ್ಲಾ ಸಮಿತಿಯ ನೇತೃತ್ವದಲ್ಲಿ ಕಾರ್ಯಕರ್ತರು ಇಲ್ಲಿನ 'ಮುಡಾ' ಕಚೇರಿ ಸಮೀಪದ ಎಂಜಿನಿಯರ್‌ಗಳ ಸಂಸ್ಥೆ ಎದುರಿನ ಜೆಎಲ್‌ಬಿ ರಸ್ತೆಯಲ್ಲಿ ಶುಕ್ರವಾರ ಪ್ರತಿಭಟಿಸಿದರು.

'ಸಿದ್ದರಾಮಯ್ಯ ಅವರ ಪತ್ನಿ ಕಾನೂನಾತ್ಮಕವಾಗಿ ಪಡೆದ ನಿವೇಶನಗಳ ವಿಚಾರದಲ್ಲಿ ಬಿಜೆಪಿಯವರು, ಸಾರ್ವಜನಿಕವಾಗಿ ಅನಗತ್ಯ ತೇಜೋವಧೆ ಮಾಡುತ್ತಿದ್ದಾರೆ ಹಾಗೂ ಗಲಭೆ ಸೃಷ್ಟಿಸುವ ಹುನ್ನಾರ ನಡೆಸುತ್ತಿದ್ದಾರೆ' ಎಂದು ದೂರಿದರು.

ಬೆಳಿಗ್ಗೆಯಿಂದ ಮಧ್ಯಾಹ್ನದವರೆಗೆ ಧರಣಿ ನಡೆಸಿದ ಅವರು ಬಳಿಕ ಬಿಜೆಪಿ ಕಾರ್ಯಕರ್ತರಿಗೆ ಮುತ್ತಿಗೆ ಹಾಕಲು ನಿರ್ಣಯಿಸಿದರು. ಕ್ರಾಫರ್ಡ್ ಭವನದ ಕಡೆಯಿಂದ ಮುಡಾಕ್ಕೆ ಮುತ್ತಿಗೆ ಹಾಕಲು ಬರುತ್ತಿದ್ದ ಬಿಜೆಪಿ ಕಾರ್ಯಕರ್ತರ ಬಳಿಗೆ ತೆರಳಲು ಮುಂದಾದ ಕೆಪಿಸಿಸಿ ವಕ್ತಾರ ಎಂ. ಲಕ್ಷ್ಮಣ, ಕಾಂಗ್ರೆಸ್ ನಗರ ಜಿಲ್ಲಾ ಘಟಕದ ಅಧ್ಯಕ್ಷ ಆರ್.ಮೂರ್ತಿ ಹಾಗೂ ಗ್ರಾಮಾಂತರ ಜಿಲ್ಲಾ ಸಮಿತಿಯ ಅಧ್ಯಕ್ಷ ಬಿ.ಜೆ. ವಿಜಯ್‌ಕುಮಾರ್ ಹಾಗೂ ಕಾರ್ಯಕರ್ತರನ್ನು ಪೊಲೀಸರು ತಡೆದರು. ಪ್ರತಿಭಟನಕಾರರು ಬ್ಯಾರಿಕೇಡ್‌ಗಳನ್ನು ತಳ್ಳಿ ನುಗ್ಗಲು ಯತ್ನಿಸಿದಾಗ ತಳ್ಳಾಟ–ನೂಕಾಟ ನಡೆಯಿತು.

ನಗರ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್ ಮನವೊಲಿಕೆಗೆ ಜಗ್ಗದೆ, ಕೆಲಕಾಲ ಜೋರು ಮಳೆಯಲ್ಲೇ ಕಾರ್ಯಕರ್ತರು ಪ್ರತಿಭಟಿಸಿದರು.

'ಸಿದ್ದರಾಮಯ್ಯ ವಿರುದ್ಧ ಬಿಜೆಪಿ ದ್ವೇಷ ರಾಜಕಾರಣ ಮಾಡುತ್ತಿದೆ' ಎಂದು ಆರೋಪಿಸಿ ಕಾಂಗ್ರೆಸ್ ಕಾರ್ಯಕರ್ತರು ಮೈಸೂರಿನ ಮುಡಾ ಕಚೇರಿ ಸಮೀಪದ ಜೆಎಲ್‌ಬಿ ರಸ್ತೆಯಲ್ಲಿ ಶುಕ್ರವಾರ ಪ್ರತಿಭಟಿಸಿದರು ಪ್ರಜಾವಾಣಿ ಚಿತ್ರ

ವಾಗ್ವಾದ: 'ಅಲ್ಲಿ ಪ್ರತಿಭಟಿಸುತ್ತಿದ್ದ ಬಿಜೆಪಿ ಕಾರ್ಯಕರ್ತರನ್ನು ವಶಕ್ಕೆ ಪಡೆದಿದ್ದೇವೆ. ಹೀಗಾಗಿ, ನೀವೂ ಪ್ರತಿಭಟನೆ ಹಿಂಪಡೆದು ಸಹಕರಿಸಿ' ಎಂದು ಪೊಲೀಸ್ ಅಧಿಕಾರಿಗಳು ಕೋರಿದರು. 'ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ವಿರುದ್ಧ ಸುಳ್ಳು ಆರೋಪ ಮಾಡುತ್ತಿರುವ ಬಿಜೆಪಿಯವರಿಂದ ನಾವು ದಾಖಲೆ ಕೇಳಲೇಬೇಕು. ಅಲ್ಲಿಗೆ ಹೋಗಲು ಬಿಡಿ' ಎಂದು ಕಾಂಗ್ರೆಸ್ ಮುಖಂಡರು ಪಟ್ಟು ಹಿಡಿದರು. ಪೊಲೀಸರು ಹಾಗೂ ಪ್ರತಿಭಟನಕಾರರ ನಡುವೆ ಮುಕ್ಕಾಲು ತಾಸಿಗೂ ಹೆಚ್ಚು ಸಮಯ ವಾಗ್ವಾದ ನಡೆಯಿತು. ಬಳಿಕ, ನಗರ ಸಮಿತಿಯ ಅಧ್ಯಕ್ಷರ ಸೂಚನೆ ಮೇರೆಗೆ ಕಾರ್ಯಕರ್ತರು ಅಲ್ಲಿಂದ ತೆರಳಿದರು.

ಹಳೆಯ ಜಿಲ್ಲಾಧಿಕಾರಿ ಕಚೇರಿ ರಸ್ತೆ ಮಾರ್ಗವಾಗಿ ತೆರಳಲು ಯತ್ನಿಸಿದ ಪ್ರತಿಭಟನಕಾರರನ್ನು ಪೊಲೀಸರು ತಡೆದರು. ಆಗ ಅವರ ವಿರುದ್ಧ ಮುಖಂಡರು ಆಕ್ರೋಶ ವ್ಯಕ್ತಪಡಿಸಿದರು.

'ಶಾಂತಿಯುತವಾಗಿ ಮಾತುಕತೆಗೆ ತೆರಳುತ್ತಿದ್ದೆವು. ಪೊಲೀಸರು ಅವಕಾಶ ಕೊಡಲಿಲ್ಲ; ಬಂಧಿಸದೇ ಅವಮಾನಿಸಿದರು. ಆದರೆ, ಬಿಜೆಪಿ ಮಾಡುತ್ತಿರುವ ದ್ವೇಷ ರಾಜಕಾರಣದ ವಿರುದ್ಧ ನಮ್ಮ ಹೋರಾಟ ಮುಂದುವರಿಯಲಿದೆ. ಸಿದ್ದರಾಮಯ್ಯ ಪರವಾಗಿ ನಾವೆಲ್ಲರೂ ಇದ್ದೇವೆ' ಎಂದು ಲಕ್ಷ್ಮಣ ಹೇಳಿದರು.

ವಿಧಾನಪರಿಷತ್ ಸದಸ್ಯ ಡಾ.ಡಿ. ತಿಮ್ಮಯ್ಯ, ಕೆಪಿಸಿಸಿ ಮಹಿಳಾ ಘಟಕದ ಅಧ್ಯಕ್ಷೆ ಪುಷ್ಪಾ ಅಮರನಾಥ್, ಮಾಜಿ ಸಚಿವ ಕೋಟೆ ಶಿವಣ್ಣ, ಮಾಜಿ ಶಾಸಕರಾದ ಎಂ.ಕೆ. ಸೋಮಶೇಖರ್, ಧರ್ಮಸೇನಾ, ಕಳಲೆ ಕೇಶವಮೂರ್ತಿ, ಮುಡಾ ಮಾಜಿ ಅಧ್ಯಕ್ಷ ಎಚ್‌.ವಿ.ರಾಜೀವ್ ಸೇರಿದಂತೆ ಸಾವಿರಕ್ಕೂ ಹೆಚ್ಚು ಮಂದಿ ಪಾಲ್ಗೊಂಡಿದ್ದರು. ಮುಡಾ ಸದಸ್ಯರಾಗಿರುವ ನಗರದ ಕಾಂಗ್ರೆಸ್ ಶಾಸಕರು ಪಾಲ್ಗೊಂಡಿರಲಿಲ್ಲ.

'ಅಘೋಷಿತ ನಿಷೇಧಾಜ್ಞೆ'

ಬಿಜೆಪಿ ಹಾಗೂ ಕಾಂಗ್ರೆಸ್‌ನವರು ಶುಕ್ರವಾರ ಏಕಕಾಲಕ್ಕೆ ಪ್ರತಿಭಟಿದ್ದರಿಂದ ಪೊಲೀಸರು ಮುಡಾ ಕಚೇರಿಯ ಸುತ್ತಮುತ್ತಲಿನ ರಸ್ತೆಗಳಲ್ಲಿ ಬ್ಯಾರಿಕೇಡ್ ಕೋಟೆ ನಿರ್ಮಿಸಿ ಕೈಗೊಂಡಿದ್ದ 'ಅಘೋಷಿತ ನಿಷೇಧಾಜ್ಞೆ'ಯಿಂದ ಸಾರ್ವಜನಿಕರು ತೀವ್ರ ತೊಂದರೆ ಅನುಭವಿಸಬೇಕಾಯಿತು.

'ಕೊಟ್ಟಷ್ಟು ಮಾತ್ರವೇ ತೆಗೆದುಕೊಂಡಿದ್ದಾರೆ'

ನೇತೃತ್ವ ವಹಿಸಿದ್ದ ಪಶುಸಂಗೋಪನಾ ಸಚಿವ ಕೆ.ವೆಂಕಟೇಶ್ ಮಾತನಾಡಿ, 'ಮುಖ್ಯಮಂತ್ರಿ ಪತ್ನಿಯಿಂದ ಪಡೆದಿರುವ ಜಮೀನಿಗೆ ಮುಡಾದಿಂದ 75ಸಾವಿರ ಚದರ ಅಡಿ ನಿವೇಶನ ಕೊಡಬೇಕಿತ್ತು. ಆದರೆ, 38ಸಾವಿರ ಚ.ಅಡಿ ನೀಡಿದೆ. ಕೊಟ್ಟಷ್ಟನ್ನೆ ಅವರು ಪಡೆದಿದ್ದಾರೆ. ಇದನ್ನೂ ಬಿಜೆಪಿಯವರು ಹಗರಣವೆಂದು ಬಿಂಬಿಸುತ್ತಿರುವುದು ಸರಿಯಲ್ಲ' ಎಂದು ಆಕ್ರೋಶ ವ್ಯಕ್ತಪಡಿಸಿದರು.

'ಸಿಎಂ ಪತ್ನಿಗೆ ನಿವೇಶನ ನೀಡಿದ್ದು ಹಗರಣವೇ ಅಲ್ಲ. ಸಿದ್ದರಾಮಯ್ಯ ಮೇಲೆ ಯಾವುದೇ ಕಳಂಕವಿಲ್ಲ' ಎಂದು ಸಮರ್ಥಿಸಿಕೊಂಡರು.

ಬಿಜೆಪಿಯವರು ಚೆಕ್ ಮೂಲಕ ಹಣ ಪಡೆದಿದ್ದು ರಾಜ್ಯದ ಜನರಿಗೆ ಗೊತ್ತಿದೆ. ಅಂಥವರಿಂದ ಪಾಠ ಕಲಿಯುವ ಅಗತ್ಯವಿಲ್ಲ. ಪ್ರತಿಭಟಿಸಲು ಅವರಿಗೆ ನೈತಿಕತೆ ಇಲ್ಲ
ಕೆ.ವೆಂಕಟೇಶ್
ಪಶುಸಂಗೋಪನಾ ಸಚಿವ

ಮುಡಾ ಹಗರಣ: ಬಿಜೆಪಿ ಪ್ರತಿಭಟನೆ

ಒಂದನೇ ಪುಟದಿಂದ...

ಆದರೆ, ಒಂದು ಸಾವಿರ ಮಂದಿಯಷ್ಟೇ ಬಂದಿದ್ದರು.

'ಮೈಸೂರು ಜೊತೆಗೆ ಮಂಡ್ಯ, ಚಾಮರಾಜನಗರ ಜಿಲ್ಲೆಗಳಿಂದ ಪ್ರತಿಭಟನೆಗೆ ಬರುತ್ತಿದ್ದ ನಮ್ಮ ಮುಖಂಡರು, ಕಾರ್ಯಕರ್ತರನ್ನು ಪೊಲೀಸರು ಅಲ್ಲಲ್ಲೇ ತಡೆದಿದ್ದಾರೆ' ಎಂದು ಬಿಜೆಪಿ ಮುಖಂಡರು ದೂರಿದರು.

ಮೈಸೂರು-ಕೊಡಗು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಶಾಸಕ ಟಿ.ಎಸ್. ಶ್ರೀವತ್ಸ, ಬಿಜೆಪಿ ನಗರ ಜಿಲ್ಲಾ ಘಟಕದ ಅಧ್ಯಕ್ಷ ಎಲ್. ನಾಗೇಂದ್ರ, ಗ್ರಾಮಾಂತರ ಜಿಲ್ಲಾ ಘಟಕದ ಅಧ್ಯಕ್ಷ ಎಲ್‌.ಆರ್. ಮಹದೇವಸ್ವಾಮಿ, ಮಾಜಿ ಸಂಸದ ವಿಜಯಶಂಕರ್, ರಾಜ್ಯ ಮಹಿಳಾ ಘಟಕದ ಅಧ್ಯಕ್ಷೆ ಮಂಜುಳಾ, ಯುವ ಘಟಕದ ಅಧ್ಯಕ್ಷ ಧೀರಜ್, ರಾಜ್ಯ ವಕ್ತಾರ ಎಂ.ಜಿ. ಮಹೇಶ್ ಭಾಗವಹಿಸಿದ್ದರು.

ಗೂಡ್ಸ್ ವಾಹನದಲ್ಲಿ ಬಂದ ನಾಯಕರು: ವಿಧಾನಸಭೆ ವಿಪಕ್ಷದ ನಾಯಕ ಆರ್. ಅಶೋಕ ಹಾಗೂ ಶಾಸಕ ಡಾ.ಸಿ.ಎನ್. ಅಶ್ವತ್ಥನಾರಾಯಣ ಪೊಲೀಸರ ಕಣ್ಣು ತಪ್ಪಿಸಿ ತರಕಾರಿ ಸಾಗಣೆ ವಾಹನದಲ್ಲಿ ಪ್ರತಿಭಟನೆಗೆ ಬಂದರು. ಮೆರವಣಿಗೆಯಲ್ಲಿ ಹೆಜ್ಜೆ ಹಾಕಿದ ಅವರನ್ನೂ ಪೊಲೀಸರು ವಶಕ್ಕೆ ಪಡೆದರು.

'ಪೊಲೀಸರು ಏನೇನು ಮಾಡುತ್ತಾರೆ ಎನ್ನುವುದು ಗೊತ್ತಿದೆ. ಹೀಗಾಗಿ ಅವರ ಎಲ್ಲ ಭದ್ರಕೋಟೆ ದಾಟಿ ಗೂಡ್ಸ್ ಆಟೊದಲ್ಲಿ ಬಂದೆವು' ಎಂದು ಅಶೋಕ ಹೇಳಿದರು.

'ಮುಡಾ ಹಗರಣದಲ್ಲಿ ನೇರವಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಪಾತ್ರವಿದೆ. ಉಪ ಮುಖ್ಯಮಂತ್ರಿ ಆಗಿದ್ದ ಕಾಲದಿಂದಲೂ ಅಕ್ರಮ ಎಸಗಿದ್ದಾರೆ. ಕಂದಾಯ ಭೂಮಿಯನ್ನು ಅಕ್ರಮವಾಗಿ ನೋಂದಣಿ ಮಾಡಿಸಿ, ಮುಡಾ ನಿವೇಶನ ಮಾಡಿದ್ದ ಭೂಮಿಯನ್ನು ತಮ್ಮ ಹೆಸರಿಗೆ ನೋಂದಾಯಿಸಿಕೊಂಡಿದ್ದಾರೆ. ನಂತರ ಮುಡಾದಿಂದ 50:50 ಅನುಪಾತದಲ್ಲಿ ಅಕ್ರಮವಾಗಿ 14 ನಿವೇಶನ ಪಡೆದಿದ್ದಾರೆ. ಅವರ ಶಿಫಾರಸು ಇಲ್ಲದೆ ಇಷ್ಟೆಲ್ಲ ನಡೆಯಿತಾ' ಎಂದು ಪ್ರಶ್ನಿಸಿದರು.

'ಬಿಜೆಪಿ ಅಥವಾ ಜೆಡಿಎಸ್ ಯಾರ ಅವಧಿಯಲ್ಲೇ ಅಕ್ರಮ ನಡೆದಿದ್ದರೂ ಸರಿ. ಎಲ್ಲರನ್ನೂ ಹಿಡಿದು ಜೈಲಿಗೆ ಹಾಕಲಿ. ಈ ಹಿಂದೆ ಅಧ್ಯಕ್ಷರು–ಆಯುಕ್ತರಾಗಿದ್ದವರು ತಪ್ಪೆಸಗಿದ್ದರೆ ಅವರನ್ನೂ ಬಂಧಿಸಲಿ. ನಿವೇಶನಕ್ಕಾಗಿ ದಶಕದಿಂದ ಕಾಯುತ್ತಿರುವ 85 ಸಾವಿರ ಅರ್ಜಿದಾರರಿಗೆ ನ್ಯಾಯ ಒದಗಿಸುವರೆಗೂ ಬಿಜೆಪಿ ಹೋರಾಟ ಮುಂದುವರಿಯಲಿದೆ' ಎಂದು ತಿಳಿಸಿದರು.

ಮೈಸೂರಿನ ಮಹಾರಾಜ ಕಾಲೇಜು ಬಳಿ ಶುಕ್ರವಾರ ನಡೆದ ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದ ಬಿಜೆಪಿ ಕಾರ್ಯಕರ್ತರು ಪ್ರಜಾವಾಣಿ ಚಿತ್ರ

ಪ್ರತಿಭಟಿಸುವುದು ವಿರೋಧ ಪಕ್ಷಗಳ ಹಕ್ಕು. ಅದನ್ನು ಹತ್ತಿಕ್ಕುವ ಕೆಲಸವನ್ನು ಸರ್ಕಾರ ಮಾಡಿದೆ. ಮುಡಾ ಬಳಿ ಬಂದಾಗ ಬಂಧಿಸಬಹುದಿತ್ತು ಉದ್ದೇಶವೇನು?
ಆರ್. ಅಶೋಕ, ವಿಧಾನಸಭೆ ವಿರೋಧ ಪಕ್ಷದ ನಾಯಕ

'ಕಾವೇರಿ'ಗಾಗಿ ಪ್ರಾಧಿಕಾರಕ್ಕೆ ಮೇಲ್ಮನವಿ

ಒಂದನೇ ಪುಟದಿಂದ...

'ಜುಲೈ ಅಂತ್ಯದವರೆಗೆ ಯಾವುದೇ ತೀರ್ಮಾನ ಮಾಡದಂತೆ ಮನವಿ ಮಾಡಿದ್ದೆವು. ಆದರೂ ಸಿಡಬ್ಲ್ಯುಸಿ ಇದೇ 12ರಿಂದ ದಿನಕ್ಕೆ 1 ಟಿಎಂಸಿ ಅಡಿ ನೀರು ಹರಿಸಲು ಆದೇಶಿಸಿದೆ. ಇದರ ವಿರುದ್ಧ ಪ್ರಾಧಿಕಾರದ ಮುಂದೆ ಮೇಲ್ಮನವಿ ಸಲ್ಲಿಸಬೇಕು ಎಂಬ ಅಭಿಪ್ರಾಯ ಇಂದಿನ ಸಭೆಯಲ್ಲಿ ವ್ಯಕ್ತವಾಯಿತು ಎಂದು ಅವರು ತಿಳಿಸಿದರು.

'ಬಿಳಿಗುಂಡ್ಲುವಿನಲ್ಲಿ ಅಳೆಯುವಾಗ, ಕಬಿನಿ ಅಣೆಕಟ್ಟಿನ ಒಳಹರಿವಿನ ಪ್ರಮಾಣದಷ್ಟು ಕ್ಯುಸೆಕ್ ನೀರನ್ನು ತಮಿಳುನಾಡಿಗೆ ಹರಿಯುತ್ತಿದೆ. ಕಾವೇರಿ ಜಲಾನಯನ ಪ್ರದೇಶದ ಎಲ್ಲ ನಾಲ್ಕು ಜಲಾಶಯಗಳಲ್ಲಿ ಒಟ್ಟು 60 ಟಿಎಂಸಿ ಅಡಿ ನೀರು ಇದೆ. ಮಳೆ ಕೊರತೆಯನ್ನು ಗಮನದಲ್ಲಿಟ್ಟುಕೊಂಡು ಜುಲೈ ಕೊನೆವರೆಗೆ ಕಾಯಲು ಮನವಿ ಮಾಡಿದ್ದೇವೆ' ಎಂದು ಸಿದ್ದರಾಮಯ್ಯ ತಿಳಿಸಿದರು.

ಸರ್ವಪಕ್ಷ ಸಭೆ: 'ರಾಜ್ಯದ ನೀರಿನ ವಿಚಾರದಲ್ಲಿ ಎಲ್ಲರೂ ಒಗ್ಗಟ್ಟಾಗಿದ್ದೇವೆ. ಕೇಂದ್ರ ಸಚಿವರು, ಕಾವೇರಿ ನದಿ ಪ್ರದೇಶದ ಸಂಸದರು ಮತ್ತು ಶಾಸಕರರಿಗೆ ಸಭೆಗೆ ಆಹ್ವಾನ ನೀಡಲಾಗುವುದು. ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಮುಂದಿನ ಹೆಜ್ಜೆ ಇಡಲಾಗುವುದು' ಎಂದು ಮುಖ್ಯಮಂತ್ರಿ ಹೇಳಿದರು.

19 ಟಿಎಂಸಿ ಕೊರತೆ: 'ಕಾವೇರಿ ಜಲಾನಯನದ ಪ್ರಮುಖ ಅಣೆಕಟ್ಟುಗಳಲ್ಲಿ ಶೇಕಡ 62ರಷ್ಟು ಮಾತ್ರ ನೀರಿದೆ. ಸುಮಾರು 19 ಟಿಎಂಸಿಯಷ್ಟು ನೀರಿನ ಕೊರತೆ ಇದೆ' ಎಂದು ಜಲಸಂಪನ್ಮೂಲ ಸಚಿವರೂ ಆಗಿರುವ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿದರು.

'ಹಾರಂಗಿಯ ಗರಿಷ್ಠ ಸಂಗ್ರಹ ಸಾಮರ್ಥ್ಯದ ಶೇ 72ರಷ್ಟು, ಹೇಮಾವತಿಯಲ್ಲಿ ಶೇ 55 ಮತ್ತು ಕೆಆರ್‌ಎಸ್‌ನಲ್ಲಿ ಶೇ 54ರಷ್ಟು ಮಾತ್ರ ನೀರಿದೆ. ಕಬಿನಿಯಲ್ಲಿ ಶೇ 96ರಷ್ಟು ಸಂಗ್ರಹವಾಗಿದ್ದು, ಅಣೆಕಟ್ಟೆ ಸುರಕ್ಷತೆ ದೃಷ್ಟಿಯಿಂದ ನೀರನ್ನು ಹೊರಬಿಡಲಾಗುತ್ತಿದೆ' ಎಂದರು.

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆ ಆರ್ ಎಸ್ *	124.80	104.55	3,667	2,257
ಹಾರಂಗಿ	2,859	2,851.30	1,673	200
ಕಬಿನಿ	2,284.00	2,282.71	5,400	5,000
ಹೇಮಾವತಿ	2,922	2,900.95	6,464	250
ಲಿಂಗನಮಕ್ಕಿ	1,819	1,772.50	10,999	3,440.05
ಸೂಪಾ (ಮೀ)	564	533.80	7,094.27	2,247.42
ಮಾಣಿ	595	576.74	1,352	000
ತುಂಗಭದ್ರಾ	1,633	1,605.28	21,643	205
ಮಲಪ್ರಭಾ	2,079.5	2,054.20	2,474	194
ಘಟಪ್ರಭಾ	2175	2,134.58	8,040	125
ಭದ್ರಾ	186	136.9	5,737	159
ಆಲಮಟ್ಟಿ (ಮೀ)	519.6	517.22	33,874	3,296
ನಾರಾಯಣಪುರ (ಮೀ)	492.25	489.23	1,389	95

* ನೆಲಮಟ್ಟದಿಂದ

ಟ್ರಕ್ ಟರ್ಮಿನಲ್ ಅಕ್ರಮ: ಬಿಜೆಪಿಯ ವೀರಯ್ಯ ಸೆರೆ

ಒಂದನೇ ಪುಟದಿಂದ...

ವಿಧಾನಪರಿಷತ್ತಿನಲ್ಲಿ ಬಿಜೆಪಿ ಸದಸ್ಯರಾಗಿದ್ದ ಅವರು, ಬಿಜೆಪಿ ಸರ್ಕಾರದ ಅವಧಿಯಲ್ಲಿ ಡಿಡಿಯುಟಿಟಿಎಲ್‌ನ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದ್ದರು.

2021ರಿಂದ 2023ರ ಅವಧಿಯಲ್ಲಿ ನಡೆದಿದೆ ಎನ್ನಲಾದ ಅಕ್ರಮದ ಬಗ್ಗೆ ವ್ಯವಸ್ಥಾಪಕ ನಿರ್ದೇಶಕ ಸಿ.ಎನ್.ಶಿವಪ್ರಕಾಶ್ ಅವರು ವಿಲ್ಸನ್ ಗಾರ್ಡನ್ ಠಾಣೆಗೆ ದೂರು ನೀಡಿದ್ದರು.

2023ರ ಸೆಪ್ಟೆಂಬರ್ 23ರಂದು ಎಫ್‌ಐಆರ್ ದಾಖಲಾಗಿತ್ತು. ಈ ಪ್ರಕರಣದ ತನಿಖೆಯನ್ನು ಸರ್ಕಾರ ಸಿಐಡಿಗೆ ವರ್ಗಾಯಿಸಿತ್ತು.

'ನಿಗಮದ 194ನೇ ನಿರ್ದೇಶಕ ಮಂಡಳಿ ಸಭೆಯನ್ನು 2021ರ ಅಕ್ಟೋಬರ್‌ನಲ್ಲಿ ನಡೆಸಲಾಗಿತ್ತು. ಈ ವೇಳೆ ಟ್ರಕ್ ಟರ್ಮಿನಲ್‌ಗಳ ನಿರ್ವಹಣೆ ಮಾಡಲು ₹10 ಕೋಟಿ ಮೊತ್ತದ ತುಂಡು ಗುತ್ತಿಗೆ ನೀಡಲು ಅನುಮೋದನೆ ಹೊರಡಿಸಲಾಗಿತ್ತು. ಇದಾದ ಬಳಿಕ ಕಾಮಗಾರಿ ನಡೆಸದೇ ₹47 ಕೋಟಿ ಅಕ್ರಮ ನಡೆಸಲಾಗಿದೆ ಎಂದು ಆರೋಪಿಸಿ ವ್ಯವಸ್ಥಾಪಕ ನಿರ್ದೇಶಕರು ದೂರು ನೀಡಿದ್ದರು. ಈ ಕುರಿತು ತನಿಖೆಯಲ್ಲಿ ಲಭ್ಯವಾದ ಸಾಕ್ಷ್ಯಗಳನ್ನು ಆಧರಿಸಿ ಆರೋಪಿಯನ್ನು ಬಂಧಿಸಲಾಗಿದೆ' ಎಂದು ಮೂಲಗಳು ಹೇಳಿವೆ.

ಪ್ರಕರಣಕ್ಕೆ ಸಂಬಂಧಪಟ್ಟಂತೆ ಡಿಡಿಯುಟಿಟಿಎಲ್ ಕಚೇರಿ, ಹಲವರ ಮನೆಗಳ ಮೇಲೆ ಇತ್ತೀಚೆಗೆ ಸಿಐಡಿ ದಾಳಿ ನಡೆಸಿ ದಾಖಲೆ ಸಂಗ್ರಹಿಸಿತ್ತು.

ಮಾಜಿ ಎಂ.ಡಿಯನ್ನೂ ಬಂಧಿಸಿದ್ದ ಸಿಐಡಿ: ಇದೇ ಪ್ರಕರಣದಲ್ಲಿ ಡಿಡಿಯುಟಿಟಿಎಲ್ ಮಾಜಿ ವ್ಯವಸ್ಥಾಪಕ ನಿರ್ದೇಶಕ ಎಸ್.ಶಂಕರಪ್ಪ ಅವರನ್ನೂ ಸಿಐಡಿ ಮೇ 27ರಂದು ಬಂಧಿಸಿತ್ತು.

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಉಪ ನಿರ್ದೇಶಕರಾಗಿದ್ದ ಶಂಕರಪ್ಪ, ಈ ಹಿಂದೆ ಡಿಡಿಯುಟಿಟಿಎಲ್‌ನಲ್ಲಿ ವ್ಯವಸ್ಥಾಪಕ ನಿರ್ದೇಶಕರಾಗಿ ಕಾರ್ಯನಿರ್ವಹಿಸಿದ್ದರು.

ಮುಂದಿನ ಮೂರು ದಿನ ಭಾರಿ ವರ್ಷಧಾರೆ

ಕೊಡಗು: ಮತ್ತೆ ಬಿರುಸು ಪಡೆದ ಮಳೆ

ಪ್ರಜಾವಾಣಿ ವಾರ್ತೆ

ಮಡಿಕೇರಿ/ಬೆಂಗಳೂರು: ಕೊಡಗು ಜಿಲ್ಲೆಯಲ್ಲಿ ಎರಡು ದಿನಗಳ ಬಿಡುವಿನ ನಂತರ ಮಳೆ ಶುಕ್ರವಾರ ಮತ್ತೆ ಬಿರುಸಾಗಿದೆ.

ಮಡಿಕೇರಿ ನಗರದಲ್ಲಿ ಬಿರುಸಿನ ಮಳೆ ಬಿದ್ದಿತು. ನಾಪೋಕ್ಲು, ಸುಂಟಿಕೊಪ್ಪ ಹೋಬಳಿ ವ್ಯಾಪ್ತಿಗಳಲ್ಲಿಯೂ ಮಧ್ಯಾಹ್ನದ ಬಳಿಕ ಧಾರಾಕಾರ ಮಳೆಯಾಯಿತು. ವಿರಾಜಪೇಟೆಯಲ್ಲಿ ಉತ್ತಮ ಹಾಗೂ ಗೋಣಿಕೊಪ್ಪಲು ವ್ಯಾಪ್ತಿಯಲ್ಲಿ ಸಾಧಾರಣ ಮಳೆಯಾಗಿದೆ.

ಹೆಚ್ಚಿನ ಮಳೆ ಸುರಿದರೆ ಭೂಕುಸಿತ ಸಂಭವಿಸಬಹುದಾದ ಪ್ರದೇಶಗಳಿಗೆ ರಾಷ್ಟ್ರೀಯ ವಿಪತ್ತು ನಿರ್ವಹಣಾ ಪಡೆಯ ಯೋಧರು ಶುಕ್ರವಾರ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಸಾಧಾರಣ ಮಳೆ (ಮಂಗಳೂರು ವರದಿ): ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಶುಕ್ರವಾರ ಸಾಧಾರಣ ಮಳೆಯಾಗಿದೆ.

ಮಂಗಳೂರು ನಗರದಲ್ಲಿ ಬೆಳಿಗ್ಗೆಯಿಂದ ಬಿಟ್ಟು ಬಿಟ್ಟು ಮಳೆ ಸುರಿಯಿತು. ಇಡೀ ದಿನ ಮೋಡ ಕವಿದ ವಾತಾವರಣ ಇತ್ತು. ಕಲ್ಮಡಕ, ಬಳಂಜ, ಉಡುಪಿ ಜಿಲ್ಲೆಯ ಹಳ್ಳಿಹೊಳೆಯಲ್ಲಿ ಉತ್ತಮ ಮಳೆಯಾಗಿದೆ.

'ಆರೆಂಜ್ ಅಲರ್ಟ್': ರಾಜ್ಯದ ವಿವಿಧೆಡೆ ಮುಂದಿನ ಮೂರು ದಿನಗಳು ಭಾರಿ ಮಳೆಯಾಗುವ ಮುನ್ಸೂಚನೆ ನೀಡಿರುವ ಹವಾಮಾನ ಇಲಾಖೆ, ಶನಿವಾರ ಆರು ಜಿಲ್ಲೆಗಳಿಗೆ 'ಆರೆಂಜ್ ಅಲರ್ಟ್' ಘೋಷಿಸಿದೆ.

ಉತ್ತರ ಕನ್ನಡ, ಉಡುಪಿ, ದಕ್ಷಿಣ ಕನ್ನಡ, ಕೊಡಗು, ಚಿಕ್ಕಮಗಳೂರು ಹಾಗೂ ಶಿವಮೊಗ್ಗ ಜಿಲ್ಲೆಗೆ 'ಆರೆಂಜ್ ಅಲರ್ಟ್' ನೀಡಲಾಗಿದೆ. ಬೆಳಗಾವಿ ಜಿಲ್ಲೆಗೆ 'ಯೆಲ್ಲೊ ಅಲರ್ಟ್' ಘೋಷಿಸಲಾಗಿದೆ.

ಮಡಿಕೇರಿ ತಾಲ್ಲೂಕಿನ ನಾಪೋಕ್ಲು ಸಮೀಪದ ಬಲ್ಲಮಾವಟಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಪೇರೂರಿನ ಬೆಟ್ಟ ಶ್ರೇಣಿಗಳ ನಡುವೆ ಧುಮ್ಮಿಕ್ಕಿ ಹರಿಯುತ್ತಿರುವ ಜಲಧಾರೆ. ಇದನ್ನು ಸ್ಥಳೀಯರು 'ಲಾಫಿಂಗ್ ಫಾಲ್ಸ್' ಎಂದು ಹೆಸರಿಸಿದ್ದಾರೆ ಪ್ರಜಾವಾಣಿ ಚಿತ್ರ: ಸಿ.ಎಸ್‌.ಸುರೇಶ್

ಸುಭಾಷಿತ

ನಿರ್ದಾಕ್ಷಿಣ್ಯವಾದ ವಿಚಾರ ವಿಮರ್ಶೆಯೇ ಸಾರ್ವಜನಿಕರು ದೇಶಕ್ಕೆ ಸಲ್ಲಿಸಬಹುದಾದ ಸರ್ವೋತ್ತಮ ಸೇವೆ.

-ಡಿ.ವಿ.ಜಿ.

ಜೀವನಾಂಶ, ಸಮಾನತೆ ಹಕ್ಕು ಎತ್ತಿಹಿಡಿದ ಚಾರಿತ್ರಿಕ ತೀರ್ಪು

ಮುಸ್ಲಿಂ ಮಹಿಳೆಯರು ಅಪರಾಧ ದಂಡಪ್ರಕ್ರಿಯಾ ಸಂಹಿತೆಯ (ಸಿಆರ್‌ಪಿಸಿ) ಸೆಕ್ಷನ್ 125ರ ಅಡಿಯಲ್ಲಿ ಜೀವನಾಂಶ ಪಡೆಯಲು ಅರ್ಹರು ಎಂದು ಸುಪ್ರೀಂ ಕೋರ್ಟ್ ತೀರ್ಪು ನೀಡಿದೆ. ಈ ತೀರ್ಪು ಮುಸ್ಲಿಂ ಮಹಿಳೆಯರ ಸಮಾನತೆಯ ಹಕ್ಕುಗಳನ್ನು ಎತ್ತಿ ಹಿಡಿದಿದೆ. ಸಂಪ್ರದಾಯ, ವಿಶೇಷ ಕಾಯ್ದೆ ಅಥವಾ ಇತರ ವಿಧಾನಗಳ ಮೂಲಕ ಈ ಹಕ್ಕುಗಳನ್ನು ಕಸಿದುಕೊಳ್ಳಲು ಆಗದು ಎಂಬುದನ್ನು ಒತ್ತಿ ಹೇಳಿದಂತಾಗಿದೆ. ಧರ್ಮ ಯಾವುದಾದರೂ ಇರಲಿ, ವಿಚ್ಛೇದನದ ವಿಧಾನ ಯಾವುದೇ ಇರಲಿ, ಜೀವನಾಂಶ ದೊರೆಯಲೇಬೇಕು ಎಂದು ನ್ಯಾಯಾಲಯ ಹೇಳಿದೆ. ವಿಚ್ಛೇದಿತ ಮಹಿಳೆಯು ಪಡೆಯುವ ಜೀವನಾಂಶವು ದಾನ ಅಲ್ಲ, ಬದಲಿಗೆ ಅದು ಅವರ ಮೂಲಭೂತ ಹಕ್ಕು ಎಂಬುದನ್ನು ನ್ಯಾಯಮೂರ್ತಿಗಳಾದ ಬಿ.ವಿ. ನಾಗರತ್ನ ಮತ್ತು ಅಗಸ್ಟಿನ್ ಜಾರ್ಜ್ ಮಸೀಹ್ ಅವರು ದೃಢವಾಗಿ ಹೇಳಿದ್ದಾರೆ. ಮೊಹಮ್ಮದ್ ಅಬ್ದುಲ್ ಸಮದ್ ಎಂಬುವರು ಸಲ್ಲಿಸಿದ್ದ ಮೇಲ್ಮನವಿಯ ವಿಚಾರಣೆ ನಡೆಸಿ ಈ ತೀರ್ಪು ನೀಡಲಾಗಿದೆ. ಸಮದ್ ಅವರ ವಿಚ್ಛೇದಿತ ಪತ್ನಿಗೆ ಅಪರಾಧ ದಂಡಪ್ರಕ್ರಿಯಾ ಸಂಹಿತೆಯ ಸೆಕ್ಷನ್ 125ರ ಅಡಿಯಲ್ಲಿ ಜೀವನಾಂಶ ನೀಡಬೇಕು ಎಂದು ಕೌಟುಂಬಿಕ ನ್ಯಾಯಾಲಯ ನೀಡಿದ್ದ ಆದೇಶವನ್ನು ತೆಲಂಗಾಣ ಹೈಕೋರ್ಟ್ ಎತ್ತಿ ಹಿಡಿದಿತ್ತು. ಅದನ್ನು ಪ್ರಶ್ನಿಸಿ ಮೇಲ್ಮನವಿ ಸಲ್ಲಿಸಲಾಗಿತ್ತು. ವಿಚ್ಛೇದನ ಪಡೆದ ಮುಸ್ಲಿಂ ಮಹಿಳೆಯರು, ಮುಸ್ಲಿಂ ಮಹಿಳೆ (ವಿಚ್ಛೇದನದ ಸಂದರ್ಭದಲ್ಲಿ ಹಕ್ಕುಗಳ ರಕ್ಷಣೆ) ಕಾಯ್ದೆ- 1986ರ ಅಡಿಯಲ್ಲಿ ಮಾತ್ರ ಜೀವನಾಂಶ ಕೇಳುವುದಕ್ಕೆ ಸಾಧ್ಯ ಎಂದು ಸಮದ್ ವಾದಿಸಿದ್ದರು. ಆದರೆ, ನ್ಯಾಯಾಲಯವು ಈ ವಾದವನ್ನು ತಳ್ಳಿಹಾಕಿದೆ. ಸಿಆರ್‌ಪಿಸಿಯ ಸೆಕ್ಷನ್ 125 ಧರ್ಮನಿರಪೇಕ್ಷವಾಗಿದ್ದು ಎಲ್ಲ ಮಹಿಳೆಯರಿಗೆ ಅನ್ವಯವಾಗುತ್ತದೆ ಎಂದಿದೆ. ಮುಸ್ಲಿಂ ಮಹಿಳೆಯರು ಈ ಸೆಕ್ಷನ್ ಅಡಿಯಲ್ಲಿ ಅಥವಾ ವಿಶೇಷ ಕಾಯ್ದೆ ಅಡಿಯಲ್ಲಿ ಅಥವಾ ಎರಡರ ಅಡಿಯಲ್ಲಿಯೂ ಜೀವನಾಂಶ ಕೇಳುವ ಆಯ್ಕೆ ಹೊಂದಿದ್ದಾರೆ ಎಂದೂ ನ್ಯಾಯಪೀಠ ಹೇಳಿದೆ.

ಎಲ್ಲ ಕಾನೂನು ಮತ್ತು ಆಚರಣೆಗಳಿಗಿಂತ ಸಮಾನತೆಯ ಸಾಂವಿಧಾನಿಕ ಹಕ್ಕಿಗೆ ಆದ್ಯತೆ ಎಂಬುದನ್ನು ಈಗಿನ ತೀರ್ಪು ಹೇಳಿದೆ

ಶಾ ಬಾನು ಪ್ರಕರಣದಲ್ಲಿ ನೀಡಲಾಗಿದ್ದ ತೀರ್ಪನ್ನು ಈಗಿನ ತೀರ್ಪು ಮರು ವ್ಯಾಖ್ಯಾನಕ್ಕೆ ಒಳಪಡಿಸಿದೆ. ವಿಚ್ಛೇದಿತ ಮುಸ್ಲಿಂ ಮಹಿಳೆಯರಿಗೆ ಸೆಕ್ಷನ್ 125ರ ಅಡಿಯಲ್ಲಿ ಜೀವನಾಂಶ ಪಡೆಯುವ ಹಕ್ಕು ಇದೆ ಎಂದು ಶಾ ಬಾನು ಪ್ರಕರಣದಲ್ಲಿ ಸುಪ್ರೀಂ ಕೋರ್ಟ್ ತೀರ್ಪು ನೀಡಿತ್ತು. ಆದರೆ, ನಂತರ 1986ರಲ್ಲಿ ಜಾರಿಗೆ ಬಂದ ಕಾಯ್ದೆಯು ಈ ಹಕ್ಕನ್ನು ಮೊಟಕುಗೊಳಿಸಿದೆ ಎಂದು ಭಾವಿಸಲಾಗಿತ್ತು. ಆದರೆ, 1986ರ ಕಾಯ್ದೆಯು ಈ ಹಕ್ಕನ್ನು ಮೊಟಕು ಮಾಡಿಲ್ಲ ಎಂದು ನ್ಯಾಯಾಲಯ ಸ್ಪಷ್ಟವಾಗಿ ಹೇಳಿದೆ. ಇತ್ತೀಚಿನ ವರ್ಷಗಳಲ್ಲಿ ಬಂದ ತೀರ್ಪುಗಳು ಮುಸ್ಲಿಂ ಮಹಿಳೆಯರ ಸಮಾನತೆಯ ಹಕ್ಕನ್ನು ಎತ್ತಿ ಹಿಡಿಯುತ್ತಲೇ ಬಂದಿವೆ. ಸಿಆರ್‌ಪಿಸಿಯ ಸೆಕ್ಷನ್ 125 ಕೂಡ ಮುಸ್ಲಿಂ ಮಹಿಳೆಯರಿಗೆ ಅನ್ವಯ ಆಗುತ್ತದೆ ಎಂದು ಹೇಳಲಾಗಿದೆ. ಕಾನೂನು ಮತ್ತು ಆಚರಣೆಗಳು ಮುಸ್ಲಿಂ ಮಹಿಳೆಯರ ಜೀವನಾಂಶದ ಹಕ್ಕನ್ನು ವಿಸ್ತರಿಸುತ್ತಲೇ ಬಂದಿವೆ. ಮುಸ್ಲಿಂ ಮಹಿಳೆಯರಿಗೆ ಮರುಮದುವೆ ಆಗುವತನಕ ಜೀವನಾಂಶ ಪಡೆದುಕೊಳ್ಳುವ ಹಕ್ಕು ಇದೆ ಎಂದು 2001ರ ಡೇನಿಯಲ್ ಲತೀಫಿ ಪ್ರಕರಣದಲ್ಲಿ ಹೇಳಲಾಗಿದೆ. ನ್ಯಾಯಾಲಯವು ಇದೇ ವಿಚಾರವನ್ನು 2009ರಲ್ಲಿ ಎತ್ತಿ ಹಿಡಿದಿದೆ. ಜೊತೆಗೆ, ಸಿಆರ್‌ಪಿಸಿ ಅಡಿಯಲ್ಲಿಯೂ ಮುಸ್ಲಿಂ ಮಹಿಳೆಯರು ಜೀವನಾಂಶ ಪಡೆಯಬಹುದು ಎಂದೂ ನ್ಯಾಯಾಲಯ ಹೇಳಿದೆ. ವಿಚ್ಛೇದಿತ ಮುಸ್ಲಿಂ ಮಹಿಳೆಯರು ಸೆಕ್ಷನ್ 125 ಮತ್ತು 1986ರ ಕಾಯ್ದೆ ಎರಡರ ಅಡಿಯಲ್ಲಿಯೂ ಜೀವನಾಂಶ ಕೇಳಬಹುದು ಎಂದು ಪಟ್ನಾ ಹೈಕೋರ್ಟ್ 2019ರಲ್ಲಿ ಆದೇಶ ನೀಡಿದೆ. ಇಷ್ಟೆಲ್ಲ ತೀರ್ಪುಗಳು, ಆದೇಶಗಳು ಇದ್ದರೂ ಈ ಕುರಿತ ತಕರಾರು ಮುಂದುವರಿದಿತ್ತು. 1986ರ ಕಾಯ್ದೆಯು ಸಾಮಾನ್ಯ ಕಾಯ್ದೆ ಅಲ್ಲ, ಅದು ವಿಶೇಷ ಕಾಯ್ದೆ. ಹಾಗಾಗಿ, ಮುಸ್ಲಿಂ ಮಹಿಳೆಯರಿಗೆ ಸೆಕ್ಷನ್ 125 ಅನ್ವಯ ಆಗುವುದಿಲ್ಲ ಎಂದು ಈವರೆಗೆ ವಾದಿಸಲಾಗಿದೆ. ಆದರೆ, ಈ ವಾದವನ್ನು ನ್ಯಾಯಾಲಯವು ತಿರಸ್ಕರಿಸಿದೆ. ಯಾವ ಕಾನೂನಿನ ಅಡಿಯಲ್ಲಿ ಜೀವನಾಂಶ ಕೇಳಬೇಕು ಎಂಬುದನ್ನು ಆಯ್ಕೆ ಮಾಡಿಕೊಳ್ಳುವುದು ಮಹಿಳೆಗೆ ಬಿಟ್ಟ ವಿಚಾರ ಎಂಬುದನ್ನು ಕೋರ್ಟ್ ಈಗ ಸ್ಪಷ್ಟಪಡಿಸಿದೆ.

ಎಲ್ಲ ಕಾನೂನು ಮತ್ತು ಆಚರಣೆಗಳಿಗಿಂತ ಸಮಾನತೆಯ ಸಾಂವಿಧಾನಿಕ ಹಕ್ಕಿಗೆ ಆದ್ಯತೆ ಎಂಬುದನ್ನು ಈಗಿನ ತೀರ್ಪು ಹೇಳಿದೆ. ಮುಸ್ಲಿಂ ಮಹಿಳೆಯರು ತಮ್ಮ ಸಾಮಾಜಿಕ, ಆರ್ಥಿಕ ಸುರಕ್ಷತೆಯ ಹಕ್ಕುಗಳಿಂದ ವಂಚಿತರಾಗಬಾರದು ಎಂಬುದನ್ನು ನ್ಯಾಯಾಲಯವು ಖಾತರಿಪಡಿಸಿದೆ. ಭಾರತವು ಲಿಂಗತ್ವ ನ್ಯಾಯದ ವಿಚಾರದಲ್ಲಿ ಕಳೆದ ಕೆಲವು ದಶಕಗಳಲ್ಲಿ ಎಷ್ಟು ಮುಂದಕ್ಕೆ ಸಾಗಿದೆ ಎಂಬುದನ್ನು ಈ ತೀರ್ಪು ಮತ್ತು ಅದಕ್ಕೆ ಬಂದ ಪ್ರತಿಕ್ರಿಯೆಯು ತೋರಿಸುತ್ತದೆ. ಯಾವುದೇ ರಾಜಕೀಯ ಅಥವಾ ಸಂಘರ್ಷ ಇಲ್ಲದೆಯೇ ಏಕರೂಪ ನಾಗರಿಕ ಸಂಹಿತೆಯ ಕಡೆಗೆ ಹೇಗೆ ಸಾಗಬಹುದು ಎಂಬುದನ್ನೂ ತೀರ್ಪು ತೋರಿಸಿಕೊಟ್ಟಿದೆ.

ದಿನದ ಟ್ವೀಟ್

ಅಸಮಾನ ಬೆಳವಣಿಗೆ

ಕೈಗಾರಿಕೆಗಳ ಸ್ವರೂಪದಲ್ಲಿ ಆಗಿರುವ ಬದಲಾವಣೆಯ ಪರಿಣಾಮವಾಗಿ ಯುವಕರು ನಿರುದ್ಯೋಗಿಗಳಾಗಿರುವುದು ಭಾರತದ ಅರ್ಥ ವ್ಯವಸ್ಥೆಯು ಎದುರಿಸುತ್ತಿರುವ ದೊಡ್ಡ ಸವಾಲುಗಳಲ್ಲಿ ಒಂದು. ಇದು ಸರಿಯಾಗದೆ ಇದ್ದರೆ ಬೆಳವಣಿಗೆಯು ಯಾವಾಗಲೂ ಅಸಮಾನವಾಗಿಯೇ ಉಳಿಯುತ್ತದೆ...

ನಿತಿನ್ ಕಾಮತ್, ಉದ್ಯಮಿ

ಕಿಡಿನುಡಿ

ಶಾಂತವೇರಿ ಗೋಪಾಲಗೌಡ ಅವರಿಗೆ ನಿವೇಶನ ಕೊಡಲು ಸರ್ಕಾರ ಮುಂದಾಗುತ್ತದೆ. ಈ ರಾಜ್ಯದ ಕಟ್ಟ ಕಡೆಯ ಬಡವನಿಗೆ ನಿವೇಶನ ಎಲ್ಲಿಯತನಕ ದೊರಕುವುದಿಲ್ಲವೋ ಅಲ್ಲಿಯತನಕ ತಮಗೆ ನಿವೇಶನ ಬೇಡ ಎನ್ನುತ್ತಾರೆ ಗೌಡರು. ಅಂಥವರ ಹೆಸರು ಹೇಳಿ ರಾಜಕಾರಣ ಮಾಡುವ ಸಿದ್ದರಾಮಯ್ಯ ಅವರು ತಮ್ಮ ಪತ್ನಿ ಹೆಸರಿನ ನಿವೇಶನ ಹಗರಣವನ್ನು ಸಮರ್ಥನೆ ಮಾಡಿಕೊಳ್ಳುತ್ತಿರುವುದು ಎಷ್ಟು ಸರಿ?

ಸಿ.ಟಿ.ರವಿ, ಬಿಜೆಪಿ ಮುಖಂಡ

25 ವರ್ಷಗಳ ಹಿಂದೆ

ಮಂಗಳವಾರ, 13-7-1999

● ಪಾಕ್ ಸೈನಿಕರ ತೆರವಿಗೆ ಭಾರತ ಗಡುವು, ವಾಯುದಾಳಿ ಸ್ಥಗಿತ

ನವದೆಹಲಿ, ಜುಲೈ 12– ಪಾಕಿಸ್ತಾನಿ ಸೇನೆಯು ಕಾರ್ಗಿಲ್ ವಲಯದಿಂದ ಕಾಲ್ತೆಗೆಯುತ್ತಿರುವುದರಿಂದ ಭಾರತವು ತನ್ನ ವಾಯುಪಡೆಯ ದಾಳಿಯನ್ನು ಸ್ಥಗಿತಗೊಳಿಸಿದೆ. ಭೂ ಸೇನೆಯು ಸಹಾ ಪಾಕಿಸ್ತಾನಿ ಸೈನಿಕರು ವಾಪಸಾಗುತ್ತಿರುವ ಕಡೆಗಳಲ್ಲಿ ತನ್ನ ಕಾರ್ಯಾಚರಣೆಯನ್ನು 16ರ ಬೆಳಿಗ್ಗೆವರೆಗೆ ಸ್ಥಗಿತಗೊಳಿಸಿದೆ.

ಭಾರತ ಮತ್ತು ಪಾಕಿಸ್ತಾನದ ಮಿಲಿಟರಿ ಕಾರ್ಯಾಚರಣೆಯ ಮಹಾನಿರ್ದೇಶಕರ ನಡುವೆ ನಿನ್ನೆ ಮಧ್ಯಾಹ್ನ ಒಂದೂವರೆ ಗಂಟೆಯಲ್ಲಿ ಆಗಿರುವ ಒಪ್ಪಂದದ ಮೇರೆಗೆ ಈ ನಿರ್ಧಾರ ಕೈಗೊಳ್ಳಲಾಗಿದೆ.

● ಕೇರಳ: ಸಾರ್ವಜನಿಕ ಧೂಮಪಾನ ನಿಷೇಧ

ಕೊಚ್ಚಿ, ಜುಲೈ 12 (ಪಿಟಿಐ)– ಸಾರ್ವಜನಿಕ ಸ್ಥಳಗಳಲ್ಲಿ ಧೂಮಪಾನ ಮಾಡುವುದನ್ನು ನಿಷೇಧಿಸಿರುವ ಕೇರಳದ ಹೈಕೋರ್ಟ್, ತನ್ನ ಆದೇಶವನ್ನು ತಕ್ಷಣವೇ ಜಾರಿಗೆ ತರುವಂತೆ ಇಂದು ಜಿಲ್ಲಾ ಆಡಳಿತಗಳಿಗೆ ಆಜ್ಞೆ ಮಾಡಿತು.

ಹಂಗಾಮಿ ಮುಖ್ಯ ನ್ಯಾಯಮೂರ್ತಿ ಎ.ಆರ್. ಲಕ್ಷ್ಮಣನ್ ಹಾಗೂ ನ್ಯಾಯಮೂರ್ತಿ ಕೆ. ನಾರಾಯಣ ಕುರುಪ್ ಅವರಿದ್ದ ವಿಭಾಗೀಯ ಪೀಠವು, ನ್ಯಾಯಾಲಯದ ಆಜ್ಞೆಯನ್ನು ಉಲ್ಲಂಘಿಸುವವರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳುವಂತೆ ಸೂಚಿಸಬೇಕೆಂದು ರಾಜ್ಯ ಪೊಲೀಸ್ ಮಹಾನಿರ್ದೇಶಕರಿಗೆ ತಾಕೀತು ಮಾಡಿತು.

50 ವರ್ಷಗಳ ಹಿಂದೆ

ಶನಿವಾರ, 13-7-1974

● ಗಡಿಯಲ್ಲಿ ಪಾಕ್ ಸೇನೆ 'ಅಸಾಧಾರಣ' ಚಲನೆ, ವ್ಯೂಹಗಳ ರಚನೆ

ನವದೆಹಲಿ, ಜುಲೈ 12– ಭಾರತ-ಪಾಕಿಸ್ತಾನ ಗಡಿಯಲ್ಲಿ ಪಾಕಿಸ್ತಾನಿ ಸೇನಾ ತುಕಡಿಗಳು ಭಾರಿ ಪ್ರಮಾಣದ ಸೈನಿಕರ ಚಲನವಲನ ಹಾಗೂ ವ್ಯೂಹರಚನೆಯನ್ನು ಆರಂಭಿಸಿವೆಯೆಂದು ಅಧಿಕೃತ ವಕ್ತಾರರೊಬ್ಬರು ತಿಳಿಸಿದರು.

ಇದನ್ನು ಭಾರತ ಗಡಿ ಬಳಿ ನಡೆಯುತ್ತಿರುವ ಅಸಾಧಾರಣ ಮಿಲಿಟರಿ ಚಟುವಟಿಕೆ ಎಂದು ವಕ್ತಾರರು ಕರೆದರು. ಭಾರತದಿಂದ ಬೆದರಿಕೆ ಇದೆಯೆಂಬ ಭಾವನೆಯನ್ನು ಪಾಕಿಸ್ತಾನದಲ್ಲುಂಟು ಮಾಡುವ ಯತ್ನದ ಅಂಗವಾಗಿ ಈ ಪ್ರಯತ್ನ ನಡೆದಿದೆಯೆಂದೂ ಅವರು ಹೇಳಿದರು.

● ಬಿಹಾರ ಚಳವಳಿಯಲ್ಲಿ ಪಾಲ್ಗೊಳ್ಳಲು ಸರ್ವೋದಯ ಕಾರ್ಯಕರ್ತರಿಗೆ ಸ್ವಾತಂತ್ರ್ಯ

ವಾರ್ಧಾ, ಜುಲೈ 12– ಜಯಪ್ರಕಾಶ ನಾರಾಯಣ್ ಅವರು ಬಿಹಾರದಲ್ಲಿ ಆರಂಭಿಸಿರುವ ಚಳವಳಿ ಬಗ್ಗೆ ಅಖಿಲ ಭಾರತ ಸರ್ವಸೇವಾ ಸಂಘದಲ್ಲಿ ಉಂಟಾಗಿದ್ದ ಬಿಕ್ಕಟ್ಟು ಆಚಾರ್ಯ ವಿನೋಬಾ ಭಾವೆಯವರ ಮಧ್ಯ ಪ್ರವೇಶದಿಂದಾಗಿ ಕೊನೆಗೊಂಡಿತು.

ಸರ್ವೋದಯ ಕಾರ್ಯಕರ್ತರು ಚಳವಳಿಯಲ್ಲಿ ಭಾಗವಹಿಸುವುದಕ್ಕೆ ಭಾವೆ ಒಪ್ಪಿಗೆ ನೀಡಿದ್ದಾರೆ. ಚಳವಳಿಗೆ ಸಂಬಂಧಿಸಿದಂತೆ ಒಮ್ಮತಕ್ಕೆ ಬರುವುದರಲ್ಲಿ ವಿಫಲರಾಗಿ ಸರ್ವ ಸೇವಾ ಸಂಘದ ಕಾರ್ಯಕಾರಿ ಸಮಿತಿ ಸದಸ್ಯತ್ವಕ್ಕೆ 17 ಮಂದಿ ರಾಜೀನಾಮೆ ನೀಡಿದ್ದರು.

ಸರ್ಕಾರದ ಸಾಮರ್ಥ್ಯ ಹೆಚ್ಚದಿದ್ದರೆ ಜಿಡಿಪಿ ಬೆಳವಣಿಗೆ ಎಷ್ಟಿದ್ದರೂ ನಿರೀಕ್ಷಿತ ಪರಿಣಾಮ ಸಿಗದು

ಸರ್ಕಾರಿ ಸೇವೆಗಳು ಸುಧಾರಿಸಿದಾಗ...

ವಿಶ್ಲೇಷಣೆ

ಟಿ.ಎಸ್. ವೇಣುಗೋಪಾಲ್

ಭಾರತ ಆರ್ಥಿಕವಾಗಿ ಬಲಾಢ್ಯ ರಾಷ್ಟ್ರವಾಗಿ ಹೊರಹೊಮ್ಮಲಿದೆ ಎಂದು ಸಂಭ್ರಮಿಸುವುದಕ್ಕೆ ಕಾರಣಗಳು ಇರುವಂತೆಯೇ, ನಮ್ಮ ಆರ್ಥಿಕತೆಯಲ್ಲಿ ಗಂಭೀರವಾದ ಸಮಸ್ಯೆಗಳಿವೆ ಎಂದು ಆತಂಕಗೊಳ್ಳುವುದಕ್ಕೂ ಕಾರಣಗಳಿವೆ. ನಿಜ, ಭಾರತಕ್ಕೆ ಸ್ವಾತಂತ್ರ್ಯ ಬಂದಾಗ ದೇಶದ ಸ್ಥಿತಿ ತುಂಬಾ ಕೆಟ್ಟದಾಗಿತ್ತು. ಭಾರತ ಒಂದಾಗಿ ಉಳಿಯಬಹುದೇ ಅನ್ನುವ ಅನುಮಾನಗಳೂ ಇದ್ದವು. ದೇಶವು ಒಂದಾಗಿ ಉಳಿದಿರುವುದಷ್ಟೇ ಅಲ್ಲ ನಿರೀಕ್ಷೆಯನ್ನು ಮೀರಿ ಅಭಿವೃದ್ಧಿಯನ್ನು ಸಾಧಿಸಿದೆ. ಬಡತನ, ಹಸಿವು ಕಡಿಮೆಯಾಗಿವೆ.

ಜಗತ್ತಿನ ಐದನೇ ದೊಡ್ಡ ಆರ್ಥಿಕತೆಯಾಗಿ ದೇಶ ಬೆಳೆದಿದೆ. ಆದರೆ, ಆತಂಕದ ವಿಷಯವೆಂದರೆ ಶಿಕ್ಷಣ, ಆರೋಗ್ಯ, ರಕ್ಷಣೆ, ಕಾನೂನಿನಂತಹ ಮೂಲಭೂತ ಸಾರ್ವಜನಿಕ ಸೇವೆಗಳನ್ನು ಪರಿಣಾಮಕಾರಿಯಾಗಿ ಒದಗಿಸುವಲ್ಲಿ ವಿಫಲವಾಗಿದ್ದೇವೆ. ಉದಾಹರಣೆಗೆ ಶಿಕ್ಷಣವನ್ನು ಗಮನಿಸಿ. 2022ರಲ್ಲಿ ಶಿಕ್ಷಣಕ್ಕಾಗಿ ₹7.5 ಲಕ್ಷ ಕೋಟಿ ಖರ್ಚು ಮಾಡಲಾಗಿದೆ. ಮಕ್ಕಳ ಪೈಕಿ ಶೇಕಡ 98.4ರಷ್ಟು ಮಂದಿ ಶಾಲೆಗೆ ಹೋಗುತ್ತಿದ್ದಾರೆ. ಆದರೆ ಐದನೆಯ ತರಗತಿಯಲ್ಲಿ ಓದುತ್ತಿರುವ ಗ್ರಾಮೀಣ ಪ್ರದೇಶದ ಶೇ 50ಕ್ಕಿಂತ ಹೆಚ್ಚು ಮಕ್ಕಳಿಗೆ ಓದುವ ಸಾಮರ್ಥ್ಯ ಬಂದಿಲ್ಲ. ಸ್ವಾಭಾವಿಕವಾಗಿಯೇ ಮುಂದೆ ಅವರಿಗೆ ಆಧುನಿಕ ಆರ್ಥಿಕತೆಯಲ್ಲಿ ಭಾಗವಹಿಸುವುದು ಕಷ್ಟವಾಗುತ್ತದೆ.

ಶಿಕ್ಷಣ, ಆರೋಗ್ಯದಂತಹ ಮೂಲಭೂತ ಸೌಕರ್ಯಗಳನ್ನು ಒದಗಿಸುವಲ್ಲಿ ಸರ್ಕಾರ ವಿಫಲವಾದಾಗ ಹೆಚ್ಚು ತೊಂದರೆಗೆ ಒಳಗಾಗುವವರು ಬಡವರು. ಅವರು ಈ ಸೌಲಭ್ಯಗಳಿಗೆ ಸರ್ಕಾರವನ್ನೇ ನೆಚ್ಚಿಕೊಂಡಿರುತ್ತಾರೆ. ಸರ್ಕಾರ ವಿಫಲವಾದಾಗ ಅವರು ಅಪಾರ ಹಣ ತೆತ್ತು ಖಾಸಗಿಯವರಿಂದ ಆ ಸೌಲಭ್ಯಗಳನ್ನು ಪಡೆಯಬೇಕಾಗುತ್ತದೆ. ಸರ್ಕಾರದ ವೈಫಲ್ಯಕ್ಕೆ ಹಣದ ಕೊರತೆ ಕಾರಣವಲ್ಲ. ಕಾರ್ಯಕ್ರಮಗಳನ್ನು ಪರಿಣಾಮಕಾರಿಯಾಗಿ ನಿರ್ವಹಿಸುವುದಕ್ಕೆ ಸರ್ಕಾರಕ್ಕಿರುವ ಸಾಮರ್ಥ್ಯದ ಕೊರತೆ ಕಾರಣ. ಈ ದೌರ್ಬಲ್ಯದಿಂದಾಗಿ ಅಪೇಕ್ಷಿತ ಪರಿಣಾಮ ದೊರೆಯುತ್ತಿಲ್ಲ. ಈ ಬಗ್ಗೆ ಕಳೆದ 25 ವರ್ಷಗಳಿಂದ ಸಂಶೋಧನೆ ನಡೆಸಿರುವ ಕಾರ್ತಿಕ್ ಮುರಳೀಧರನ್ ತಮ್ಮ 'ಆಕ್ಸಿಲರೇಟಿಂಗ್ ಇಂಡಿಯಾಸ್ ಡೆವಲಪ್‌ಮೆಂಟ್' ಕೃತಿಯಲ್ಲಿ, 'ನಾವು ಇವತ್ತೂ 1950ರಲ್ಲಿ ಚಾಲೂ ಮಾಡಿದ ವಾಹನದಲ್ಲೇ ಕುಳಿತು, ಉನ್ನತ ಮಟ್ಟದ ಬದುಕನ್ನು ನಿರೀಕ್ಷಿಸುತ್ತಾ ಸಾಗುತ್ತಿದ್ದೇವೆ. ಈಗ ಆ ವಾಹನದ ಕಾರ್ಯಕ್ಷಮತೆ ಕಡಿಮೆಯಾಗಿದೆ. ಇಂಧನದ ಮೇಲೆ ಎಷ್ಟೇ ಹಣ ಚೆಲ್ಲಿದರೂ ನಿರೀಕ್ಷಿತ ಪರಿಣಾಮ ಸಿಗುವುದಿಲ್ಲ. ವಾಹನದ ಕಾರ್ಯಕ್ಷಮತೆಯನ್ನು ಹೆಚ್ಚಿಸಬೇಕು' ಅನ್ನುತ್ತಾರೆ.

ಸರ್ಕಾರದ ಸಾಮರ್ಥ್ಯದ ಕೊರತೆಯಿಂದಾಗಿ ನಿರೀಕ್ಷಿತ ಪರಿಣಾಮ ಸಾಧ್ಯವಾಗುತ್ತಿಲ್ಲ, ಶಾಲೆಗಳಲ್ಲಿ ಪರಿಣಾಮಕಾರಿ ಕಲಿಕೆ ಸಾಧ್ಯವಾಗುತ್ತಿಲ್ಲ, ಆಸ್ಪತ್ರೆಗಳಲ್ಲಿ ಉತ್ತಮ ಸೇವೆ ದೊರಕುತ್ತಿಲ್ಲ. ಇದರಿಂದ ನಮ್ಮ ದೇಶದ ಸ್ಥಿತಿವಂತರು ಹಾಗೂ ಮಧ್ಯಮ ವರ್ಗದವರು ಸರ್ಕಾರ ಒದಗಿಸುವ ಸೇವೆಗಳ ವಿಷಯದಲ್ಲಿ ನಿರಾಸಕ್ತಿ ತಾಳುತ್ತಿದ್ದಾರೆ. ಅವರು ಶಿಕ್ಷಣ, ಆರೋಗ್ಯ, ಸಾರಿಗೆ, ಸುರಕ್ಷತೆ ಹೀಗೆ ಪ್ರತಿಯೊಂದಕ್ಕೂ ಖಾಸಗಿ ಸೇವೆಯನ್ನು ಬಳಸಿಕೊಳ್ಳುತ್ತಿದ್ದಾರೆ. ಸಾಮಾನ್ಯವಾಗಿ ಗುಣಮಟ್ಟದ ಸೇವೆಗೆ ಒತ್ತಾಯಿಸುವವರೇ ಅವರು. ಕಾರ್ತಿಕ್ ಹೇಳುವಂತೆ, ಸ್ಥಿತಿವಂತರು ಬಳಸಿಕೊಳ್ಳುತ್ತಿದ್ದಾಗ ಸರ್ಕಾರಿ ಸೇವೆಗಳ ಗುಣಮಟ್ಟ ಮೇಲ್ಮಟ್ಟದ್ದಾಗಿರುತ್ತಿತ್ತು. ಅಷ್ಟೇ ಅಲ್ಲ, ಸರ್ಕಾರಿ ಸೇವೆಯನ್ನು ಸುಧಾರಿಸಿದರೆ ಖಾಸಗಿ ಸೇವೆಗಳ ಮೇಲೂ ಒತ್ತಡ ಹೆಚ್ಚುತ್ತದೆ. ಅವೂ ಸುಧಾರಿಸಬೇಕಾಗುತ್ತದೆ. ಕಾರ್ತಿಕ್ ಅವರ ಮಾತನ್ನೇ ಉದಾಹರಿಸುವುದಾದರೆ, ಇವೆರಡರ ನಡುವಿನ ಸ್ಪರ್ಧೆ ಒಂದು ರೀತಿ ಕಾಡಿನಲ್ಲಿ ಬೆನ್ನು ಹತ್ತಿದ ಕರಡಿಯಿಂದ ತಪ್ಪಿಸಿಕೊಳ್ಳಲು ಓಡುತ್ತಿರುವ ಇಬ್ಬರು ಮನುಷ್ಯರ ಸ್ಥಿತಿ ಇದ್ದಂತೆ. ಒಬ್ಬರು ಇನ್ನೊಬ್ಬರನ್ನು ಸದಾ ಹಿಂದೆಹಾಕಿ ಮುಂದೆ ಓಡುತ್ತಿರಬೇಕು. ಹಿಂದೆ ಬಿದ್ದವರು ಕರಡಿಗೆ ಸಿಕ್ಕಿಬಿದ್ದು ಸಾಯುತ್ತಾರೆ. ಸರ್ಕಾರಿ ಸೇವೆಗಳು ಉತ್ತಮಗೊಳ್ಳುವುದರಲ್ಲಿ ತಮ್ಮ ಹಿತವೂ ಇದೆ ಅನ್ನುವುದು ಸ್ಥಿತಿವಂತರಿಗೂ ಅರ್ಥವಾಗಬೇಕು. ವಾಯು ಮಾಲಿನ್ಯದಿಂದ ತಪ್ಪಿಸಿಕೊಳ್ಳುವುದಕ್ಕೆ ಸ್ಥಿತಿವಂತರು ಮನೆಯೊಳಗಡೆ ಫಿಲ್ಟರ್ ಹಾಕಿಕೊಳ್ಳಬಹುದು. ಆದರೆ ಮನೆಯ ಹೊರಗಡೆ ಬಂದಾಗ ಅವರೂ ಉಳಿದವರಂತೆ ಮಾಲಿನ್ಯವನ್ನು ಎದುರಿಸಬೇಕು.

ನಮ್ಮಲ್ಲಿ ಆರ್ಥಿಕ ಬೆಳವಣಿಗೆ ಹಾಗೂ ಅಭಿವೃದ್ಧಿಗೆ ಸಂಬಂಧಿಸಿದಂತೆ ಎರಡು ಅಭಿಪ್ರಾಯಗಳಿವೆ. ಜಗದೀಶ್ ಭಗವತಿಯವರ ದೃಷ್ಟಿಯಲ್ಲಿ ಆರ್ಥಿಕ ಬೆಳವಣಿಗೆ ನಮ್ಮ ಆದ್ಯತೆಯಾಗಬೇಕು. ಆರ್ಥಿಕ ಬೆಳವಣಿಗೆ ಸಾಧ್ಯವಾದರೆ ಸಾಕು, ಶಿಕ್ಷಣ, ಆರೋಗ್ಯದಂತಹ ಕ್ಷೇತ್ರಗಳಲ್ಲಿ ಅದರಷ್ಟಕ್ಕೇ ಅಭಿವೃದ್ಧಿ ಸಾಧ್ಯವಾಗುತ್ತದೆ ಅನ್ನುವುದು ಅವರ ವಾದ. ಹಾಗಾಗಿ ಅವರು ದೇಶದ ಜಿಡಿಪಿ ಹೆಚ್ಚಳದ ಬಗ್ಗೆ ಗಮನಕೊಡುತ್ತಾರೆ. ಅದಕ್ಕಾಗಿ ಅವರು ಮೂಲಸೌಕರ್ಯದ ಸುಧಾರಣೆ, ಖಾಸಗಿ ಉತ್ಪಾದಕ ಹೂಡಿಕೆಯಲ್ಲಿನ ಹೆಚ್ಚಳದಂತಹ ನೀತಿಗಳನ್ನು ಸೂಚಿಸುತ್ತಾರೆ. ಆದರೆ ಮಾನವನ ಅಭಿವೃದ್ಧಿ ಮುಖ್ಯ ಅನ್ನುವ ಅಮರ್ತ್ಯ ಸೇನ್ ದೃಷ್ಟಿಯಲ್ಲಿ ಬೆಳವಣಿಗೆಯ ಉದ್ದೇಶ ಜಿಡಿಪಿಯ ಹೆಚ್ಚಳವಲ್ಲ. ಮನುಷ್ಯನ ಬದುಕನ್ನು, ಅವನ ಸಾಮರ್ಥ್ಯವನ್ನು, ಅನುಭವವನ್ನು ಹೆಚ್ಚಿಸುವುದು ಬೆಳವಣಿಗೆಯ ಉದ್ದೇಶವಾಗಬೇಕು. ಅಭಿವೃದ್ಧಿಯನ್ನು ಸಾಧಿಸುವುದಕ್ಕೆ ದೇಶ ಶ್ರೀಮಂತವಾಗುವವರೆಗೆ ಕಾಯಬೇಕಾಗಿಲ್ಲ. ರಾಷ್ಟ್ರೀಯ ವರಮಾನ ಕಡಿಮೆ ಇದ್ದಾಗಲೂ ಹೆಚ್ಚಿನ ಮಾನವಾಭಿವೃದ್ಧಿ ಸಾಧ್ಯ ಎಂದು ಸೇನ್ ಅವರು ವಾದಿಸುತ್ತಾರೆ. ಅದಕ್ಕೆ ಅವರು ಶ್ರೀಲಂಕಾ, ವಿಯೆಟ್ನಾಂ, ಬಾಂಗ್ಲಾದೇಶದಂತಹ ದೇಶಗಳನ್ನು ಉದಾಹರಿಸುತ್ತಾರೆ. ಸರಳವಾಗಿ ಹೇಳುವುದಾದರೆ ಒಬ್ಬರು ಮೂಲಭೂತ ಸೌಕರ್ಯದಂತಹ ಭೌತಿಕ ಬಂಡವಾಳಕ್ಕೆ ಗಮನವಿತ್ತರೆ, ಮತ್ತೊಬ್ಬರು ಶಿಕ್ಷಣ, ಆರೋಗ್ಯದಂತಹ ಮಾನವ ಬಂಡವಾಳಕ್ಕೆ ಗಮನವೀಯುತ್ತಾರೆ. ಇದು ಸೈದ್ಧಾಂತಿಕವಾಗಿ ಎಡ ಹಾಗೂ ಬಲಪಂಥೀಯರ ನಡುವಿನ ವಿವಾದವೂ ಆಗಿದೆ. ಎಡಪಂಥೀಯರು ಶಿಕ್ಷಣ, ಆರೋಗ್ಯ, ಉದ್ಯೋಗ... ಇವುಗಳಿಗೆ ಆದ್ಯತೆ ನೀಡುತ್ತಾರೆ.

ಕಾರ್ತಿಕ್ ಮುರಳೀಧರನ್ ಅವರು ನಡುವಿನ ದಾರಿ ಹಿಡಿಯುತ್ತಾರೆ. ಅವರು ಹೇಳುವುದು 'ಎರಡೂ ಸರಿ; ಆದರೆ ಹಣವನ್ನು ಯಾವುದಕ್ಕೆ ಖರ್ಚು ಮಾಡುತ್ತೀರಿ ಅನ್ನುವುದು ಮುಖ್ಯವಲ್ಲ. ಆ ಖರ್ಚು ಪರಿಣಾಮಕಾರಿಯಾಗಿರಬೇಕು. ಅದು ನಿರೀಕ್ಷಿತ ಫಲ ನೀಡಬೇಕು. ಭಾರತದಲ್ಲಿ ಸದ್ಯದ ಸಮಸ್ಯೆಯೇ ಅದು. ಸರ್ಕಾರವು ಮೂಲಸೌಕರ್ಯ, ಸಾಮಾಜಿಕ ವಲಯ ಅಥವಾ ಇನ್ನಾವುದರ ಮೇಲೆ ಬಂಡವಾಳ ತೊಡಗಿಸಿದರೂ ಅವುಗಳ ಗುಣಮಟ್ಟ ಕಳಪೆ. ನಿರೀಕ್ಷಿತ ಫಲ ನೀಡುತ್ತಿಲ್ಲ. ಹಾಗಾಗಿ ದೇಶದ ಸಾಮರ್ಥ್ಯ ಬೆಳೆಯುತ್ತಿಲ್ಲ. ಸರ್ಕಾರದ ಸಾಮರ್ಥ್ಯ ವೃದ್ಧಿಯಾದರೆ ಅದು ಮಾಡುವ ಖರ್ಚಿನಿಂದ ಸಿಗುವ ಪ್ರತಿಫಲ ಹತ್ತು ಪಟ್ಟು ಹೆಚ್ಚುತ್ತದೆ' ಅನ್ನುವುದು ಅವರ ಅಂದಾಜು. ಸರ್ಕಾರದ ವೆಚ್ಚ ಹೆಚ್ಚು ಪರಿಣಾಮಕಾರಿಯಾದರೆ ಜನರ ಜೀವನಮಟ್ಟ ಸುಧಾರಿಸುತ್ತದೆ. ಜೊತೆಗೆ ಬೆಳವಣಿಗೆಯ ದರವೂ ಹೆಚ್ಚುತ್ತದೆ.

ಬೆಳವಣಿಗೆ ಕುಂಠಿತವಾಗಿರುವ ಮಕ್ಕಳ ಸಂಖ್ಯೆ ಈಗ ಶೇ 25ರಷ್ಟು ಇದೆ. ಸರ್ಕಾರದ ಸಾಮರ್ಥ್ಯ ಹೆಚ್ಚದಿದ್ದರೆ ಜಿಡಿಪಿ ಬೆಳವಣಿಗೆಯು ಶೇ 6ರಷ್ಟಲ್ಲ, ಶೇ 8ರಷ್ಟು ಆದರೂ ಮಕ್ಕಳ ಆರೋಗ್ಯ ಸುಧಾರಿಸುವುದಿಲ್ಲ. ಅಷ್ಟೇ ಅಲ್ಲ, ಎರಡು ದಶಕ ಕಳೆದರೂ ಪರಿಸ್ಥಿತಿ ಹೀಗೇ ಇರುತ್ತದೆ. ಸಾರ್ವಜನಿಕ ಬಂಡವಾಳವನ್ನು ಹೆಚ್ಚು ಪರಿಣಾಮಕಾರಿಯಾಗಿ ಬಳಸಿಕೊಳ್ಳುವುದಕ್ಕೆ ಸಾಧ್ಯವಾದರೆ ಕುಂಠಿತ ಬೆಳವಣಿಗೆ ದರವನ್ನು ತಗ್ಗಿಸಬಹುದು. ಮಕ್ಕಳ ಆರೋಗ್ಯ ಸುಧಾರಿಸಿದರೆ ಆರ್ಥಿಕ ಬೆಳವಣಿಗೆಯೂ ಹೆಚ್ಚುತ್ತದೆ. ಶಿಕ್ಷಣದ ವಿಷಯದಲ್ಲೂ ಇದು ನಿಜ. ಶಾಲೆಯ ಕಟ್ಟಡ, ಸಂಬಳದ ಹೆಚ್ಚಳ, ಕಂಪ್ಯೂಟರ್ ಸೌಲಭ್ಯ ಇವುಗಳಿಂದಲೇ ಕಲಿಕೆಯ ಮಟ್ಟ ಸುಧಾರಿಸುವುದಿಲ್ಲ. ಗ್ರಾಮೀಣ ಸರ್ಕಾರಿ ಶಾಲೆಯಲ್ಲಿ ಅಧ್ಯಾಪಕರ ಗೈರುಹಾಜರಿಯ ಪ್ರಮಾಣ ಶೇ 23.6ರಷ್ಟು ಎನ್ನುವ ಅಂದಾಜಿದೆ. ಅದರಿಂದ ವರ್ಷಕ್ಕೆ ಸುಮಾರು ₹10 ಸಾವಿರ ಕೋಟಿಯಷ್ಟು ನಷ್ಟವಾಗುತ್ತದೆ ಎನ್ನಲಾಗಿದೆ. ಶಿಕ್ಷಣ ಪರಿಣಾಮಕಾರಿ ಆಗಬೇಕಾದರೆ ಇದು ತಪ್ಪಬೇಕು.

ವಿವಿಧ ಸಾರ್ವಜನಿಕ ಕ್ಷೇತ್ರಗಳಲ್ಲಿ ತೊಡಗಿಸುವ ಬಂಡವಾಳವು ಸರ್ಕಾರಿ ಸೇವೆಗಳನ್ನು ಎಷ್ಟರಮಟ್ಟಿಗೆ ಉತ್ತಮಪಡಿಸುತ್ತದೆ ಮತ್ತು ಆ ಮೂಲಕ ಜನರ ಬದುಕು ಹೇಗೆ ಸುಧಾರಿಸುತ್ತದೆ ಅನ್ನುವುದನ್ನೂ ಗಮನಿಸಬೇಕು. ಯಾವ ಕ್ಷೇತ್ರಗಳಿಗೆ ಎಷ್ಟು ಬಂಡವಾಳ ಹೂಡಬೇಕೆನ್ನುವಷ್ಟೇ, ಆ ಕ್ಷೇತ್ರಗಳನ್ನು ಹೇಗೆ ಪರಿಣಾಮಕಾರಿಯಾಗಿ ಬೆಳೆಸಬೇಕು ಅನ್ನುವ ದಿಸೆಯಲ್ಲೂ ಯೋಚಿಸಬೇಕು. ಅದನ್ನು ಸಾಧ್ಯವಾಗಿಸಲು ಬೇಕಾದ ನೈತಿಕ ಸಾಮರ್ಥ್ಯವನ್ನು ಸರ್ಕಾರ ಬೆಳೆಸಿಕೊಳ್ಳಬೇಕು. ಆಗಷ್ಟೇ ಮಾನವ ಶಕ್ತಿಯ ಸಾಮರ್ಥ್ಯ ಬೆಳೆಯುವುದಕ್ಕೆ, ಪ್ರಜಾಸತ್ತೆ ಪರಿಣಾಮಕಾರಿ ಆಗುವುದಕ್ಕೆ ಸಾಧ್ಯ. ಇದಕ್ಕಾಗಿ ಒತ್ತಾಯ ಸಾರ್ವಜನಿಕರಿಂದ ಬರಬೇಕು.

ಚುರುಮುರಿ



ಎಲ್ಲೆಲ್ಲೂ ಬಿಪಿಎಲ್ಲು!

● ತುರುವೇಕೆರೆ ಪ್ರಸಾದ್

'**ನಮ್** ಕರುನಾಡಿನ ಬಡವರ ಸಂಖ್ಯೆಗೂ ಬಿಪಿಎಲ್ ಕಾರ್ಡು ನಂಬ್ರುಗೂ ಟ್ಯಾಲಿ ಆಯ್ತಿಲ್ಲ ಅಂತ ಸಿಎಂ ತಲೆ ಕೆಡುಸ್ಕಂಡವ್ರಂತೆ' ಸಿಬಿರೆಬ್ಬಿದ ಗುದ್ಲಿಂಗ.

'ಓದ್ಸಾರಿಯರ್ದು 40 ಪರ್ಸೆಂಟು, ಈ ಸಾರಿದು 40 ಪರ್ಸೆಂಟು ಅಂದ್ರೂ ಇನ್ನೂ ಬಡವರು 80 ಪರ್ಸೆಂಟ್ ಎಂಗಾಯ್ತದೆ' ಎಂದ ಮಾಲಿಂಗ.

'ಹೂ ಕಣ್ಲಾ, ಬಡತನದ ರೇಖೆಗಿಂತ ಕೆಳಗಿರ್ಬೇಕು ಅಂತ ನೀ ಮುಂದು ತಾ ಮುಂದು ಅಂತ ಜನ ಕಾರ್ಡು ಮಾಡಿಸ್ಕಂಡವ್ರೆ'.

'ಇದು ತಪ್ಪಲ್ವಾ? ಇಂಗ್ ಉಳ್ಳೋರೂ ಬಿಪಿಎಲ್ ಕಾರ್ಡು ಮಾಡುಸ್ಕಂಡ್ರೆ ನಿಜವಾದ ಬಡುವ್ರುಗೆ ಅನ್ಯಾಯ ಮಾಡ್ದಂಗಲ್ವಾ?'

'ಯಾವುದ್ಲಾ ಅನ್ಯಾಯ? ಈಗ ನೋಡು ಗಂಡ ದುಡ್ದಿದ್ದೆಲ್ಲಾ ಹೆಂಡತಿ ಕಿತ್ಕೊತಾಳೆ. ಗಂಡ ಬಡವನಾಗೇ ಉಳಿದವ್ನೆ. ಹೆಂಡತಿ ಇದ್ದಬದ್ದ ದುಡ್ನೆಲ್ಲಾ ಒಡವೆ, ವಸ್ತು ಅಂತ ಆಕಿ ಆಗತ್ಯವಸ್ತು ಕೊಂಡ್ಕಳೋ ಶಕ್ತಿ ಇಲ್ಲಂಗಾಗದೆ. ಇನ್ನು ಕೆಲವು ಮಕ್ಕಳು ಪಾಕೆಟ್ ಮನಿ, ಲಾಕೆಟ್ ಮನಿ ಅಂತ ಅಪ್ಪನ ಎಲ್ಲಾ ಕೆಟ್ ಮನಿ ತಗಂಡು ಕೆಟ್ ಕೆರ ಇಡ್ದು ಓಗಿರ್‍ತಾವೆ. ಅಂದಮ್ಯಾಗೆ ಇಡೀ ಕುಟುಂಬ ಬಡತನದ ರೇಖೆ ಕೆಳಗೇ ಇದ್ದಂಗಾಗ್ಲಿಲ್ವಾ?'

'ನೀನು ಏನೇ ಯೋಳು, ಐಶಾರಾಮಿ ವಸ್ತು ಮನೆ ಒಳಗೆ, ಮಣಗಟ್ಲೆ ಚಿನ್ನ ಹೆಂಡ್ತಿ ಕೊರಳಿಗೆ, ಸಾಲು ವಾಹನಗಳು ಮನೆ ಹೊರಗೆ, ನಾವ್ ಬಡತನ ರೇಖೆಗಿಂತ ತೀರಾ ಕೆಳಗೆ ಅನ್ನೋದು ತಪ್ಪಲ್ವೇನ್ಲಾ?'

'ಎಂಗ್ ತಪ್ ಆಯ್ತದೆ? ಮನೆ, ಫ್ಯಾನು, ಫ್ರಿಜ್ಜು, ಕಾರು, ಸ್ಕೂಟ್ರು ಎಲ್ರದರ ಮೇಲೂ ಸಾಲ ಇರ್ತದಲ್ಲ'.

'ಹೌದೌದು, ಈ ಚೀಟಿ ಪಾಟಿ ಅಂತ ಆಕ್ಕಂಡು ಉಂಡೆನಾಮ ತಿಕ್ಕುಸ್ಕೊಂಡರ್ತೀವಿ...'

'ಊ ಕಣ್ ಬಿಡಪ್ಪ, ಆಮೇಲೆ ಈ ಕೋಟಿಗಟ್ಲೆ ಸಾಲ ತಕಂಡು ಬ್ಯಾಂಕಿಗೆ ಪಂಗನಾಮ ಹಾಕಿ ಓಡ್ ಓಗಿರ್‍ತಾರಲ್ಲ ದೊಡ್ ಮನುಸ್ಯರು, ಅವರ ಸಾಲ ಎಲ್ಲ ನಮ್ ತಲೆ ಮೇಲೆ ಬತ್ತದಲ್ಲ'.

'ಬಡವನ ಕೋಪ ದವಡೆಗೆ ಮೂಲ ಅಂತ ಯೋಳಿಲ್ವಾ? ಯಾರ್ಮೇಲೆ ಸಿಟ್ಕಬೇಕು? ಬಡವಾ ನೀ ಮಡಗಿದಂಗಿರು ಅಂತ ಅಂಗೇ ಬಡವರಾಗೇ ಉಳ್ಕಂಡ್ ಬುಟ್ಟವ್ರೆ' ಎಂದ ಪರ್ಮೇಶಿ. ನಿಜ ನಿಜ ಎಂದು ತಲೆಯಾಡಿಸಿ ಎಲ್ಲಾ 'ಲಾಂಗ್ ಲಿವ್ ಬಿಪಿಎಲ್' ಎಂದು ಕೂಗಿದರು.

ಸಂಗತ

ಫಲವತ್ತತೆಯಲ್ಲಿದೆ ನಮ್ಮ ಹಿತ

ಅವೈಜ್ಞಾನಿಕವಾಗಿ ರಾಸಾಯನಿಕ ಮತ್ತು ನೀರನ್ನು ಬಳಸುವುದರಿಂದ ಮಣ್ಣು ಫಲವತ್ತತೆಯನ್ನು ಕಳೆದುಕೊಳ್ಳುತ್ತಿದೆ. ನಿವಾರಣೆಗೆ ಬೇಕು ಪ್ರಯತ್ನ

● ಬಸವರಾಜ ಶಿವಪ್ಪ ಗಿರಗಾಂವಿ

ರಾಜ್ಯದಲ್ಲಿ ಮಣ್ಣಿನ ಫಲವತ್ತತೆ ಕುಸಿದಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಈಚೆಗೆ ಸಭೆಯೊಂದರಲ್ಲಿ ಆತಂಕ ವ್ಯಕ್ತಪಡಿಸಿದ್ದಾರೆ. ರಾಜ್ಯ ಸರ್ಕಾರವು ಮಣ್ಣಿನ ಸಂರಕ್ಷಣೆ ಕುರಿತು ಗಮನ ಹರಿಸಿರುವುದು ಸಂತೋಷದ ವಿಷಯ. ಸಭೆಯಲ್ಲಿ, ಮುಖ್ಯಮಂತ್ರಿಯವರಿಗೆ ಲಭ್ಯವಾದ ಅಂಕಿ-ಅಂಶಗಳು, ಇನ್ನು ಕೆಲವು ವರ್ಷಗಳಲ್ಲಿ ಸಾಗುವಳಿ ಜಮೀನು ಬರಡಾಗುವ ಸಂಭವವಿದೆ ಎಂಬುದನ್ನು ಹೇಳಿವೆ.

ಆದರೆ ಮಣ್ಣಿನ ಸಂರಕ್ಷಣೆಯು ಸರ್ಕಾರದ ಕರ್ತವ್ಯ ಮಾತ್ರವಲ್ಲ; ಪ್ರತಿ ನಾಗರಿಕರ ಪ್ರಮುಖ ಕರ್ತವ್ಯ. ಕೃಷಿ ಚಟುವಟಿಕೆಗಳಲ್ಲಿ ಯಥೇಚ್ಛವಾಗಿ ಬಳಕೆಯಾಗುತ್ತಿರುವ ನೀರು ಮತ್ತು ರಾಸಾಯನಿಕಗಳು ಮಣ್ಣನ್ನು ಮಾತ್ರವಲ್ಲದೆ ಇಡೀ ಮನುಕುಲದ ಆರೋಗ್ಯವನ್ನು ಹಾಳುಗೆಡವುತ್ತಿವೆ. ನೀರು ಮತ್ತು ರಾಸಾಯನಿಕಗಳ ಅವೈಜ್ಞಾನಿಕ ಬಳಕೆಗೆ ಸರ್ಕಾರ ತಕ್ಷಣ ಕಡಿವಾಣ ಹಾಕಬೇಕು. ಇಂದು ಕೃಷಿಕರು ಸ್ಪರ್ಧೆಗಿಳಿದಂತೆ ನೀರು ಮತ್ತು ರಾಸಾಯನಿಕಗಳ ಬಳಕೆ ಮಾಡುತ್ತಿದ್ದಾರೆ. ಅಂದರೆ ರೈತನೊಬ್ಬ 10 ಚೀಲ ರಸಗೊಬ್ಬರ ಬಳಸಿದರೆ ಪಕ್ಕದ ರೈತ 15 ಚೀಲ ರಸಗೊಬ್ಬರ ಬಳಸುತ್ತಾನೆ. ರೈತರಿಗೆ ಯಾವುದೇ ನಿಯಮ ಮತ್ತು ಕಟ್ಟುಪಾಡು ಇಲ್ಲದಿರುವುದು ಇಂದು ಜಮೀನು ಹಾಳಾಗಲು ಪ್ರಮುಖ ಕಾರಣ.

ಈಗಿನ ಪರಿಸ್ಥಿತಿಯಲ್ಲಿ ರಸಗೊಬ್ಬರ ಬಳಕೆ ನಿಲ್ಲಿಸಲು ಕಷ್ಟಸಾಧ್ಯ. ಹಾಳಾಗುತ್ತಿರುವ ಮಣ್ಣಿನ ಆರೋಗ್ಯವನ್ನು ಸಂರಕ್ಷಿಸುವ ದೃಷ್ಟಿಯಿಂದ ನೆರೆಯ ಶ್ರೀಲಂಕಾ, ಕೃಷಿಯಲ್ಲಿ ರಾಸಾಯನಿಕ ಬಳಸದಂತೆ ಕಠಿಣ ಕಾನೂನನ್ನು ಜಾರಿಗೊಳಿಸಿತು. ಈ ಕ್ರಮವು ಕೆಲವೇ ದಿನಗಳಲ್ಲಿ ಆಹಾರದ ಕೊರತೆ ಮತ್ತು ಆರ್ಥಿಕ ದಿವಾಳಿತನಕ್ಕೆ ದಾರಿಮಾಡಿಕೊಟ್ಟಿತು. ಆ ಕಠಿಣ ನಿರ್ಧಾರದ ಹೊಡೆತದಿಂದ ಶ್ರೀಲಂಕಾ ಇಂದಿಗೂ ಚೇತರಿಸಿಕೊಂಡಂತಿಲ್ಲ. ನೆರೆಯ ಭೂತಾನ್, ಕೃಷಿ ಚಟುವಟಿಕೆಗಳಲ್ಲಿ ರಾಸಾಯನಿಕಗಳನ್ನು ಬಳಸದ ವಿಶ್ವದ ಏಕೈಕ ದೇಶ. ಚೀನಾ, ಇಸ್ರೇಲ್ ದೇಶಗಳು ಸಾವಯವ ಮತ್ತು ರಾಸಾಯನಿಕಗಳ ನಿಯಮಿತ ಬಳಕೆಯಿಂದ ಕೃಷಿಯಲ್ಲಿ ಅಗಾಧ ಸಾಧನೆ ಮಾಡಿವೆ.

ಅವೈಜ್ಞಾನಿಕವಾಗಿ ರಾಸಾಯನಿಕ ಮತ್ತು ನೀರನ್ನು ಬಳಸುವುದರಿಂದ ಮಣ್ಣು ಫಲವತ್ತತೆಯನ್ನು ಕಳೆದುಕೊಳ್ಳುತ್ತಿರುವುದು ಸುಳ್ಳೇನಲ್ಲ. ಆದರೂ ರಾಸಾಯನಿಕಗಳ ಬಳಕೆಯನ್ನು ಸಂಪೂರ್ಣವಾಗಿ ನಿಲ್ಲಿಸುವುದು ಕಷ್ಟಸಾಧ್ಯ. ಹಿಂದಿನವರು ಸಾಂಪ್ರದಾಯಿಕ ಕೃಷಿ ಪದ್ಧತಿಯಲ್ಲಿ ಮಣ್ಣಿನ ಫಲವತ್ತತೆಯನ್ನು ಕಾಪಾಡಿಕೊಳ್ಳುವ ವಿಶೇಷ ನೈಪುಣ್ಯ ಕಂಡುಕೊಂಡಿದ್ದರು. ಅಂದು ಹೊಟ್ಟೆಪಾಡಿಗಾಗಿ ನಡೆಯುತ್ತಿದ್ದ ಕೃಷಿ ಕಾರ್ಯವು ಇಂದು ವಾಣಿಜ್ಯ ಚಟುವಟಿಕೆಯೂ ಆಗಿದೆ.

ಕೃಷಿಯಲ್ಲಿ ಈ ನಿಯಮಗಳು ಜಾರಿಯಾಗಬೇಕು: 1. ರೈತರು ರಾಸುಗಳನ್ನು ಸಾಕಬೇಕು. ಈ ರಾಸುಗಳ ಗಂಜಲ ಮತ್ತು ಸಗಣಿ ನಿಯಮಿತವಾಗಿ ಮಣ್ಣಿನಲ್ಲಿ ಸೇರಬೇಕು. 2. ಮಣ್ಣು ಮತ್ತು ನೀರು ಪರೀಕ್ಷೆಯ ಆಧಾರದ ಮೇಲೆ ರಸಗೊಬ್ಬರ ವಿತರಣೆಯಾಗಬೇಕು. ಅವೈಜ್ಞಾನಿಕ ಬಳಕೆಯ ಸ್ಪರ್ಧೆಯು ಕೊನೆಯಾಗಬೇಕು. 3. ಕೃಷಿ ಸಮಸ್ಯೆಗಳಿಗೆಲ್ಲ ರಾಸಾಯನಿಕಗಳೇ ಪರಿಹಾರ ಆಗಬಾರದು.

4. ಹಿಂದಿನ ಕಾಲದಲ್ಲಿ ಅಂದಾಜು ಐದು ಕ್ವಿಂಟಲ್ ಆಹಾರಧಾನ್ಯ ಪಡೆಯಲು ಐದು ಟನ್ ತಿಪ್ಪೆಗೊಬ್ಬರ ಬಳಸುತ್ತಿದ್ದರು. ಆದ್ದರಿಂದ ಇಂದು ಭೂಮಿಯಿಂದ ಪಡೆದ ಬೆಳೆಯ ತೂಕದಷ್ಟು ಸಾವಯವ ವಸ್ತುಗಳನ್ನು ಮರಳಿ ಭೂಮಿಗೆ ಸೇರಿಸಬೇಕು. 5. ಬೆಳೆಯುಳಿಕೆಗಳ ಸುಡುವಿಕೆಯನ್ನು ಸಂಪೂರ್ಣವಾಗಿ ನಿಲ್ಲಿಸಬೇಕು. ಇದರಿಂದ ಅಸಂಖ್ಯಾತ ಜೀವಜಂತುಗಳ ನಾಶ ತಪ್ಪುತ್ತದೆ. ಯಾವುದೇ ಬೆಳೆಯ ಫಲವನ್ನು ಮಾತ್ರ ಪಡೆಯಬೇಕು, ಬೆಳೆಯುಳಿಕೆಗಳು ಕಡ್ಡಾಯವಾಗಿ ಮಣ್ಣಿನಲ್ಲಿ ಸೇರಬೇಕು. 6. ಸ್ಥಳೀಯ ಹವಾಮಾನಕ್ಕೆ ಸೂಕ್ತವಾದ ಬೆಳೆಯನ್ನು ಬೆಳೆಯುವ ಪದ್ಧತಿ ಜಾರಿಯಾಗಬೇಕು.

7. ಜಮೀನಿನಲ್ಲಿ ಸಮರ್ಪಕವಾದ ಹಾಗೂ ಸೂಕ್ತ ಸ್ಥಳದಲ್ಲಿ ಒಡ್ಡುಗಳು, ಬಸಿಗಾಲುವೆಗಳು ಹಾಗೂ ಹಳ್ಳ-ಕೊಳ್ಳಗಳು ಇರಬೇಕು. 8. ಕೃಷಿಯಲ್ಲಿ ಯಂತ್ರೋಪಕರಣಗಳ ಬಳಕೆ ಕಡಿಮೆಯಾಗಿ ಮಾನವ

ಶ್ರಮದ ಬಳಕೆ ಹೆಚ್ಚಬೇಕು. 9. ದೇಶಿ ಬೀಜಗಳ ಬಳಕೆಯಾಗಬೇಕು. 10. ಮಳೆನೀರು ಸಂಗ್ರಹ ಹೆಚ್ಚಬೇಕು, ಅದು ಕೃಷಿಗೆ ಬಳಕೆಯಾಗಬೇಕು. 11. ರೈತರ ಒಟ್ಟು ಜಮೀನು ಒಂದೇ ಬೆಳೆಯ ಮೇಲೆ ಅವಲಂಬಿತವಾಗಬಾರದು. ಮಣ್ಣಿಗೆ ಸೂಕ್ತವಾದ ಎಲ್ಲ ಬೆಳೆಗಳನ್ನು ಬೆಳೆಯಬೇಕು. 12. ಅಂತರ್‌ಬೇಸಾಯ ಮತ್ತು ಅಂತರ್‌ಬೆಳೆ ಪದ್ಧತಿ ಅಳವಡಿಸಿಕೊಳ್ಳಬೇಕು.

ಆಧುನಿಕ ಕೃಷಿ ಪದ್ಧತಿಯ ಹೆಸರಿನಲ್ಲಿ ಇಂದು ಹಿಂದಿನ ಪದ್ಧತಿಗಳನ್ನು ಎಳ್ಳಷ್ಟೂ ಅನುಸರಿಸದೆ ಇರುವುದು ಆರೋಗ್ಯ ಮತ್ತು ಇಳುವರಿಯ ಮೇಲೆ ಪೆಟ್ಟುಕೊಟ್ಟಿದೆ. ಅರಣ್ಯದ ವ್ಯಾಪ್ತಿ ಕುಗ್ಗಿದೆ. ಇದರಿಂದ ಮಳೆಯ ಪ್ರಮಾಣ ತೀವ್ರವಾಗಿ ಕಡಿಮೆಯಾಗಿದೆಯಲ್ಲದೆ ಪ್ರಕೃತಿಯಲ್ಲಿನ ಸಮತೋಲನ ತಪ್ಪಿದೆ. ಕೆಲವೊಮ್ಮೆ ಅತಿವೃಷ್ಟಿ ಹಾಗೂ ಪ್ರವಾಹ ಉಂಟಾದರೆ, ಇನ್ನು ಕೆಲವೊಮ್ಮೆ ತೀವ್ರ ಬರಗಾಲ ಎದುರಾಗುತ್ತಿದೆ.

ನೈಸರ್ಗಿಕವಾಗಿ ಸಮತಟ್ಟಾಗಿರುವ ಜಮೀನಿನಲ್ಲಿ ಮಾತ್ರ ಇಂದು ಕೃಷಿ ಚಟುವಟಿಕೆ ಕೈಗೊಳ್ಳುತ್ತಿಲ್ಲ. ಏರಿಳಿತವಿರುವ ಜಮೀನು ಸಮಗೊಳಿಸಿ ಅಲ್ಲಿಯೂ ಕೃಷಿ ಮಾಡಲಾಗುತ್ತದೆ. ಮಣ್ಣಿನ ಮೇಲ್ಪದರು ಬದಲಾದಲ್ಲಿ ಅಲ್ಲಿನ ಫಲವತ್ತತೆ ಮರುಸೃಷ್ಟಿಗೆ ನೂರಾರು ವರ್ಷಗಳು ಬೇಕು.

ಲೇಖಕ: ಸಹಾಯಕ ಮಹಾಪ್ರಬಂಧಕ (ಎಜಿಎಂ)– ಕೃಷಿ ವಿಭಾಗ, ಜಮಖಂಡಿ ಸಕ್ಕರೆ ಕಾರ್ಖಾನೆ ನಿಯಮಿತ, ಹಿರೇಪಡಸಲಗಿ

ವಾಚಕರ ವಾಣಿ

ಮನೆ ಗೆದ್ದು ಮಾರು ಗೆಲ್ಲಲಿ

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಬ್ಯಾಕ್‌ಲಾಗ್ ಹುದ್ದೆಗಳ ಭರ್ತಿಗೆ ಕೇಂದ್ರ ಸರ್ಕಾರವನ್ನು ಆಗ್ರಹಿಸಿದ್ದಾರೆ. ಹುದ್ದೆಗಳನ್ನು ಖಾಲಿ ಬಿಟ್ಟಿರುವುದು ದಲಿತ ವಿರೋಧಿ ಧೋರಣೆ ಎಂದಿದ್ದಾರೆ. ಅವರ ಕಾಳಜಿ ಮೆಚ್ಚತಕ್ಕದ್ದು. ಅವರದೇ ಪಕ್ಷ ಕರ್ನಾಟಕದಲ್ಲಿ ಆಡಳಿತದ ಚುಕ್ಕಾಣಿ ಹಿಡಿದಿದೆ. ಅಧಿಕಾರಕ್ಕೆ ಬಂದ ಒಂದು ವರ್ಷದೊಳಗೆ ಎಲ್ಲ ಸರ್ಕಾರಿ ಹುದ್ದೆಗಳನ್ನು ಭರ್ತಿ ಮಾಡುವುದಾಗಿ ಕಾಂಗ್ರೆಸ್ ಪಕ್ಷವು ಕರ್ನಾಟಕದ ವಿಧಾನಸಭಾ ಚುನಾವಣೆಯ ವೇಳೆ ಸಿದ್ಧಪಡಿಸಿದ್ದ ಪ್ರಣಾಳಿಕೆಯಲ್ಲಿ ಘೋಷಿಸಿತ್ತು.

ಸರ್ಕಾರಿ ನೌಕರರಿಗೆ ಎನ್‌ಪಿಎಸ್ ಪಿಂಚಣಿ ವ್ಯವಸ್ಥೆ ಕೈಬಿಟ್ಟು ಒಪಿಎಸ್ ಜಾರಿಗೊಳಿಸುವುದಾಗಿಯೂ ಹೇಳಲಾಗಿತ್ತು. ಕರ್ನಾಟಕದಲ್ಲಿ ಬ್ಯಾಕ್‌ಲಾಗ್ ಹುದ್ದೆಗಳನ್ನು ಭರ್ತಿ ಮಾಡಲಿ, ಒಪಿಎಸ್ ಜಾರಿಗೊಳಿಸಲಿ. ಆ ಮೂಲಕ ಮನೆ ಗೆದ್ದು ಮಾರು ಗೆಲ್ಲಲಿ. ಇಲ್ಲವಾದರೆ, ವಿರೋಧ ಪಕ್ಷದಲ್ಲಿ ಇರುವುದಕ್ಕಾಗಿ ಕೇಂದ್ರದ ನಡೆಯನ್ನು ವಿರೋಧ ಮಾಡಿದಂತೆ, ಟೀಕಿಸಿದಂತೆ ಆಗುತ್ತದೆ.

ಮಲ್ಲಿಕಾರ್ಜುನ, ಸುರಧೇನುಪುರ

ಸೊಗಸಾದ ನಿರೂಪಣೆಗೆ ಹೆಸರುವಾಸಿ...

ಅಚ್ಚುಕಟ್ಟಾದ, ಅಚ್ಚಕನ್ನಡದ ನಿರೂಪಕಿಯಾಗಿದ್ದ ಅಪರ್ಣಾ ವಸ್ತಾರೆ ಅವರು ತಮ್ಮ ಬಾಳ ನಿರೂಪಣೆ ಮುಗಿಸಿರುವುದು ಕನ್ನಡಿಗರೆಲ್ಲರಿಗೂ ದುಃಖದ ಸಂಗತಿ. ಅಪರ್ಣಾ ಅವರು, ಪುಟ್ಟಣ್ಣ ಕಣಗಾಲ್ ನಿರ್ದೇಶಿಸಿದ 'ಮಸಣದ ಹೂವು' (1985) ಚಿತ್ರದಲ್ಲಿ ಹದಿಹರೆಯದಲ್ಲೇ ನಾಯಕಿಯಾಗಿ ಅಭಿನಯಿಸಿದ್ದರು.

ನಂತರ ರೇಡಿಯೊ ಜಾಕಿಯಾಗಿ, ಆಕಾಶವಾಣಿ, ಎಫ್.ಎಂ. ವಾಹಿನಿಗಳಲ್ಲಿ ಉದ್ಘೋಷಕಿಯಾಗಿ ಕಾರ್ಯನಿರ್ವಹಿಸಿದ್ದರು. ಟಿ.ಎನ್. ಸೀತಾರಾಂ ಅವರ ಧಾರಾವಾಹಿಯೊಂದರಲ್ಲಿ ವಕೀಲೆಯ ಪಾತ್ರದಲ್ಲೂ ಗಮನ ಸೆಳೆದಿದ್ದರು. ಕಿರುಚಾಡುವ ಇಂದಿನ ಅನೇಕ ನಿರೂಪಕರ ನಡುವೆ ಬಹಳ ಸಂಯಮದಿಂದ ಸ್ಪಷ್ಟ, ನಿರರ್ಗಳ, ಸೊಗಸಾದ ಕನ್ನಡ ನಿರೂಪಣೆಗೆ ಹೆಸರುವಾಸಿಯಾಗಿದ್ದರು.

ಎಚ್.ವಿ. ಶ್ರೀಧರ್, ಬೆಂಗಳೂರು

ರೈತರ ಆತ್ಮಹತ್ಯೆ: ಪರಿಹಾರ ಕಂಡುಕೊಳ್ಳಿ

ಬೆಳೆಹಾನಿ, ಬರ, ಸಾಲದ ಹೊರೆ ಇತ್ಯಾದಿ ಕಾರಣಗಳಿಂದಾಗಿ ದೇಶದ ರೈತರು ದೊಡ್ಡ ಸಂಖ್ಯೆಯಲ್ಲಿ ಆತ್ಮಹತ್ಯೆಗೆ ಶರಣಾಗುತ್ತಿದ್ದರೂ ಸಮಸ್ಯೆಯ ಪರಿಹಾರಕ್ಕೆ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಯಾವ ಕ್ರಮ ಕೈಗೊಂಡಿವೆ ಎಂಬುದು ಯಕ್ಷಪ್ರಶ್ನೆಯಾಗೇ ಉಳಿದಿದೆ. 15 ತಿಂಗಳಲ್ಲಿ ಕರ್ನಾಟಕದಲ್ಲಿ 1,182 ರೈತರು ಆತ್ಮಹತ್ಯೆಗೆ (ಪ್ರ.ವಾ., ಜುಲೈ 8) ಶರಣಾಗಿದ್ದರೆ, ಆರು ತಿಂಗಳ ಅವಧಿಯಲ್ಲಿ ಮಹಾರಾಷ್ಟ್ರದ ಐದು ಜಿಲ್ಲೆಗಳಲ್ಲಿ 557 ರೈತರು ಆತ್ಮಹತ್ಯೆಗೆ ಶರಣಾಗಿದ್ದಾರೆ (ಪ್ರ.ವಾ., ಜುಲೈ 11). ಇದು ನಿಜಕ್ಕೂ ಆಘಾತಕಾರಿ.

ಇದು ಕೇವಲ ಎರಡು ರಾಜ್ಯಗಳ ಅಂಕಿ ಅಂಶ. ಇಡೀ ದೇಶದಲ್ಲಿ ಒಂದು ವರ್ಷದಲ್ಲಿ ನಡೆದಿರುವ ರೈತರ ಆತ್ಮಹತ್ಯೆಗಳ ಸಂಖ್ಯೆ ಇನ್ನೂ ಹೆಚ್ಚಿರುತ್ತದೆ ಎಂಬುದರಲ್ಲಿ ಅನುಮಾನವಿಲ್ಲ. ಸರ್ಕಾರಗಳು ಕೃಷಿಗೆ ನೀರಾವರಿ ಸೌಲಭ್ಯ ಕಲ್ಪಿಸುವ ದಿಸೆಯಲ್ಲಿ ನದಿಗಳ ಜೋಡಣೆ, ಕೆರೆಗಳಿಗೆ ನೀರು ತುಂಬಿಸುವುದು, ಮಳೆ ನೀರು ಸಂಗ್ರಹ ಹಾಗೂ ನೀರಿಂಗಿಸುವ ಕೆಲಸಗಳನ್ನು ಚುರುಕುಗೊಳಿಸಬೇಕಿದೆ. ರೈತರು ಬೆಳೆದ ಫಸಲನ್ನು ಬೆಂಬಲ ಬೆಲೆ ನೀಡಿ ರೈತರ ಮನೆ ಬಾಗಿಲಲ್ಲೇ ಖರೀದಿಸುವ ವ್ಯವಸ್ಥೆ ಕಲ್ಪಿಸಿದರೆ ಆತ್ಮಹತ್ಯೆಯನ್ನು ಸ್ವಲ್ಪವಾದರೂ ತಡೆಯಲು ಸಾಧ್ಯವಿದೆ.

ಎಂ.ಜಿ. ರಂಗಸ್ವಾಮಿ, ಹಿರಿಯೂರು

ಬಾಲಕಿಯ ಮೇಲೆ ಅತ್ಯಾಚಾರ: ಕಾರಣರಾರು?

ಆಂಧ್ರಪ್ರದೇಶದ ನಂದ್ಯಾಲ ಜಿಲ್ಲೆಯಲ್ಲಿ ಎಂಟು ವರ್ಷ ವಯಸ್ಸಿನ ಬಾಲಕಿಯ ಮೇಲೆ ಅತ್ಯಾಚಾರ ಎಸಗಿ, ನಂತರ ಆಕೆಯನ್ನು ಕೊಲೆ ಮಾಡಿದ ಆರೋಪದ ಮೇಲೆ 12 ಹಾಗೂ 13 ವರ್ಷ ವಯಸ್ಸಿನ ಮೂವರು ಬಾಲಕರನ್ನು ಬಂಧಿಸಲಾಗಿದೆ ಎಂಬ ಸಂಗತಿ ತಿಳಿದು ಆಘಾತವಾಯಿತು (ಪ್ರ.ವಾ., ಜುಲೈ 12). ಸೂಕ್ಷ್ಮವಾಗಿ ಗಮನಿಸಿದರೆ ಇಂಥದ್ದಕ್ಕೆಲ್ಲ ಕಾರಣ ಇಂದಿನ ಮಕ್ಕಳ ಕೈಗೆ ಸಿಕ್ಕಿರುವ ಮೊಬೈಲ್ ಫೋನ್‌ಗಳು. ಅವುಗಳನ್ನು ಮಕ್ಕಳು ಆನ್‌ಲೈನ್ ತರಗತಿಗಳಿಗಾಗಿ ಅಥವಾ ಆಟ ಆಡುವುದಕ್ಕೆ ಮಾತ್ರ ಬಳಸುತ್ತಾರೆ ಎಂದು ಪೋಷಕರು ಭಾವಿಸುತ್ತಾರೆ. ಆದರೆ ಮೊಬೈಲ್ ಫೋನ್ ಮೂಲಕ ಹಲವು ಬಗೆಯ ಕೆಟ್ಟ ಸಂಗತಿಗಳನ್ನು ಮಕ್ಕಳು ಗಮನಿಸುತ್ತಾರೆ.

ಪ್ರೌಢಾವಸ್ಥೆಗೆ ಆಗಷ್ಟೇ ಕಾಲಿಟ್ಟಿರುವ, ಸಹಜ ಆಸೆ ಹಾಗೂ ಕುತೂಹಲಗಳಿರುವ, ಆದರೆ ಮನಸ್ಸಿನ ಮೇಲೆ ಹತೋಟಿ ಇಲ್ಲದ ಮಕ್ಕಳು ಕಾಮಪ್ರಚೋದಕ ದೃಶ್ಯಗಳನ್ನು ತಮ್ಮ ಸ್ನೇಹಿತರ ಜೊತೆಗೂಡಿ ವೀಕ್ಷಿಸಿದಾಗ ಆಗುವ ಪರಿಣಾಮ ಬಹಳ ಕೆಟ್ಟದ್ದಾಗಿರುತ್ತದೆ. ಆಂಧ್ರದಲ್ಲಿ ನಡೆದಿರುವ ಕೆಟ್ಟ ಘಟನೆಗೆ ಆ ಬಾಲಕರ ವಯಸ್ಸು ಭಾಗಶಃ ಕಾರಣ. ಮಕ್ಕಳ ಮೇಲೆ ನಿಗಾ ಇಡದೆ, ಅವರನ್ನು ಬೇಕಾಬಿಟ್ಟಿಯಾಗಿ ಬೆಳೆಸುವ ಪೋಷಕರೂ ಇದಕ್ಕೆ ಕಾರಣ.

ರವಿಕಿರಣ್ ಶೇಖರ್, ಬೆಂಗಳೂರು

ಜನರ ಅನಿಸಿಕೆಗೂ ಬೆಲೆ ಕೊಡಿ

ಜಿಲ್ಲೆಗಳ ಪುನರ್‌ರಚನೆಯು ಆಡಳಿತದ ಸುಧಾರಣಾ ಕ್ರಮಗಳಲ್ಲಿ ಒಂದು. ಜನಸಂಖ್ಯೆ ಮತ್ತು ಇಲಾಖಾ ಕಾರ್ಯಗಳು ಹೆಚ್ಚಾದಂತೆ ಸುಗಮ ಆಡಳಿತಕ್ಕೆ ಜಿಲ್ಲೆಗಳನ್ನು ಪುನರ್‌ರಚಿಸುವುದು ನಡೆದುಬಂದಿದೆ. ಉತ್ತರ ಕನ್ನಡ ಮತ್ತು ಬೆಳಗಾವಿಯಂತಹ ದೊಡ್ಡ ಜಿಲ್ಲೆಗಳ ವಿಭಜನೆ ಅಗತ್ಯ. ಆದರೆ, ಅದು ಆಗಿಯೇ ಇಲ್ಲ. ಕೆಲವು ಜಿಲ್ಲೆಗಳು ರಾಜಕಾರಣಿಗಳ ಸ್ವಹಿತಾಸಕ್ತಿಗಳಿಂದಾಗಿ ಅಗತ್ಯವಿಲ್ಲದಿದ್ದರೂ ವಿಭಜನೆ ಆಗಿವೆ.

ಜಿಲ್ಲೆಗಳ ಪುನರ್‌ರಚನೆ ಪ್ರಕ್ರಿಯೆಯಲ್ಲಿ ಪರ-ವಿರೋಧ ಸಹಜ. ಈಗ ರಾಮನಗರ ಜಿಲ್ಲೆಯ ಹೆಸರನ್ನು ಬೆಂಗಳೂರು ದಕ್ಷಿಣ ಎಂದು ಬದಲಿಸುವ ಮಾತು ಮುನ್ನೆಲೆಗೆ ಬಂದಿದೆ. ಜಿಲ್ಲೆಯ ಅಭಿವೃದ್ಧಿಗೆ ಪೂರಕವಾದ ಚಟುವಟಿಕೆಗಳ ಕುರಿತಾದ ಚರ್ಚೆಯೂ ನಡೆದಿದೆ. ಹೆಸರಿನ ವಿಚಾರದಲ್ಲಿ ಚುನಾಯಿತ ಪ್ರತಿನಿಧಿಗಳು ಹಟಮಾರಿ ಧೋರಣೆ ಅನುಸರಿಸುತ್ತಿರುವುದು ತಪ್ಪು. ಮತ ನೀಡಿ ಚುನಾಯಿಸಿರುವುದು ಮನಸೋ ಇಚ್ಛೆ ಆಡಳಿತ ನಡೆಸಲು ಪರವಾನಗಿ ಅಲ್ಲ. ಜಿಲ್ಲೆ ಹೆಸರು ಬದಲಾಯಿಸುವುದಾದರೆ ಜನರ ಅಭಿಪ್ರಾಯಕ್ಕೂ ತುಸು ಬೆಲೆ ಕೊಡಬೇಕು.

ಟಿ.ವಿ. ನಾಗರಾಜ, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಸರ್ಕಾರಿ ಪದವಿ ಕಾಲೇಜುಗಳಲ್ಲಿ ಹೊರಗಿನವರನ್ನು ಪ್ರಾಂಶುಪಾಲರನ್ನಾಗಿ ಮಾಡುವುದು ಸರಿಯೇ?

ಪ್ರಾಧ್ಯಾಪಕರ ಬಡ್ತಿ ವಂಚನೆ

• ಪ್ರೊ. ರಾಮಲಿಂಗಪ್ಪ ಟಿ.ಬೇಗೂರು



> ಕೇಂದ್ರ ಸರ್ಕಾರವು ಹೊಸದಾಗಿ ರೂಪಿಸಿರುವ ರಾಷ್ಟ್ರೀಯ ಶಿಕ್ಷಣ ನೀತಿಯನ್ನೇ (ಎನ್‌ಇಪಿ) ನಮ್ಮ ರಾಜ್ಯ ಸರ್ಕಾರ ಬದಲಿಸುತ್ತಿದೆ; ಹೀಗಿರುವಾಗ ತಪ್ಪಾದ ನೇಮಕಾತಿ ನೀತಿಯನ್ನು ರದ್ದು ಮಾಡುವುದು ಸಾಧ್ಯವಿಲ್ಲವೇ? ಇದಕ್ಕೆ ಇಚ್ಛಾಶಕ್ತಿ ಬೇಕಷ್ಟೆ. ಈಗ ನಿಯಮಗಳನ್ನು ರದ್ದು ಮಾಡಿದರೆ ಕಾನೂನು ತೊಡಕು ಉಂಟಾಗಬಹುದು ಎಂಬ ಮಾತು ಕೇವಲ ಸಮರ್ಥನೆಯಷ್ಟೆ. ಸರ್ಕಾರವು ವಿದ್ಯಾರ್ಥಿಗಳ ಮತ್ತು ಶಿಕ್ಷಣದ ಗುಣಮಟ್ಟದ ದೃಷ್ಟಿಯಿಂದ ಈ ನೇಮಕಾತಿಯನ್ನು ಕೂಡಲೇ ರದ್ದುಗೊಳಿಸುವುದು ಸೂಕ್ತ. ಪ್ರಾಧ್ಯಾಪಕರ ಬಡ್ತಿ ಮೂಲಕ ಪ್ರಾಂಶುಪಾಲರ ಹುದ್ದೆಗಳನ್ನು ತುಂಬುವುದೇ ಸರಿಯಾದ ಮಾರ್ಗ

ರಾಜ್ಯದ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಪ್ರಾಂಶುಪಾಲರ ಹುದ್ದೆಗಳನ್ನು ಸ್ಪರ್ಧಾತ್ಮಕ ಪರೀಕ್ಷೆ ನಡೆಸಿ ಭರ್ತಿ ಮಾಡಲು ಕಾಲೇಜು ಶಿಕ್ಷಣ ಇಲಾಖೆ ಹೊರಟಿದೆ. ಇದು ವಿಶ್ವವಿದ್ಯಾಲಯ ಧನಸಹಾಯ ಆಯೋಗದ (ಯುಜಿಸಿ) ನೇಮಕಾತಿ ನಿಯಮದ ಸ್ಪಷ್ಟ ಉಲ್ಲಂಘನೆ. 2018ರ ಯುಜಿಸಿ ನಿಯಮಾವಳಿಯಲ್ಲಿ ಈ ರೀತಿ ನೇಮಕಾತಿ ಮಾಡಬೇಕು ಎಂದು ಎಲ್ಲಿಯೂ ಹೇಳಿಲ್ಲ.

ಪ್ರಾಂಶುಪಾಲರಿಗೆ ಸಂಬಂಧಿಸಿದಂತೆ ಮಾತ್ರವಲ್ಲ; ಎಲ್ಲ ಹುದ್ದೆಗಳ ನೇಮಕಾತಿ ಮತ್ತು ಆಯ್ಕೆ ಸಂದರ್ಭದಲ್ಲೂ ನೇರ ನೇಮಕಾತಿ ವಿಧಾನ ಅನುಸರಿಸಬೇಕು ಎಂದು ಯುಜಿಸಿ ನಿಯಮ ಹೇಳುತ್ತದೆ. ನಿಯಮ 4.0.5ರಲ್ಲಿ ಕಾಲೇಜು ಪ್ರಾಂಶುಪಾಲರು ಮತ್ತು ಪ್ರಾಧ್ಯಾಪಕ (ಪ್ರೊಫೆಸರ್) ಎರಡೂ ಹುದ್ದೆಗಳ ನೇಮಕದ ಬಗ್ಗೆ ಪ್ರಸ್ತಾಪಿಸಲಾಗಿದೆ. ನಿರ್ದಿಷ್ಟ ಸಮಿತಿ ರಚಿಸಿ, ಅಧ್ಯಾಪಕರ ಕಾರ್ಯಕ್ಷಮತೆ ಪರಿಶೀಲಿಸಿ ಬಡ್ತಿ ಮೂಲಕ ಆಯ್ಕೆ ನಡೆಸಬೇಕೆಂದು ಅದು ಹೇಳುತ್ತದೆ. ನಿಯಮ 5.1.8 ಮತ್ತು 6.0ಗಳಲ್ಲಿ ಆಯ್ಕೆ ಕ್ರಮ ಮತ್ತು ಮಾನದಂಡಗಳನ್ನೂ ವಿವರಿಸಲಾಗಿದೆ. ಆದರೆ, ಪ್ರಾಂಶುಪಾಲರನ್ನು ಸ್ಪರ್ಧಾತ್ಮಕ ಪರೀಕ್ಷೆ ಮೂಲಕ, ಹೊರಗಿನವರಿಗೂ ಅವಕಾಶ ನೀಡಿ ನೇಮಿಸಬೇಕು ಎಂದು ಹೇಳಿಲ್ಲ.

ಇದಷ್ಟೇ ಅಲ್ಲ; ಯುಜಿಸಿ ನಿಯಮಗಳಲ್ಲಿ ಪ್ರಾಂಶುಪಾಲರ ಹುದ್ದೆಗೆ ಎಲ್ಲಿಯೂ ಪ್ರತ್ಯೇಕ ಕೇಡರ್ ಇಲ್ಲವೇ ವೇತನ ಶ್ರೇಣಿಯ (ಪೇ ಸ್ಕೇಲ್) ಪ್ರಸ್ತಾಪವಿಲ್ಲ. ಪ್ರಾಧ್ಯಾಪಕ ಹುದ್ದೆಗೆ ಸರಿಸಮಾನವಾದ ಹುದ್ದೆಯಾಗಿ ಪ್ರಾಂಶುಪಾಲರ ಹುದ್ದೆಯನ್ನು ಕಲ್ಪಿಸಿಕೊಳ್ಳಲಾಗಿದ್ದು, ಸಹ ಪ್ರಾಧ್ಯಾಪಕರನ್ನೂ (ಅಸೋಸಿಯೇಟ್ ಪ್ರೊಫೆಸರ್) ಪ್ರಾಂಶುಪಾಲರ ಹುದ್ದೆಗೆ (ಪ್ರಾಧ್ಯಾಪಕರ ಸಮಾನ ಗ್ರೇಡ್ ನೀಡಿ) ಬಡ್ತಿ ಮೂಲಕ ನೇಮಿಸಬಹುದು ಎಂದು ಹೇಳಲಾಗಿದೆ.

ಆದಾಗ್ಯೂ, ಕಾಲೇಜು ಶಿಕ್ಷಣ ಇಲಾಖೆಯು 2018ರ ಯುಜಿಸಿ ನಿಯಮಾವಳಿಯನ್ನು ಅಲಕ್ಷಿಸಿ 2008–09ರ ವೃಂದ ಮತ್ತು ನೇಮಕಾತಿ (ಸಿ ಅಂಡ್ ಆರ್) ನಿಯಮಗಳನ್ನೇ ಅನುಸರಿಸಿ ಪ್ರಾಂಶುಪಾಲರ ವಿಶೇಷ ನೇರ ನೇಮಕಾತಿ ನಿಯಮಗಳನ್ನು ರೂಪಿಸಿದೆ. ಅಲ್ಲದೆ, 2021ರ ಮಾರ್ಚ್ 15ರ ಕರ್ನಾಟಕ ನೇರ ನೇಮಕಾತಿ ನಿಯಮಗಳಲ್ಲಿ ಗ್ರೂಪ್ 'ಎ' ಮತ್ತು 'ಬಿ' ನೇಮಕಾತಿ ಬಗ್ಗೆ ವಿಶೇಷ ವಿಧಿ ವಿಧಾನಗಳನ್ನು ರೂಪಿಸಿದ್ದರೂ ಅವುಗಳನ್ನೆಲ್ಲ ಉಲ್ಲಂಘಿಸಿ ಕರ್ನಾಟಕ ಪರೀಕ್ಷಾ ಪ್ರಾಧಿಕಾರವನ್ನು (ಕೆಇಎ) ಪರೀಕ್ಷಾ ಪ್ರಾಧಿಕಾರವಾಗಿ ಆಯ್ಕೆ ಮಾಡಿ ಯುಜಿಸಿಯಲ್ಲಿ ಇಲ್ಲದ, ಪ್ರಾಧ್ಯಾಪಕ ಹುದ್ದೆಗಿಂತಲೂ ಹೆಚ್ಚಿನ ವೇತನ ಶ್ರೇಣಿಯನ್ನು ಪ್ರಾಂಶುಪಾಲರ ಹುದ್ದೆಗೆ ನಿಗದಿಪಡಿಸಿ ಅಧಿಸೂಚನೆ ಹೊರಡಿಸಲಾಗಿದೆ. ಆ ನಂತರದಲ್ಲಿ ಕೆಇಎಯು ಪರೀಕ್ಷೆ ನಡೆಸುವಾಗ ಅಭ್ಯರ್ಥಿಗಳ ಅರ್ಹತೆಯನ್ನು ಪರಿಶೀಲಿಸದೆ ಪರೀಕ್ಷೆ ತೆಗೆದುಕೊಂಡವರಿಗೆಲ್ಲ ಅವಕಾಶ ನೀಡಿ ಫಲಿತಾಂಶ ಪ್ರಕಟಿಸಿದೆ. ಹೀಗೆ ನಿರಂತರವಾಗಿ ನಿಯಮಗಳನ್ನು ಉಲ್ಲಂಘಿಸಿ ಪ್ರಾಂಶುಪಾಲರ ನೇಮಕಾತಿಗೆ ಪ್ರಯತ್ನಿಸಲಾಗುತ್ತಿದೆ. ಇದರ ಹಿಂದೆ ಇರುವ ಮರ್ಮವಾದರೂ ಏನು?

ನೇಮಕಾತಿ ಪರೀಕ್ಷೆ ಬರೆದಿರುವವರಲ್ಲಿ ಸುಮಾರು 65 ಮಂದಿ ಹೊರಗಿನವರು ಪ್ರಾಂಶುಪಾಲರಾಗಿ ಆಯ್ಕೆ ಆಗುವ ಸಂಭವ ಇದೆಯೆಂದು ತಿಳಿದುಬಂದಿದೆ. ಹೊರಗಿನವರನ್ನು ಒಳಗಿನವರು ಸುಲಭಕ್ಕೆ ಒಪ್ಪಿಕೊಳ್ಳುವುದಿಲ್ಲ. ಇದರಿಂದ ಆಡಳಿತ ಸುಗಮವಾಗುವುದಕ್ಕಿಂತ ಸಂಘರ್ಷ ಆಗುವ ಸಾಧ್ಯತೆಯೇ ಹೆಚ್ಚು. ಕರ್ನಾಟಕದ ಬೇರೆ ಯಾವ ಇಲಾಖೆಗಳಲ್ಲೂ ಇಲ್ಲದಿರುವ ಈ ಪದ್ಧತಿ ಕಾಲೇಜು ಶಿಕ್ಷಣದಲ್ಲಿ ಮಾತ್ರ ಏಕೆ? ಇದರಿಂದ ಇಲ್ಲಿಯೇ 25–30 ವರ್ಷಗಳು ಸೇವೆ ಸಲ್ಲಿಸಿದ ಅನುಭವಿಗಳನ್ನು ಕಡೆಗಣಿಸಿದಂತೆ ಆಗುವುದಿಲ್ಲವೇ? ಪರೀಕ್ಷೆ ನಡೆಸಿಯೇ ಪ್ರಾಂಶುಪಾಲರ ಹುದ್ದೆ ತುಂಬಬೇಕು ಎಂದಿದ್ದಲ್ಲಿ ಇಲಾಖೆಯ ಒಳಗಿನವರಿಗೇ ನಡೆಸಬಹುದಲ್ಲವೇ?

ಈ ನೇಮಕಾತಿಯಿಂದ 265 ಹುದ್ದೆಗಳನ್ನು ಮಾತ್ರ ತುಂಬಲು ಸಾಧ್ಯವಾಗಲಿದ್ದು (ಮಾಜಿ ಸೈನಿಕ, ದೃಷ್ಟಿ ದೋಷ ಹೊಂದಿರುವವರು, ಲೈಂಗಿಕ ಅಲ್ಪಸಂಖ್ಯಾತರು ಮುಂತಾದ ವಿವಿಧ ಮೀಸಲಾತಿಗಳ ಅಡಿಯಲ್ಲಿ ಅರ್ಹರಾದ ಅಭ್ಯರ್ಥಿಗಳು ಇಲ್ಲವಾದ್ದರಿಂದ ಅವುಗಳನ್ನು ಸದ್ಯ ತುಂಬಲು ಸಾಧ್ಯವಿಲ್ಲ); ಉಳಿದ ಹುದ್ದೆಗಳಿಗೆ ಹಿರಿಯ ಪ್ರಾಧ್ಯಾಪಕರನ್ನೇ ಪ್ರಭಾರಿಗಳಾಗಿ ತುಂಬಬೇಕಾಗುತ್ತದೆ. ಆಗ ಒಂದೆಡೆ ಇಲಾಖೆಯಲ್ಲಿ ಜ್ಯೇಷ್ಠತಾ ಪಟ್ಟಿಯಲ್ಲಿರುವ ಹಿರಿಯರು ಕಿರಿಯರಾಗಿಯೂ, ಇನ್ನೊಂದೆಡೆ ಜ್ಯೇಷ್ಠತಾ ಪಟ್ಟಿಯಲ್ಲಿ ಕೆಳಗಿರುವ ಇಲಾಖಾ ಕಿರಿಯರು ಪ್ರಾಂಶುಪಾಲರಾಗಿಯೂ ಕೆಲಸ ಮಾಡುವಂತಾಗುತ್ತದೆ.

ಇದರ ನಡುವೆಯೇ, ನೆರೆ ರಾಜ್ಯಗಳಲ್ಲಿ ಈ ನೇಮಕಾತಿ ಸ್ವರೂಪ ಹೇಗಿದೆಯೆಂದು ಅಧ್ಯಯನ ಮಾಡಿ ವರದಿ ಸಲ್ಲಿಸಲು ಇಲಾಖೆಯು ತಜ್ಞರ ಸಮಿತಿಯೊಂದನ್ನು ನೇಮಕ ಮಾಡಿದೆ. ಸಮಿತಿ ವರದಿಯನ್ನೂ ಸಲ್ಲಿಸಿದೆ. ಅದರ ಅನುಸಾರ, ಎಲ್ಲಿಯೂ ಈ ರೀತಿಯ ನೇಮಕಾತಿ ನಡೆದಿಲ್ಲ. ತಮಿಳುನಾಡು, ಆಂಧ್ರ ಪ್ರದೇಶ, ತೆಲಂಗಾಣ, ಕೇರಳ, ಹರಿಯಾಣ, ಹಿಮಾಚಲ ಪ್ರದೇಶ... ಹೀಗೆ ದೇಶದ ಎಲ್ಲ ಕಡೆಗಳಲ್ಲೂ ಪ್ರಾಂಶುಪಾಲರ ಹುದ್ದೆಯನ್ನು ಬಡ್ತಿ ಮೂಲಕವೇ ತುಂಬಲಾಗಿದೆ. ದೇಶದಲ್ಲಿ ಎಲ್ಲೂ ಇಲ್ಲದ ನೇಮಕಾತಿ ನೀತಿ ನಮ್ಮಲ್ಲೇಕೆ ಬೇಕು?

ಈ ನೇಮಕಾತಿ ನಿಯಮದ ಪ್ರಕಾರ, 5 ವರ್ಷಗಳ ನಂತರ ಪ್ರಾಂಶುಪಾಲರು ತಮ್ಮ ಮಾತೃಸಂಸ್ಥೆಗೆ ಮರಳಿ ಹೋಗಬೇಕು. ಹಾಗಾದಾಗ, ಇಲಾಖಾ ಜಂಟಿ ನಿರ್ದೇಶಕ, ಹೆಚ್ಚುವರಿ ನಿರ್ದೇಶಕ ಮತ್ತು ನಿರ್ದೇಶಕರ ಹುದ್ದೆಗಳನ್ನು ತುಂಬಲು ಆಗುವುದೇ ಇಲ್ಲ. ಆಯಕಟ್ಟಿನ ಹುದ್ದೆಗಳು ಪ್ರಭಾರ ಇದ್ದಾಗ ಉತ್ತಮ ಆಡಳಿತವನ್ನು ನಿರೀಕ್ಷಿಸುವುದು ಕಷ್ಟ ಸಾಧ್ಯ.

ಹಳೆಯ ನಿಯಮಗಳಲ್ಲಿ ಪ್ರಾಂಶುಪಾಲರು ಆರು ಗಂಟೆ ಪಾಠ ಮಾಡಬೇಕು ಎಂದಿದೆ. ವಿದ್ಯಾರ್ಥಿಗಳ ಜೊತೆ ಅನ್ಯೋನ್ಯ ಸಂಬಂಧ ಇರಿಸಿಕೊಂಡು ಪಾಠ ಮಾಡುವ ಪ್ರಾಧ್ಯಾಪಕರೇ ಪ್ರಾಂಶುಪಾಲರಾದಾಗ ವಿದ್ಯಾರ್ಥಿಗಳಿಗೆ ಅವರ ಬಗ್ಗೆ ಗೌರವ ಇರುತ್ತದೆ. ಆದರೆ, ಯಾರೋ ಹೊರಗಿನಿಂದ ಬಂದವರು, ಪಾಠ ಮಾಡದಿರುವವರು ಪ್ರಾಂಶುಪಾಲರಾದಾಗ ಆಡಳಿತ ಶುಷ್ಕವಾಗುತ್ತದೆ. ಕೋರ್ಸ್ ವಿಶಿಷ್ಟ ಪಠ್ಯ, ಪಠ್ಯೇತರ, ಪೂರಕ ಪಠ್ಯ ಮತ್ತು ವಿಸ್ತರಣಾ ಚಟುವಟಿಕೆಗಳು ಹಾಗೂ ಶಿಸ್ತುವಿಶಿಷ್ಟ ಚಟುವಟಿಕೆ ಆಧಾರಿತ ಸಹಭಾಗಿ ಕಲಿಕೆ, ಪ್ಲೇಸ್‌ಮೆಂಟ್ ಹಾಗೂ ಶಿಸ್ತುವಿಶಿಷ್ಟ ಮೆಂಟರ್‌ಶಿಪ್... ಈ ಎಲ್ಲದರ ಬಗ್ಗೆ ತಿಳಿವು ಇರುವವರು ಸಾಮಾನ್ಯ ಪದವಿಗಳಲ್ಲಿ ಪ್ರಾಂಶುಪಾಲರಾಗಿ ಕೆಲಸ ಮಾಡುವುದಕ್ಕೂ ಎಂಜಿನಿಯರಿಂಗ್ ಶಿಕ್ಷಣದವರೋ, ಪಶುವೈದ್ಯಕೀಯ, ಕಾನೂನು ಶಿಕ್ಷಣದವರೋ ಸಾಮಾನ್ಯ ಪದವಿ ಕಾಲೇಜುಗಳಿಗೆ ಪ್ರಾಂಶುಪಾಲರಾಗುವುದಕ್ಕೂ ವ್ಯತ್ಯಾಸವಿದೆ. ಕಾಲೇಜುಗಳಲ್ಲಿ ಎಲ್ಲ ಬಗೆಯ ಗುಣಮಟ್ಟ ಹೆಚ್ಚುವುದು ಒಳ್ಳೆಯ ಅನುಭವಿ, ವಸ್ತುವಿಶಿಷ್ಟ ಮತ್ತು ಶಿಸ್ತು ವಿಶಿಷ್ಟ ಬೋಧಕರಿಂದ. ಹಾಗಾಗಿ, ಹೊರಗಿನವರನ್ನು ಸರ್ಕಾರದ ಪದವಿ ಕಾಲೇಜುಗಳಲ್ಲಿ ಪ್ರಾಂಶುಪಾಲರಾಗಿ ನೇಮಿಸುವುದು ಸೂಕ್ತವಲ್ಲ.

2018ರ ಯುಜಿಸಿ ನಿಯಮಗಳಲ್ಲಿ ಮತ್ತು ಅನಂತರದ ತಿದ್ದುಪಡಿಗಳಲ್ಲಿ ಸಿಎಎಸ್ (ಕರಿಯರ್ ಅಡ್ವಾನ್ಸ್‌ಮೆಂಟ್ ಸ್ಕೀಮ್) ಮೂಲಕವೇ ಸಹಾಯಕ ಪ್ರಾಧ್ಯಾಪಕರಿಗೆ ಬಡ್ತಿ ನೀಡಿ ಸಹ ಪ್ರಾಧ್ಯಾಪಕರು ಮತ್ತು ಸಹ ಪ್ರಾಧ್ಯಾಪಕರಿಗೆ ಬಡ್ತಿ ನೀಡಿ ಪ್ರಾಧ್ಯಾಪಕರನ್ನು ಮತ್ತು ಅವರಿಗೆ ಸರಿ ಸಮಾನವಾಗಿ ಪ್ರಾಂಶುಪಾಲರನ್ನೂ ನೇಮಿಸುವ ಬಗ್ಗೆ ತಿಳಿಸಲಾಗಿದೆ. ಇವುಗಳನ್ನು ಅನುಸರಿಸಿ ಉನ್ನತ ಶಿಕ್ಷಣ ಇಲಾಖೆಯು 2021ರಲ್ಲಿ ಕರ್ನಾಟಕಕ್ಕೆ ಅನ್ವಯಿಸುವಂತೆ ಮಾರ್ಗಸೂಚಿಗಳನ್ನು ಹೊರಡಿಸಿದೆ. ಆದರೆ, ಚೋದ್ಯವೆಂಬಂತೆ ಯುಜಿಸಿಯಲ್ಲಿ ಬಡ್ತಿ ಎಂದು ಹೇಳಿದ್ದರೂ ಅದನ್ನು ಮರೆಮಾಚಿ, ಎಲ್ಲೂ ಇಲ್ಲದ ಸ್ಥಾನೀಕರಣ –'ಪ್ಲೇಸ್‌ಮೆಂಟ್' ಎಂಬ ಪದವನ್ನು ಸೃಷ್ಟಿಸಿ, ಪ್ರಾಧ್ಯಾಪಕರ ಬಡ್ತಿಗಳನ್ನು ವಂಚಿಸಲಾಗಿದೆ.

ಇತ್ತೀಚೆಗೆ, ಪರೀಕ್ಷೆಯಲ್ಲಿ ಒಳ್ಳೆಯ ಅಂಕ ಪಡೆಯದ, ಆಯ್ಕೆಯ ಸಂಭವ ಇಲ್ಲದ ಕೆಲವರು ಮಾತ್ರ ಇದನ್ನು ವಿರೋಧಿಸುತ್ತಿದ್ದಾರೆ ಎಂಬ ಗಾಳಿಸುದ್ದಿಯನ್ನು ಹರಡಲಾಗುತ್ತಿದೆ. ಆದರೆ, ಯುಜಿಸಿ ನಿಯಮಗಳಿಗೆ ವಿರುದ್ಧವಾಗಿ ಇಲಾಖೆಯ ಹೊರಗಿನವರನ್ನು ಒಳಕ್ಕೆ ತಂದು ಆಡಳಿತದಲ್ಲಿ ಸ್ಥಾಪಿಸುವುದನ್ನು ಹಿರಿಯರು ವಿರೋಧಿಸುತ್ತಿದ್ದಾರೆ ಎಂಬುದನ್ನು ಅರ್ಥಮಾಡಿಕೊಳ್ಳಬೇಕು.

ಯುಜಿಸಿಯ ನಿಯಮಗಳು ಸ್ಥಳೀಯ ವೈಶಿಷ್ಟ್ಯವನ್ನು ನಿರಾಕರಿಸುವಂತೆ ಇದ್ದಲ್ಲಿ ಅವುಗಳನ್ನು ಮಾರ್ಪಡಿಸಿ ನಮ್ಮದೇ ನಿಯಮಗಳನ್ನು ಮಾಡಿಕೊಳ್ಳುವುದು ಸೂಕ್ತ. ಆದರೆ, ಅದೇ ಹೆಸರಿನಲ್ಲಿ ಶೈಕ್ಷಣಿಕ ಅನುಭವ ಮತ್ತು ಜ್ಞಾನಕ್ಕೆ ಮಾಡುವ ಅನ್ಯಾಯ ಹಾಗೂ ಅವಮಾನವನ್ನು ಸರ್ವಥಾ ಒಪ್ಪಲು ಸಾಧ್ಯವಿಲ್ಲ.

ಕೇಂದ್ರ ಸರ್ಕಾರವು ಹೊಸದಾಗಿ ರೂಪಿಸಿರುವ ರಾಷ್ಟ್ರೀಯ ಶಿಕ್ಷಣ ನೀತಿಯನ್ನೇ (ಎನ್‌ಇಪಿ) ನಮ್ಮ ರಾಜ್ಯ ಸರ್ಕಾರ ಬದಲಿಸುತ್ತಿದೆ; ಹೀಗಿರುವಾಗ ತಪ್ಪಾದ ನೇಮಕಾತಿ ನೀತಿಯನ್ನು ರದ್ದು ಮಾಡುವುದು ಸಾಧ್ಯವಿಲ್ಲವೇ? ಇದಕ್ಕೆ ಇಚ್ಛಾಶಕ್ತಿ ಬೇಕಷ್ಟೆ. ಈಗ ನಿಯಮಗಳನ್ನು ರದ್ದು ಮಾಡಿದರೆ ಕಾನೂನು ತೊಡಕು ಉಂಟಾಗಬಹುದು ಎಂಬ ಮಾತು ಕೇವಲ ಸಮರ್ಥನೆಯಷ್ಟೆ. ಸರ್ಕಾರವು ವಿದ್ಯಾರ್ಥಿಗಳ ಮತ್ತು ಶಿಕ್ಷಣದ ಗುಣಮಟ್ಟದ ದೃಷ್ಟಿಯಿಂದ ಈ ನೇಮಕಾತಿಯನ್ನು ಕೂಡಲೇ ರದ್ದುಗೊಳಿಸುವುದು ಸೂಕ್ತ. ಪ್ರಾಧ್ಯಾಪಕರ ಬಡ್ತಿ ಮೂಲಕ ಪ್ರಾಂಶುಪಾಲರ ಹುದ್ದೆಗಳನ್ನು ತುಂಬುವುದೇ ಸರಿಯಾದ ಮಾರ್ಗ. ಇದಕ್ಕೆ ಬೇಕಾದ ವೃಂದ ಮತ್ತು ನೇಮಕಾತಿ ನಿಯಮಕ್ಕೆ ತಿದ್ದುಪಡಿ ತರುವುದು ಇಂದಿನ ತುರ್ತು.

ಜ್ಞಾನದ ಉತ್ಪಾದನೆಯ ಅನುಭವಿ ಮಾನವ ಸಂಪನ್ಮೂಲವನ್ನು ಆಡಳಿತದಲ್ಲಿ ತಿರಸ್ಕರಿಸುವುದು ಸರಿಯಾದ ಕ್ರಮವಲ್ಲ.

ಲೇಖಕ: ಕರ್ನಾಟಕ ಉನ್ನತ ಶಿಕ್ಷಣ ಚಿಂತನಾ ವೇದಿಕೆ ಸಂಚಾಲಕ

ಪ್ರಜಾವಾಣಿ ಚರ್ಚೆ

ಹುದ್ದೆ ಸಿಗದವರ ಆಕ್ಷೇಪಣೆ

• ಪದ್ಮಿನಿ ನಾಗರಾಜು

> ಸರ್ಕಾರಿ ಪ್ರಾಧ್ಯಾಪಕರು ಯುಜಿಸಿ ನಿಯಮವನ್ನು ತಮಗೆ ಬೇಕಾದಂತೆ ಅನ್ವಯ ಮಾಡಿಕೊಳ್ಳುವುದನ್ನು ಮೊದಲು ನಿಲ್ಲಿಸಬೇಕು. ತಮ್ಮ ವೇತನ 'ಯುಜಿಸಿ ಸ್ಕೇಲ್'ನಂತೆ ಇರಬೇಕು ಎಂದು ಬಯಸುವ ಸರ್ಕಾರಿ ಕಾಲೇಜಿನ ಅಧ್ಯಾಪಕರು, ರಜೆ ಇನ್ನಿತರ ಸೌಲಭ್ಯಗಳನ್ನು ಹಾಗೆಯೇ ಬಳಸಿಕೊಳ್ಳುವುದಿಲ್ಲವೇ? ಖಾಸಗಿ ಕಾಲೇಜುಗಳಲ್ಲಿ ವೇತನವೂ ಕಡಿಮೆ, ಕೆಲಸವೂ ಹೆಚ್ಚು, ಕಾಲೇಜಿನ ಆಡಳಿತ ಮಂಡಳಿಯ ಮರ್ಜಿಯಂತೆ ಕೆಲಸದ ಒತ್ತಡಕ್ಕೆ ಒಳಗಾಗುವ ಖಾಸಗಿ ಅಧ್ಯಾಪಕರ ಕಷ್ಟದ ಅರಿವು ಸರ್ಕಾರಿ ಕಾಲೇಜಿನ ಪ್ರಾಧ್ಯಾಪಕರಿಗಿಲ್ಲ

ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಗ್ರೇಡ್-1 ಪ್ರಾಂಶುಪಾಲರ 310 ಹುದ್ದೆಗಳಿಗೆ ನೇರ ನೇಮಕಾತಿ ಮಾಡುತ್ತಿರುವುದು ವಿಶ್ವವಿದ್ಯಾಲಯ ಅನುದಾನ ಆಯೋಗದ (ಯುಜಿಸಿ) ನಿಯಮಗಳ ಪ್ರಕಾರವೇ ಇದೆ. ಕೆಲ ಪ್ರಾಧ್ಯಾಪಕರು ಅಸಮಾಧಾನ ವ್ಯಕ್ತಪಡಿಸಿದ ಮಾತ್ರಕ್ಕೆ ನಿಯಮ ಬಾಹಿರವಾಗಿದೆ ಎಂದಲ್ಲ. ಐದು ವರ್ಷಗಳಿಗೆ ಗುತ್ತಿಗೆ ಎನ್ನುವುದಾದರೆ, ನಾಲ್ಕು ವರ್ಷಗಳಿಗೆ ನೇಮಕವಾಗುವ ಕುಲಪತಿ ಸೇರಿದಂತೆ ಸೀಮಿತ ಅವಧಿಯ ಎಲ್ಲ ಹುದ್ದೆಗಳನ್ನೂ 'ಗುತ್ತಿಗೆ' ಎನ್ನಬೇಕಾಗುತ್ತದೆ.

ರಾಜ್ಯದ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಪ್ರಸ್ತುತ ಕಾಯಂ ಪ್ರಾಂಶುಪಾಲರೇ ಇಲ್ಲ. ಪ್ರಭಾರ ಪ್ರಾಂಶುಪಾಲರೇ ಇರುವುದರಿಂದ ವಿದ್ಯಾರ್ಥಿಗಳ ಹಾಗೂ ಕಾಲೇಜುಗಳ ಹಿತದೃಷ್ಟಿಯಿಂದ ಪ್ರಾಂಶುಪಾಲರ ನೇಮಕದ ಅಗತ್ಯ ಇರುವುದನ್ನು ಮನಗಂಡು ಹೊಸ ಸರ್ಕಾರ ಸ್ಪರ್ಧಾತ್ಮಕ ಪರೀಕ್ಷೆ ನಡೆಸಿದೆ.

ಈಗಾಗಲೇ ಪರೀಕ್ಷೆ ನಡೆದು ಫಲಿತಾಂಶ ಪ್ರಕಟಿಸಲಾಗಿದೆ. ಹಿಂದಿನ ಸರ್ಕಾರ ಸ್ಪರ್ಧಾತ್ಮಕ ಪರೀಕ್ಷೆಗೆ ಅಭ್ಯರ್ಥಿಗಳು ಆನ್‌ಲೈನ್ ಮೂಲಕ ಅರ್ಜಿಗಳನ್ನು ಸಲ್ಲಿಸಲು ಅವಕಾಶ ಕಲ್ಪಿಸಿತ್ತು (ಸಂಖ್ಯೆ ಇಡಿ 121 ಡಿಸಿಇ 2018 ದಿನಾಂಕ 09.02.2020). ನಂತರ ಪರೀಕ್ಷೆ ಮುಂದೂಡಿ, ಪರೀಕ್ಷೆ ನಡೆಸಲಾಯಿತು. ಸರ್ಕಾರವು ಅಧಿಸೂಚನೆ ಹೊರಡಿಸುವ ಪೂರ್ವದಲ್ಲೇ ಆಕ್ಷೇಪಣೆ ಸಲ್ಲಿಸಲು ಅವಕಾಶ ಕಲ್ಪಿಸಲಾಗಿತ್ತು. ಪ್ರಾಧ್ಯಾಪಕರ ಕೋರಿಕೆಯಂತೆ ಮಾರ್ಪಾಡುಗಳನ್ನೂ ಮಾಡಲಾಗಿತ್ತು. ಅಧಿಸೂಚನೆಯಲ್ಲಿ ಎಲ್ಲಿಯೂ ಸರ್ಕಾರಿ ಅಥವಾ ಖಾಸಗಿ ಅಭ್ಯರ್ಥಿಗಳಿಗೆ ಎಂದು ಇರಲಿಲ್ಲ. ನೇಮಕಾತಿಗೆ 55 ವರ್ಷದ ಮೇಲ್ಪಟ್ಟವರನ್ನೂ ಪರಿಗಣಿಸಲಾಗಿದೆ. ವಯಸ್ಸಾದವರು ನಿವೃತ್ತಿ ಹೊಂದಿದ ನಂತರ ಮತ್ತೆ ಭರ್ತಿ ಮಾಡಲು, ಈಗ ನೇಮಕವಾದವರ ಅವಧಿ ಮುಗಿದ ನಂತರ ತಮ್ಮ ಮೂಲ ಹುದ್ದೆಯಲ್ಲಿ ಬೋಧಕರಾಗಿ ಮುಂದುವರಿಯಲು ನೇಮಕಾತಿ ನಿಯಮದಲ್ಲೇ ಅವಕಾಶ ಕಲ್ಪಿಸಲಾಗಿದೆ.

ವಿಶ್ವವಿದ್ಯಾಲಯ ಧನಸಹಾಯ ಆಯೋಗದ (ಯುಜಿಸಿ) ನಿಯಮದ ಪ್ರಕಾರ, ಸಹಾಯಕ ಪ್ರಾಧ್ಯಾಪಕ ಬಡ್ತಿ ಪಡೆದು, ಸಹ ಪ್ರಾಧ್ಯಾಪಕ ಹಾಗೂ ಪ್ರಾಧ್ಯಾಪಕ ಆಗಬಹುದೇ ವಿನಾ, ಬಡ್ತಿ ಮೂಲಕ ಪ್ರಾಂಶುಪಾಲರ ಹುದ್ದೆಗೆ ಬರಲು ಸಾಧ್ಯವಿಲ್ಲ. ನೇರ ನೇಮಕಾತಿ ಮೂಲಕವೇ ಪ್ರಾಂಶುಪಾಲರ ಹುದ್ದೆಯನ್ನು ಪಾರದರ್ಶಕವಾಗಿ ನೇಮಕ ಮಾಡಬೇಕು ಎನ್ನುವುದು ಯುಜಿಸಿ ನಿಯಮ. ಆ ಮೂಲಕ, ದಕ್ಷ, ಬುದ್ಧಿವಂತ ಅಭ್ಯರ್ಥಿಗಳು ಪರೀಕ್ಷೆ ಮೂಲಕ ನೇಮಕವಾಗುತ್ತಾರೆ. ನೇಮಕಾತಿ ಅಧಿಸೂಚನೆ ಸಮಯದಲ್ಲಿ ಇಲ್ಲದ ಆಕ್ಷೇಪಣೆಗಳು ಈಗ ಏಕೆ? ಸರ್ಕಾರಿ ಹಾಗೂ ಖಾಸಗಿ ಎನ್ನುವ ಹೆಸರಿನಲ್ಲಿ ಸರ್ಕಾರವನ್ನು ದಿಕ್ಕು ತಪ್ಪಿಸುತ್ತಿರುವುದು ಸರಿಯಲ್ಲ. ಯುಜಿಸಿ ನಿಯಮದ ಪ್ರಕಾರ ಸಂಬಳ ಪಡೆಯುವವರು ಅದೇ ನಿಯಮದ ಪ್ರಕಾರ ನೇಮಕಾತಿಯನ್ನು ಮಾಡಲು ಹೊರಟರೆ ಆಕ್ಷೇಪಿಸುತ್ತಿರುವುದೇಕೆ?

ಎಲ್ಲ ಕಡೆಗಳಲ್ಲೂ ಸರ್ಕಾರಿ ಮತ್ತು ಖಾಸಗಿ ಶಿಕ್ಷಣ ಸಂಸ್ಥೆಗಳ ನಡುವೆ ತೀವ್ರ ಸ್ಪರ್ಧೆ ಇದೆ. ಹೀಗಿರುವಾಗ ಖಾಸಗಿಯವರನ್ನು ಸರ್ಕಾರಿ ಕಾಲೇಜಿನ ಪ್ರಾಂಶುಪಾಲರನ್ನಾಗಿ ನೇಮಿಸಿದರೆ ಸರ್ಕಾರಿ ಪದವಿ ಕಾಲೇಜುಗಳ ಗತಿ ಏನು ಎಂದು ಪ್ರಶ್ನಿಸುತ್ತಿದ್ದಾರೆ. ಕಾಲೇಜುಗಳ ಪ್ರವೇಶ ಪ್ರಕ್ರಿಯೆ ಮೇಲೆ ದುಷ್ಪರಿಣಾಮವಾಗುತ್ತದೆ ಎಂದು ಆಕ್ಷೇಪಿಸುತ್ತಿದ್ದಾರೆ. ಖಾಸಗಿ ಕಾಲೇಜಿನ ಪ್ರಾಂಶುಪಾಲರ ಸಂಬಳಕ್ಕೂ, ಯುಜಿಸಿ ನಿಯಮದಂತೆ ಇವರು ಪಡೆಯುತ್ತಿರುವ ಸಂಬಳಕ್ಕೂ ಅಜಗಜಾಂತರ ಇರುವುದು ಇವರ ಗಮನಕ್ಕೆ ಬಂದಿಲ್ಲವೇ? ಇಲ್ಲಿ ತಿಕ್ಕಾಟದ ಪ್ರಶ್ನೆಯೇ ಇಲ್ಲ. ಸೌಲಭ್ಯದ ಪ್ರಶ್ನೆಯಿದೆ. ಯಾವುದೇ ಕಾಲೇಜು ಎಂತಹ ಸೌಲಭ್ಯ ನೀಡುತ್ತದೆ, ಅಲ್ಲಿ ಪ್ರತಿಭಾವಂತ ಪ್ರಾಧ್ಯಾಪಕರು ಯಾರಿದ್ದಾರೆ ಎನ್ನುವುದನ್ನು ಆಧರಿಸಿ ವಿದ್ಯಾರ್ಥಿ ಕಾಲೇಜಿಗೆ ಪ್ರವೇಶಾತಿಯನ್ನು ಪಡೆಯುತ್ತಾನೆಯೇ ವಿನಾ ಪ್ರಾಂಶುಪಾಲರು ಯಾರಿದ್ದಾರೆ ಎಂದಲ್ಲ.

ವಿಶ್ವವಿದ್ಯಾಲಯಗಳಲ್ಲಿರುವ ಬೋಧಕರ ಹುದ್ದೆಗಳ ಮಾದರಿಯಲ್ಲಿ ಸ್ನಾತಕ ಪದವಿ (ಯುಜಿ) ಕಾಲೇಜುಗಳಲ್ಲಿ ಸಹಾಯಕ ಪ್ರಾಧ್ಯಾಪಕರು, ಸಹ ಪ್ರಾಧ್ಯಾಪಕರು ಮತ್ತು ಪ್ರಾಧ್ಯಾಪಕರು ಎಂದು ಸಿಎಎಸ್ (ಕರಿಯರ್ ಅಡ್ವಾನ್ಸ್ ಮೆಂಟ್ ಸ್ಕೀಮ್) ನಿಯಮಗಳ ಮೂಲಕ ಬೋಧನಾ ವಿಷಯಗಳಲ್ಲಿ ಪರಿಣತಿ ಪಡೆದು, ಬಡ್ತಿಯನ್ನು ಹೊಂದಲು ಅವಕಾಶವನ್ನು ಎಲ್ಲ ಬೋಧಕರಿಗೂ ಕಲ್ಪಿಸಿದೆ. ಪ್ರಾಧ್ಯಾಪಕ ಪದವಿಯು ಶಿಕ್ಷಣ ಮಹಾವಿದ್ಯಾಲಯಗಳಲ್ಲಿ ಅತ್ಯಂತ ಉನ್ನತ ಗೌರವಾನ್ವಿತ ಪದವಿ. ವಿಶ್ವವಿದ್ಯಾಲಯದ ಮಾದರಿಯಲ್ಲಿ ಸಮಾನ ವೇತನ ಶ್ರೇಣಿಗಳನ್ನು ಸೃಷ್ಟಿಸಲಾಗಿದೆ. ಪ್ರಾಧ್ಯಾಪಕ ಹುದ್ದೆಯು ಶೈಕ್ಷಣಿಕ ಶ್ರೇಷ್ಠತೆ ಹೊಂದಿದ್ದರೆ, ಪ್ರಾಂಶುಪಾಲರ ಹುದ್ದೆ ಆಡಳಿತಾತ್ಮಕವಾಗಿದೆ.

ಸರ್ಕಾರಿ ಪ್ರಾಧ್ಯಾಪಕರು ಯುಜಿಸಿ ನಿಯಮವನ್ನು ತಮಗೆ ಬೇಕಾದಂತೆ ಅನ್ವಯ ಮಾಡಿಕೊಳ್ಳುವುದನ್ನು ಮೊದಲು ನಿಲ್ಲಿಸಬೇಕು. ತಮ್ಮ ವೇತನ 'ಯುಜಿಸಿ ಸ್ಕೇಲ್'ನಂತೆ ಇರಬೇಕು ಎಂದು ಬಯಸುವ ಸರ್ಕಾರಿ ಕಾಲೇಜಿನ ಅಧ್ಯಾಪಕರು, ರಜೆ ಇನ್ನಿತರ ಸೌಲಭ್ಯಗಳನ್ನು ಹಾಗೆಯೇ ಬಳಸಿಕೊಳ್ಳುವುದಿಲ್ಲವೇ? ಖಾಸಗಿ ಕಾಲೇಜುಗಳಲ್ಲಿ ವೇತನವೂ ಕಡಿಮೆ, ಕೆಲಸವೂ ಹೆಚ್ಚು, ರಜೆಯ ಸೌಲಭ್ಯಗಳೂ ಸರಿಯಾಗಿ ಇರುವುದಿಲ್ಲ. ಕಾಲೇಜಿನ ಆಡಳಿತ ಮಂಡಳಿಯ ಮರ್ಜಿಯಂತೆ ಕೆಲಸದ ಒತ್ತಡಕ್ಕೆ ಒಳಗಾಗುವ ಖಾಸಗಿ ಅಧ್ಯಾಪಕರ ಕಷ್ಟದ ಅರಿವು ಸರ್ಕಾರಿ ಕಾಲೇಜಿನ ಪ್ರಾಧ್ಯಾಪಕರಿಗಿಲ್ಲ. ಖಾಸಗಿ ಕಾಲೇಜಿನಲ್ಲಿ ಸಹಾಯಕ ಪ್ರಾಧ್ಯಾಪಕರಾಗಿಯೇ 20-25 ವರ್ಷ ಕಾರ್ಯ ನಿರ್ವಹಿಸಿದ ಪ್ರತಿಭಾವಂತರಿಗೆ, ಪ್ರಾಂಶುಪಾಲರಾಗಲು ಇದೊಂದು ಅವಕಾಶ. ವಯೋಮಿತಿಯ ಅಡ್ಡಿಯೂ ಇಲ್ಲದಿರುವುದರಿಂದ ಅನೇಕ ಪ್ರತಿಭಾವಂತರು ತಮ್ಮ ಕನಸು ನನಸಾಗುವುದನ್ನು ಕಾಯುತ್ತಿದ್ದಾರೆ.

ಇಲ್ಲಿ ಸರ್ಕಾರಿ, ಖಾಸಗಿ ಪ್ರಶ್ನೆಯೇ ಬರುವುದಿಲ್ಲ. ಅರ್ಹತೆಯುಳ್ಳ ಅಭ್ಯರ್ಥಿಗಳು ಮಾತ್ರ ಪರೀಕ್ಷೆಯಲ್ಲಿ ಉತ್ತಮ ರ್‍ಯಾಂಕ್ ಪಡೆದು ಪ್ರಾಂಶುಪಾಲರಾಗುತ್ತಾರೆ. ಪ್ರತಿಭೆಗೆ ಖಾಸಗಿ, ಸರ್ಕಾರಿ ಎನ್ನುವ ಅಳತೆಗೋಲೇ ಸರಿಯಲ್ಲ. ವಿದ್ಯಾರ್ಥಿಗಳ ಹಿತದೃಷ್ಟಿಯಷ್ಟೇ ಮುಖ್ಯವಾಗಬೇಕು. ಇದು ಸರ್ಕಾರಿ ಕಾಲೇಜುಗಳಿಗೆ ಸೇರುತ್ತಿರುವ ಬಡ, ಗ್ರಾಮೀಣ ಮಕ್ಕಳ ವಿದ್ಯಾಭ್ಯಾಸಕ್ಕೆ ಸೇತುವಾಗಬೇಕು. ಸರ್ಕಾರ ಈ ದಿಸೆಯಲ್ಲಿ ದಿಟ್ಟ ಹೆಜ್ಜೆ ಇಟ್ಟಿರುವುದನ್ನು ಪ್ರತಿಭಟಿಸಿ ಅಡ್ಡಗಾಲು ಹಾಕುವುದನ್ನು ತಕ್ಷಣ ನಿಲ್ಲಿಸಬೇಕು. ಶಬರಿಯಂತೆ ಕಾಯುತ್ತಿರುವ ಅರ್ಹರಿಗೆ ಈ ಹುದ್ದೆಗಳು ದಕ್ಕುವಂತಾಗಿ ಸರ್ಕಾರಿ ಕಾಲೇಜುಗಳು ಸರ್ಕಾರಕ್ಕೆ ಕೀರ್ತಿ ತರುವಂತಾಗಬೇಕು.

ಈಗ ವಿಶ್ವವಿದ್ಯಾಲಯಗಳಿಗೆ ನೇಮಕಗೊಳ್ಳುವ ಕುಲಪತಿಗಳು ತಮ್ಮ ನಾಲ್ಕು ವರ್ಷದ ಅವಧಿಯನ್ನು ಮುಗಿಸಿ ಹೊರ ಹೋಗುವುದಿಲ್ಲವೇ? ಹಾಗೇ ಯುಜಿಸಿ ನಿಯಮ ನಿಗದಿಗೊಳಿಸಿರುವ ಐದು ವರ್ಷಗಳ ಅವಧಿಗೆ ನೇಮಕವಾಗುವ ಪ್ರಾಂಶುಪಾಲರು ತಮ್ಮ ದಕ್ಷತೆ ತೋರಿದಲ್ಲಿ ಅವಧಿ ವಿಸ್ತರಿಸಲು ನಿಯಮಗಳಲ್ಲೇ ಅವಕಾಶವಿರುವುದನ್ನು ಉನ್ನತ ಶಿಕ್ಷಣ ಸಚಿವರೂ ಖಚಿತಪಡಿಸಿದ್ದಾರೆ.

ಈಗಾಗಲೇ ಅನೇಕ ದಿವ್ಯಗಳನ್ನು ದಾಟಿ ಪರೀಕ್ಷೆ ನಡೆದು, ರ್‍ಯಾಂಕಿಂಗ್ ಪಟ್ಟಿ ಬಿಡುಗಡೆಯಾಗಿದೆ. ಯಾರು ಅರ್ಹತೆಯ ಪಟ್ಟಿಯಲ್ಲಿ ಆಯ್ಕೆಯಾಗಿಲ್ಲವೋ ಅವರು ಈ ನೇಮಕಾತಿ ಪ್ರಕ್ರಿಯೆಯನ್ನು ಕೈಬಿಡಬೇಕು ಎಂದು ಆಕ್ಷೇಪಣೆ ಎತ್ತಿದ್ದಾರೆ. ಕೆಲವರು ಯೋಗ್ಯವಲ್ಲದವರು ಅರ್ಹತೆ ಗಳಿಸಿದ್ದಾರೆ ಎಂದು ಕೂಗುತ್ತಿದ್ದಾರೆ. ಅರ್ಹತೆಯ ಪಟ್ಟಿಯಲ್ಲಿರುವ ಅಭ್ಯರ್ಥಿಗಳ ಶೈಕ್ಷಣಿಕ ಹಾಗೂ ಸೇವಾ ದಾಖಲೆಗಳನ್ನೇ ಪರಿಶೀಲಿಸದೆ ಅವರು ಅರ್ಹರಲ್ಲ ಎಂದು ವಿರೋಧಿಸುವುದು ಸರಿಯಲ್ಲ. ಯುಜಿಸಿಯ ಮಾನದಂಡಕ್ಕೆ ಅನುಗುಣವಾಗಿಯೇ ಸರ್ಕಾರ ಪರೀಕ್ಷೆ ನಡೆಸಿದೆ. ಆಯ್ಕೆಯಾದ ಅಭ್ಯರ್ಥಿಯ ದಾಖಲೆ ಪರಿಶೀಲಿಸಿದ ಮೇಲೆ ಅವರನ್ನು ಅರ್ಹರೋ ಅನರ್ಹರೋ ಎಂದು ಹೇಳಬೇಕಲ್ಲವೇ? ನೇಮಕಾತಿ ಪ್ರಕ್ರಿಯೆ ಅಂತಿಮ ಹಂತ ತಲುಪಿರುವ ಈ ಸಂದರ್ಭದಲ್ಲಿ ಹುದ್ದೆ ಸಿಗುವುದಿಲ್ಲ ಎಂದು ಮನಗಂಡ ಕೆಲವರು ಮಾಡುತ್ತಿರುವ ಆಕ್ಷೇಪಗಳಿವು. ಬಹುತೇಕ ಸರ್ಕಾರಿ ಕಾಲೇಜಿನ ಪ್ರಾಧ್ಯಾಪಕರು ಈ ನೇಮಕಾತಿ ಪ್ರಕ್ರಿಯೆಯ ಪರವಾಗಿದ್ದಾರೆ. ರ್‍ಯಾಂಕಿನ ಪಟ್ಟಿಯಲ್ಲಿಲ್ಲದ ಕೆಲವರು ಮಾತ್ರ ಈ ಹಂತದಲ್ಲಿ ಆಕ್ಷೇಪಿಸುತ್ತಿದ್ದಾರೆ ಎಂಬುದು ಸ್ಪಷ್ಟವಾಗಿ ಗೋಚರಿಸುತ್ತಿದೆ.

ಇಷ್ಟು ವರ್ಷಗಳಿಂದ ನನೆಗುದಿಗೆ ಬಿದ್ದಿದ್ದ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಪ್ರಾಂಶುಪಾಲರ ನೇರ ನೇಮಕಾತಿ ಹುದ್ದೆಗೆ ಈಗಾಗಲೇ ಸ್ಪರ್ಧಾತ್ಮಕ ಪರೀಕ್ಷೆ ನಡೆದಿದ್ದು, ಅದಕ್ಕಾಗಿ ಅರ್ಹ ಅಭ್ಯರ್ಥಿಗಳು ₹5,000 ಶುಲ್ಕವನ್ನು ಭರಿಸಿದ್ದಾರೆ. ಜೊತೆಗೆ ಪರೀಕ್ಷೆಗಾಗಿ ಕಷ್ಟಪಟ್ಟು ತಯಾರಿ ನಡೆಸಿದ್ದಾರೆ. ಪರೀಕ್ಷೆ ಮುಂದೂಡಿದಾಗಲೂ ತಾಳ್ಮೆ ವಹಿಸಿ ಕಾದಿದ್ದಾರೆ. ಅನೇಕ ಆಕ್ಷೇಪಣೆಗಳಿಗೆ ಅವಕಾಶ ನೀಡಿರುವ ರಾಜ್ಯ ಸರ್ಕಾರ ಯುಜಿಸಿ ನಿಯಮದ ಪ್ರಕಾರವೇ ಪರೀಕ್ಷೆ ನಡೆಸಿದೆ.

ಉನ್ನತ ಶಿಕ್ಷಣದಲ್ಲಿ ಬದಲಾವಣೆಗಳನ್ನು ತಂದು ಕಾಲೇಜು ಶಿಕ್ಷಣದ ಆಡಳಿತದಲ್ಲಿ ದಕ್ಷತೆ, ಕಾರ್ಯಕ್ಷಮತೆ ಮತ್ತು ಉತ್ತಮ ಆಡಳಿತ ನಿರ್ವಹಿಸಲು ಸಮರ್ಥರನ್ನು ಆಯ್ಕೆ ಮಾಡಲು ಸ್ಪರ್ಧಾತ್ಮಕ ಪರೀಕ್ಷೆ ನಡೆಸಿ ನೇರ ನೇಮಕಾತಿ ಮೂಲಕ ಅರ್ಹರನ್ನು ಮಾಡಲು ತೀರ್ಮಾನಿಸಿರುವುದು ಸರಿಯಾಗಿದೆ. ಹಾಗಾಗಿ, ನೇಮಕಾತಿ ಪ್ರಕ್ರಿಯೆ ತಡೆಹಿಡಿಯದೆ ಶೀಘ್ರ ಕಾನೂನು ಸಲಹೆ ಪಡೆದು, ಅರ್ಹ ಅಭ್ಯರ್ಥಿಗಳಿಗೆ ತ್ವರಿತವಾಗಿ ನೇಮಕಾತಿ ಆದೇಶ ನೀಡಲಿ.

ಲೇಖಕಿ: ಬೆಂಗಳೂರಿನ ರಾಣಿ ಸರಳಾದೇವಿ ಕಾಲೇಜಿನ ನಿಕಟಪೂರ್ವ ಪ್ರಾಂಶುಪಾಲರು

ಸೆಟ್ಟೇರಿದ ಪೃಥ್ವಿಯ 'ಚೌಕಿದಾರ್'

ಪೃಥ್ವಿ, ಧನ್ಯ

'ದಿಯಾ' ಖ್ಯಾತಿಯ ಪೃಥ್ವಿ ಅಂಬಾರ್, ಧನ್ಯ ರಾಮ್‌ಕುಮಾರ್ ನಟನೆಯ 'ಚೌಕಿದಾರ್' ಸಿನಿಮಾದ ಮುಹೂರ್ತ ಇತ್ತೀಚೆಗೆ ನಡೆಯಿತು. 'ರಥಾವರ' ಖ್ಯಾತಿಯ ಚಂದ್ರಶೇಖರ್ ಬಂಡಿಯಪ್ಪ ನಿರ್ದೇಶಿಸುತ್ತಿರುವ ಹೊಸ ಚಿತ್ರ ಇದಾಗಿದ್ದು, ಚಿತ್ರದಲ್ಲಿ 'ಡೈಲಾಗ್ ಕಿಂಗ್' ಸಾಯಿಕುಮಾರ್ ಅವರೂ ನಟಿಸುತ್ತಿದ್ದಾರೆ.

ಬೆಂಗಳೂರಿನ ಬಂಡೆ ಮಹಾಕಾಳಿ ದೇಗುಲದಲ್ಲಿ ಚಿತ್ರದ ಮುಹೂರ್ತ ನಡೆಯಿತು. 'ಇದು ನನ್ನ ಆರನೇ ಸಿನಿಮಾ. ಬಹುಭಾಷೆಯಲ್ಲಿ ಸಿನಿಮಾ ಬಿಡುಗಡೆಯಾಗುತ್ತಿದೆ. ಪೃಥ್ವಿ ಅಂಬಾರ್ ಅವರನ್ನು ಬಹುತೇಕ ಸಿನಿಮಾಗಳಲ್ಲಿ ಲವರ್ ಬಾಯ್ ರೀತಿ ತೋರಿಸಿದ್ದಾರೆ. ಅವರಿಗೆ ಭಿನ್ನವಾದ ಪಾತ್ರವೊಂದನ್ನು ಹೆಣೆಯಬೇಕು ಎಂದಿತ್ತು. ಈ ನಿಟ್ಟಿನಲ್ಲಿ ಕಥೆ ಹೇಳಿದೆ. ನಿರ್ಮಾಪಕರು ಒಪ್ಪಿದರು. ಪೃಥ್ವಿ ಅವರು ತಮ್ಮ ಪಾತ್ರಕ್ಕಾಗಿ ಸಾಕಷ್ಟು ತಯಾರಿ ನಡೆಸುತ್ತಿದ್ದಾರೆ' ಎಂದರು ಚಂದ್ರಶೇಖರ್ ಬಂಡಿಯಪ್ಪ.

'ಕಥೆ ಕೇಳಿದಾಗ ನನಗೆ ಅನಿಸಿದ್ದು ಈ ಪಾತ್ರ ಮಾಡಲು ಸಾಕಷ್ಟು ಪ್ರಯತ್ನ ಬೇಕೆಂದು ತಿಳಿಯಿತು. ಸಿದ್ಧವಾಗಲು ಸಮಯಾವಕಾಶ ಕೇಳಿದ್ದೆ. ನಿರ್ದೇಶಕರು ಸಮಯ ನೀಡಿದ್ದರು. ಚಿತ್ರದಲ್ಲಿ ಕೌಟುಂಬಿಕ ಅಂಶಗಳ ಜೊತೆಗೆ ಹಲವು ವಿಷಯಗಳನ್ನು ಜೋಡಿಸಲಾಗಿದೆ' ಎನ್ನುತ್ತಾರೆ ಪೃಥ್ವಿ ಅಂಬಾರ್.

ಸಿನಿ ಬಿಟ್ಸ್

ನಟನಾಗಿ 50 ವರ್ಷ: 'ಮುಂದಿನ ವರ್ಷ ನಟನಾಗಿ 50 ವರ್ಷ ಪೂರ್ಣಗೊಳ್ಳುತ್ತದೆ. ಕನ್ನಡ ಸಿನಿ ಪಯಣಕ್ಕೂ 30 ತುಂಬುತ್ತದೆ. ಪ್ರತಿ ದಿನ, ಪ್ರತಿ ಸಿನಿಮಾದ ಪಾತ್ರವೂ ಸವಾಲಿನದ್ದೇ. ಈಗ ಹದಿನೈದು ಸಿನಿಮಾದಲ್ಲಿ ನಟಿಸುತ್ತಿದ್ದೇನೆ. ಚಂದ್ರಶೇಖರ್ ಕಥೆಯನ್ನು ಅಚ್ಚುಕಟ್ಟಾಗಿ ಹೆಣೆದಿದ್ದಾರೆ. ಚೌಕಿದಾರ್ ಕಥೆ ಒಂದು ಭಾವನಾತ್ಮಕ ಪಯಣ' ಎಂದರು ಸಾಯಿಕುಮಾರ್. ವಿದ್ಯಾಶೇಖರ್ ಎಂಟರ್‌ಟೇನ್ಮೆಂಟ್ ಬ್ಯಾನರ್ ಅಡಿಯಲ್ಲಿ ಕಲ್ಲಹಳ್ಳಿ ಚಂದ್ರಶೇಖರ್ 'ಚೌಕಿದಾರ್' ಸಿನಿಮಾ ನಿರ್ಮಾಣ ಮಾಡುತ್ತಿದ್ದಾರೆ.

ಸಿನಿ–ಮಿನಿ ಕನ್ನಡ ಕಿರುಚಿತ್ರ ಸ್ಪರ್ಧೆ

ನಾಗತಿಹಳ್ಳಿ ಚಂದ್ರಶೇಖರ್ ಅವರ ಟೆಂಟ್ ಸಿನಿಮಾ ಹಾಗೂ ಸತ್ಯ ಹೆಗಡೆ ಸ್ಟುಡಿಯೋಸ್ ಜಂಟಿಯಾಗಿ 'ಸಿನಿ ಮಿನಿ' ಎಂಬ ಕನ್ನಡ ಕಿರುಚಿತ್ರ ಸ್ಪರ್ಧೆಯನ್ನು ಆಯೋಜಿಸಿದೆ.

ಕಿರುಚಿತ್ರಗಳು 20 ನಿಮಿಷಗಳ ಒಳಗಿನ ಅವಧಿಯದ್ದಾಗಿರಬೇಕು ಹಾಗೂ ಕಿರುಚಿತ್ರಗಳನ್ನು ಸಲ್ಲಿಸಲು ಆಗಸ್ಟ್ 15 ಕೊನೆಯ ದಿನಾಂಕ. 'ಕಿರುಚಿತ್ರಗಳು ಕನ್ನಡದಲ್ಲೇ ಇರಬೇಕು. ಸಾಕ್ಷ್ಯಚಿತ್ರಗಳಿಗೆ ಸ್ಪರ್ಧೆಯಲ್ಲಿ ಅವಕಾಶವಿಲ್ಲ. ಡಿಜಿಟಲ್ ಆ್ಯನಿಮೇಷನ್ ಚಿತ್ರಗಳನ್ನು ಸ್ಪರ್ಧೆಗೆ ಕಳುಹಿಸಬಹುದು. ಸ್ಪರ್ಧಿಗಳು ಒಂದಕ್ಕಿಂತ ಹೆಚ್ಚು ಕಿರುಚಿತ್ರಗಳನ್ನು ಸ್ಪರ್ಧೆಗೆ ಕಳುಹಿಸಬಹುದು. 2023 ಜನವರಿ 1ರ ಮೊದಲು ಚಿತ್ರೀಕರಣ ಪೂರ್ಣಗೊಂಡ ಸಿನಿಮಾಗಳಿಗೆ ಅವಕಾಶವಿಲ್ಲ. ₹1000 ಪ್ರವೇಶ ಶುಲ್ಕವಿದೆ' ಎಂದು ಆಯೋಜಕರು ತಿಳಿಸಿದ್ದಾರೆ. ಒಟ್ಟು 9 ವಿಭಾಗಗಳಲ್ಲಿ ಪ್ರಶಸ್ತಿಗಳು ಇರಲಿದ್ದು, ಹೆಚ್ಚಿನ ಮಾಹಿತಿಗೆ 99005 55255 ಅಥವಾ 7795901860 ಸಂಖ್ಯೆಗಳನ್ನು ಸಂಪರ್ಕಿಸಿ. https://tentcinema.com/application-for-cini-mini/ ಭೇಟಿ ನೀಡಿ.

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಪದಬಂಧ 5740

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1. ಆ ಮನೆ ಮುಂದಿರುವ ಗಜ (2)
3. ಈತ ಸಂದೇಶವಾಹಕ (4)
5. ಗಂಡು ವ್ಯಕ್ತಿಯನ್ನು ಹೀಗೆನ್ನುವರು (3)
7. ಹಜಾರ ಇಲ್ಲಿ ಕಾಣುತ್ತಿದೆ (4)
9. ಬೈಯ್ಯಲು ಸೂಕ್ತವಾದ ವಿಸ್ತಾರವಾದ ಜಾಗ (3)
10. ಸರದ ಬಳಿಯಿರುವ ಕಬ್ಬಿಣದ ಸಲಾಕೆ (3)
11. ಸೂರ್ಯನ ಇನ್ನೊಂದು ಹೆಸರು (4)
13. ನಡುಕ ಇಲ್ಲಿ ಕಾಣುತ್ತಿದೆ (3)
15. ಅನಿರೀಕ್ಷಿತ ಘಟನೆಯಿದು (4)
16. ಅನುಗ್ರಹದಲ್ಲಿರುವ ಆಕಾಶಚರ ಕಾಣುತ್ತಿದೆಯೇ? (2)

ಮೇಲಿಂದ ಕೆಳಕ್ಕೆ

2. ಒನಪು ತೋರಿದಾಗ ಬಂದಿರುವ ಸ್ಮರಣೆ (3)
3. ಹರ್ಷವಿಲ್ಲಿವಿರಳವಾಗಿ ಬಂದಿದೆ (3)
4. ಕಾಡು ಇಲ್ಲಿದೆ (3)
6. ಮಾಲು ತರುವಾಗ ತಲೆಗೆ ಸುತ್ತಿಕೊಂಡಿರುವ ಬಟ್ಟೆ (3)
8. ಬೆರಳು ತೋರಿಸಿದವಳ ಛಾಯೆ ಇಲ್ಲಿ ಬಿದ್ದಿದೆ (3)
9. ಜೈನರ ದೇವಾಲಯ (3)
10. ಹತ್ತಿರಕ್ಕೊಂದು ಪರ್ಯಾಯ ಪದ (3)
12. ಕಾಪಾಡುವವ ಇಲ್ಲಿದ್ದಾನೆ (3)
13. ಕೋಟೆಯ ಸುತ್ತಲಿರುವ ಅಗಳು (3)
14. ಉಗುರಿನ ತುದಿ (3)



5739ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
2.ಅವಕಾಶ 5.ವಿಕೋಪ
6.ವಸ್ತುಸ್ಥಿತಿ 7.ಬಹುಮಾನ
8.ತಪ್ಪಲೆ 9.ಸರಸ್ವತಿ
12.ವನಚರ 14.ಹತ್ತಿರ
15.ಮಹಾರಾಣಿ

ಮೇಲಿಂದ ಕೆಳಕ್ಕೆ:
1.ಅವಿಭಾಜ್ಯ 2.ಅಪವ್ಯಯ
3.ಶವ 4.ಮತಿಹೀನ
7.ಬಲೆ 8.ತತ
9.ಸದ್ಭಾವನೆ 10.ಹಣಾಹಣಿ
11.ಮನೋರಥ 13.ರಮ

ಸುಡೊಕು 6125

9		5		8		4		
			7		5			9
7		1		6		2		
							3	2
3	6		5		7	8		
		8					4	7
		7		5		1		3
5			9		8			
2		3				9		5

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6124 ಸುಡೊಕು

6	4	1	8	5	9	7	3	2
2	9	3	6	4	7	5	8	1
8	5	7	1	3	2	6	4	9
3	6	5	2	1	4	8	9	7
7	2	9	5	8	3	4	1	6
1	8	4	7	9	6	3	2	5
9	7	8	3	6	1	2	5	4
5	1	6	4	2	8	9	7	3
4	3	2	9	7	5	1	6	8

ಗುಂಡಣ್ಣ

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಶನಿವಾರ ಜುಲೈ 13, 2024

ಶ್ರೀ ಕ್ರೋಧಿ ನಾಮ ಸಂವತ್ಸರ ಉತ್ತರಾಯಣ ಗ್ರೀಷ್ಮ ಋತು ತಿಥಿ: ಆಷಾಢ ಶುಕ್ಲ ಸಪ್ತಮಿ ಗಂ. 15-06 **ನಕ್ಷತ್ರ:** ಹಸ್ತ ಗಂ. 19-15 **ಯೋಗ:** ಶಿವ ಅಹೋರಾತ್ರ **ಕರಣ:** ವಣಿಜ ಗಂ. 15-06, ಮಿಥುನ ಮಾಸದ 28 ನೇ ದಿನ, ಮಳೆನಕ್ಷತ್ರ: ಪುನರ್ವಸು 3.
ರಾಹುಕಾಲ : ಬೆಳಿಗ್ಗೆ 09-00 – 10-30
ಸೂರ್ಯೋದಯ : 06-15 **ಸೂರ್ಯಾಸ್ತ :** 06-58
ಮುಸ್ಲಿಂ ದಿನಾಂಕ : 06 ಮೊಹರಮ್
ಅದೃಷ್ಟ ಸಂಖ್ಯೆ : 11, 7

ಮೇಷ: ನಿಮ್ಮನ್ನು ನೀವೇ ವಿಮರ್ಶಿಸಿಕೊಳ್ಳಿ ನಿಮ್ಮ ನಡುವಳಿಕೆಯ ತಪ್ಪುಗಳು ನಿಮಗೇ ಅರಿವಾಗುವುದು. ಬರುವ ಸಂಬಂಧಿಗಳು ನಿಮ್ಮ ಆದರಾತಿಥ್ಯದಿಂದ ಸಂತುಷ್ಟರಾಗುವರು. ಖರ್ಚುವೆಚ್ಚಗಳನ್ನು ಸರಿಯಾದ ಲೆಕ್ಕಾಚಾರ ನಡೆಸಿ.

ವೃಷಭ: ತಾಂತ್ರಿಕ ವಿದ್ಯಾರ್ಥಿಗಳು ನಿಮ್ಮ ವಿನೂತನವಾದ ಯೋಜನೆಯನ್ನು ಮಂಡಿಸುವಲ್ಲಿ ಯಶಸ್ವಿಯಾಗುವಿರಿ. ಬಹಳ ಕಷ್ಟದಿಂದ ಸಂಪಾದನೆ ಮಾಡಿದ ಹಣದ ಸರಿಯಾದ ವಿನಿಯೋಗಕ್ಕಾಗಿ ಬಹಳವಾಗಿ ಯೋಚಿಸುವಿರಿ.

ಮಿಥುನ: ಜೀವನದಲ್ಲಿ ಸೋಮಾರಿತನವನ್ನು ಜೊತೆಯಲ್ಲಿ ಅಹಂಕಾರವನ್ನು ದೂರ ಮಾಡಿದರೆ, ಯೋಗ್ಯತೆಗೆ ಮೀರಿದ ಕೆಲಸಕಾರ್ಯಗಳಿಗೆ ಕೈಹಾಕಿದರೂ ಸಮಸ್ಯೆ ಆಗುದಿಲ್ಲ. ಮನೆಯಲ್ಲಿ ಮಂಗಳ ಕಾರ್ಯಗಳಿಗೆ ಸಿದ್ಧತೆ ನಡೆಯಲಿದೆ.

ಕರ್ಕಾಟಕ: ಹಿರಿಯರ ಜೀವನಾನುಭವ ಸಲಹೆಗಳನ್ನು ಕೇಳಿ ತಿಳಿದುಕೊಂಡು ನಿಮ್ಮ ಜೀವನದಲ್ಲಿ ಅಳವಡಿಸಿಕೊಳ್ಳುವ ಪ್ರಯತ್ನ ನಡೆಸಿಕೊಳ್ಳಿರಿ. ನಿಮ್ಮಲ್ಲಿರುವ ಪಾರಮಾರ್ಥಿಕತೆಯಿಂದಾಗಿ ದೇವರ ರಕ್ಷಣೆ ಸದಾಕಾಲ ದೊರೆಯುವುದು.

ಸಿಂಹ: ತಂದೆಯಾಗುವ ಸುದ್ದಿ ಕೇಳಿ ಸಂತೋಷವನ್ನು ಎಲ್ಲರೊಂದಿಗೆ ಹಂಚಿಕೊಳ್ಳುವಂತಾಗುವುದು. ಕಾರ್ಯ ಸಾಧನೆಗೆ ಅಧಿಕ ತಿರುಗಾಟ, ಗಣ್ಯರ ಭೇಟಿ ಅನಿವಾರ್ಯವಾಗಲಿದೆ. ಮಗಳ ಮದುವೆ ಬಗ್ಗೆ ಯೋಚಿಸುವಿರಿ.

ಕನ್ಯಾ: ಒಳಗೊಳಗೆ ಅಸೂಯೆ ಪಡುವ ಸಂಬಂಧಿಗಳು ನಿಮ್ಮ ಸಾಧನೆಗೆ ಅಡ್ಡಿ ತಂದಾರು. ಯಾವುದೇ ವಿಷಯವನ್ನಾಗಲಿ ಅಧಿಕಾರಿಗಳಿಂದ ಒಂದಕ್ಕಿಂತ ಹೆಚ್ಚು ಬಾರಿ ಹೇಳಿಸಿಕೊಳ್ಳಬೇಡಿ. ವಾತಕ್ಕೆ ಔಷಧಿ ತೆಗೆದುಕೊಳ್ಳಿರಿ.

ತುಲಾ: ಪತ್ರಿಕಾ ವರದಿಗಾರರಿಗೆ ಈ ದಿನವು ಬಹಳ ವಿಶೇಷ ದಿನವಾಗಿ ಸದಾಕಾಲ ನೆನಪಿರುವಂತೆ ಆಗಬಹುದು. ಅನಾವಶ್ಯಕವಾಗಿ ಸಹೋದರರ ಜೊತೆ ವಾದಿಸಬೇಡಿ. ಪರಿಸ್ಥಿತಿಗೆ ಹೊಂದಿಕೊಳ್ಳುವ ಸ್ವಭಾವವು ನಿಮ್ಮಲ್ಲಿದೆ.

ವೃಶ್ಚಿಕ: ನಿಮ್ಮ ಬಗ್ಗೆ ಕಾಳಜಿ ಹೊಂದಿದವರ ಸಲಹೆಗಳಿಂದ ಅನುಕೂಲವಾಗುವುದು. ಸಮಯ ಪ್ರಜ್ಞೆಯಿಂದ ಕಾರ್ಯ ನಿರ್ವಹಿಸಿ, ಗೆಲುವು ನಿಮ್ಮದಾಗುವುದು. ಅಧಿಕಾರಕ್ಕಾಗಿ ಹೆಚ್ಚಿನ ಓಡಾಟ ನಡೆಸುವಿರಿ.

ಧನು: ಕರ್ತವ್ಯ ಕೊರತೆಯಿಂದಾಗಿ ಜೀವನದಲ್ಲಿ ಉಲ್ಲಾಸವನ್ನು ಕಳೆದುಕೊಳ್ಳುವ ಸಮಯ ಎದುರಾಗಲಿದೆ. ರಾಜಕೀಯ ಭವಿಷ್ಯದಲ್ಲಿ ಉತ್ತಮವಾದ ಅವಕಾಶ ಸಿಕ್ಕಿದರೂ, ಕಾದು ನೋಡುವ ಪ್ರವೃತ್ತಿ ಉತ್ತಮ.

ಮಕರ: ಮಕ್ಕಳು ಜೀವನದಲ್ಲಿ ಒಂದು ಹಂತವನ್ನು ತಲುಪಿರುವುದನ್ನು ಯೋಚಿಸಿಕೊಂಡು ಸಂತಸ ಪಡುವಂತಾಗುವುದು. ಸಾಂಕ್ರಾಮಿಕ ರೋಗಗಳಿಂದ ಅಧ್ಯಯನ, ಅಧ್ಯಾಪನಕ್ಕೆ ತೊಂದರೆಯಾಗಬಹುದು.

ಕುಂಭ: ಇದುವರೆಗೆ ನೀವು ಮಾಡಿ ಮುಗಿಸಬೇಕೆಂದು ಆಲೋಚಿಸಿದ್ದ ಮನೆಯ ಕೆಲಸಗಳನ್ನೆಲ್ಲಾ ಈ ದಿನ ಪೂರ್ಣಗೊಳಿಸುವಿರಿ. ಹಲವಾರು ಅವಕಾಶಗಳು ನಿಮಗೆ ಎದುರಾಗುವುದರಿಂದ ಗೊಂದಲಕ್ಕೆ ಈಡಾಗುವಿರಿ.

ಮೀನ: ಸಾಹಸಿ ಕಾರ್ಯವನ್ನು ಮಾಡುವ ಮನಸ್ಥಿತಿ ಹೊಂದಿದವರಿಗೆ ದಾಖಲೆಯನ್ನು ಸೃಷ್ಟಿಸುವ ಅವಕಾಶ ಸಿಗುವುದು. ಈ ದಿನವು ನಿಮಗೆ ವೈಯಕ್ತಿಕ ಅಭಿವೃದ್ಧಿಗೂ ಸಾಮಾಜಿಕ ಏಳಿಗೆಗೂ ಅನುಕೂಲ ಮಾಡಲಿದೆ.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

DS-MAX PROPERTIES

EXPERIENCE THE JOY OF LIVING

www.dsmaxproperties.com

DR. K V SATISH, CHAIRMAN

DS MAX®
ISO 9001:2015 COMPANY

Admired by All Owned by You!

Architectural Excellence | Superior Locations
Outstanding Conveniences | Best-in-Class Amenities
Excellent Connectivity | Lifetime Support and Assurance

AS YOUR TRUSTED BUILDER
We Assure You A Living Experience That Surpasses Your Expectations.

ಡಿಎಸ್ ಮ್ಯಾಕ್ಸ್

2, 3 & 4-BHK APARTMENTS FOR SALE IN VARIOUS LOCATIONS

PRM/KA/RERA/1251/310/PR/150223/005721 MYSORE ROAD NR. R R DENTAL COLLEGE ₹ 49.63 - 79.66 Lakhs* 8088 445 445	PRM/KA/RERA/1251/308/PR/201201/003733 ELECTRONIC CITY HOSA ROAD JUNCTION ₹ 54.10 L - 1.15 Cr* 9164 045 000	PRM/KA/RERA/1251/308/PR/280222/004739 CHANDAPURA 10 MINS. BOMMASANDRA METRO ₹ 37.60 - 49.60 Lakhs* 8880 013 310	PRM/KA/RERA/1251/309/PR/211209/004576 YELAHANKA NEAR RAJANAKUNTE TOLL ₹ 37.52 - 88.58 Lakhs* 8880 758 758
PRM/KA/RERA/1250/304/PR/150224/006622 WHITEFIELD 15 MINS. HOPEFARM METRO ₹ 50.71 L - 89.76 Cr* 8088 773 773	PRM/KA/RERA/1251/309/PR/060923/006244 TUMKUR ROAD NEAR HIMALAYA FACTORY ₹ 41.89 - 59.72 Lakhs* 8880 465 465	PRM/KA/RERA/1251/310/PR/151223/006489 UTTARAHALLI OPP. NPS SCHOOL ₹ 77.77 L - 1.74 Cr.* 8050 161 222	PRM/KA/RERA/1251/309/PR/030524/006841 HENNUR ROAD 5 MINS. HENNUR DECATHLON ₹ 53.40 L - 1.04 Cr* 8880 003 003
PRM/KA/RERA/1251/310/PR/210324/006724 BEGUR NR. SINGASANDRA METRO ₹ 71.36 L - 1.16 Cr* 8880 472 472	PRM/KA/RERA/1251/308/PR/290122/004660 SARJAPURA SARJAPUR - ATTIBELE ROAD ₹ 38.72 - 44.12 Lakhs* 9164 122 000	PRM/KA/RERA/1251/446/PR/210312/004002 K R PURAM NEAR GARDEN CITY UNIVERSITY ₹ 68.94 - 87.72 Lakhs* 8880 438 000	PRM/KA/RERA/1251/309/PR/220223/005748 THANISANDRA 10 MINS. MANYATA TECH PARK ₹ 59.56 - 86.79 Lakhs* 8880 461 461

*T & C Apply

FACILITY MANAGEMENT SERVICES

For Apartments & Commercial Complexes
MEP | Security Services | Gardening | Landscaping
STP | WTP | RO Maintenance | Housekeeping
Swimming Pool Maintenance

CALL : 9164 022 000

ELEGANT INTERIORS



Directly From Our Factory
Modular Kitchens | TV Units | Wardrobes
Painting & Wallpapers | Storage Units
False Ceilings | Furniture

CALL : 9164 056 000

REFER & EARN

Refer Us To Your Friends & Relatives
And Get Handsomely Rewarded
2, 3 & 4-BHK Homes | Full / Partial Interiors
Facility Management Services
(For Apartment & Commercial Complexes) *T & C Apply

CALL : 9164 043 000

REFER & EARN

Refer Us To A Landowner For
JV / Outright Purchase In Any Part Of
Bengaluru And Get A 2-BHK
ABSOLUTELY FREE*
Residential Land | Commercial Land
*T & C Apply

CALL : 8880 463 463

Disclaimer: Information provided in this advertisement is for reference only, and all data is sourced internally. The images, illustrations, and artist's impressions used in this advertisement are for representational purposes only. The prices mentioned are indicative and base prices. Any offers, discounts, or incentives mentioned in this advertisement are subject to specific terms and conditions. All taxes, registration charges, stamp duty, and any other statutory payments are applicable as per government regulations. All directions, locations, and landmarks are approximate. Please use reliable resources for accurate travel times. Mentioning a specific product, process, or service does not imply endorsement. Please contact our Sales Team for detailed information about specific projects, pricing, availability, and other inquiries. DS-MAX Properties ensures that all its projects comply with the Real Estate (Regulation and Development) Act, 2016 (RERA) and its regulations. Visit : www.rera.karnataka.gov.in

ಈ ವರ್ಷದ ಘೋಷವಾಕ್ಯ 'ಬ್ರೇಕಿಂಗ್ ಬೌಂಡರೀಸ್': ಮುಖ್ಯಮಂತ್ರಿ ಸಿದ್ದರಾಮಯ್ಯ

ನ.19ರಿಂದ ತಂತ್ರಜ್ಞಾನ ಶೃಂಗಸಭೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ತಂತ್ರಜ್ಞಾನ ಶೃಂಗಸಭೆ-27ನೇ ಆವೃತ್ತಿ ನ.19ರಿಂದ 21ರವರೆಗೆ ನಡೆಯಲಿದೆ.

ತಂತ್ರಜ್ಞಾನ ಶೃಂಗಸಭೆಯ ಸಿದ್ಧತೆಗಳ ಕುರಿತು ಶುಕ್ರವಾರ ಹಮ್ಮಿಕೊಂಡಿದ್ದ ಸಂವಾದ ಕಾರ್ಯಕ್ರಮದ ನಂತರ ಮಾಹಿತಿ ನೀಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ, ಟೆಕ್ ಶೃಂಗಸಭೆಯ ಈ ವರ್ಷದ ಘೋಷವಾಕ್ಯ 'ಬ್ರೇಕಿಂಗ್ ಬೌಂಡರೀಸ್' ಆಗಿದೆ. ಮಾಹಿತಿ ತಂತ್ರಜ್ಞಾನ ಕ್ಷೇತ್ರದಲ್ಲಿ ಹೊಸತನವನ್ನು ಹೆಚ್ಚಿಸಲು ವೈವಿಧ್ಯಮಯ ವಲಯಗಳ ನಡುವಿನ ಸಹಯೋಗದ ಪ್ರಾಮುಖ್ಯತೆಯನ್ನು ಘೋಷವಾಕ್ಯ ಒಳಗೊಂಡಿದೆ ಎಂದರು.

ಶೃಂಗಸಭೆಯಲ್ಲಿಕೈಗಾರಿಕೆಮತ್ತುವ್ಯವಹಾರಗಳನ್ನು ಮರುರೂಪಿಸುತ್ತಿರುವ ತಾಂತ್ರಿಕ ಪ್ರಗತಿಗಳು ಮತ್ತು ಪ್ರವೃತ್ತಿಗಳ ಕುರಿತು ಚರ್ಚಿಸಲಾಗುತ್ತಿದೆ. ಬೆಂಗಳೂರು ಸೇರಿದಂತೆ ರಾಜ್ಯದ ಹಲವು ಪ್ರದೇಶಗಳನ್ನು ಉದ್ಯಮಿ ಸ್ನೇಹಿಯಾಗಿ ಉಳಿಸಿಕೊಳ್ಳಲು ಸರ್ಕಾರ ಸಹಕಾರ ನೀಡಲಿದೆ ಎಂದು ಹೇಳಿದರು.

ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಸರ್ಕಾರ ಬೆಂಗಳೂರಿನ ಅಭಿವೃದ್ಧಿಗೆ ಸರ್ಕಾರ ಹಲವು ನೂತನ ಯೋಜನೆಗಳನ್ನು ಅನುಷ್ಠಾನಗೊಳಿಸುತ್ತಿದೆ. ಬೆಂಗಳೂರು ಹೊರಗೂ ಕೈಗಾರಿಕೆ, ಮಾಹಿತಿ ತಂತ್ರಜ್ಞಾನ ವಲಯದ ವಿಸ್ತರಣೆಗೆ ಕ್ರಮ ವಹಿಸಲಾಗಿದೆ. ಗ್ರಾಮೀಣ ಪ್ರದೇಶದ ಮೂಲ ಸೌಕರ್ಯಕ್ಕೆ ₹8 ಸಾವಿರ ಕೋಟಿ ಸಿಎಸ್‌ಆರ್ ನಿಧಿ ಬಳಕೆ ಮಾಡಲಾಗುತ್ತಿದೆ ಎಂದರು.

ಮಾಹಿತಿ ತಂತ್ರಜ್ಞಾನ ಸಚಿವ ಪ್ರಿಯಾಂಕ್ ಖರ್ಗೆ, ಕಿಯೋನಿಕ್ಸ್ ಅಧ್ಯಕ್ಷ ಶರತ್ ಬಚ್ಚೇಗೌಡ, ರಾಜ್ಯ ಸರ್ಕಾರದ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಎಲ್.ಕೆ. ಅತೀಕ್ ಉಪಸ್ಥಿತರಿದ್ದರು.

ಬೆಂಗಳೂರು ತಂತ್ರಜ್ಞಾನ ಶೃಂಗಸಭೆ ಸಂಬಂಧ ಆಯೋಜಿಸಲಾಗಿದ್ದ ಸಂವಾದದಲ್ಲಿ ಪಾಲ್ಗೊಂಡಿದ್ದ ಉದ್ಯಮಿಗಳ ಜತೆ ಕಿಯೋನಿಕ್ಸ್ ಅಧ್ಯಕ್ಷ ಶರತ್ ಬಚ್ಚೇಗೌಡ, ಸಚಿವ ಪ್ರಿಯಾಂಕ್ ಖರ್ಗೆ, ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್

'ವರ್ಷದ ಬೃಹತ್ ಶೃಂಗಸಭೆ'

ಈ ವರ್ಷ ನಡೆಯಲಿರುವುದು ಅತ್ಯಂತ ದೊಡ್ಡ ತಂತ್ರಜ್ಞಾನ ಶೃಂಗಸಭೆಯಾಗಿರಲಿದೆ ಎಂದು ಮಾಹಿತಿ ತಂತ್ರಜ್ಞಾನ ಸಚಿವ ಪ್ರಿಯಾಂಕ್ ಖರ್ಗೆ ಹೇಳಿದರು. 40ಕ್ಕೂ ಹೆಚ್ಚು ದೇಶಗಳ ಕಂಪನಿಗಳು ಮತ್ತು 500ಕ್ಕೂ ಅಧಿಕ ನವೋದ್ಯಮಗಳು, 700ಕ್ಕೂ ಅಧಿಕ ಮಳಿಗೆಗಳು, 50,000ಕ್ಕೂ ಹೆಚ್ಚು ಮಂದಿ ಭಾಗಿಯಾಗುವ ನಿರೀಕ್ಷೆಯಿದೆ. 85 ವಿಚಾರ ಸಂಕಿರಣದಲ್ಲಿ 460 ಸಂಪನ್ಮೂಲ ವ್ಯಕ್ತಿಗಳು ಪಾಲ್ಗೊಳ್ಳಲಿದ್ದಾರೆ ಎಂದರು.

ಬೆಂಗಳೂರಿನಾಚೆಗೂ ಉದ್ಯಮ: ಪ್ರಿಯಾಂಕ್ ಖರ್ಗೆ

'ಈ ಬಾರಿಯ ಶೃಂಗಸಭೆಯನ್ನು 'ಅಪಾರ' ಎಂಬ ಥೀಮ್‌ನೊಂದಿಗೆ ನಡೆಸಲಾಗುತ್ತಿದೆ. ಬೆಂಗಳೂರಿನ ಆಚೆಗೂ ಟೆಕ್ ಉದ್ಯಮಗಳು, ತಯಾರಿಕಾ ಉದ್ಯಮಗಳನ್ನು ಕೊಂಡೊಯ್ಯುವುದಕ್ಕೆ ಗಮನ ನೀಡಲಾಗುತ್ತಿದೆ' ಎಂದು ಪ್ರಿಯಾಂಕ್ ಖರ್ಗೆ ಹೇಳಿದರು.

ಕಲಬುರ್ಗಿ, ಹುಬ್ಬಳ್ಳಿ, ಮಂಗಳೂರು, ಬೆಳಗಾವಿಯಲ್ಲಿ ಉದ್ಯಮ ಸ್ನೇಹಿ ಪರಿಸರವಿದೆ. ಅಲ್ಲಿಯೂ ಉದ್ಯಮಗಳನ್ನು ಆರಂಭಿಸುವ ಸಾಧ್ಯತೆಗಳನ್ನು ಈ ಸಮ್ಮೇಳನದಲ್ಲಿ ಪರಿಶೀಲಿಸಲಾಗುತ್ತದೆ ಎಂದು

'ಸೆಮಿಕಂಡಕ್ಟರ್ ತಯಾರಿಕಾ ಉದ್ಯಮ ಆರಂಭಿಸಿದರೆ ಕೇಂದ್ರ ಸರ್ಕಾರವು ಶೇ 50ರಷ್ಟು ಆರ್ಥಿಕ ನೆರವು ಒದಗಿಸಲಿದೆ ಎಂದು ಮೋದಿ ಘೋಷಿಸಿದ್ದರು. ಶೇ 20ರಷ್ಟು ಸಹಾಯಧನ ಒದಗಿಸುತ್ತೇವೆ ಎಂದು ನಾವೂ ಹೇಳಿದ್ದೇವೆ. ಹೂಡಿಕೆಯ ಸ್ವರೂಪವನ್ನು ನೋಡಿಕೊಂಡು ಸಹಾಯಧನದ ಪ್ರಮಾಣವನ್ನು ಹೆಚ್ಚಿಸುವ ಸಾಧ್ಯತೆಯನ್ನೂ ಪರಿಗಣಿಸುತ್ತೇವೆ' ಎಂದು ಅವರು ಹೇಳಿದರು.

ಕಿಯೋನಿಕ್ಸ್ ಅಧ್ಯಕ್ಷ ಶರತ್ ಬಚ್ಚೇಗೌಡ ಮಾತನಾಡಿ, 'ರಾಜ್ಯದಲ್ಲಿ ಸೆಮಿಕಂಡಕ್ಟರ್ ಉದ್ಯಮಕ್ಕೆ ಉತ್ತೇಜನ ನೀಡುವ ಸಲುವಾಗಿ 50 ರಿಂದ 100 ಎಕರೆ ಪ್ರದೇಶದಲ್ಲಿ ಎಲೆಕ್ಟ್ರಾನ್–ಸೆಮಿಕಾನ್ ಪಾರ್ಕ್ ಸ್ಥಾಪಿಸುವ ಬಗ್ಗೆ ಚರ್ಚೆ ನಡೆಯುತ್ತಿದೆ. ಮೈಸೂರಿನಲ್ಲಿಯ ತಂತ್ರಜ್ಞಾನ ಕೇಂದ್ರದಂತೆಯೇ ರಾಜ್ಯದ ಬೇರೆಡೆಯೂ ತಂತ್ರಜ್ಞಾನ ಕೇಂದ್ರಗಳನ್ನು ಆರಂಭಿಸಲು ಯೋಜಿಸಲಾಗುತ್ತಿದೆ. ಮಂಗಳೂರಿನ ಬ್ಲೂಬೆರಿ ಹಿಲ್ಸ್ ಪ್ರದೇಶದಲ್ಲಿ ಕಿಯೋನಿಕ್ಸ್‌ಗೆ ಸೇರಿದ ನಿವೇಶನವಿದೆ. ಅಲ್ಲಿ ತಂತ್ರಜ್ಞಾನ ಕೇಂದ್ರ ಆರಂಭಿಸುವ ಸಂಬಂಧ ಈಗಾಗಲೇ ವಿಸ್ತೃತ ಯೋಜನಾ ವರದಿ ಸಿದ್ಧಪಡಿಸಲಾಗಿದೆ' ಎಂದು ಮಾಹಿತಿ ನೀಡಿದರು.

ಸರ್ಕಾರಿ ಬಂಡಿದಾರಿ ಒತ್ತುವರಿ ತೆರವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಹದೇವಪುರ ವಲಯ ವೈಟ್‌ಫೀಲ್ಡ್ ವಾರ್ಡ್‌ನ ಪಟ್ಟಂದೂರು ಅಗ್ರಹಾರ ಗ್ರಾಮದಲ್ಲಿ ಸುಮಾರು 503 ಚ.ಮೀ ವಿಸ್ತೀರ್ಣದ ₹5.35 ಕೋಟಿ ಮೌಲ್ಯದ ಸರ್ಕಾರಿ ಬಂಡಿದಾರಿ ಒತ್ತುವರಿಯನ್ನು ಬಿಬಿಎಂಪಿ ಸಿಬ್ಬಂದಿ ತೆರವುಗೊಳಿಸಿದ್ದಾರೆ.

ಐಟಿಪಿಎಲ್ ಮುಖ್ಯರಸ್ತೆ ಯಿಂದ ಬ್ರಿಗೇಡ್ ಟೆಕ್‌ಪಾರ್ಕ್ ರಸ್ತೆಗೆ ಪಟ್ಟಂದೂರು ಅಗ್ರಹಾರ ಗ್ರಾಮದ ಸರ್ವೆ ನಂ 134/5 ರಲ್ಲಿನ ಸರ್ಕಾರಿ ಬಂಡಿದಾರಿಯಲ್ಲಿ ವಾಹನಗಳು ಸಂಚರಿಸುತ್ತಿದ್ದವು. ಸರ್ವೆ ನಂ.134/5ರ ಮಾಲೀಕರಾದ ಬಿ.ರಾಮಚಂದ್ರ ನಾಯ್ಡು ಅವರು ರಸ್ತೆಯನ್ನು ಅತಿಕ್ರಮಿಸಿಕೊಂಡು ಕಬ್ಬಿಣದ ಬ್ಯಾರಿಕೇಡ್ ಅಳವಡಿಸಿದ್ದರು. ಸಾರ್ವಜನಿಕರು ಹಾಗೂ ಯಾವುದೇ ವಾಹನಗಳು ಸಂಚರಿಸದಂತೆ ಎರಡು ತಿಂಗಳಿಂದ ಅಡ್ಡಿಪಡಿಸಿದ್ದರು.

ಈ ರಸ್ತೆಯಲ್ಲಿಯೇ ಖಾಸಗಿ ಹೋಟೆಲ್ ನಡೆಸಲು ಜಾಗವನ್ನು ಬಾಡಿಗೆಗೆ ನೀಡಿದ್ದರು. ಬಿಬಿಎಂಪಿ ಮಹದೇವಪುರ ವಲಯದ ರಸ್ತೆ ಮೂಲಸೌಕರ್ಯ ವಿಭಾಗದ ಅಧಿಕಾರಿಗಳು, ಪೂರ್ವ ತಾಲ್ಲೂಕು ತಹಶೀಲ್ದಾರ್ ಕಚೇರಿಯ ಭೂಮಾಪಕರು, ರಾಜಸ್ವ ನಿರೀಕ್ಷಕರು ಹಾಗೂ ಸ್ಥಳೀಯ ವೈಟ್‌ಫೀಲ್ಡ್ ಠಾಣೆ ಪೊಲೀಸರ ಸಹಯೋಗದೊಂದಿಗೆ ಒತ್ತುವರಿ ಮಾಡಿಕೊಂಡಿದ್ದ ಸರ್ಕಾರಿ ಬಂಡಿದಾರಿ ಜಾಗವನ್ನು ವಶಪಡಿಸಿಕೊಳ್ಳಲಾಯಿತು. ಬಂಡಿದಾರಿಯನ್ನು ಅಭಿವೃದ್ಧಿಪಡಿಸಲು ವೆಟ್ ಮಿಕ್ಸ್ ಮಿಶ್ರಣವನ್ನು ಹಾಕಲಾಗಿದೆ ಎಂದು ಕಾರ್ಯಪಾಲಕ ಎಂಜಿನಿಯರ್ ಉದಯ್ ಚೌಗುಲೆ ತಿಳಿಸಿದ್ದಾರೆ.

ಬಿ. ರಾಮಚಂದ್ರ ನಾಯ್ಡು ಅವರು ಸರ್ಕಾರಿ ಬಂಡಿದಾರಿ, ಸರ್ಕಾರಿ ಬಿ ಕರಾಬು ಜಾಗದಲ್ಲಿ ಗೋಡೆ ನಿರ್ಮಿಸಿರುವುದು ಭೂ ಮಾಪಕರು ನೀಡಿರುವ ಸರ್ವೆ ನಕ್ಷೆಯಲ್ಲಿ ದೃಢಪಟ್ಟಿರುತ್ತದೆ. ಆದ್ದರಿಂದ, ಅವರಿಗೆ ನೋಟೀಸ್ ನೀಡಿ ಒತ್ತುವರಿ ತೆರವು ಆದೇಶ ಜಾರಿ ಮಾಡಲಾಗಿತ್ತು ಎಂದು ಹೇಳಿದ್ದಾರೆ.

ಪಟ್ಟಂದೂರು ಅಗ್ರಹಾರ ಗ್ರಾಮದಲ್ಲಿ ಸರ್ಕಾರಿ ಬಂಡಿದಾರಿ ಒತ್ತುವರಿಯನ್ನು ಬಿಬಿಎಂಪಿ ಸಿಬ್ಬಂದಿ ತೆರವುಗೊಳಿಸಿದರು

ಬಸ್ ನಿಲ್ದಾಣ: 19 ಮಳಿಗೆಗಳಿಗೆ ದಂಡ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಇಲಾಖೆಯು ರಾಜ್ಯದ ವಿವಿಧ ಸರ್ಕಾರಿ ಹಾಗೂ ಖಾಸಗಿ ಬಸ್ ನಿಲ್ದಾಣಗಳ ವ್ಯಾಪಾರ ಮಳಿಗೆಗಳನ್ನು ಪರಿಶೀಲನೆ ನಡೆಸಿದ್ದು, ಈ ವೇಳೆ ಹಲವು ಮಳಿಗೆಗಳಲ್ಲಿ ನೈರ್ಮಲ್ಯದ ಕೊರತೆ ಹಾಗೂ ಪರವಾನಗಿ ಹೊಂದಿರದಿರುವುದು ದೃಢಪಟ್ಟಿದೆ.

ಮುಖ್ಯಮಂತ್ರಿ ಕಚೇರಿ ಸೂಚನೆ ಮೇರೆಗೆ ಜೂನ್ ತಿಂಗಳಲ್ಲಿ ವಿಶೇಷ ಅಭಿಯಾನ ನಡೆಸಲಾಗಿದೆ. ರಾಜ್ಯದಾದ್ಯಂತ 201 ಜಿಲ್ಲಾ ಮತ್ತು ತಾಲ್ಲೂಕು ಕೇಂದ್ರಗಳ ಸರ್ಕಾರಿ ಮತ್ತು ಖಾಸಗಿ ಬಸ್ ನಿಲ್ದಾಣಗಳಲ್ಲಿ ಇರುವ 748 ವ್ಯಾಪಾರ ಮಳಿಗೆಗಳು ಹಾಗೂ ಆಹಾರ ಉದ್ದಿಮೆಗಳನ್ನು ಪರಿಶೀಲನೆ ಮಾಡಲಾಗಿದೆ ಎಂದು ಇಲಾಖೆ ಆಯುಕ್ತರು ತಿಳಿಸಿದ್ದಾರೆ.

ಈ ಪರಿಶೀಲನೆ ಸಂದರ್ಭದಲ್ಲಿ 179 ವ್ಯಾಪಾರ ಮಳಿಗೆಗಳು ಪರವಾನಗಿ ಹೊಂದಿಲ್ಲದಿರುವುದು ದೃಢಪಟ್ಟಿದೆ. 120 ಆಹಾರ ಮಳಿಗೆಗಳಲ್ಲಿ ನೈರ್ಮಲ್ಯದ ಕೊರತೆ ಕಂಡುಬಂದಿದ್ದು, ನೋಟಿಸ್‌ಗಳನ್ನು ನೀಡಲಾಗಿದೆ. 19 ಆಹಾರ ಮಳಿಗೆಗಳಿಂದ ಒಟ್ಟು ₹ 48 ಸಾವಿರ ದಂಡ ವಿಧಿಸಲಾಗಿದೆ ಎಂದು ಹೇಳಿದ್ದಾರೆ.

ಪರಿಶೀಲನಾ ಭೇಟಿಯ ಸಮಯದಲ್ಲಿ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಕಾಯ್ದೆ 2006 ಪಾಲಿಸುವಂತೆ ಅರಿವು ಮೂಡಿಸಲಾಗಿದೆ. ಪುನರ್ ಪರಿಶೀಲನೆ ಸಂದರ್ಭದಲ್ಲಿ ಸಂಬಂಧಿಸಿದ ಲೋಪದೋಷಗಳನ್ನು ಸರಿಪಡಿಸಿಕೊಳ್ಳದೇ ಇದ್ದಲ್ಲಿ ನಿಯಮಾನುಸಾರ ಕ್ರಮ ಕೈಗೊಳ್ಳಲಾಗುವುದು ಎಂದು ಎಚ್ಚರಿಕೆ ನೀಡಲಾಗಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

REAL ESTATE SELLING

Sites

Arkavathi Layout

BDA-SITE FOR Sale Arkavathi Layout 15th Block 40x60. Jakkur Srirampura 5500sqft For Sale Call:7676900174 6363496142

ARKAVATHI 3RD Block 30x40 South Facing, 1 km Airport Road, Genuine Buyers. USR- 7019770736 /8951614989.

Banashankari

BANASHANKARI 6TH STAGE- BDA- AVAILABLE/ WANTED 20x30, 30x40 40x60, 50x80 SITES. BRINDAVAN ASSOCIATES- 9980863245/ 9945333993

BSK 6TH Stage, 9th Block, 1600 Sqft S/W Corner 60ft Road and 10th Block 30x50 West Contact: 9945964049, 9663184766

BANASHANKARI 6TH Stage, 4th 'T' Block, 30x40 site for sale. Contact:- 9844006666.

Intl Airport Road

"BUILDERS, DEVELOPERS, PROMOTERS`Big Site- available @TRANSPARK- Layout JANGAMAKOTTE CROSS`between Devenhalli and`Hoskotte for`JOINT DEVELOPMENT/ VENTURE- for construction of`Flats. 9663063921"

Kanakapura Road

KANAKAPURA ROAD 10000 Square feet Conversion 30x40, 40x60, 50x80, BDA, BMRDA Sites For Sale: 9916817739

Kempegowda Layout

***NADAPRABHU* KEMPEGOWDA** Layout1st Block K sector 30x40 W/F 82 lakhs,9th Block D sector 80x65 South west corner commercial site. ₹6500/-.Contact: 9686469799

KEMPEGOWDA LAYOUT BDA Site, 50×80 Double Road 1st block K Sector Near Peripheral Ring Road Commercial: 7899570235

BDA 50X80 & 30x40 Site Sale @ NPK Layout 60 Feet Road Contact: 9972220339/ 8660272027

Nagarabhavi

40X60 NAGARABAVI NGEF Layout North West Corner MK Store Near & 30X40 Site Sale 8th Block Vishweshwariah Layout: 8310003509

R T Nagar

R.T.NAGAR FACING 30X50 Near CBI Road West Facing BDA APPROVED Excellent Location For Sale Call:9341260828

Sanjaynagar

RMV BHOOPASANDRA BDA Site 29'x57' East 40' Road, off Chawla Road/Central Excise, 3.15Crore. Owner: 9980555558

Vishweshwariah Layout

AVAILABLE BDA Site Vishweshwariah Layout 5th Block 40×60 North Facing 40ft Road Good Location Genuine Buyers: 9743381719

AVAILABLE 30X40 BDA Site Vishweshwariah Layout 2nd Block 40ft Road Good Location Genuine Buyers: 9844603127

VISVESWARAIAH LAYOUT 5th block near KLE College, BDA W/F 30*40 Site immediate Sale. HN: 9900339878/ 9844039878

DIRECT OWNER 30x40 and 40x60 BDA Sites Sale VISHVESWARAIAH LAYOUT, near 100 feet-road, SREENIDHI:9742681666

Mangaluru

KHB ALLOTTED 30x40 EAST CORNER Site under Corporation Limit Sale 19 Lakhs Clear Papers OWNER 9980274537/ 9606866368

Flat

Rajarajeshwari Nagar

SALE 2BHK Flat North Facing Fully Furnished , LoanAvailable. Rs.58 Lac Nego. Owner: 9113205017

House

HRBR Layout

SALE NEW architect design house 30x40 HRBR, III Block, 4 BHK Italian/ vitrified woodwork, carpark 3.9 Crores negotiable. 9513850062.

J P Nagar

HOUSE SALE: J.P.Nagar, 6th Phase, BDA site, E/F, 4 bedroom, Seperate card shed. Contact: 9880402575.

Kengeri

KENGERI, KARUBELE Road, DC Conversion 20x33.5 Newly Constructed 4 BHK Duplex House (68,00,000/-). 92434-19641, 96860-00868.

R T Nagar

R.T.NAGAR HMT Layout 40X60 5-BHK Duplex-House, Lift, N/W Corner Teak and Italian Marble 4- Carparking 9845378269 7829203369

Agricultural Land Converted

Outer Ring Road

SALE: DC Converted 93,700sft land on STRR, close to Tata Value Homes, Huskur cross, fully compounded, suitable for highrise apartment project. Asper Vastu. TDR also available, clear titles. Corporate Holding. Sainath: 9886371998

Agricultural Land

Bannerghatta Road

BANNERGHATTA ROAD Kohli Param Road Sigapalya 100x100 Rs. 11000/- 5-5 Guntha Separate Pani Negotiable 9844155175

Commerical

Chamarajpet

FOR SALE Commercial Site 30*72 North facing. Sirsi Road, Chamrajpete 22k per.sft. Negotiable. 9611944199, 8951677990

Hebbal

ON BELLARY Main- Road Commercial Property East 25,000sft Converted Near Nandi Upchar Hotel Clear Titles 9738111222/ 9341260828

Vidyaranyapura

SITE BBMP A Katha 20x30, 40x30 SEMI COMMERCIAL SF 9000/- THINDLU LAKE SHOW GARDEN: 8296895858

REAL ESTATE BUYING

Sites

Anjanapura

WANTED BDA Site Anjanapura, Banashankari 6th Stage, Vishweshwaraiah layout & any BDA Katha & Mysore MUDA Sites, immediate settlement. genuine Sellers Contact: 9902038118, 9449060605

Banashankari

BDA-SITES WANTED @ Banashankari VI Stage, Anjanapura Also Society Sites Measuring 30x40 40x60,50x80 Immediate Settlement: 9945610779

Kanakapura Road

WANTED SITE 30x40, 40x60 Anjanapura BDA, Kanakapura Road, Banashankari 6`Stage, Gubblala BCCHS Layout. Agent Excuse. Contact: 9663454878

Multiple Locations

WANTED BDA SITES Anjanapura- Arkavathi Banashankari 6th.Stage, Vishweswaraiah, Kempegowda, Dr.Shivaramkaranth Layout.Contact: SAPTHAGIRI. 9900268073 9448068073.

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

ಕ್ಲಾಸಿಫೈಡ್ಸ್

WEEKEND CORNER

RENTAL PROPERTIES

Accommodation Available

Commercial

COMMERCIAL PREMISES Available for RENT Site No.7, 8 (Portion), 18 and 19 (Portion). 2nd, 3rd & 4th Floor measuring about 14,448 Sqft. Situated at Chunchanghatta Main Road, Yelchenahalli Main Road, BLR-560078. Contact: 88848-55475/ 96111-83868 Email: sheela.acc1 @gmail.com

Industrial And Factory

RENT INDUSTRIAL shed 8100sft @ SAHAKARNAGAR near Airport Road with Power & Water, suitable for Industries, Garage, Service Station, Base Kitchen, Warehouse. (Part or Full) Owner: 9686009911.

JOB OPPORTUNITIES

Engg/ Production Technical

WANTED ITI/ Diploma (Mech) CNC Milling Operators in Bangalore, Experience 1 year. Contact 9845247173/ 9845438003. Email: shanmukhaind@gmail.com

REQUIRED EXPERIENCED CIVIL ENGINEERS for a Reputed Construction Co. Contact: 94490-53904, Mail: kmc185km@gmail.com

Accounts & Finance

WANTED FOR Private Limited Company Near Sahakarnagar, Hebbal, one Post Account Assistant cum Admin 2-3 Years Exp. Resume to- shiva shri@ yahoo.co.in

General

REQUIRED COORDINATOR for our Corporate Gifts Mfg unit at Wilson Garden. Manage operations, coordinate with teams and ensure smooth workflow. Good communication and multitasking skills required. To apply, Call 9886707963.

Marketing & Sales

WANTED SALES PERSON required for a reputed Plant Nursery in YELAHANKA, BENGALURU. Qualification: PUC/ Diploma/ BA/ B.Com. Contact: 9845202274/ 9620498866

DH DECCAN HERALD
To Place your ad in Deccan Herald & Prajavani Classifieds
For details contact :
9845114560 : 9731810277
080 - 45557163 / 164

PUBLIC NOTICE

PUBLIC NOTICE

My Clients **1) Smt. Seba Khatija.A 2) Smt. Misba Khatija.A** both daughters of Sri.Abdul Subhan.A intend to purchase the Property which is morefully described in the schedule hereunder from its present owner **Sri.Abhinay Kumar Singh** S/o.Sri.Ram Lakhan Singh and therefore any persons having any claim to the Properties / intended purchase of the Properties by my client, may represent to the under signed within **1 month** from this date, failing which it will be taken that there are no objections / claims and my client would proceed further in the matter of the purchase of the Properties as below:-

SCHEDULE

All that piece and parcel of the Property bearing Katha No.5, PID No.7-63-5, 8th A Cross, 4th Phase, Gokula 1st Stage, Western Portion of Municipal No.344/2, Corporation 2nd Division, presently within the limits of Malleshwaram ward No.45, Bangalore, measuring East to West 43-0 feet and North to South 54-0 feet, totally measuring 2322 Sq. ft on it and bounded on the **East by:** Others Property **West by:** Property belongs to Janardhan **North by:** Remaining Northern Portion of same Property belongs to H.T.Bhagya **South by:** Road

Sd/- B.Srinivas, Advocate No.123/ A, Ground Floor, 5th Main, Mathikere, Bangalore-560 054. Ph.No. 9880026168

Place: Bangalore Date: 13-07-2024

BUSINESS

Business to Business

Medical

RUNNING NEW Modern NABH Ready 50 Bed Hospital South Bangalore, Longterm Rental Partnership WhatsApp: 00447868727506

MORE Classifieds Ads on Subsequent Pages

Business Offers

General

BUSINESS OPPORTUNITY to Earn 50k/m part or Full time, in Property Development co. Interested call me 9663391355/ 9371937555

PERSONAL

Change of Name

I, NARASIMHASWAMY HOSAKERE RAMASWAMY, S/o. Ramaswamy H.N, residing at`No.409, 1st`Floor, 8th Main, Avalahalli, Near Avalahalli BDA`Park, BSK`3rd`Stage, Bangalore-560085, Karnataka, India, declare that`I`have changed the name of my Minor daughter from SAANVI H.N and SAANVI HOSAKERI NARASIMHASWAMY (Old'Name) to SAANVI HOSAKERE NARASIMHASWAMY (New`Name), henceforth my Daughter shall be known and called as SAANVI HOSAKERE NARASIMHASWAMY (New`Name) only`for all purpose, vide Affidavit dated: 11/07/2024 before H.S.DHARMA PRASAD, at BENGALURU.

I, NARASIMHASWAMY HOSAKERE RAMASWAMY (New`Name), S/o Ramaswamy H.N, residing at No. 409, 1st Floor, 8th Main, Avalahalli, Near Avalahalli BDA Park, BSK 3rd Stage, Bangalore-560085, Karnataka, India, that`I`have changed my name from NARASIMHASWAMY H.R and NARASIMHASWAMY HOSAKERI RAMASWAMY (Old`Name)`to NARASIMHASWAMY HOSAKERE RAMASWAMY (New`Name), henceforth I shall be known and called NARASIMHASWAMY HOSAKERE RAMASWAMY (New`Name) only for all purpose,vide Affidavit dated: 11/07/2024, before Notary H.S.DHARMA PRASAD, Bangalore.

Reebok Store, Opp. Conrad Hotel, Ulsoor 080-40940022

CHANGE OF NAME

I, **Smt. NANDINI L,** W/o Nataraj D S, age 39 years, R/at NO. 658, Brindhavana I Main Road, II Cross, Basaveshwara Layout, RMV II Stage, Nagashettyhalli, Sanjaynagar, Bengaluru-560094 do hereby declare that both the names i.e. **Smt.NANDINI L** and **Smt. NANDINI L N** are one and the same and refers to me only, henceforth I shall be known and called as **Smt. NANDINI L N** for all purposes, vide affidavit dated **06-03-2024**, sworn before Advocate and Notary **SUMANGALA HEGDE** at Bangalore.

CHANGE OF NAME

I, **S.V. VASANTHA** Residing at No.181, Sundara Kausthubam, Nisarga Layout Main Road, Near Royal Techno School, Abbigere, Bengaluru-560090 have changed my name from **Y. VASANTHARAJAKUMARI** to **S.V. VASANTHA** vide affidavit dated 11-07-2024 before notary Chandrakala, Bengaluru

CHANGE OF NAME

We, **SANAL SKARIA and ANITA SANAL,** R/at 1J-12, Kristal Jasper, Kasavanahalli, Bangalore-35, have changed our minor daughter's name from **SASHA** to **SASHA SANAL** vide affidavit dt:10-07-2024 sworn before Notary B.M. Chandrashekar, Bangalore. Henceforth she shall be known as **SASHA SANAL** only.

I, SMT. AYESHA SIDDIQ .A, C/o. Sethuraman, aged about 39 years, residing at No.18 Ground Floor, 3rd Cross, 3rd Main, Manjushree Layout Bengaluru Karnataka-560036, have changed my name to Smt. SARASWATHI vide affidavit dated 03.07.2024 sworn before Advocate & Notary Y.R. Chandrashekar Bangalore

CAUTION NOTICE

Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.

Advertisement Manager
The Printers (Mysore) Pvt. Ltd. Bengaluru

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	24,315
ಇಂದಿನ ಅಂತ್ಯ	24,502
▲	186
ದಿನದ ಗರಿಷ್ಠ	24,592

ವಿನಿಮಯ ದರ

$	ಡಾಲರ್	83.51
£	ಪೌಂಡ್	108.20
€	ಯುರೊ	90.95
¥	ಯೆನ್ (100ಕ್ಕೆ)	53

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100ಕ್ಕೆ	₹565
12 ಕ್ಕೆ	₹76
ಮೈಸೂರು	
100ಕ್ಕೆ	₹570

ಖಾದ್ಯ ತೈಲ ಮುಂಬೈ (10 ಕೆಜಿಗೆ)

(ಆವರಣದಲ್ಲಿ ಹಿಂದಿನ ವಹಿವಾಟಿನ ದರ)

ಶೇಂಗಾ (ರಿಫೈನ್ಡ್)	₹1550 (1530)
ಸೋಯಾ (ರಿಫೈನ್ಡ್)	₹970 (965)
ಸೂರ್ಯಕಾಂತಿ (ರಿಫೈನ್ಡ್)	₹965 (965)
ಪಾಮೋಲಿನ್	₹908 (907)

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ)	₹322-445
ದ್ವಿತಳಿ (ಬಿ.ವಿ)	₹320-619

ಸೆನ್ಸೆಕ್ಸ್ 622 ಅಂಶ ಜಿಗಿತ

ಮುಂಬೈ/ನವದೆಹಲಿ (ಪಿಟಿಐ): ಐ.ಟಿ ಮತ್ತು ತಂತ್ರಜ್ಞಾನ ಷೇರುಗಳ ಖರೀದಿಯಲ್ಲಿನ ಹೆಚ್ಚಳದಿಂದ ಸೆನ್ಸೆಕ್ಸ್ ಮತ್ತು ನಿಫ್ಟಿ ಶುಕ್ರವಾರ ಶೇ 1ರಷ್ಟು ಏರಿಕೆ ಕಂಡಿದ್ದವು.

ಮುಂಬೈ ಷೇರುಪೇಟೆ ಸೂಚ್ಯಂಕ (ಬಿಎಸ್‌ಇ) ಸೆನ್ಸೆಕ್ಸ್ 622 ಅಂಶ ಏರಿಕೆಯಾಗಿ 80,519ಕ್ಕೆ ಸ್ಥಿರಗೊಂಡಿತು. ವಹಿವಾಟಿನ ವೇಳೆ 80,893 ಅಂಶಕ್ಕೆ ತಲುಪಿತ್ತು.

ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ (ಎನ್‌ಎಸ್‌ಇ) ನಿಫ್ಟಿ 186 ಅಂಶ ಹೆಚ್ಚಳವಾಗಿ 24,502ಕ್ಕೆ ಅಂತ್ಯಗೊಂಡಿತು. ವಹಿವಾಟಿನ ವೇಳೆ 24,592ಕ್ಕೆ ಮುಟ್ಟಿತ್ತು.

ಷೇರುಗಳ ಮೌಲ್ಯ ಏರಿಕೆಯಿಂದ ಬಿಎಸ್‌ಇ ನೊಂದಾಯಿತ ಕಂಪನಿಗಳ ಮಾರುಕಟ್ಟೆ ಮೌಲ್ಯಕ್ಕೆ ₹1.17 ಲಕ್ಷ ಕೋಟಿ ಸೇರ್ಪಡೆಯಾಗಿದ್ದು, ಒಟ್ಟು ಕಂಪನಿಗಳ ಎಂ–ಕ್ಯಾಪ್ ₹452 ಲಕ್ಷ ಕೋಟಿಗೆ ಮುಟ್ಟಿದೆ.

ಟಾಟಾ ಕನ್ಸಲ್ಟೆನ್ಸಿ ಸರ್ವಿಸಸ್, ಇನ್ಫೊಸಿಸ್, ಎಚ್‌ಸಿಎಲ್ ಟೆಕ್ನಾಲಜೀಸ್, ಟೆಕ್ ಮಹೀಂದ್ರ, ಎಕ್ಸಿಸ್ ಬ್ಯಾಂಕ್, ರಿಲಯನ್ಸ್ ಇಂಡಸ್ಟ್ರೀಸ್, ಜೆಎಸ್‌ಡಬ್ಲ್ಯು ಸ್ಟೀಲ್, ಬಜಾಜ್ ಫೈನಾನ್ಸ್ ಮತ್ತು ಲಾರ್ಸೆನ್ ಆ್ಯಂಡ್ ಟೊಬ್ರೊ ಷೇರಿನ ಮೌಲ್ಯದಲ್ಲಿ ಹೆಚ್ಚಳವಾಗಿದೆ.

ಏಷ್ಯನ್ ಪೇಂಟ್ಸ್, ಟೈಟನ್, ಕೋಟಕ್ ಮಹೀಂದ್ರ ಬ್ಯಾಂಕ್, ಭಾರ್ತಿ ಏರ್‌ಟೆಲ್ ಮತ್ತು ಐಸಿಐಸಿಐ ಬ್ಯಾಂಕ್‌ನ ಷೇರಿನ ಮೌಲ್ಯ ಇಳಿದಿದೆ.

ಏಷ್ಯಾದ ಮಾರುಕಟ್ಟೆಯಲ್ಲಿ ಶಾಂಘೈ ಮತ್ತು ಹಾಂಗ್‌ಕಾಂಗ್ ಸಕಾರಾತ್ಮಕ ವಹಿವಾಟು ದಾಖಲಿಸಿದ್ದರೆ, ಸೋಲ್ ಮತ್ತು ಟೋಕಿಯೊ ಇಳಿಕೆ ಕಂಡಿವೆ.

ಷೇರು ಸೂಚ್ಯಂಕ ಹೆಚ್ಚಳಕ್ಕೆ ಕಾರಣವೇನು?: ಟಾಟಾ ಕನ್ಸಲ್ಟೆನ್ಸಿ ಸರ್ವಿಸಸ್‌ನ (ಟಿಸಿಎಸ್) ಜೂನ್ ತ್ರೈಮಾಸಿಕದ ಗಳಿಕೆಯಲ್ಲಿನ ಹೆಚ್ಚಳ, ರಿಲಯನ್ಸ್ ಇಂಡಸ್ಟ್ರೀಸ್, ಇನ್ಫೊಸಿಸ್ ಷೇರುಗಳ ಮೌಲ್ಯ ಏರಿಕೆ ಮತ್ತು ಅಮೆರಿಕದ ಫೆಡರಲ್ ರಿಸರ್ವ್ ಬಡ್ಡಿ ದರ ಕಡಿತಗೊಳಿಸುವ ನಿರೀಕ್ಷೆ ಷೇರು ಸೂಚ್ಯಂಕಗಳ ದಾಖಲೆಯ ಹೆಚ್ಚಳಕ್ಕೆ ಕಾರಣವಾಯಿತು ಎಂದು ಮಾರುಕಟ್ಟೆ ತಜ್ಞರು ಹೇಳಿದ್ದಾರೆ.

ಟಿಸಿಎಸ್ ಎಂ–ಕ್ಯಾಪ್ ಭಾರಿ ಏರಿಕೆ

ದೇಶದ ಅತಿದೊಡ್ಡ ಸಾಫ್ಟ್‌ವೇರ್ ಕಂಪನಿ ಟಾಟಾ ಕನ್ಸಲ್ಟೆನ್ಸಿ ಸರ್ವಿಸಸ್‌ನ (ಟಿಸಿಎಸ್) ಷೇರಿನ ಮೌಲ್ಯ ಶೇ 7ರಷ್ಟು ಏರಿಕೆಯಾಗಿದೆ.

ಬಿಎಸ್‌ಇ ಮತ್ತು ಎನ್‌ಎಸ್‌ಇಯಲ್ಲಿ ಷೇರಿನ ಬೆಲೆ ಕ್ರಮವಾಗಿ ₹4,184 ಮತ್ತು ₹4,182ಕ್ಕೆ ಮುಟ್ಟಿದೆ. ಷೇರಿನ ಮೌಲ್ಯ ಏರಿಕೆಯಿಂದ ಕಂಪನಿಯ ಮಾರುಕಟ್ಟೆ ಮೌಲ್ಯಕ್ಕೆ (ಎಂ–ಕ್ಯಾಪ್) ಒಂದೇ ದಿನ ₹94,866 ಕೋಟಿ ಸೇರ್ಪಡೆಯಾಗಿದೆ. ಕಂಪನಿಯ ಒಟ್ಟು ಎಂ–ಕ್ಯಾಪ್ ₹15.14 ಲಕ್ಷ ಕೋಟಿಗೆ ತಲುಪಿದೆ.

ಪ್ರಸಕ್ತ ಹಣಕಾಸು ವರ್ಷದ ಜೂನ್ ತ್ರೈಮಾಸಿಕದಲ್ಲಿ ಟಿಸಿಎಸ್ ₹12,040 ಕೋಟಿ ನಿವ್ವಳ ಲಾಭ ಗಳಿಸಿದೆ. ಇದರಿಂದ ಕಂಪನಿಯ ಷೇರಿನ ಮೌಲ್ಯ ಏರಿಕೆಯಾಗಿದೆ ಎಂದು ಎಚ್‌ಡಿಎಫ್‌ಸಿ ಸೆಕ್ಯುರಿಟೀಸ್‌ನ ದೀಪಕ್ ಜಸಾನಿ ಹೇಳಿದ್ದಾರೆ.

ಮುಂಬೈ ಧಾರಣೆ

ಶೇಂಗಾ

12-07-2024

ಜಾವಾ 70/80(ಹೊಸ)	11400-11500
ಜಾವಾ 80/90(ಹೊಸ)	11000-11100
ದಪ್ಪ ಮಧ್ಯಪ್ರದೇಶ(ಹೊಸ)	10000-10100
ದಪ್ಪ ಗುಜರಾತ್(ಹೊಸ)	10800-10900

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1560 (1540)
ಒಂದು ವಾರದ ಡೆಲಿವರಿ	1555 (1535)
ಸೋಯಾ ಕಚ್ಚಾ	925 (925)
ಪಾಮ್ ವಾರದ ಡೆಲಿವರಿ	906 (905)
ಸೂರ್ಯಕಾಂತಿ ಎಣ್ಣೆ ಕಚ್ಚಾ	920 (920)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ

₹72,450 (72,450)

ಬೆಳ್ಳಿ ಕೆ.ಜಿ ₹91,950 (92,850)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಎನ್.ಆರ್.ಪುರ ರಬ್ಬರ್

ಆರ್‌ಎಸ್‌ಎಸ್-4	₹203.50
ಆರ್‌ಎಸ್‌ಎಸ್-5	₹196
ಗುಡ್ ಲಾಟ್	₹183

(ಪ್ರತಿ ಕೆ.ಜಿಗೆ)

ಆಹಾರ ಪದಾರ್ಥದ ಬೆಲೆ ಹೆಚ್ಚಳ ಏರಿಕೆಗೆ ಕಾರಣ: ಎನ್‌ಎಸ್‌ಒ

ಚಿಲ್ಲರೆ ಹಣದುಬ್ಬರ ಏರಿಕೆ

ನವದೆಹಲಿ (ಪಿಟಿಐ): ದೇಶದ ಚಿಲ್ಲರೆ ಹಣದುಬ್ಬರವು ಜೂನ್ ತಿಂಗಳಲ್ಲಿ ಶೇ 5.08ರಷ್ಟಕ್ಕೆ ಏರಿಕೆಯಾಗಿದ್ದು, ನಾಲ್ಕು ತಿಂಗಳ ಗರಿಷ್ಠ ಮಟ್ಟಕ್ಕೆ ತಲುಪಿದೆ.

ಆಹಾರ ಪದಾರ್ಥಗಳ ಬೆಲೆಯಲ್ಲಿ ಹೆಚ್ಚಳವಾಗಿರುವುದೇ ಏರಿಕೆಗೆ ಕಾರಣವಾಗಿದೆ ಎಂದು ಶುಕ್ರವಾರ ಬಿಡುಗಡೆಯಾಗಿರುವ ರಾಷ್ಟ್ರೀಯ ಸಾಂಖ್ಯಿಕ ಕಚೇರಿಯ (ಎನ್‌ಎಸ್‌ಒ) ವರದಿ ತಿಳಿಸಿದೆ.

ಗ್ರಾಹಕ ಬೆಲೆ ಸೂಚ್ಯಂಕ (ಸಿಪಿಐ) ಆಧಾರಿತ ಚಿಲ್ಲರೆ ಹಣದುಬ್ಬರವು 2024ರ ಮೇ ತಿಂಗಳಲ್ಲಿ ಶೇ 4.8ರಷ್ಟು ದಾಖಲಾಗಿತ್ತು. ಇದು 2023ರ ಜೂನ್‌ನಲ್ಲಿ ಶೇ 4.87ರಷ್ಟಿತ್ತು ಎಂದು ವರದಿ ತಿಳಿಸಿದೆ.

ಮೇ ತಿಂಗಳಲ್ಲಿ ಆಹಾರ ಪದಾರ್ಥಗಳ ಬೆಲೆಯು ಶೇ 8.69ರಷ್ಟು ದಾಖಲಾಗಿತ್ತು. ಅದು ಜೂನ್ ತಿಂಗಳಲ್ಲಿ ಶೇ 9.36ಕ್ಕೆ ಏರಿಕೆಯಾಗಿದೆ.

ಚಿಲ್ಲರೆ ಹಣದುಬ್ಬರವನ್ನು ಶೇ 4ರ ಮಿತಿಯಲ್ಲಿ ಕಾಯ್ದುಕೊಳ್ಳುವುದು ಭಾರತೀಯ ರಿಸರ್ವ್ ಬ್ಯಾಂಕ್‌ನ (ಆರ್‌ಬಿಐ) ಗುರಿಯಾಗಿದೆ. 2024–25ರ ಪೂರ್ಣ ಹಣಕಾಸು ವರ್ಷದಲ್ಲಿ ಚಿಲ್ಲರೆ ಹಣದುಬ್ಬರವು ಶೇ 4.5ರಷ್ಟು ಇರಲಿದೆ ಎಂದು ಆರ್‌ಬಿಐ ಅಂದಾಜಿಸಿದೆ.

ಮೊದಲ ತ್ರೈಮಾಸಿಕದಲ್ಲಿ ಶೇ 4.9, ಎರಡನೇ ತ್ರೈಮಾಸಿಕದಲ್ಲಿ ಶೇ 3.8, ಮೂರನೇ ತ್ರೈಮಾಸಿಕದಲ್ಲಿ ಶೇ 4.6 ಮತ್ತು ನಾಲ್ಕನೇ ತ್ರೈಮಾಸಿಕದಲ್ಲಿ ಶೇ 4.5ರಷ್ಟು ದಾಖಲಾಗಲಿದೆ ಎಂದು ಅಂದಾಜಿಸಿದೆ.

ಕೈಗಾರಿಕಾ ಉತ್ಪಾದನೆ ಏಳು ತಿಂಗಳ ಗರಿಷ್ಠ: ದೇಶದ ಕೈಗಾರಿಕಾ ಉತ್ಪಾದನೆ ಬೆಳವಣಿಗೆ ಮೇ ತಿಂಗಳಲ್ಲಿ ಏಳು ತಿಂಗಳ ಗರಿಷ್ಠ ಶೇ 5.9ರಷ್ಟು ದಾಖಲಾಗಿದೆ.

ಗಣಿಗಾರಿಕೆ ಮತ್ತು ವಿದ್ಯುತ್ ವಲಯದ ಬೆಳವಣಿಗೆಯು ಉತ್ತಮವಾಗಿದೆ ಎಂದು ಶುಕ್ರವಾರ ಬಿಡುಗಡೆಯಾಗಿರುವ ಎನ್‌ಎಸ್‌ಒ ವರದಿ ತಿಳಿಸಿದೆ.

ಕೈಗಾರಿಕಾ ಉತ್ಪಾದನೆ ಸೂಚ್ಯಂಕ (ಐಐಪಿ) ಆಧಾರದ ಮೇಲೆ ಲೆಕ್ಕ ಹಾಕುವ ಈ ಬೆಳವಣಿಗೆಯು ಜನವರಿಯಲ್ಲಿ ಶೇ 4.2, ಫೆಬ್ರುವರಿಯಲ್ಲಿ ಶೇ 5.6, ಮಾರ್ಚ್‌ನಲ್ಲಿ ಶೇ 5.4 ಮತ್ತು ಏಪ್ರಿಲ್‌ನಲ್ಲಿ ಶೇ 5ರಷ್ಟು ದಾಖಲಾಗಿತ್ತು.

2023ರ ಮೇ ತಿಂಗಳಲ್ಲಿ ಕೈಗಾರಿಕಾ ಉತ್ಪಾದನೆ ಬೆಳವಣಿಗೆ ಶೇ 5.7 ಆಗಿತ್ತು.

ಸುದ್ದಿ 2 ನಿಮಿಷ

10 ಲಕ್ಷ ಪ್ರಯಾಣಿಕ ವಾಹನಗಳ ಮಾರಾಟ: ಎಸ್‌ಐಎಎಂ

ನವದೆಹಲಿ (ಪಿಟಿಐ): ಪ್ರಸಕ್ತ ಹಣಕಾಸು ವರ್ಷದ ಏಪ್ರಿಲ್–ಜೂನ್ ತ್ರೈಮಾಸಿಕದಲ್ಲಿ ಪ್ರಯಾಣಿಕ ವಾಹನಗಳ ಸಗಟು ಮಾರಾಟವು ಪ್ರಥಮ ಬಾರಿಗೆ 10 ಲಕ್ಷದ ಗಡಿ ದಾಟಿದೆ ಎಂದು ಭಾರತೀಯ ವಾಹನ ತಯಾರಕರ ಒಕ್ಕೂಟ (ಎಸ್‌ಐಎಎಂ) ಶುಕ್ರವಾರ ತಿಳಿಸಿದೆ.

ಹಿಂದಿನ ವರ್ಷದ ಇದೇ ತ್ರೈಮಾಸಿಕದಲ್ಲಿ 9.96 ಲಕ್ಷ ವಾಹನಗಳು ಮಾರಾಟವಾಗಿದ್ದವು. ಈ ಬಾರಿ 10.26 ಲಕ್ಷ ವಾಹನಗಳು ಮಾರಾಟವಾಗಿವೆ. ಈ ಮಾರಾಟಕ್ಕೆ ಹೋಲಿಸಿದರೆ ಶೇ 3ರಷ್ಟು ಏರಿಕೆಯಾಗಿದೆ. ಯುಟಿಲಿಟಿ ವಾಹನಗಳಿಗೆ ಬೇಡಿಕೆ ಹೆಚ್ಚಾಗಿದ್ದರಿಂದ ಮಾರಾಟದಲ್ಲಿ ಏರಿಕೆಯಾಗಿದೆ ಎಂದು ತಿಳಿಸಿದೆ.

ಯುಟಿಲಿಟಿ ವಾಹನಗಳ ಮಾರಾಟದಲ್ಲಿ ಶೇ 18ರಷ್ಟು ಹೆಚ್ಚಳವಾಗಿದ್ದು, ಒಟ್ಟು 6.45 ಲಕ್ಷ ವಾಹನಗಳು ಮಾರಾಟವಾಗಿವೆ. ವ್ಯಾನ್‌ಗಳ ಮಾರಾಟವು 35,648 ರಿಂದ 38,919ಕ್ಕೆ ಏರಿಕೆಯಾಗಿದೆ. ಆದರೆ, ಕಾರುಗಳ ಮಾರಾಟವು 4.13 ಲಕ್ಷದಿಂದ 3.41 ಲಕ್ಷಕ್ಕೆ (ಶೇ 17ರಷ್ಟು) ಇಳಿಕೆಯಾಗಿದೆ.

ದ್ವಿಚಕ್ರ ವಾಹನಗಳ ಮಾರಾಟದಲ್ಲಿ ಶೇ 20ರಷ್ಟು ಏರಿಕೆಯಾಗಿದ್ದು, 49.85 ಲಕ್ಷ ವಾಹನಗಳು ಮಾರಾಟವಾಗಿವೆ. 1.65 ಲಕ್ಷ ತ್ರಿಚಕ್ರ ವಾಹನಗಳು ಮತ್ತು 2.24 ಲಕ್ಷ ವಾಣಿಜ್ಯ ವಾಹನಗಳು ಮಾರಾಟವಾಗಿದ್ದು, ಮಾರಾಟದಲ್ಲಿ ಕ್ರಮವಾಗಿ ಶೇ 14 ಮತ್ತು ಶೇ 3.5ರಷ್ಟು ಏರಿಕೆ ದಾಖಲಿಸಿದೆ ಎಂದು ತಿಳಿಸಿದೆ.

ವಿದೇಶಿ ವಿನಿಮಯ ಸಂಗ್ರಹ ಹೆಚ್ಚಳ

ಮುಂಬೈ (ಪಿಟಿಐ): ದೇಶದ ವಿದೇಶಿ ವಿನಿಮಯ ಮೀಸಲು ಸಂಗ್ರಹವು ಜುಲೈ 5ಕ್ಕೆ ಕೊನೆಗೊಂಡ ವಾರದಲ್ಲಿ ₹43,081 ಕೋಟಿ ಹೆಚ್ಚಳವಾಗಿದೆ.

ಒಟ್ಟು ಮೀಸಲು ಸಂಗ್ರಹವು ₹54.88 ಲಕ್ಷ ಕೋಟಿಗೆ ತಲುಪಿದೆ ಎಂದು ಭಾರತೀಯ ರಿಸರ್ವ್ ಬ್ಯಾಂಕ್ ಶುಕ್ರವಾರ ತಿಳಿಸಿದೆ.

ವಿದೇಶಿ ಕರೆನ್ಸಿಗಳ ಸಂಗ್ರಹವು ₹35,313 ಕೋಟಿ ಹೆಚ್ಚಳವಾಗಿದ್ದು, ಒಟ್ಟು ಸಂಗ್ರಹ ಮೊತ್ತ ₹48.20 ಲಕ್ಷ ಕೋಟಿ ಆಗಿದೆ.

ಚಿನ್ನದ ಮೀಸಲು ಸಂಗ್ರಹವು ₹7,550 ಕೋಟಿ ಏರಿಕೆಯಾಗಿದೆ. ಸ್ಪೆಷಲ್ ಡ್ರಾಯಿಂಗ್ ರೈಟ್ಸ್ (ಎಸ್‌ಡಿಆರ್) ಮೀಸಲು ₹175 ಕೋಟಿ ಏರಿಕೆಯಾಗಿ ₹1.50 ಲಕ್ಷ ಕೋಟಿಗೆ ತಲುಪಿದೆ.

ಅಂತರರಾಷ್ಟ್ರೀಯ ಹಣಕಾಸು ನಿಧಿಯಲ್ಲಿನ (ಐಎಂಎಫ್) ಭಾರತದ ಮೀಸಲು ಸಂಗ್ರಹವು ₹33 ಕೋಟಿ ಹೆಚ್ಚಳವಾಗಿದ್ದು, ಒಟ್ಟು ಸಂಗ್ರಹ ಮೊತ್ತ ₹38,244 ಕೋಟಿಗೆ ಮುಟ್ಟಿದೆ ಎಂದು ತಿಳಿಸಿದೆ.

ಬಹುಕೋಟಿ ಅವ್ಯವಹಾರ ಪ್ರಕರಣ, ವಿವಿಧ ಆಯಾಮಗಳಲ್ಲಿ ತನಿಖೆ

ಜಿಎಸ್‌ಟಿ ವಂಚನೆ: ಉದ್ಯಮಿಗಳಿಗೂ ಕಂಟಕ

• ಸಂತೋಷ ಈ. ಚಿನಗುಡಿ

ಬೆಳಗಾವಿ: ಬೆಳಗಾವಿ ಕೇಂದ್ರಿತವಾಗಿ ನಡೆದ ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ವಂಚನೆ ಪ್ರಕರಣದಲ್ಲಿ ರಾಜ್ಯದ ದೊಡ್ಡ ಉದ್ಯಮಿಗಳು, ಪ್ರಭಾವಿಗಳು ಸಿಕ್ಕಿಕೊಳ್ಳುವ ಸಾಧ್ಯತೆ ಹೆಚ್ಚಿದೆ.

ನಕೀಬ್ ನಜೀಬ್ ಮುಲ್ಲಾ

ಪ್ರಕರಣದ ಆರೋಪಿ ಒಬ್ಬನೇ ಇದ್ದರೂ ಆತ ಹಲವು ಪ್ರಭಾವಿಗಳ ಹೆಸರು, ಜಿಎಸ್‌ಟಿ ಸಂಖ್ಯೆಗಳನ್ನು ಅಕ್ರಮಕ್ಕೆ ಬಳಸಿದ್ದು ಪ್ರಾಥಮಿಕ ತನಿಖೆಯಲ್ಲಿ ಗೊತ್ತಾಗಿದೆ.

ವಂಚನೆ ಪ್ರಕರಣಕ್ಕೆ ಸಂಬಂಧಿಸಿದಂತೆ ಬೆಳಗಾವಿಯ ನಕೀಬ್ ನಜೀಬ್ ಮುಲ್ಲಾ (24) ಎಂಬ ಆರೋಪಿಯನ್ನು ಅಧಿಕಾರಿಗಳು ಬುಧವಾರ ಬಂಧಿಸಿದ್ದಾರೆ. ₹132 ಕೋಟಿಯ ನಕಲಿ ವ್ಯವಹಾರದ ದಾಖಲೆ ಸೃಷ್ಟಿಸಿರುವ ಆರೋಪಿ, ₹23.82 ಕೋಟಿ ಇನ್‌ಪುಟ್ ಟ್ಯಾಕ್ಸ್ ಕ್ರೆಡಿಟ್ (ಐಟಿಸಿ) ಸರ್ಕಾರದಿಂದ ಪಡೆದಿದ್ದು ಗೊತ್ತಾಗಿದೆ. ಈತನ ಮೂಲಕ ತೆರಿಗೆ ಸಂದಾಯ ಮಾಡಿದ ಎಲ್ಲರಿಗೂ ಸಂಕಷ್ಟ ತಲೆದೋರಿದೆ.

ಜಿಎಸ್‌ಟಿ ಇಲಾಖೆಯ ಬೆಳಗಾವಿ ವಲಯ ವ್ಯಾಪ್ತಿಗೆ ಬರುವ 12 ಜಿಲ್ಲೆಗಳ ಹಲವಾರು ದೊಡ್ಡ ಉದ್ಯಮಿಗಳು ಈ ಆರೋಪಿ ಮೂಲಕ ಜಿಎಸ್‌ಟಿ ಕಟ್ಟಿದ್ದಾರೆ. ಅವರಲ್ಲಿ ಹಲವರು ಪ್ರಾಮಾಣಿಕವಾಗಿ ಹಣ ಕೊಟ್ಟಿದ್ದಾರೆ. ಆದರೆ, ಅದನ್ನು ಇಲಾಖೆಗೆ ತಲುಪಿಸದೇ ‘ಜಿಎಸ್‌ಟಿ ತಲುಪಿದೆ’ ಎಂಬ ಸುಳ್ಳು ದಾಖಲೆ ಸೃಷ್ಟಿಸಿ ಅವರಿಗೂ ವಂಚಿಸಿದ ಎಂಬುದು ತಿಳಿದು ಬಂದಿದೆ.

‘ಆರಂಭದಲ್ಲಿ ಸಣ್ಣಪುಟ್ಟ ಮೊತ್ತ ವಂಚಿಸಿದ ಆರೋಪಿ, ನಂತರ ದೊಡ್ಡ ಮೊತ್ತ ಕಬಳಿಸಲು ಉಪಾಯ ಹೂಡಿದ್ದ. ಇದಕ್ಕಾಗಿ ‘ಫೆಡರಲ್ ಲಾಜಿಸ್ಟಿಕ್ಸ್’ ಎಂಬ ನಕಲಿ ಕಂಪನಿ ಕಟ್ಟಿಕೊಂಡ. ಈ ಸಂಸ್ಥೆ ಮೂಲಕ ನೂರಾರು ಕೋಟಿ ರೂಪಾಯಿಗಳ ವ್ಯವಹಾರ ನಡೆಸಿದ ಬಗ್ಗೆ ದಾಖಲೆಗಳನ್ನು ಸೃಷ್ಟಿಸಿದ’ ಎಂಬುದನ್ನು ಅಧಿಕಾರಿಗಳು ಪತ್ತೆ ಮಾಡಿದ್ದಾರೆ.

‘ಇದು ಕೇವಲ ಮೂರು ತಿಂಗಳಲ್ಲಿ ನಡೆದ ಅವ್ಯವಹಾರ. ಆರೋಪಿ ಇನ್ನೂ ಏನೇನು, ಎಷ್ಟು ದಿನಗಳಿಂದ ಕೃತ್ಯದಲ್ಲಿ ತೊಡಗಿದ್ದಾನೆ. ಅದರಲ್ಲಿ ಯಾರೆಲ್ಲರೂ ಸಿಕ್ಕಿಬೀಳಬಹುದು ಅಥವಾ ತೊಂದರೆ ಅನುಭವಿಸಬಹುದು ಎಂಬುದು ಪೂರ್ಣ ಪ್ರಮಾಣದ ತನಿಖೆ ಬಳಿಕ ಗೊತ್ತಾಗಲಿದೆ’ ಎಂದು ಮೂಲಗಳು ತಿಳಿಸಿವೆ.

ದೇಶದಲ್ಲೇ ಮೊದಲ ಪ್ರಕರಣ: ‘ಜಿಎಸ್‌ಟಿ ಕಟ್ಟದೇ ವಂಚಿಸಿದ ಪ್ರಕರಣಗಳು ದೇಶದಲ್ಲಿ ಸಾಕಷ್ಟು ಇವೆ. ಆದರೆ, ನಕಲಿ ಇನ್‌ವಾಯ್ಸ್ (ಬಿಲ್) ಸೃಷ್ಟಿಸಿ ಇಷ್ಟು ದೊಡ್ಡ ಮೊತ್ತದ ಕ್ರೆಡಿಟ್ ಹಣ ಕಬಳಿಸಿದ್ದು ಇದೇ ಮೊದಲು. ಉದ್ಯಮಿಗಳು ಪ್ರಾಮಾಣಿಕವಾಗಿ ಜಿಎಸ್‌ಟಿ ಹಣ ಸಂದಾಯ ಮಾಡಿದ್ದರೂ ಇಲಾಖೆಗೆ ತಲುಪಿಲ್ಲ. ಈಗ ಇಲಾಖೆಯವರು ಸಂಬಂಧಪಟ್ಟ ಉದ್ಯಮಿಗಳಿಂದ ವಸೂಲಿ ಮಾಡಬೇಕು. ಎಷ್ಟು ವರ್ಷಗಳಿಂದ ಹಣ ಸಂದಾಯವಾಗಿಲ್ಲವೋ, ಅದಕ್ಕೆ ಬಡ್ಡಿ ಕೂಡ ಕಟ್ಟುವುದು ಅನಿವಾರ್ಯ’ ಎಂದು ಮೂಲಗಳು ತಿಳಿಸಿವೆ.

‘ಪೂರ್ಣ ಪ್ರಮಾಣದ ತನಿಖೆಗೆ ಸಿದ್ಧತೆ’

‘ನಕೀಬ್ ನಜೀಬ್ ಮುಲ್ಲಾ ಎಂಬ ಆರೋಪಿಯನ್ನು 14 ದಿನ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ. ಆತನ ಮೇಲೆ ತೆರಿಗೆ ವಂಚನೆ, ಮೋಸ, ನಕಲಿ ವ್ಯವಹಾರ, ಸರ್ಕಾರದ ಬೊಕ್ಕಸಕ್ಕೆ ನಷ್ಟ ಮುಂತಾದ ಅಪರಾಧಗಳಡಿ ಪ್ರಕರಣ ದಾಖಲಿಸಲಾಗಿದೆ. ನಮ್ಮ ಅಧಿಕಾರಿಗಳು ತನಿಖೆ ಪೂರ್ಣಗೊಳಿಸಿ, ವರದಿ ನೀಡಿದ ಬಳಿಕ ಹಗರಣದ ಕುರಿತು ಪೂರ್ಣ ಮಾಹಿತಿ ಬಹಿರಂಗಪಡಿಸಲಾಗುವುದು’ ಎಂದು ಕೇಂದ್ರೀಯ ಸರಕು ಮತ್ತು ಸೇವಾ ತೆರಿಗೆ, ಕೇಂದ್ರೀಯ ಅಬಕಾರಿ ಆಯುಕ್ತರ ಕಚೇರಿಯ ಪ್ರಧಾನ ಆಯುಕ್ತ ದಿನೇಶ ಪಿ. ರಾವ್ ಪಾಂಗರಕರ ‘ಪ್ರಜಾವಾಣಿ’ಗೆ ತಿಳಿಸಿದರು.



ದಿನೇಶ ಪಿ. ರಾವ್ ಪಾಂಗರಕರ

ಬಂಧಿಸುವಂತೆ ದದ್ದಲ್ ದುಂಬಾಲು

ಒಂದನೇ ಪುಟದಿಂದ...

8 ತಾಸು ವಿಚಾರಣೆ: ಅದಾದ ಮೇಲೆ ಬೆಳಿಗ್ಗೆ 10.30ರಿಂದ ಸಂಜೆ 6.30ರ ವರೆಗೆ ದದ್ದಲ್ ಅವರನ್ನು ಎಸ್‌ಐಟಿ ಅಧಿಕಾರಿಗಳು ಎಂಟು ತಾಸು ವಿಚಾರಣೆ ನಡೆಸಿದರು.

‘ದದ್ದಲ್ ಅವರ ಆಪ್ತ ಸಹಾಯಕ ಪಂಪಣ್ಣಗೆ ನಿಗಮದ ಮಾಜಿ ವ್ಯವಸ್ಥಾಪಕ ನಿರ್ದೇಶಕ ಜೆ.ಜಿ.ಪದ್ಮನಾಭ ಅವರು ಎರಡು ಹಂತದಲ್ಲಿ ₹55 ಲಕ್ಷ ನೀಡಿರುವುದಾಗಿ ಹೇಳಿಕೆ ನೀಡಿದ್ದಾರೆ. ಅದನ್ನು ಆಧರಿಸಿ ಕೆಲವು ಪ್ರಶ್ನೆ ಕೇಳಿ ಹೇಳಿಕೆ ದಾಖಲು ಮಾಡಿಕೊಳ್ಳಲಾಗಿದೆ. ಅಲ್ಲದೇ ಅಕ್ರಮದಲ್ಲಿ ದದ್ದಲ್ ಅವರ ಪಾತ್ರದ ಬಗ್ಗೆಯೂ ವಿಚಾರಣೆ ನಡೆಸಲಾಗಿದೆ’ ಎಂದು ಮೂಲಗಳು ತಿಳಿಸಿವೆ.

ರಿಯಲ್ ಎಸ್ಟೇಟ್‌ನಲ್ಲಿ ಹಣ ಹೂಡಿಕೆ?

‘ಅಕ್ರಮದಿಂದ ಬಂದ ಹಣವನ್ನು ಬಸನಗೌಡ ದದ್ದಲ್ ಅವರು ರಿಯಲ್ ಎಸ್ಟೇಟ್‌ನಲ್ಲಿ ಹೂಡಿಕೆ ಮಾಡಿರುವ ಶಂಕೆ ವ್ಯಕ್ತವಾಗಿದ್ದು ಆ ದಿಕ್ಕಿನಲ್ಲಿಯೂ ತನಿಖೆ ನಡೆಸಲಾಗುತ್ತಿದೆ’ ಎಂದು ಎಸ್‌ಐಟಿ ಅಧಿಕಾರಿಯೊಬ್ಬರು ಮಾಹಿತಿ ನೀಡಿದರು.

‘ರಾಯಚೂರು ನಗರದ ಹೊರವಲಯದಲ್ಲಿ ರಾಷ್ಟ್ರೀಯ ಹೆದ್ದಾರಿ ಹಾದು ಹೋಗುವ ಮಾರ್ಗದಲ್ಲಿ ಜಮೀನು ಖರೀದಿಸಿರುವ ಮಾಹಿತಿ ಸಿಕ್ಕಿದೆ. ದದ್ದಲ್ ಅವರ ಪುತ್ರ ತ್ರಿಶೂಲ್‌ಕುಮಾರ್ ನಾಯಕ್ ಮತ್ತು ಕುಟುಂಬ ಸದಸ್ಯರು ಸೇರಿದಂತೆ ಬೇನಾಮಿ ಹೆಸರಿನಲ್ಲಿ ಜಮೀನು ಖರೀದಿಸಲಾಗಿದೆ ಎಂಬ ಮಾಹಿತಿಯಿದೆ’ ಎಂದು ಮೂಲಗಳು ಹೇಳಿವೆ.

‘ಸಿರವಾರ ಗಣದನ್ನಿ ಗ್ರಾಮದಲ್ಲಿ ಜೂನ್ 6ರಂದು 4 ಎಕರೆ 31 ಗುಂಟೆ ಜಮೀನು ಕ್ರಯ ಮಾಡಲಾಗಿದೆ ಎಂಬುದು ಪಹಣಿಯಲ್ಲಿ ನಮೂದಾಗಿದೆ. ಸಿದ್ದಪ್ಪಗೌಡ, ವೆಂಕಟರೆಡ್ಡಿ ಎಂಬವರಿಂದ ಈ ಜಮೀನು ಖರೀದಿಸಲಾಗಿದೆ. ತ್ರಿಶೂಲ್‌ಕುಮಾರ್ ನಾಯಕ್ ಬಿನ್ ಬಸನಗೌಡ ಹೆಸರಿನಲ್ಲಿ ಪಹಣಿಯಿದೆ. ಆ ಜಮೀನು ಯಾರದ್ದು? ಜಮೀನು ಖರೀದಿಸಿದ್ದರೆ, ಯಾವ ಹಣ ಬಳಸಲಾಗಿದೆ ಎಂಬುದರ ಕುರಿತೂ ಮಾಹಿತಿ ಕಲೆ ಹಾಕಲಾಗುತ್ತಿದೆ’ ಎಂದು ಎಸ್‌ಐಟಿ ಪೊಲೀಸರು ಹೇಳಿದರು. ‘ದದ್ದಲ್ ಅವರ ಕುಟುಂಬದ ಇತರೆ ಸದಸ್ಯರು, ಅಳಿಯ ಹಾಗೂ ಪತ್ನಿಯ ಸಂಬಂಧಿಕರ ಹೆಸರಿನಲ್ಲೂ ಬೇನಾಮಿಯಾಗಿ ಜಮೀನು ಖರೀದಿಸಿರುವ ಮಾಹಿತಿ ಇದೆ’ ಎಂದು ಮೂಲಗಳು ತಿಳಿಸಿವೆ.

ಪ್ರಜಾವಾಣಿ

ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

Log on to : https://homages.deccanherald.com
or
Scan QR code to access booking form

ಭಾವಪೂರ್ಣ ಶ್ರದ್ಧಾಂಜಲಿ



ಪರಮ ಪೂಜ್ಯ ಡಾ. ಅಲ್ಫೋನ್ಸ್ ಮಾಥಿಯಾಸ್

ಬೆಂಗಳೂರಿನ ನಿವೃತ್ತ ಮಹಾಧರ್ಮಾಧ್ಯಕ್ಷರು

ಜನನ : 22.06.1928
ಯಾಜಕ ದೀಕ್ಷೆ : 24.08.1954
ಧರ್ಮಾಧ್ಯಕ್ಷ ದೀಕ್ಷೆ : 05.02.1964
ನಿಧನ : 10.07.2024

ಅವರ ಪಾರ್ಥಿವ ಶರೀರವನ್ನು 15.07.2024 ಸೋಮವಾರ ಬೆಳಿಗ್ಗೆ 8.30 ರಿಂದ 10.15 ಗಂಟೆಯವರೆಗೆ ಬೆಂಗಳೂರಿನ ಸಂತ ಫ್ರಾನ್ಸಿಸ್ ಕ್ಸೇವಿಯರ್ ಪ್ರಧಾನಾಲಯದಲ್ಲಿ, (ಕ್ಲೀವ್‌ಲ್ಯಾಂಡ್ ಟೌನ್) ಸಾರ್ವಜನಿಕರ ದರ್ಶನಕ್ಕೆ ಇಡಲಾಗುವುದು. ತದನಂತರ ಬೆಳಿಗ್ಗೆ 10.30 ಗಂಟೆಗೆ ಬಲಿಪೂಜೆಯನ್ನು ನೆರವೇರಿಸಿ, ಅಂತಿಮ ಸಂಸ್ಕಾರವನ್ನು ಮಾಡಲಾಗುವುದು.
ದಯಾಮಯ ದೇವರು ದಿವಂಗತರಿಗೆ ಚಿರಶಾಂತಿಯನ್ನು ದಯಪಾಲಿಸಲಿ!

ಬೆಂಗಳೂರು ಮಹಾಧರ್ಮಕ್ಷೇತ್ರ

ದೂರವಾಣಿ ಕರೆ ರಾಹುಲ್, ಕಮಲಾ ಹ್ಯಾರಿಸ್ ಮಾತುಕತೆ

ನವದೆಹಲಿ (ಪಿಟಿಐ): ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಮತ್ತು ಅಮೆರಿಕ ಉಪಾಧ್ಯಕ್ಷೆ ಕಮಲಾ ಹ್ಯಾರಿಸ್ ಗುರುವಾರ ದೂರವಾಣಿ ಮೂಲಕ ಮಾತುಕತೆ ನಡೆಸಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಏನು ಮಾತಾನಾಡಿದ್ದಾರೆ ಎಂದು ತಿಳಿದಿಲ್ಲವಾದರೂ, ಇದು ಈ ವರ್ಷದ ಕೊನೆಯಲ್ಲಿ ನಡೆಯುವ ಅಮೆರಿಕ ಅಧ್ಯಕ್ಷೀಯ ಚುನಾವಣೆಗೆ ಸಂಬಂಧಿಸಿದ್ದಾಗಿದೆ ಎನ್ನಲಾಗಿದೆ.

ಭೂಕುಸಿತ

ಭೂಕುಸಿತದ ಬಳಿಕ ತ್ರಿಶೂಲಿ ನದಿಯಲ್ಲಿ ಕೊಚ್ಚಿಹೋದ ಎರಡು ಬಸ್‌ಗಳಲ್ಲಿ ಪ್ರಯಾಣಿಕರಿಗಾಗಿ ನೇಪಾಳದ ಸಿಮಲ್ತಾಲ್‌ನಲ್ಲಿ ಶುಕ್ರವಾರ ತೀವ್ರ ಕಾರ್ಯ ನಡೆದಿದೆ –ಎಎಫ್‌ಪಿ ಚಿತ್ರ

ಮಾಜಿ ಸಚಿವ ನಾಗೇಂದ್ರ ಬಂಧನ

ಒಂದನೇ ಪುಟದಿಂದ...

ಸದಾಶಿವನಗರದ ಡಾಲರ್ಸ್ ಕಾಲೊನಿಯ ಮನೆಯಲ್ಲಿದ್ದ ನಾಗೇಂದ್ರ ಅವರನ್ನು ಶುಕ್ರವಾರ ಬೆಳಿಗ್ಗೆ 8.30ರ ಸುಮಾರಿಗೆ ವಶಕ್ಕೆ ಪಡೆದ ಇ.ಡಿ ಅಧಿಕಾರಿಗಳು ಶಾಂತಿನಗರದಲ್ಲಿರುವ ತನಿಖಾ ಸಂಸ್ಥೆಯ ಕಚೇರಿಗೆ ಕರೆತಂದರು. ಇಡೀ ದಿನ ವಿಚಾರಣೆ ನಡೆಸಿದ ಇ.ಡಿ ಅಧಿಕಾರಿಗಳ ತಂಡ, ಹಗರಣದ ಕುರಿತು ಮಾಜಿ ಸಚಿವರಿಂದ ಹಲವು ಮಾಹಿತಿಗಳನ್ನು ಪಡೆಯಲು ಪ್ರಯತ್ನಿಸಿತು. ರಾತ್ರಿ ಒಂಬತ್ತು ಗಂಟೆಯ ಸುಮಾರಿಗೆ ಅವರನ್ನು ಬಂಧಿಸಲಾಯಿತು.

ಬಂಧನದ ಬಳಿಕ ನಾಗೇಂದ್ರ ಅವರನ್ನು ನಗರದ ಬೌರಿಂಗ್ ಮತ್ತು ಲೇಡಿ ಕರ್ಜನ್ ಆಸ್ಪತ್ರೆಗೆ ಕರೆದೊಯ್ದು ಆರೋಗ್ಯ ತಪಾಸಣೆ ಮಾಡಿಸಲಾಯಿತು.

ಇ.ಡಿಯಿಂದ ಮೊದಲ ಬಂಧನ: ಯೂನಿಯನ್ ಬ್ಯಾಂಕ್‌ನ ಎಂ.ಜಿ. ರಸ್ತೆಯ ಶಾಖೆಯಲ್ಲಿ ತೆರೆದಿದ್ದ ನಿಗಮದ ಖಾತೆಯಿಂದ ₹94.73 ಕೋಟಿಯನ್ನು ಅಕ್ರಮ ವರ್ಗಾವಣೆ ಮಾಡಲಾಗಿತ್ತು. ವಾಲ್ಮೀಕಿ ಅಭಿವೃದ್ಧಿ ನಿಗಮದ ಲೆಕ್ಕ ಅಧೀಕ್ಷಕ ಪಿ. ಚಂದ್ರ ಶೇಖರನ್, ಈ ಕುರಿತು ಹಲವರ ವಿರುದ್ಧ ಆರೋಪಗಳಿರುವ ಮರಣ ಪತ್ರ ಬರೆದಿಟ್ಟು ಶಿವಮೊಗ್ಗದ ತಮ್ಮ ಮನೆಯಲ್ಲಿ ಮೇ 26ರಂದು ನೇಣುಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದರು. ಆ ಬಳಿಕ ಹಗರಣ ಬಯಲಿಗೆ ಬಂದಿತ್ತು. ಆತ್ಮಹತ್ಯೆಗೆ ಸಂಬಂಧಿಸಿದಂತೆ ಶಿವಮೊಗ್ಗದಲ್ಲಿ ಒಂದು ಎಫ್‌ಐಆರ್ ದಾಖಲಾಗಿದ್ದರೆ, ನಿಗಮದ ಬ್ಯಾಂಕ್ ಖಾತೆಯಿಂದ ಅಕ್ರಮವಾಗಿ ಹಣ ವರ್ಗಾವಣೆ ಮಾಡಿರುವ ಬಗ್ಗೆ ನಗರದ ಹೈಗ್ರೌಂಡ್ಸ್ ಪೊಲೀಸ್ ಠಾಣೆಯಲ್ಲಿ ಮೇ 29ರಂದು ಪ್ರತ್ಯೇಕ ಪ್ರಕರಣ ದಾಖಲಾಗಿತ್ತು. ಯೂನಿಯನ್ ಬ್ಯಾಂಕ್ ಅಧಿಕಾರಿಗಳ ದೂರು ಆಧರಿಸಿ ಸಿಬಿಐ ಕೂಡ ಎಫ್‌ಐಆರ್ ದಾಖಲಿಸಿಕೊಂಡು ತನಿಖೆ ಆರಂಭಿಸಿತ್ತು.

ಸಂಕ್ಷಿಪ್ತ ಸುದ್ದಿ

ಅಧಿಕಾರ ಕಳೆದುಕೊಂಡ ‘ಪ್ರಚಂಡ’

ಕಠ್ಮಂಡು (ಪಿಟಿಐ): ನೇಪಾಳದಲ್ಲಿ ಮೈತ್ರಿ ಸರ್ಕಾರಕ್ಕೆ ನೀಡಿದ್ದ ಬೆಂಬಲವನ್ನು ಸಿಪಿಎನ್–ಯುಎಂಎಲ್ ಪಕ್ಷವು ವಾಪಸು ಪಡೆದಿದೆ. ಸರ್ಕಾರ ಅಲ್ಪಮತಕ್ಕೆ ಕುಸಿದಿದ್ದು, ಪ್ರಧಾನಿ ಪುಷ್ಪಕಮಲ್ ದಾಹಲ್ ‘ಪ್ರಚಂಡ’ ಅವರು ಅಧಿಕಾರ ಕಳೆದುಕೊಂಡಿದ್ದಾರೆ.

ಈಗ, ಮಾಜಿ ಪ್ರಧಾನಿ ಕೆ.ಪಿ.ಶರ್ಮಾ ಓಲಿ ಅವರ ನೇತೃತ್ವದಲ್ಲಿ ಹೊಸದಾಗಿ ಮೈತ್ರಿ ಸರ್ಕಾರ ರಚನೆಯಾಗುವ ಸಾಧ್ಯತೆಗಳು ನಿಚ್ಚಳವಾಗಿವೆ.

ವಿಶ್ವಾಸಮತವನ್ನು ಮತಕ್ಕೆ ಹಾಕಲಾಗಿದ್ದು, 275 ಸದಸ್ಯ ಬಲದ ಸಂಸತ್ತಿನಲ್ಲಿ ‘ಪ್ರಚಂಡ’ ಕೇವಲ 63 ಮತ ಪಡೆದರು. ವಿಶ್ವಾಸಮತದ ವಿರುದ್ಧವಾಗಿ 194 ಮತಗಳು ಬಂದವು.

‘ಚೀನಾ ಪರಿಣಾಮ ಎದುರಿಸಲಿದೆ’

ವಾಷಿಂಗ್ಟನ್ (ಪಿಟಿಐ): ಉಕ್ರೇನ್ ವಿರುದ್ಧದ ಯುದ್ಧದಲ್ಲಿ ರಷ್ಯಾಗೆ ಸಹಾಯ ಮಾಡಿದ್ದಕ್ಕಾಗಿ ಚೀನಾವು ಪರಿಣಾಮ ಎದುರಿಸಬೇಕಿದೆ ಎಂದಿರುವ ಅಮೆರಿಕ ಅಧ್ಯಕ್ಷ ಜೋ ಬೈಡನ್, ಐರೋಪ್ಯ ಒಕ್ಕೂಟದ ಕೆಲವು ದೇಶಗಳು ಪೂರ್ವ ಏಷ್ಯಾ ದೇಶದಲ್ಲಿ ತಮ್ಮ ಹೂಡಿಕೆಯನ್ನು ಕಡಿತಗೊಳಿಸಲಿವೆ ಎಂದಿದ್ದಾರೆ.

ಪ್ರಜಾವಾಣಿ ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in

ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Drivers

WANTED FEMALE Driver for reputed cab company. Salary 32k per month. Must have 1 year old driving license. Contact 9916242982 / 9902474455

General

ತಕ್ಷಣ ಬೇಕಾಗಿದ್ದಾರೆ. ಟಯೋಟಾ,TVS, ಬ್ರಿಟಾನಿಯಾ,ಟಾಟಾ ಮೋಟಾರ್ಸ್ ಕಂಪನಿಗಳಿಗೆ SSLC,PUC,Degree, ITI ನವರು.18,000/- 60,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿದೆ. 9035277967

Multiple Vacancy

REQUIRED EXPERIENCED Telecaller & Field executive For Bank Loan collection Salary + Incentive. 9916276701, 7899040499

Part-Time Jobs

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ, 15,000-20,000/- ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.

ಮನೆಯಲ್ಲಿಯೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ ತಿಂಗಳಿಗೆ 15,000-20,000ವರೆಗೆ ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ: 9663542555, 9663563555

Wanted

ವರ್ಕ್ ಫ್ರಮ್ ಹೋಮ್, ಆಫೀಸ್ ಕೆಲಸಕ್ಕೆ ಬೇಕಾಗಿದ್ದಾರೆ. 15,000–43,500/– ವಯೋಮಿತಿ ಇರುವುದಿಲ್ಲ. ಮೊದಲು ಬಂದವರಿಗೆ ಆದ್ಯತೆ. 8861041526, 9945791526.

ಭವಿಷ್ಯ

Astrology

★॥ಇಷ್ಟಪಟ್ಟವರು॥★ ನಿಮ್ಮಂತೆ ಆಗಲು. ಸ್ತ್ರೀ ಪುರುಷ ವಶೀಕರಣ. ನಿಮ್ಮ ಯಾವುದೇ ನಿಗೂಢ. ಗುಪ್ತ ಸಮಸ್ಯೆಗಳಿಗೆ. 1 ದಿನದಲ್ಲಿ. ಶಾಶ್ವತ ಪರಿಹಾರ. 9611968471

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.

ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪ್ರವಾಸ

Travel

14 ದಿನಗಳ ಚಾರ್ಧಾಮ್ ಪ್ರವಾಸ 14.09.2024. 10ದಿನಗಳ ರಾಜಸ್ಥಾನ ಪ್ರವಾಸ 19.10.2024. 5ದಿನಗಳ ಥೈಲ್ಯಾಂಡ್ ಪ್ರವಾಸ 08.10.2024. 14ದಿನಗಳ ಕಾಶ್ಮೀರ,ಹಿಮಾಚಲ ಪ್ರವಾಸ 20.12.24. Twite Holidays ಸಂಪರ್ಕಿಸಿ: 8088559962/ 9611801143.

10 ದಿನಗಳ ಕಾಂಬೋಡಿಯಾ, ವಿಯೆಟ್ನಾಂ. 7 ದಿನಗಳ ಶ್ರೀಲಂಕಾ ಮತ್ತು 6 ದಿನಗಳ ದುಬೈ. ಭಟ್ ಟ್ರಾವೆಲ್ಸ್: 9844037295/ 9844166555

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
ರಿಯಲ್ ಎಸ್ಟೇಟ್
ಪ್ರತಿ ಶನಿವಾರ + ಭಾನುವಾರ
ಕರ್ನಾಟಕದ ಎಲ್ಲಾ ಆವೃತ್ತಿಯಲ್ಲಿ ನಿಮ್ಮ ಜಾಹೀರಾತು ಬುಕ್ ಮಾಡಿ
@ 2244/-* FOR 15 WORDS
www.dhclassifieds.com
ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
9845114560
9901641752
*Conditions apply

ಐಎಎಸ್ ಅಧಿಕಾರಿ ಡಾ. ಪೂಜಾ ಖೇಡ್ಕರ್ ವಿವಾದ

ಔಡಿ ಕಾರಿಗೆ ಕೆಂಪು ದೀಪ ಅಳವಡಿಕೆ; ನೋಟಿಸ್

ಪ್ರಜಾವಾಣಿ ವಾರ್ತೆ/ಪಿಟಿಐ

ಮುಂಬೈ: ವಿವಾದಿತ ಐಎಎಸ್ ಪ್ರೊಬೇಷನರಿ ಅಧಿಕಾರಿ ಡಾ. ಪೂಜಾ ಖೇಡ್ಕರ್ ಅವರ ಔಡಿ ಕಾರಿಗೆ ಅಕ್ರಮವಾಗಿ ಕೆಂಪು ದೀಪ ಅಳವಡಿಸಿ, ‘ಮಹಾರಾಷ್ಟ್ರ ಸರ್ಕಾರ’ ಎಂದು ನಾಮಫಲಕ ಅಳವಡಿಸಿದ ಪುಣೆ ಮೂಲದ ಖಾಸಗಿ ಸಂಸ್ಥೆಗೆ ಆರ್‌ಟಿಒ ಅಧಿಕಾರಿಗಳು ನೋಟಿಸ್ ಜಾರಿಗೊಳಿಸಿದ್ದಾರೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಕಂಪನಿಯ ವಿರುದ್ಧ ಪುಣೆ ಪ್ರಾದೇಶಿಕ ಸಾರಿಗೆ ಕಚೇರಿಯು ಗುರುವಾರವೇ ಕ್ರಮಕ್ಕೆ ಮುಂದಾಗಿದೆ.

‘ಜಿಲ್ಲೆಯ ಹವೇಲಿ ತಾಲ್ಲೂಕಿನ ಶಿವಾನೆ ಗ್ರಾಮದ ಕೆಳಗಿನ ವಿಳಾಸದಲ್ಲಿ ನೋಂದಣಿಯಾದ ಎಂಎಚ್–12/ ಎಆರ್700 ಔಡಿ ಕಾರಿನ ಪರಿಶೀಲನೆಗಾಗಿ ತಕ್ಷಣವೇ ಆರ್‌ಟಿಒ ಕಚೇರಿ ಮುಂದೆ ಹಾಜರುಪಡಿಸಬೇಕು. ಫ್ಲೈಯಿಂಗ್ ಸ್ಕ್ವಾಡ್ ಕೂಡಲೇ ವಾಹನವನ್ನು ಪತ್ತೆಹಚ್ಚಿ, ಸೂಕ್ತ ಕ್ರಮಕ್ಕೆ ಮುಂದಾಗಬೇಕು’ ಎಂದು ನೋಟಿಸ್‌ನಲ್ಲಿ ತಿಳಿಸಲಾಗಿದೆ.

ಮೊದಲು ತಿಳಿಸಿದಂತೆ, ಯಾವುದೇ ವಿಷಯದ ಕುರಿತು ನಾನು ಮಾತನಾಡಲ್ಲ. ಈ ಬಗ್ಗೆ ನನಗೆ ಮಾತನಾಡಲು ಅಧಿಕಾರವಿಲ್ಲ

ಡಾ. ಪೂಜಾ ಖೇಡ್ಕರ್, ವಾಸೀಂ ಉಪ ವಿಭಾಗಾಧಿಕಾರಿ

32 ವರ್ಷದ ಐಎಎಸ್ ಅಧಿಕಾರಿ ಪೂಜಾ ಖೇಡ್ಕರ್ ಬಳಸುತ್ತಿದ್ದ ಕೆಂಪುದೀಪ ಹೊಂದಿದ್ದ ಬಿಳಿ ಬಣ್ಣದ ಔಡಿ ಕಾರಿನ ಭಾವಚಿತ್ರವು ಸಾಮಾಜಿಕ ಜಾಲತಾಣದಲ್ಲಿ ಹರಿದಾಡಿತ್ತು. ಪುಣೆಗೆ ಪೋಸ್ಟಿಂಗ್ ಮಾಡಿದ್ದ ವೇಳೆ ಪ್ರತ್ಯೇಕ ಕ್ಯಾಬಿನ್, ಸಿಬ್ಬಂದಿ ಒದಗಿಸುವಂತೆ ಬೇಡಿಕೆಯಿಡುವ ಮೂಲಕ ವಿವಾದಕ್ಕೂ ಕಾರಣವಾಗಿದ್ದರು. ಸರ್ಕಾರದ ಅನುಮತಿ ಪಡೆಯದೇ, ತಮ್ಮ ಸ್ವಂತ ಔಡಿ ಕಾರಿಗೆ ಕೆಂಪು ದೀಪ ಅಳವಡಿಸಿದ್ದರು. ಹೀಗಾಗಿ, ತರಬೇತಿ ಅವಧಿ ಮುಗಿಯುವ ಮೊದಲೇ, ಅವರನ್ನು ಪುಣೆ ಜಿಲ್ಲೆಯಿಂದ ವಾಸೀಂ ಜಿಲ್ಲೆಗೆ ವರ್ಗಾಯಿಸಲಾಗಿತ್ತು.

ಹೊಸ ಜವಾಬ್ದಾರಿ ಸ್ವೀಕಾರ: ಗುರುವಾರವೇ ವಿದರ್ಭ ಪ್ರಾಂತ್ಯದ ವಾಸೀಂ ಜಿಲ್ಲೆಗೆ ಹಾಜರಾದ ಖೇಡ್ಕರ್ ಉಪವಿಭಾಗಾಧಿಕಾರಿಯಾಗಿ ಅಧಿಕಾರ ಸ್ವೀಕರಿಸಿದರು.

ತಪ್ಪಿತಸ್ಥೆಯೆಂದು ಸಾಬೀತಾದರೆ ಸೇವೆಯಿಂದಲೇ ವಜಾ: ಪುಣೆಯ ಜಿಲ್ಲಾಧಿಕಾರಿ ಕಚೇರಿಯಲ್ಲಿ ಖೇಡ್ಕರ್ ನಡವಳಿಕೆ ಹೊರತಾಗಿಯೂ ಭಾರತೀಯ ಆಡಳಿತ ಸೇವೆ (ಐಎಎಸ್) ಸೇವೆಗೆ ಸೇರ್ಪಡೆಗೊಳ್ಳುವ ವೇಳೆ ಇತರೆ ಹಿಂದುಳಿದ ವರ್ಗ– ಅಂಗವಿಕಲ ಕೋಟಾ ದುರುಪಯೋಗಪಡಿಸಿಕೊಂಡಿದ್ದರು ಎಂದು ಆರೋಪ ಕೇಳಿಬಂದಿದೆ. ಖೇಡ್ಕರ್ ತಪ್ಪಿತಸ್ಥೆ ಎಂದು ಸಾಬೀತಾದರೆ, ತಮ್ಮ ಸೇವೆಯಿಂದಲೇ ವಜಾಗೊಳ್ಳಲಿದ್ದಾರೆ ಎಂದು ಅಧಿಕಾರಿಯೊಬ್ಬರು ತಿಳಿಸಿದರು.

ಪೂಜಾ ತಾಯಿಯಿಂದಲೂ ಬೆದರಿಕೆ

ಮುಂಬೈ: ಭೂ ವ್ಯವಹಾರ ಪ್ರಕರಣವೊಂದರಲ್ಲಿ ಪೂಜಾ ಖೇಡ್ಕರ್ ತಾಯಿ ಅಪರಿಚಿತ ವ್ಯಕ್ತಿಗಳ ವಿರುದ್ಧ ಪಿಸ್ತೂಲ್ ತೋರಿಸುವ ವಿಡಿಯೊ ಸಾಮಾಜಿಕ ಜಾಲತಾಣದಲ್ಲಿ ಹರಿದಾಡಿದೆ.

ಈ ಪ್ರಕರಣದ ಕುರಿತಂತೆ ಖೇಡ್ಕರ್ ಕುಟುಂಬವು ಯಾವುದೇ ಪ್ರತಿಕ್ರಿಯೆ ನೀಡಿಲ್ಲ.

ಖೇಡ್ಕರ್ ತಾಯಿ ಮನೋರಮಾ ಖೇಡ್ಕರ್ ಅವರು ಅಹಮದ್ ನಗರ ಜಿಲ್ಲೆಯ ಬಾಲಗಾಂವ್‌ನ ಸರಪಂಚ್ ಆಗಿದ್ದಾರೆ.

ಪುಣೆಯ ತಮ್ಮ ನಿವಾಸದ ಹೊರಗಡೆಯಲ್ಲಿ ಗುರುವಾರ ಮಾಧ್ಯಮ ಪ್ರತಿನಿಧಿಗಳಿಗೆ ಮನೋರಮಾ ಬೆದರಿಕೆ ಒಡ್ಡಿದ್ದರು. ಇದಾದ ಮರುದಿನವೇ ಅವರ ಮತ್ತೊಂದು ಹಳೆಯ ವಿಡಿಯೊ ಹೊರಬಂದಿದೆ.

ಕೈಯಲ್ಲಿ ಪಿಸ್ತೂಲ್ ಹಿಡಿದು ನಿಂತಿದ್ದ ಮನೋರಮಾ, ಆಸ್ತಿ ದಾಖಲೆ ಪತ್ರಗಳು ಇದ್ದರೆ ತೋರಿಸಿ, ಈ ಜಾಗ ನನ್ನ ಹೆಸರಿನಲ್ಲಿದೆ. ನಿಮ್ಮದು ಎಂದು ಹಕ್ಕು ಮಂಡಿಸಿದರೆ, ನ್ಯಾಯಾಲಯದ ಆದೇಶ ತೋರಿಸಿ‘ ಎಂದು ಹೇಳಿರುವುದು ವಿಡಿಯೊದಲ್ಲಿ ದಾಖಲಾಗಿದೆ. ಈ ವೇಳೆ ಅವರ ಜೊತೆ ಬೌನ್ಸರ್‌ಗಳು ಜೊತೆಗಿರುವುದು ಕಂಡುಬಂದಿದೆ.

ಮನೆ ಮುಂದೆ ಬುಲ್ಡೋಜರ್: ಈ ಬೆಳವಣಿಗೆ ಬೆನ್ನಲ್ಲೇ, ಪೂಜಾ ಅವರ ಮನೆಮುಂದೆ ಪುಣೆ ಮಹಾನಗರ ಪಾಲಿಕೆಗೆ ಸೇರಿದ ಎರಡು ವಾಹನಗಳು, ಬುಲ್ಡೋಜರ್ ನಿಂತಿದ್ದು, ನಿಖರ ಕಾರಣ ತಿಳಿದುಬಂದಿಲ್ಲ. ಈ ಕುರಿತು ಅಧಿಕಾರಿಗಳನ್ನು ಸಂಪರ್ಕಿಸಿದರೂ, ಯಾವುದೇ ಮಾಹಿತಿ ನೀಡಿಲ್ಲ.

ಉತ್ತರ ಪ್ರದೇಶದ ಮಿರ್ಜಾಪುರದಲ್ಲಿ ಭಾರಿ ಮಳೆಯಿಂದಾಗಿ ಶುಕ್ರವಾರ ಸಂಪೂರ್ಣ ಜಲಾವೃತಗೊಂಡಿರುವ ರಸ್ತೆಯಲ್ಲಿ ದ್ವಿಚಕ್ರ ವಾಹನವನ್ನು ಸವಾರ ತಳ್ಳಿಕೊಂಡು ಸಾಗಿದ (ಎಡ ಚಿತ್ರ) ಶಹಜಹಾನ್‌ಪುರದಲ್ಲಿ ಜಲಾವೃತ ಪ್ರದೇಶದಿಂದ ನಿವಾಸಿಗಳನ್ನು ರಕ್ಷಿಸಿ ಸೇನಾ ಸಿಬ್ಬಂದಿ ಸುರಕ್ಷಿತ ಸ್ಥಳಕ್ಕೆ ಕರೆದೊಯ್ದರು – ಪಿಟಿಐ ಚಿತ್ರಗಳು

ಉತ್ತರ ಪ್ರದೇಶದಲ್ಲಿ ಗ್ರಾಮಗಳು, ಕೃಷಿ ಭೂಮಿ ಜಲಾವೃತ • ಸಂಕಷ್ಟಕ್ಕೆ ಸಿಲುಕಿದ ಜನರು

ಎರಡು ದಿನಗಳಲ್ಲಿ 54 ಮಂದಿ ಸಾವು

ಪ್ರಜಾವಾಣಿ ವಾರ್ತೆ

ಲಖನೌ(ಪಿಟಿಐ): ಉತ್ತರ ಪ್ರದೇಶದಲ್ಲಿ ಮಳೆ ಸಂಬಂಧಿತ ಕಾರಣಗಳಿಂದಾಗಿ ಎರಡು ದಿನದಲ್ಲಿ 54 ಮಂದಿ ಮೃತಪಟ್ಟಿರುವುದಾಗಿ ಅಧಿಕಾರಿಗಳು ಶುಕ್ರವಾರ ತಿಳಿಸಿದ್ದಾರೆ.

ಸಿಡಿಲು, ಹಾವು ಕಡಿತ ಹಾಗೂ ಮಳೆ ನೀರಿನಲ್ಲಿ ಕೊಚ್ಚಿ ಹೋಗುವುದು ಸೇರಿದಂತೆ ಮಳೆ ಸಂಬಂಧಿತ ಕಾರಣಗಳಿಂದಾಗಿ ಬುಧವಾರ ಹಾಗೂ ಗುರುವಾರ ಒಟ್ಟು 54 ಮಂದಿ ಆಕಸ್ಮಿಕವಾಗಿ ಸಾವಿಗೀಡಾಗಿದ್ದಾರೆ.

ಪ್ರತಾಪಗಢ ಜಿಲ್ಲೆಯಲ್ಲಿ ಸಿಡಿಲಿಗೆ ಬುಧವಾರ ಒಂದೇ ದಿನ 12 ಮಂದಿ ಬಲಿಯಾಗಿದ್ದಾರೆ. ಸುಲ್ತಾನ್‌ಪುರದಲ್ಲಿ 7 ಮಂದಿ, ಚಂದೌಲಿಯಲ್ಲಿ 6, ಪ್ರಯಾಗ್‌ರಾಜ್‌ನಲ್ಲಿ 4 ಮಂದಿ, ಹಮೀರ್‌ಪುರದಲ್ಲಿ ಇಬ್ಬರು ಹಾಗೂ ಉನ್ನಾವೊ, ಅಮೇಠಿ, ಎಟವಾ, ಸೋನ್‌ಭದ್ರ ಜಿಲ್ಲೆಯಲ್ಲಿ ತಲಾ ಒಬ್ಬರು ಮೃತಪಟ್ಟಿರುವುದಾಗಿ ಮಾಹಿತಿ ನೀಡಿದ್ದಾರೆ. ಪ್ರತಾಪಗಢ ಹಾಗೂ ಫತೇಪುರ ಜಿಲ್ಲೆಯಲ್ಲಿ ಗುರುವಾರ ಸಿಡಿಲಿಗೆ ತಲಾ ಒಬ್ಬರು ಮೃತಪಟ್ಟಿದ್ದಾರೆ ಎಂದು ಅವರು ತಿಳಿಸಿದ್ದಾರೆ.

ಅಲ್ಲದೆ, ಫತೇಪುರ್ ಹಾಗೂ ಪ್ರತಾಪ್‌ಗಢದಲ್ಲಿ ಮೂವರು, ಎಟಾದಲ್ಲಿ ಇಬ್ಬರು ಹಾಗೂ ಬಾಂದಾ ಜಿಲ್ಲೆಯಲ್ಲಿ ಒಬ್ಬ ಮಳೆ ನೀರಿನಲ್ಲಿ ಮುಳುಗಿ ಸಾವಿಗೀಡಾಗಿದ್ದಾರೆ. ಹಾವು ಕಡಿತದಿಂದಾಗಿ ಅಮೇಠಿ ಹಾಗೂ ಸೋನ್‌ಭದ್ರ ಜಿಲ್ಲೆಯಲ್ಲಿ ಬುಧವಾರ ತಲಾ ಒಬ್ಬರು ಮೃತಪಟ್ಟಿದ್ದಾರೆ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಅವರು ಗುರುವಾರ ಪ್ರವಾಹ ಪೀಡಿತ ಜಿಲ್ಲೆಗಳಲ್ಲಿ ವೈಮಾನಿಕ ಸಮೀಕ್ಷೆ ನಡೆಸಿದ್ದು, ಸಂತ್ರಸ್ತರಿಗೆ ನೆರವು ನೀಡಲು ಅಧಿಕಾರಿಗಳಿಗೆ ನಿರ್ದೇಶಿಸಿದ್ದಾರೆ. ಪ್ರವಾಹ ಪೀಡಿತ ಜಿಲ್ಲೆಗಳಲ್ಲಿ ವೈದ್ಯಕೀಯ ತಂಡ ಮತ್ತು ಜನರ ರಕ್ಷಣೆಗೆ 750ಕ್ಕೂ ಹೆಚ್ಚು ದೋಣಿಗಳನ್ನು ಕಾರ್ಯಾಚರಣೆಗೆ ನಿಯೋಜಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

900ಕ್ಕೂ ಹೆಚ್ಚು ಹಳ್ಳಿಗಳ 18 ಲಕ್ಷ ಜನರಿಗೆ ಸಂಕಷ್ಟ

ನೇಪಾಳದ ಗಡಿ ಭಾಗದಲ್ಲಿರುವ ಜಿಲ್ಲೆಗಳಲ್ಲಿ ಪರಿಸ್ಥಿತಿ ಭೀಕರವಾಗಿದ್ದು, ಹೆಚ್ಚಿನ ಭೂಪ್ರದೇಶವು ಜಲಾವೃತಗೊಂಡಿದೆ. ಗ್ರಾಮಗಳಿಗೆ ನೀರು ನುಗ್ಗುತ್ತಿರುವುದರಿಂದ ಜನರು ಸುರಕ್ಷಿತ ಸ್ಥಳಗಳನ್ನು ಅರಸಿ ಹೋಗುತ್ತಿದ್ದಾರೆ ಎಂದು ವರದಿಗಳು ಹೇಳಿವೆ.

ಲಖೀಂಪುರ ಖೇರಿ ಜಿಲ್ಲೆಯಲ್ಲಿ ಸಾಕಷ್ಟು ಕೃಷಿ ಭೂಮಿ ಜಲಾವೃತಗೊಂಡಿದ್ದು, ರೈತರು ಸಂಕಷ್ಟಕ್ಕೆ ಸಿಲುಕಿದ್ದಾರೆ. ಬಲ್ಲಿಯಾ ಮತ್ತು ಮಊ ಜಿಲ್ಲೆಗಳಲ್ಲಿ ಸರಯೂ ನದಿಯು ಅಪಾಯದ ಮಟ್ಟ ಮೀರಿ ಹರಿಯುತ್ತಿದೆ. ಗೋರಖ್‌ಪುರದಲ್ಲಿ ಸರಯೂ, ರಾಪ್ತಿ ಹಾಗೂ ಆಮಿ ನದಿಗಳ ನೀರಿನ ಮಟ್ಟ ಹೆಚ್ಚಾಗುತ್ತಿದೆ. ಆಜಂಗಢ, ಮಊ, ಬಲ್ಲಿಯಾ, ಪಿಲಿಭಿತ್, ಶಹಜಹಾನ್‌ಪುರ, ಕುಶಿನಗರ, ಶ್ರಾವಸ್ತಿ, ಬಲರಾಮ್‌ಪುರ, ಲಖೀಂಪುರ ಖೇರಿ, ಬಾರಾಬಂಕಿ, ಸೀತಾಪುರ, ಗೊಂಡಾ, ಸಿದ್ಧಾರ್ಥ್ ನಗರ, ಮೊರಾದಾಬಾದ್, ಬರೈಲಿ ಮತ್ತು ಬಸ್ತಿ ಸೇರಿದಂತೆ ರಾಜ್ಯದ 18 ಜಿಲ್ಲೆಗಳು ಪ್ರವಾಹದಿಂದ ಬಾಧಿತವಾಗಿವೆ.

ಹಲವೆಡೆ ರಸ್ತೆ, ರೈಲು ಸಂಚಾರ ಸ್ಥಗಿತ

ಪ್ರವಾಹದ ನೀರು ರಸ್ತೆಗಳ ಮೇಲೆ ಹರಿಯುತ್ತಿರುವದರಿಂದ ಪಿಲಿಭಿತ್ ಜಿಲ್ಲೆಗಳಲ್ಲೂ ಅನೇಕ ರಸ್ತೆಗಳಲ್ಲಿ ವಾಹನ ಸಂಚಾರವನ್ನು ಸ್ಥಗಿತಗೊಳಿಸಲಾಗಿದೆ. ರೈಲು ಹಳಿಗಳು ಜಲಾವೃತಗೊಂಡಿರುವ ಕಾರಣ ಲಖೀಂಪುರ ಖೇರಿ– ಮೈಲಾನಿ ಮಾರ್ಗದಲ್ಲಿ ರೈಲು ಸಂಚಾರವನ್ನು ಬಂದ್ ಮಾಡಲಾಗಿದೆ. ಉಕ್ಕಿ ಹರಿಯುತ್ತಿರುವ ಗರ್ರಾ ನದಿ ನೀರು ಹಾರ್ದೋಯಿ ಜಿಲ್ಲೆಯ ಅನೇಕ ಹಳ್ಳಿಗಳಿಗೂ ನುಗ್ಗಿದೆ.

ಶಹಜಹಾನ್‌ಪುರ ಜಿಲ್ಲೆಯಲ್ಲಿ ಗರ್ರಾ ನದಿಯ ನೀರು ಸೇತುವೆಯ ಮೇಲೆ ಉಕ್ಕಿ ಹರಿಯುತ್ತಿದ್ದರಿಂದ ಲಖನೌ–ದೆಹಲಿಯನ್ನು ಸಂಪರ್ಕಿಸುವ ರಾಷ್ಟ್ರೀಯ ಹೆದ್ದಾರಿಯಲ್ಲಿ ವಾಹನಗಳ ಸಂಚಾರವನ್ನು ಸ್ಥಗಿತಗೊಳಿಸಲಾಗಿದೆ. ಶಹಜಹಾನ್‌ಪುರ ಪಟ್ಟಣದ ಅನೇಕ ನಗರಗಳಿಗೂ ನದಿ ನೀರು ನುಗ್ಗಿದ್ದು, ಜಿಲ್ಲಾಡಳಿತವು ಶನಿವಾರದವರೆಗೆ ಶಾಲೆಗಳನ್ನು ಬಂದ್ ಮಾಡಿ ಆದೇಶಿಸಿದೆ.

ಮುಂಬೈನಲ್ಲಿ ವಾಹನ ಸಂಚಾರ ಅಸ್ತವ್ಯಸ್ತ

ಮುಂಬೈನಲ್ಲಿ ಭಾರಿ ಮಳೆ ಸುರಿದ ಕಾರಣ ಮೇಲ್ಸೇತುವೆಯಲ್ಲಿ ಜನದಟ್ಟಣೆ ಉಂಟಾಗಿತ್ತು – ಪಿಟಿಐ ಚಿತ್ರ

ಮುಂಬೈ (ಪಿಟಿಐ): ಮುಂಬೈನಲ್ಲಿ ಶುಕ್ರವಾರ ಬೆಳಿಗ್ಗೆಯಿಂದ ಸುರಿದ ಭಾರಿ ಮಳೆಯಿಂದಾಗಿ ವಾಹನ ಸಂಚಾರ ಅಸ್ತವ್ಯಸ್ತವಾಗಿ ದಟ್ಟಣೆ ಉಂಟಾಗಿತ್ತು.

ಮುಂಬೈನ ಹಲವು ಭಾಗಗಳಲ್ಲಿ ಬೆಳಿಗ್ಗೆ 7ರಿಂದ 8 ಗಂಟೆಯವರೆಗೆ 15 ಮಿ.ಮೀ ಮಳೆ ಸುರಿದಿದೆ. ಸಿಯೋನ್‌ನಂತಹ ತಗ್ಗು ಪ್ರದೇಶಗಳು ಮತ್ತು ಅಂಧೇರಿ ಸಬ್‌ವೇಯು ಜಲಾವೃತಗೊಂಡಿತ್ತು. ಹಲವಾರು ರಸ್ತೆಗಳಲ್ಲಿಯೂ ನೀರು ತುಂಬಿದ್ದರಿಂದ ವಾಹನಗಳು ಪರ್ಯಾಯ ಮಾರ್ಗಗಳಲ್ಲಿ ಸಂಚರಿಸಿದವು.

‘ಮುಂಬೈನ ಕೆಲವು ಭಾಗಗಳಲ್ಲಿ ಮುಂದಿನ 24 ಗಂಟೆಗಳಲ್ಲಿ ಭಾರಿ ಮಳೆಯಾಗುವ ಸಾಧ್ಯತೆಗಳಿವೆ’ ಎಂದು ಹವಾಮಾನ ತಜ್ಞರು ತಿಳಿಸಿದ್ದಾರೆ.

ಅಬಕಾರಿ ನೀತಿ ಹಗರಣದಲ್ಲಿ ಮಧ್ಯಂತರ ಜಾಮೀನು

ಕೇಜ್ರಿವಾಲ್‌ಗೆ ಸಿಹಿ–ಕಹಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಅಬಕಾರಿ ನೀತಿ ಹಗರಣದ ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರಿಗೆ ಸುಪ್ರೀಂ ಕೋರ್ಟ್ ಶುಕ್ರವಾರ ಮಧ್ಯಂತರ ಜಾಮೀನು ನೀಡಿದೆ. ಇದೇ ಹಗರಣದ ಪ್ರತ್ಯೇಕ ಪ್ರಕರಣದಲ್ಲಿ ಕೇಜ್ರಿವಾಲ್ ಅವರನ್ನು ಸಿಬಿಐ ಬಂಧಿಸಿತ್ತು. ಈ ನ್ಯಾಯಾಂಗ ಬಂಧನದ ಅವಧಿಯನ್ನು ವಿಶೇಷ ನ್ಯಾಯಾಲಯ ಜುಲೈ 25ರವರೆಗೆ ವಿಸ್ತರಿಸಿದೆ. ಹೀಗಾಗಿ, ಅವರು ಜೈಲಿನಲ್ಲಿಯೇ ಉಳಿಯಲಿದ್ದಾರೆ.

ಹಣ ಅಕ್ರಮ ವರ್ಗಾವಣೆ ತಡೆ ಕಾಯ್ದೆಯ ಸೆಕ್ಷನ್ 19ರ ಅಡಿಯಲ್ಲಿ ‘ಬಂಧಿಸುವ ಅಗತ್ಯತೆ’ ಪ್ರಶ್ನಿಸಿ ಕೇಜ್ರಿವಾಲ್ ಸಲ್ಲಿಸಿದ್ದ ಅರ್ಜಿಯನ್ನು ಸುಪ್ರೀಂ ಕೋರ್ಟ್‌ನ ನ್ಯಾಯಮೂರ್ತಿಗಳಾದ ಸಂಜೀವ್ ಖನ್ನಾ ಮತ್ತು ದೀಪಂಕರ್ ದತ್ತಾ ಅವರ ಪೀಠವು ವಿಸ್ತೃತ ಪೀಠಕ್ಕೆ ವರ್ಗಾಯಿಸಿದೆ.

‘ಈ ಅರ್ಜಿಯಲ್ಲಿ ಎತ್ತಿರುವ ಕೆಲವು ಕಾನೂನು ಪ್ರಶ್ನೆಗಳನ್ನು ವಿಸ್ತೃತ ಪೀಠವು ಪರಿಶೀಲಿಸುವುದು ಸೂಕ್ತ’ ಎಂದು ಪೀಠ ಅಭಿಪ್ರಾಯಪಟ್ಟಿದೆ. ‘ನಾವು ಈ ವಿಷಯವನ್ನು ವಿಸ್ತೃತ ಪೀಠಕ್ಕೆ ಉಲ್ಲೇಖಿಸುತ್ತಿದ್ದೇವೆ. ಕೇಜ್ರಿವಾಲ್ ಅವರನ್ನು ಮಧ್ಯಂತರ ಜಾಮೀನಿನ ಮೇಲೆ ಬಿಡುಗಡೆ ಮಾಡುವಂತೆ ನಾವು ನಿರ್ದೇಶಿಸುತ್ತೇವೆ’ ಎಂದು ನ್ಯಾಯಮೂರ್ತಿ ಖನ್ನಾ ಹೇಳಿದರು.

‘ಜೀವಿಸುವ ಹಾಗೂ ಸ್ವಾತಂತ್ರ್ಯದ ಹಕ್ಕು ಪವಿತ್ರವಾದುದು. ಕೇಜ್ರಿವಾಲ್ ಅವರು 90 ದಿನಗಳ ಕಾಲ ಸೆರೆವಾಸ ಅನುಭವಿಸಿದ್ದಾರೆ. ಅವರು ಚುನಾಯಿತ ನಾಯಕ ಹಾಗೂ ದೆಹಲಿಯ ಮುಖ್ಯಮಂತ್ರಿ. ಇದು ಪಾವಿತ್ರ್ಯ ಹಾಗೂ ಪ್ರಾಮುಖ್ಯ ಹೊಂದಿರುವ ಹುದ್ದೆ. ನಾವು ಆರೋಪಗಳ ಬಗ್ಗೆಯೂ ಉಲ್ಲೇಖಿಸಿದ್ದೇವೆ. ಚುನಾಯಿತ ನಾಯಕನನ್ನು ಕೆಳಗಿಳಿಯುವಂತೆ ಅಥವಾ ಮುಖ್ಯಮಂತ್ರಿ ಆಗಿ ಅಥವಾ ಮಂತ್ರಿಯಾಗಿ ಕಾರ್ಯನಿರ್ವಹಿಸದಂತೆ ನ್ಯಾಯಾಲಯವು ನಿರ್ದೇಶಿಸಬಹುದೇ ಎಂಬ ಬಗ್ಗೆ ಸಂದೇಹವಿದೆ. ಹಾಗಾಗಿ, ನಾವು ಯಾವುದೇ ನಿರ್ದೇಶನಗಳನ್ನು ನೀಡುವುದಿಲ್ಲ. ತಮ್ಮ ಹುದ್ದೆಯಲ್ಲಿ ಮುಂದುವರಿಯಬೇಕೇ ಅಥವಾ ಬೇಡವೇ ಎಂಬುದು ಕೇಜ್ರಿವಾಲ್ ಅವರ ವಿವೇಚನೆಗೆ ಬಿಟ್ಟ ವಿಷಯ’ ಎಂದು ನ್ಯಾಯಪೀಠ ಸ್ಪಷ್ಟಪಡಿಸಿತು. ‘ವಿಸ್ತೃತ ಪೀಠವು ಮಧ್ಯಂತರ ಜಾಮೀನಿನ ಕುರಿತ ತೀರ್ಪನ್ನು ಪರಿಷ್ಕರಿಸಬಹುದು ಅಥವಾ ಅಂತಹ ಸಂದರ್ಭಗಳಲ್ಲಿ ವಿಧಿಸಬಹುದಾದ ಷರತ್ತುಗಳನ್ನು ನಿರ್ಧರಿಸಬಹುದು’ ಎಂದು ಪೀಠ ಹೇಳಿತು.

ಜತೆಗೆ, ಲೋಕಸಭಾ ಚುನಾವಣಾ ಪ್ರಚಾರಕ್ಕಾಗಿ ಕೇಜ್ರಿವಾಲ್ ಬಿಡುಗಡೆಯಾದ ಮೇ 10ರಂದು ವಿಧಿಸಿದ ಅದೇ ನಿಯಮಗಳು ಹಾಗೂ ಷರತ್ತುಗಳನ್ನು ನ್ಯಾಯಪೀಠ ನಿಗದಿಪಡಿಸಿತು. ಅದರ ಪ್ರಕಾರ, ಅವರು ಮುಖ್ಯಮಂತ್ರಿ ಕಚೇರಿ ಹಾಗೂ ದೆಹಲಿ ಸಚಿವಾಲಯದ ಕಚೇರಿಗೆ ಹೋಗುವಂತಿಲ್ಲ.

‘ದೆಹಲಿಯ ಲೆಫ್ಟಿನೆಂಟ್ ಗವರ್ನರ್ ಅವರ ಅನುಮತಿ/ಅನುಮೋದನೆ ಪಡೆಯಲು ಅಗತ್ಯವಿರುವ ಅಧಿಕೃತ ಕಡತಗಳಿಗೆ ಸಹಿ ಹಾಕುವುದಿಲ್ಲ ಎಂಬ ಹೇಳಿಕೆಗೆ ಅವರು ಬದ್ಧರಾಗಿರುತ್ತಾರೆ’ ಎಂದು ಪೀಠ ಹೇಳಿತು.

ಹಣ ಅಕ್ರಮ ವರ್ಗಾವಣೆ ತಡೆ ಕಾಯ್ದೆಯ ಸೆಕ್ಷನ್ 19(1)ರ ಅಡಿಯಲ್ಲಿ ಆರೋಪಿಯು ತನ್ನ ಬಂಧನವನ್ನು ಪ್ರಶ್ನಿಸಲು ಅರ್ಹನಾಗಿದ್ದಾನೆ ಎಂದು ಪೀಠವು ಅಭಿಪ್ರಾಯಪಟ್ಟಿತು.

‘ಜಾರಿ ನಿರ್ದೇಶನಾಲಯವು ಏಕರೂಪವಾಗಿ ಕಾರ್ಯನಿರ್ವಹಿಸಬೇಕು. ತನ್ನ ಪ್ರಕರಣಗಳಲ್ಲಿ ಆರೋಪಿಗಳನ್ನು ಬಂಧಿಸುವ ಸಂದರ್ಭದಲ್ಲಿ ಎಲ್ಲರಿಗೂ ಒಂದೇ ನಿಯಮವನ್ನು ಅನ್ವಯಿಸಬೇಕು’ ಎಂದು ಪೀಠ ಹೇಳಿತು.

ಬಿಭವ್ ಜಾಮೀನು ಅರ್ಜಿ ವಜಾ

ನವದೆಹಲಿ (ಪಿಟಿಐ): ಎಎಪಿ ರಾಜ್ಯಸಭಾ ಸಂಸದೆ ಸ್ವಾತಿ ಮಾಲಿವಾಲ್ ಮೇಲೆ ಹಲ್ಲೆ ನಡೆಸಿರುವ ಆರೋಪ ಪ್ರಕರಣದಲ್ಲಿ ಬಂಧಿತರಾಗಿರುವ ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರ ಸಹಾಯಕ ಬಿಭವ್ ಕುಮಾರ್ ಅವರಿಗೆ ಜಾಮೀನು ನೀಡಲು ದೆಹಲಿ ಹೈಕೋರ್ಟ್ ನಿರಾಕರಿಸಿದೆ.

‘ಬಿಭವ್ ಅವರಿಗೆ ಜಾಮೀನು ನೀಡಲು ಯಾವುದೇ ಕಾರಣವಿಲ್ಲ’ ಎಂದು ನ್ಯಾಯಮೂರ್ತಿ ಅನೂಪ್ ಕುಮಾರ್ ಮೆಂಡಿರಟ್ಟ ಅವರು ಜಾಮೀನು ಅರ್ಜಿಯನ್ನು ವಜಾಗೊಳಿಸಿದರು.

ಕೇಜ್ರಿವಾಲ್ ಅವರ ಅಧಿಕೃತ ನಿವಾಸದಲ್ಲಿ ಸ್ವಾತಿ ಅವರ ಮೇಲೆ ಹಲ್ಲೆ ನಡೆಸಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಮೇ16ರಂದು ಬಿಭವ್ ವಿರುದ್ಧ ಎಫ್‌ಐಆರ್ ದಾಖಲಿಸಲಾಗಿತ್ತು. ಬಳಿಕ ಮೇ18 ರಂದು ಅವರನ್ನು ಪೊಲೀಸರು ಬಂಧಿಸಿದರು. ಸದ್ಯ ಅವರು ನ್ಯಾಯಾಂಗ ಬಂಧನದಲ್ಲಿದ್ದು, ಜಾಮೀನು ಕೋರಿ ಅರ್ಜಿ ಸಲ್ಲಿಸಿದ್ದರು.

‘ಶಂಭು ಗಡಿ ಬ್ಯಾರಿಕೇಡ್ ತೆರವುಗೊಳಿಸಿ’

ಪ್ರಜಾವಾಣಿ ವಾರ್ತೆ/ ಪಿಟಿಐ

ನವದೆಹಲಿ: ಅಂಬಾಲಾ ಬಳಿಯ ಶಂಭು ಗಡಿಯಲ್ಲಿನ ಬ್ಯಾರಿಕೇಡ್‌ಗಳನ್ನು ತೆರವುಗೊಳಿಸುವಂತೆ ಹರಿಯಾಣ ಸರ್ಕಾರಕ್ಕೆ ಶುಕ್ರವಾರ ಸೂಚಿಸಿರುವ ಸುಪ್ರೀಂ ಕೋರ್ಟ್, ಹೆದ್ದಾರಿ ನಿರ್ಬಂಧಿಸುವ ಸರ್ಕಾರದ ಅಧಿಕಾರವನ್ನು ಪ್ರಶ್ನಿಸಿದೆ.

‘ಅಲ್ಲಿ ಪ್ರತಿಭಟನೆ ನಡೆಸುತ್ತಿರುವ ರೈತರು ದೇಶದ ನಾಗರಿಕರಾಗಿದ್ದಾರೆ. ಅವರಿಗೆ ಆಹಾರ ಮತ್ತು ಉತ್ತಮ ವೈದ್ಯಕೀಯ ಸೇವೆಯನ್ನು ಒದಗಿಸಿ. ಅವರು ಬರುತ್ತಾರೆ, ಘೋಷಣೆಗಳನ್ನು ಕೂಗುತ್ತಾರೆ ಮತ್ತು ಹಿಂತಿರುಗುತ್ತಾರೆ’ ಎಂದು ನ್ಯಾಯಾಲಯ ಹೇಳಿದೆ.

‘ಸಂಚಾರ ನಿಯಂತ್ರಿಸುವುದು ತನ್ನ ಕರ್ತವ್ಯವಾಗಿರುವಾಗ ರಾಜ್ಯ ಸರ್ಕಾರವು ಹೆದ್ದಾರಿಯನ್ನು ಹೇಗೆ ನಿರ್ಬಂಧಿಸಬಹುದು’ ಎಂದು ಅದು ಕೇಳಿದೆ.

ಕೃಷಿ ಬೆಳೆಗಳಿಗೆ ಕನಿಷ್ಠ ಬೆಂಬಲ ಬೆಲೆ ಸೇರಿದಂತೆ ವಿವಿಧ ಬೇಡಿಕೆಗಳಿಗೆ ಆಗ್ರಹಿಸಿ ರೈತರು ಫೆಬ್ರುವರಿ 13ರಿಂದ ಶಂಭು ಗಡಿಯಲಿ ಮೊಕ್ಕಾಂ ಹೂಡಿ ಪ್ರತಿಭಟನೆ ನಡೆಸುತ್ತಿದ್ದಾರೆ. ಸಂಯುಕ್ತ ಕಿಸಾನ್ ಮೋರ್ಚಾ (ರಾಜಕೀಯೇತರ) ಮತ್ತು ಕಿಸಾನ್ ಮಜ್ದೂರ್ ಮೋರ್ಚಾ ‘ದೆಹಲಿ ಚಲೊ’ ಘೋಷಿಸಿದ ಬಳಿಕ ಹರಿಯಾಣ ಸರ್ಕಾರ ಅಂಬಾಲ–ನವದೆಹಲಿ ರಾಷ್ಟ್ರೀಯ ಹೆದ್ದಾರಿಯಲ್ಲಿ ಬ್ಯಾರಿಕೆಡ್‌ಗಳನ್ನು ಅಳವಡಿಸಿ, ರೈತರ ದೆಹಲಿ ಮೆರವಣಿಗೆಯನ್ನು ತಡೆದಿದೆ.

‘ಮೇಲ್ಮನವಿ ಏಕೆ?’

‘ಅಷ್ಟಕ್ಕೂ ಹೈಕೋರ್ಟ್ ಆದೇಶವನ್ನು ಏಕೆ ಪ್ರಶ್ನಿಸಲು ಬಯಸುತ್ತಿದ್ದೀರಿ? ರೈತರು ಈ ದೇಶದ ಪ್ರಜೆಗಳು. ಅವರಿಗೆ ಆಹಾರ ಮತ್ತು ಉತ್ತಮ ವೈದ್ಯಕೀಯ ಸೇವೆ ಒದಗಿಸಿ’ ಎಂದ ಪೀಠವು, ‘ನೀವು ರಸ್ತೆಯ ಮೂಲಕ ಪ್ರಯಾಣಿಸುವುದಿಲ್ಲ ಎಂದು ಭಾವಿಸಿದ್ದೇವೆ’ ಎಂದು ಹರಿಯಾಣ ಸರ್ಕಾರದ ವಕೀಲರನ್ನು ಸುಪ್ರೀಂ ಕೋರ್ಟ್ ಪೀಠವು ಕೇಳಿತು.

ಆಗ, ‘ನಾನು ರಸ್ತೆ ಮೂಲಕ ಪ್ರಯಾಣಿಸುತ್ತೇನೆ’ ಎಂದು ವಕೀಲರು ಉತ್ತರಿಸಿದರು. ‘ಹಾಗಾದರೆ, ನಿಮಗೂ ಈ ಕಷ್ಟಗಳು ಅನುಭವಕ್ಕೆ ಬಂದಿರಬೇಕಲ್ಲ’ ಎಂದ ಪೀಠವು, ಬಾಕಿ ಉಳಿದಿರುವ ವಿಚಾರಗಳಲ್ಲಿ ನಂತರದ ಬೆಳವಣಿಗೆಗಳ ಕುರಿತು ಪ್ರಮಾಣಪತ್ರ ಸಲ್ಲಿಸುವಂತೆ ಸೂಚಿಸಿತು.

‘ಸಂವಿಧಾನ ಹತ್ಯಾ ದಿವಸ್’

ಜೂನ್ 25: ತುರ್ತುಪರಿಸ್ಥಿತಿ ಹಿನ್ನೆಲೆ ಬಿಜೆಪಿ ಘೋಷಣೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರವು ಜೂನ್ 25 ಅನ್ನು ‘ಸಂವಿಧಾನ ಹತ್ಯಾ ದಿವಸ್’ (ಸಂವಿಧಾನದ ಹತ್ಯೆಯ ದಿನ) ಎಂದು ಘೋಷಿಸಿದೆ. ತುರ್ತುಪರಿಸ್ಥಿತಿಯ ಸಂದರ್ಭದಲ್ಲಿ ಅಧಿಕಾರ ದುರುಪಯೋಗದ ವಿರುದ್ಧ ಹೋರಾಡಿದವರಿಗೆ ಆ ದಿನದಂದು ಗೌರವ ಸಲ್ಲಿಸಲಾಗುವುದು ಎಂದು ಸರ್ಕಾರ ಹೇಳಿದೆ.

ವಿರೋಧ ಪಕ್ಷಗಳ ‘ಇಂಡಿಯಾ’ ಮೈತ್ರಿಕೂಟದ ‘ಸಂವಿಧಾನ ಉಳಿಸಿ’ ಅಭಿಯಾನಕ್ಕೆ ಪ್ರತಿಯಾಗಿ ಕೇಂದ್ರ ಸರ್ಕಾರ ಈ ಘೋಷಣೆ ಮಾಡಿದೆ ಎನ್ನಲಾಗುತ್ತಿದೆ.

ಈ ಕುರಿತು ‘ಎಕ್ಸ್’ನಲ್ಲಿ ಪೋಸ್ಟ್ ಮಾಡಿರುವ ಪ್ರಧಾನಿ ನರೇಂದ್ರ ಮೋದಿ, ‘ಭಾರತದ ಸಂವಿಧಾನದ ಮೇಲೆ ದಾಳಿ ನಡೆದಾಗ ಏನಾಗುತ್ತದೆ ಎಂಬುದನ್ನು ನೆನಪು ಮಾಡಿಕೊಳ್ಳಲು ಜೂನ್ 25 ಅನ್ನು ಸಂವಿಧಾನ ಹತ್ಯಾ ದಿವಸ್ ಆಗಿ ಆಚರಿಸಲಾಗುವುದು. ತುರ್ತುಪರಿಸ್ಥಿತಿ ಯಿಂದ ಬಳಲಿದ ಪ್ರತಿಯೊಬ್ಬರಿಗೂ ಗೌರವ ಸಲ್ಲಿಸುವ ದಿನ ಅದಾಗಿದೆ. ಅದು ಭಾರತದ ಇತಿಹಾಸದಲ್ಲಿ ಕಾಂಗ್ರೆಸ್‌ನ ಕರಾಳ ಮುಖವನ್ನು ಅನಾವರಣಗೊಳಿಸುತ್ತದೆ’ ಎಂದು ಹೇಳಿದ್ದಾರೆ.

‘ಈ ನಿರ್ಧಾರವು ಪ್ರತಿ ಭಾರತೀಯನಲ್ಲೂ ವೈಯಕ್ತಿಕ ಸ್ವಾತಂತ್ರ್ಯ ಮತ್ತು ಪ್ರಜಾಪ್ರಭುತ್ವದ ರಕ್ಷಣೆ ಕುರಿತ ಜ್ವಾಲೆಯನ್ನು ಶಾಶ್ವತವಾಗಿ ಜೀವಂತವಾಗಿಡಲು ನೆರವಾಗುತ್ತದೆ. ಕಾಂಗ್ರೆಸ್‌ನಂತಹ ಸರ್ವಾಧಿಕಾರಿ ಶಕ್ತಿಗಳು ಆ ಭೀಕರತೆಯನ್ನು ಪುನರಾವರ್ತಿಸದಂತೆ ತಡೆಯುತ್ತದೆ’ ಎಂದು ಗೃಹ ಸಚಿವ ಅಮಿತ್ ಶಾ ‘ಎಕ್ಸ್’ನಲ್ಲಿ ತಿಳಿಸಿದ್ದಾರೆ.

ಈ ಕುರಿತು ಅಧಿಸೂಚನೆ ಹೊರಡಿಸಿರುವ ಗೃಹ ಸಚಿವಾಲಯ, ‘1975ರ ಜೂನ್ 25ರಂದು ತುರ್ತುಪರಿಸ್ಥಿತಿ ಘೋಷಣೆಯಾಯಿತು. ದೇಶದ ಜನರು ಮಿತಿಮೀರಿದ ದೌರ್ಜನ್ಯಕ್ಕೆ ತುತ್ತಾದರು. ಈ ಅವಧಿಯಲ್ಲಿ ಅಧಿಕಾರ ದುರುಪಯೋಗದ ವಿರುದ್ಧ ಹೋರಾಡಿದ ಮತ್ತು ಸಂಕಷ್ಟ ಅನುಭವಿಸಿದ ಎಲ್ಲರಿಗೂ ಗೌರವ ಸಲ್ಲಿಸಲು ಜೂನ್ 25 ಅನ್ನು ‘ಸಂವಿಧಾನ ಹತ್ಯಾ ದಿವಸ್’ ಎಂದು ಘೋಷಿಸಲಾಗಿದೆ ಎಂದು ತಿಳಿಸಿದೆ.

ಮೋದಿ ಮುಕ್ತಿ ದಿವಸ್– ಕಾಂಗ್ರೆಸ್

ಇದಕ್ಕೆ ತೀಕ್ಷ್ಣವಾಗಿ ಪ್ರತಿಕ್ರಿಯಿಸಿರುವ ಕಾಂಗ್ರೆಸ್, 2024ರ ಲೋಕಸಭಾ ಚುನಾವಣೆಯ ಫಲಿತಾಂಶದ ದಿನವಾದ ಜೂನ್ 4 ಅನ್ನು ‘ಮೋದಿ ಮುಕ್ತಿ ದಿವಸ್’ ಎಂದು ಕರೆದಿದೆ.

10 ವರ್ಷಗಳ ಕಾಲ ಘೋಷಿತವಲ್ಲದ ತುರ್ತುಪರಿಸ್ಥಿತಿಯನ್ನು ಜನರು ಎದುರಿಸುತ್ತಿದ್ದಾರೆ ಎಂದಿರುವ ಕಾಂಗ್ರೆಸ್, ಜೂನ್ 4 ಅನ್ನು ಮೋದಿ ಅವರು ವೈಯಕ್ತಿಕ, ರಾಜಕೀಯ ಮತ್ತು ನೈತಿಕ ಸೋಲಿನ ದಿನ ಎಂದು ವರ್ಣಿಸಿದೆ.

ಸಂಕ್ಷಿಪ್ತ ಸುದ್ದಿ

ಸ್ಮೃತಿ ಇರಾನಿ ಅವಹೇಳನ ಬೇಡ: ರಾಹುಲ್ ಗಾಂಧಿ

ನವದೆಹಲಿ (ಪಿಟಿಐ): ಕೇಂದ್ರದ ಮಾಜಿ ಸಚಿವೆ ಸ್ಮೃತಿ ಇರಾನಿ ಅಥವಾ ಇತರ ಯಾವುದೇ ನಾಯಕರ ಬಗ್ಗೆ ಅವಹೇಳನಕಾರಿ ಭಾಷೆ ಬಳಸುವುದು ಮತ್ತು ಅವರ ಜತೆ ಕೆಟ್ಟದಾಗಿ ವರ್ತಿಸುವುದನ್ನು ನಿಲ್ಲಿಸಬೇಕು ಎಂದು ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರು ಮನವಿ ಮಾಡಿದ್ದಾರೆ.

ಲೋಕಸಭಾ ಚುನಾವಣೆಯಲ್ಲಿ ಉತ್ತರ ಪ್ರದೇಶದ ಅಮೇಠಿ ಕ್ಷೇತ್ರದಲ್ಲಿ ಕಾಂಗ್ರೆಸ್‌ನ ಕಿಶೋರಿ ಲಾಲ್ ಶರ್ಮಾ ಎದುರು ಸೋತಿದ್ದ ಇರಾನಿ ಅವರು ಈಚೆಗೆ ನವದೆಹಲಿಯ ತಮ್ಮ ಸರ್ಕಾರಿ ನಿವಾಸವನ್ನು ಖಾಲಿ ಮಾಡಿದ್ದರು. ಅದನ್ನು ಉಲ್ಲೇಖಿಸಿ ಕೆಲವರು ಸ್ಮೃತಿ ಅವರನ್ನು ಕೆಣಕಿದ್ದರು. ಈ ಬೆಳವಣಿಗೆಯ ಬೆನ್ನಲ್ಲೇ ರಾಹುಲ್ ಹೇಳಿಕೆ ಹೊರಬಿದ್ದಿದೆ.

‘ಜೀವನದಲ್ಲಿ ಸೋಲು–ಗೆಲುವು ಸಾಮಾನ್ಯ. ಜನರನ್ನು ಅವಮಾನಿಸುವುದು ಮತ್ತು ಅವಹೇಳನ ಮಾಡುವುದು ದೌರ್ಬಲ್ಯದ ಸಂಕೇತವೇ ಹೊರತು ಅದು ಶಕ್ತಿಯಲ್ಲ’ ಎಂದು ‘ಎಕ್ಸ್’ನಲ್ಲಿ ಹೇಳಿದ್ದಾರೆ.

ಮಾನನಷ್ಟ: ಕೋರ್ಟ್ ಆದೇಶ ರದ್ದು

ಮುಂಬೈ (ಪಿಟಿಐ): ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ವಿರುದ್ಧದ ವಿಚಾರಣೆಗೆ ಬಾಕಿ ಇರುವ ಮಾನನಷ್ಟ ಪ್ರಕರಣದಲ್ಲಿ ಹೊಸದಾಗಿ ಮತ್ತು ಹೆಚ್ಚುವರಿ ದಾಖಲೆಗಳನ್ನು ಸಲ್ಲಿಸಲು ಆರ್‌ಎಸ್‌ಎಸ್ ಕಾರ್ಯಕರ್ತನಿಗೆ ಅನುಮತಿ ನೀಡಿದ್ದ ಭಿವಂಡಿ ಮ್ಯಾಜಿಸ್ಟ್ರೇಟ್ ಕೋರ್ಟ್‌ನ ಆದೇಶವನ್ನು ಹೈಕೋರ್ಟ್ ಶುಕ್ರವಾರ ರದ್ದುಪಡಿಸಿದೆ.

ರಾಹುಲ್ ಗಾಂಧಿ ಅವರು ಮ್ಯಾಜಿಸ್ಟ್ರೇಟ್ ಕೋರ್ಟ್ ಆದೇಶವನ್ನು ಹೈಕೋರ್ಟ್‌ನಲ್ಲಿ ಪ್ರಶ್ನಿಸಿದರು. ನ್ಯಾಯಮೂರ್ತಿ ಪೃಥ್ವಿರಾಜ್ ಚವಾಣ್ ಅವರಿದ್ದ ಏಕಸದಸ್ಯ ಪೀಠವು ರಾಹುಲ್ ಗಾಂಧಿಯವರ ಅರ್ಜಿಯನ್ನು ಅಂಗೀಕರಿಸಿತು.

ಚುನಾವಣಾ ಬಾಂಡ್: ಪಿಐಎಲ್ ವಿಚಾರಣೆಗೆ ಸಮ್ಮತಿ

ನವದೆಹಲಿ (ಪಿಟಿಐ): ಚುನಾವಣಾ ಬಾಂಡ್ ಯೋಜನೆ ಸಂಬಂಧ ನ್ಯಾಯಾಲಯದ ಮೇಲ್ವಿಚಾರಣೆಯಲ್ಲಿ ವಿಶೇಷ ತನಿಖಾ ತಂಡದಿಂದ ತನಿಖೆಗೆ ನಿರ್ದೇಶಿಸಬೇಕೆಂದು ಕೋರಿ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು (ಪಿಐಎಲ್) ವಿಚಾರಣೆಗೆ ಪರಿಗಣಿಸಲು ಸುಪ್ರೀಂ ಕೋರ್ಟ್ ಶುಕ್ರವಾರ ಸಮ್ಮತಿಸಿದೆ.

ಕಾಮನ್ ಕಾಸ್ ಮತ್ತು ಸೆಂಟರ್ ಫಾರ್ ಪಬ್ಲಿಕ್ ಇಂಟರೆಸ್ಟ್ ಲಿಟಿಗೇಷನ್ (ಸಿಪಿಐಎಲ್) ಎಂಬ ಸ್ವಯಂಸೇವಾ ಸಂಸ್ಥೆಗಳು ಈ ಸಂಬಂಧ ಪಿಐಎಲ್ ಸಲ್ಲಿಸಿದ್ದವು. ರಾಜಕೀಯ ಪಕ್ಷಗಳು, ಕಾರ್ಪೊರೇಟ್ ಕಂಪನಿಗಳು ಮತ್ತು ತನಿಖಾ ಸಂಸ್ಥೆಗಳು ‘ಕೊಡು ಕೊಳ್ಳುವಿಕೆ’ಯಲ್ಲಿ ತೊಡಗಿವೆ ಎಂದು ಅರ್ಜಿಯಲ್ಲಿ ಆರೋಪಿಸಲಾಗಿದೆ.

ಲಿಬಿಯಾ ವ್ಯಕ್ತಿ ವಿರುದ್ಧ ಆರೋಪ ಪಟ್ಟಿ

ಮುಂಬೈ: ಭಾರತ ವಿರೋಧಿ ಕಾರ್ಯಸೂಚಿಯನ್ನು ಉತ್ತೇಜಿಸುವ ಪಿತೂರಿಯಲ್ಲಿ ಭಾಗಿಯಾಗಿದ್ದ ಆರೋಪದ ಮೇಲೆ ರಾಷ್ಟ್ರೀಯ ತನಿಖಾ ಏಜೆನ್ಸಿಯು (ಎನ್‌ಐಎ) ಲಿಬಿಯಾ ಮೂಲದ ಐಎಸ್ ಭಯೋತ್ಪಾದಕ ಸೇರಿ ಇಬ್ಬರ ವಿರುದ್ಧ ದೋಷಾರೋಪಪಟ್ಟಿ ದಾಖಲಿಸಿದೆ.

ಮುಂಬೈನ ವಿಶೇಷ ನ್ಯಾಯಾಲಯಕ್ಕೆ ಶುಕ್ರವಾರ ದೋಷಾರೋಪಪಟ್ಟಿಯನ್ನು ಎನ್‌ಐಎ ಸಲ್ಲಿಸಿದೆ.

‘ಮಹಾಯುತಿ’ ಮೈತ್ರಿಕೂಟಕ್ಕೆ 9 ಸ್ಥಾನ

ಪ್ರಜಾವಾಣಿ ವಾರ್ತೆ/ ಪಿಟಿಐ

ಮುಂಬೈ: ಮಹಾರಾಷ್ಟ್ರ ವಿಧಾನಸಭೆಯಿಂದ ವಿಧಾನ ಪರಿಷತ್‌ನ 11 ಸ್ಥಾನಗಳಿಗೆ ಶುಕ್ರವಾರ ನಡೆದ ಚುನಾವಣೆಯಲ್ಲಿ ಬಿಜೆಪಿ ನೇತೃತ್ವದ ಆಡಳಿತಾರೂಢ ‘ಮಹಾಯುತಿ’ ಮೈತ್ರಿಕೂಟವು ತಾನು ಸ್ಪರ್ಧಿಸಿದ ಎಲ್ಲ ಒಂಬತ್ತು ಸ್ಥಾನಗಳನ್ನು ಜಯಿಸಿದೆ.

ಮಹಾರಾಷ್ಟ್ರದ ಮಾಜಿ ಸಚಿವೆ ಪಂಕಜಾ ಮುಂಡೆ ಸೇರಿದಂತೆ ಬಿಜೆಪಿ ಕಣಕ್ಕಿಳಿಸಿದ್ದ ಐವರು ಗೆಲುವು ಸಾಧಿಸಿದರೆ, ಮುಖ್ಯಮಂತ್ರಿ ಏಕನಾಥ ಶಿಂದೆ ನೇತೃತ್ವದ ಶಿವಸೇನಾ ಮತ್ತು ಉಪ ಮುಖ್ಯಮಂತ್ರಿ ಅಜಿತ್ ಪವಾರ್ ನೇತೃತ್ವದ ಎನ್‌ಸಿಪಿ ತಲಾ ಎರಡು ಸ್ಥಾನಗಳನ್ನು ಗೆದ್ದುಕೊಂಡವು.

ವಿರೋಧ ಪಕ್ಷಗಳ ಮಹಾ ವಿಕಾಸ್ ಅಘಾಡಿ (ಎಂವಿಎ) ಮೈತ್ರಿಕೂಟ ಎರಡು ಸ್ಥಾನಗಳನ್ನು ಜಯಿಸಿತು. ಶಿವಸೇನಾದ (ಯುಬಿಟಿ) ಮಿಲಿಂದ್ ನರ್ವೇಕರ್ ಮತ್ತು ಕಾಂಗ್ರೆಸ್‌ನ ಪ್ರಜ್ಞಾ ಸಾತವ್ ಅವರು ಜಯ ಗಳಿಸಿದರು. ಮಿಲಿಂದ್ ಅವರು ಉದ್ಧವ್ ಠಾಕ್ರೆ ಅವರ ಆಪ್ತರೂ ಹೌದು.

ಎಂವಿಎ ಬೆಂಬಲಿತ ಪಿಡಬ್ಲ್ಯುಪಿ ಅಭ್ಯರ್ಥಿ ಜಯಂತ್ ಪಾಟೀಲ್ ಸೋತರು.11 ಸ್ಥಾನಗಳಿಗೆ ಒಟ್ಟು 12 ಸ್ಪರ್ಧಿಗಳು ಕಣದಲ್ಲಿದ್ದರು. ಮೂರನೇ ಅಭ್ಯರ್ಥಿಯನ್ನು ಗೆಲ್ಲಿಸುವಷ್ಟು ಶಾಸಕರ ಸಂಖ್ಯೆ ಎಂವಿಎ ಮೈತ್ರಿಕೂಟದ ಬಳಿ ಇರಲಿಲ್ಲ. ಆದರೂ, ‘ಅಡ್ಡ ಮತದಾನದ’ ನಿರೀಕ್ಷೆಯೊಂದಿಗೆ ಮೂರನೇ ಅಭ್ಯರ್ಥಿಯನ್ನು ಕಣಕ್ಕಿಳಿಸಿತ್ತು.

ಕೊಲೆ ಯತ್ನ ಆರೋಪದಲ್ಲಿ ಬಂಧನದಲ್ಲಿರುವ ಬಿಜೆಪಿ ಶಾಸಕ ಗಣಪತ್ ಗಾಯಕವಾಡ್ ಅವರು ಎಂವಿಎ ಮೈತ್ರಿಕೂಟದ ತೀವ್ರ ಆಕ್ಷೇಪದ ನಡುವೆಯೂ ಮತದಾನ ಮಾಡಿದರು.

ಜಗನ್ ವಿರುದ್ಧ ಕೊಲೆ ಯತ್ನ ಪ್ರಕರಣ

ಗುಂಟೂರ್ (ಆಂಧ್ರಪ್ರದೇಶ) (ಪಿಟಿಐ): ಆಂಧ್ರ ಪ್ರದೇಶದ ಮಾಜಿ ಮುಖ್ಯಮಂತ್ರಿ ವೈ.ಎಸ್. ಜಗನ್‌ಮೋಹನ್ ರೆಡ್ಡಿ, ಇಬ್ಬರು ಹಿರಿಯ ಐಪಿಎಸ್ ಅಧಿಕಾರಿಗಳು ಹಾಗೂ ಮತ್ತಿಬ್ಬರು ನಿವೃತ್ತ ಅಧಿಕಾರಿಗಳ ವಿರುದ್ಧ ಕೊಲೆ ಯತ್ನ ಆರೋಪದ ಪ್ರಕರಣ ದಾಖಲಾಗಿದೆ.

ಆಡಳಿತಾರೂಢ ಟಿಡಿಪಿಯ ಉಂಡಿ ಕ್ಷೇತ್ರದ ಶಾಸಕ ಕೆ.ರಘುರಾಮ ಕೃಷ್ಣ ರಾಜು ಅವರು ನೀಡಿರುವ ದೂರು ಆಧರಿಸಿ ಗುಂಟೂರ್‌ನ ನಗರಂಪಾಲೆಂ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಜಗನ್ ಜತೆಗೆ ಹಿರಿಯ ಐಪಿಎಸ್ ಅಧಿಕಾರಿಗಳಾದ ಪಿ.ವಿ. ಸುನೀಲ್ ಕುಮಾರ್ ಮತ್ತು ಪಿ.ಎಸ್.ಆರ್. ಸೀತಾರಾಮಾಂಜನೇಯುಲು, ನಿವೃತ್ತ ಪೊಲೀಸ್ ಅಧಿಕಾರಿ ಆರ್. ವಿಜಯ್ ಪಾಲ್ ಮತ್ತು ಗುಂಟೂರ್ ಸಾರ್ವಜನಿಕ ಆಸ್ಪತ್ರೆಯ ಮಾಜಿ ಅಧೀಕ್ಷಕಿ ಜಿ.ಪ್ರಭಾವತಿ ಅವರ ವಿರುದ್ಧ ಭಾರತೀಯ ದಂಡ ಸಂಹಿತೆಯ ವಿವಿಧ ಸೆಕ್ಷನ್‌ಗಳಡಿ ಎಫ್‌ಐಆರ್ ದಾಖಲಾಗಿದೆ.

‘ರಾಜು ಅವರು ಒಂದು ತಿಂಗಳ ಹಿಂದೆ ಇಮೇಲ್ ಮೂಲಕ ಪೊಲೀಸರಿಗೆ ದೂರು ನೀಡಿದ್ದಾರೆ. ಕಾನೂನು ತಜ್ಞರ ಸಲಹೆ ಪಡೆದ ನಂತರ, ಮಾಜಿ ಮುಖ್ಯಮಂತ್ರಿ ಮತ್ತು ಇತರರ ವಿರುದ್ಧ ಗುರುವಾರ ಸಂಜೆ 7 ಗಂಟೆಗೆ ಪ್ರಕರಣ ದಾಖಲಿಸಲಾಗಿದೆ’ ಎಂದು ಅಧಿಕಾರಿಗಳು ‘ಪಿಟಿಐ’ಗೆ ತಿಳಿಸಿದ್ದಾರೆ.

ಬೆಳಗಾವಿ ನಗರಾಭಿವೃದ್ಧಿ ಪ್ರಾಧಿಕಾರ

ಬೆಳಗಾವಿ. ಫ್ಯಾಕ್ಸ್/ದೂರವಾಣಿ ಸಂಖ್ಯೆ: 0831–2470342, 2470257 ಇ–ಮೇಲ್: belagavibuda@gmail.com

No: BUDA/PWD/E-TENDER/2024-25/976 Date: 12-07-2024

ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ)

ಬೆಳಗಾವಿ ನಗರಾಭಿವೃದ್ಧಿ ಪ್ರಾಧಿಕಾರದ ವ್ಯಾಪ್ತಿಯಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಕಾಯ್ದೆ ಮತ್ತು ನಿಯಮಾವಳಿಗಳನ್ವಯ ಸ್ಟ್ಯಾಂಡರ್ಡ್ ಬಿಡ್ ಡಾಕ್ಯುಮೆಂಟ್ ಅನ್ವಯ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಈ ಕೆಳಕಂಡ ಕಾಮಗಾರಿಯ ಇ–ಟೆಂಡರ್‌ನಲ್ಲಿ ಭಾಗವಹಿಸಬಹುದು. ಹೆಚ್ಚಿನ ಮಾಹಿತಿ ಬೇಕಾದಲ್ಲಿ ಗುತ್ತಿಗೆದಾರರು, ಕಾರ್ಯಕಾರಿ ಅಭಿಯಂತರರು, ಬೆಳಗಾವಿ ನಗರಾಭಿವೃದ್ಧಿ ಪ್ರಾಧಿಕಾರ, ಬೆಳಗಾವಿ ಇವರಿಂದ ಕಚೇರಿಯ ಕೆಲಸದ ವೇಳೆಯಲ್ಲಿ ಪಡೆಯಬಹುದಾಗಿದೆ. (ದೂರವಾಣಿ ಸಂಖ್ಯೆ: 0831–2470342) ಮತ್ತು ಅಂತರ್ಜಾಲದ ಮೂಲಕ ವೆಬ್‌ಸೈಟ್: https://kppp.karnataka.gov.in ರಲ್ಲಿ ಪಡೆಯಬಹುದು.

ಕ್ರ. ಸಂ.	ಕಾಮಗಾರಿಯ ಹೆಸರು	ಇಂಡೆಂಟ್ ನಂ.	ಮುಂಗಡ ಠೇವಣಿ (ರೂ. ಗಳಲ್ಲಿ)
1	E-Auction for deposit BUDA fund for maximum one year period (Only Nationalised banks should participate).	BGMUDA/2024-25 AUCTION16	2,10,000/-

ಟೆಂಡರ್ ಫಾರ್ಮ ಬೆಲೆ ಇ–ಪ್ರೊಕ್ಯೂರ್‌ಮೆಂಟ್‌ದಲ್ಲಿದ್ದಂತೆ: 1) ಟೆಂಡರ್ ಕ್ವಾರಿಸ್ ಸಲ್ಲಿಸಲು ಕೊನೆಯ ದಿನಾಂಕ: 09–08–2024 ರಂದು ಸಾಯಂಕಾಲ 5.00 ಘಂಟೆಯವರೆಗೆ. 2) ಆಕ್ಷನ್‌ನಲ್ಲಿ ಭಾಗವಹಿಸಲು ಆಸಕ್ತಿ ವ್ಯಕ್ತಪಡಿಸುವಿಕೆಗಾಗಿ ಕೊನೆಯ ದಿನಾಂಕ: 12–08–2024 ರಂದು ಸಾಯಂಕಾಲ 5.00 ಘಂಟೆಗೆ. 3) ಆಕ್ಷನ್ ಪ್ರಾರಂಭ ದಿನಾಂಕ: 13–08–2024 ರಂದು ಮುಂಜಾನೆ 10.00 ಘಂಟೆಗೆ. 4) ಆಕ್ಷನ್ ಮುಕ್ತಾಯ ದಿನಾಂಕ: 14–08–2024 ರಂದು ಸಾಯಂಕಾಲ 5.00 ಘಂಟೆಯವರೆಗೆ.

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು, ಬೆಳಗಾವಿ ನಗರಾಭಿವೃದ್ಧಿ ಪ್ರಾಧಿಕಾರ, ಬೆಳಗಾವಿ.
ವಾಸಾಸಂಇ/ಬೆಳಗಾವಿ/371/ಅಡ್ವಟೋರ್/2024–25
ಸಹಿ/– ಆಯುಕ್ತರು, ಬೆಳಗಾವಿ ನಗರಾಭಿವೃದ್ಧಿ ಪ್ರಾಧಿಕಾರ, ಬೆಳಗಾವಿ.

AUCTION NOTICE

This is to inform public in general that Kotak Mahindra Bank Ltd has organized an auction in below mention respect of vehicles.

1) CB_LPT1212_TATAMOTORS YOM – 2022 Reg No – KA52B5119
2) CB_MARUTI_SUPER_CARRY_CNG. YOM – 2023 Reg No – KA41D5791
3) BOLERO PICK-UP YOM – 2021 Reg No – KA04AC5747
4) ASHOK LEYLAND LIMITED - CB_AL_BADA_DOST YOM – 2023 Reg No – KA11C5479
5) CB_FULLY_BUILD_GOODS_BODY_PRO_2110_VOLVO_EICHER. YOM – 2023 Reg No – KA11C5729
6) MAHINDRA BOLERO PICK-UP YOM – 2021 Reg No – KA51AG4047
7) CB_ EICHER_VOLVO_TIPPER_PRO_6025T YOM – 2016 Reg No – KA07B5222
8) CB_ EICHER_VOLVO_TIPPER_PRO_6025T YOM – 2016 Reg No – KA07B5224
9) CB_ EICHER_VOLVO_TIPPER_PRO_6025T YOM – 2016 Reg No – KA07B5225
10) CB_T1_SCB_3350_SCHOOL_BUS YOM – 2023 Reg No – KA20AC1353
11) CB_AL_BADA_DOST YOM – 2023 CHASSIS No – E4RRPS9375 ENGN NO - PRH011583P
12) CB_MARUTI SUPER CARRY YOM – 2022 Reg No – KA41D3471
13) Excavator - KOBELCO – CB_SK380_EXC YOM – 2019 CHASSIS No – J08ETM32521 ENGN NO - J08ETM32521 (As is where is condition) Reserve price: 26,39,771.1/-

UNDER HYPOTHECATION WITH M/S KOTAK MAHINDRA BANK IS UNDER SALE IN ITS “AS IS WHERE IS CONDITION”

INTERESTED PARTIES CAN GIVE THEIR QUOTATIONS (ONLINE/OFFLINE) WITHIN 15 DAYS FROM THIS PAPER PUBLICATION i.e. from 13.07.2024 (Please note that closing Auction date would not be a Weekly off / Holiday)

BRANCH ADDRESS: KOTAK MAHINDRA BANK LTD., 22, MG ROAD, BANGALORE, KARNATAKA – 560001
OR
Contact: Muzzammilkhan N Kotak Mahindra Bank Ltd. Contact / 080 - 61564249

TOWN PANCHAYAT TAVARAGERA

Phone No: 08536-275301
Website : www.tavarageratown.gov.in Email ID : itstaff_ulbtavaragera@yahoo.com

ಇ–ಪ್ರಕ್ಯೂರ್‌ಮೆಂಟ್/ಕೆ.ಪಿ.ಪಿ.ಪಿ. ಅಲ್ಪಾವಧಿ ಟೆಂಡರ ಪ್ರಕಟಣೆ

(ಸ್ಟ್ಯಾಂಡರ್ಡ್ ಟೆಂಡರ ಪ್ರಕ್ಯೂರ್‌ಮೆಂಟ್ ಕೆ.ಸಿ. ಟೆಂಡರ್ ದಸ್ತಾವೇಜು ಮತ್ತು ಕೆ.ಡಬ್ಲ್ಯೂ.–1,2 & 3 ನಿಬಂಧನೆಗಳಿಗೆ ಒಳಪಟ್ಟು ಟೆಂಡರ್ ಆಹ್ವಾನಿಸಲಾಗಿದೆ)

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಮತ್ತು ಪಾರದರ್ಶಕತೆ ಅಧಿನಿಯಮ 2000 ರ ಪ್ರಕಾರ 2020–21ನೇ ಸಾಲಿನ 15ನೇ ಹಣಕಾಸು ಯೋಜನೆ ಹಾಗೂ 2022–23ನೇ ಸಾಲಿನ 15ನೇ ಹಣಕಾಸು ಯೋಜನೆ, 2022–23ನೇ ಸಾಲಿನ ಎಸ್.ಬಿ.ಎಂ 2.0 ಹಾಗೂ 2022–23ನೇ ಸಾಲಿನ ಎಸ್.ಸಿ.ಎಸ್.ಪಿ–ಟಿಎಸ್‌ಪಿ ಅನುದಾನದಡಿಯಲ್ಲಿ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ದ್ವಿ–ಲಕೋಟೆ ಪದ್ಧತಿಯಲ್ಲಿ ಈ ಕೆಳಗೆ ನಮೂದಿಸಿದ ಕಾಮಗಾರಿಗಳಿಗೆ ಕೆ.ಪಿ.ಪಿ.ಪಿ ಪೋರ್ಟಲ್‌ನಲ್ಲಿ ನೊಂದಾಯಿಸಲ್ಪಟ್ಟ ಅರ್ಹ ಗುತ್ತಿಗೆದಾರರಿಂದ ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಕೆ.ಪಿ.ಪಿ.ಪಿ ಟೆಂಡರ್ ದಾಖಲೆಗಳಿಗಾಗಿ ಇಲಾಖಾ ವೆಬ್‌ಸೈಟ್ http://kppp.karnataka.gov.in ರ ಮೂಲಕ ಕೆಳಗೆ ನಮೂದಿಸಿರುವ ದಿನಾಂಕದಂದು ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸುವುದು. ಟೆಂಡರ ಫಾರಂಗಳನ್ನು ಪಡೆಯುವುದು, ಭರ್ತಿ ಮಾಡುವುದು ಮತ್ತು ಸಲ್ಲಿಸುವುದು ವೆಬ್‌ಸೈಟ್ ಮುಖಾಂತರ ಮಾತ್ರ, ಈ ಕಛೇರಿಯಲ್ಲಿ ಯಾವುದೇ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲ.

1] ಖಾಲಿ ಟೆಂಡರ್ ಫಾರಂಗೆ ಕೆ.ಪಿ.ಪಿ.ಪಿ. ಪೋರ್ಟಲ್ ಪ್ರಕಾರ ಅರ್ಜಿ ಸಲ್ಲಿಸುವ ದಿನಾಂಕ	04–07–2024 ರಿಂದ 19–07–2024 ರ ಸಂಜೆ 5–30 ಗಂಟೆಗೆ
2] ತಾಂತ್ರಿಕ ಟೆಂಡರ್ ತೆರೆಯುವ ದಿನಾಂಕ	22–07–2022 ರ ಬೆಳಿಗ್ಗೆ 11–00 ಗಂಟೆಗೆ
3] ಆರ್ಥಿಕ ಬಿಡ್ ತೆರೆಯುವ ದಿನಾಂಕ	23–07–2022 ರ ಬೆಳಿಗ್ಗೆ 11–00 ಗಂಟೆಗೆ ಅಥವಾ ನಂತರದ ದಿನಗಳಲ್ಲಿ
3] ಅರ್ಜಿ ಶುಲ್ಕ (ಹಿಂದಿರುಗಿಸಲಾಗುವುದಿಲ್ಲ)	ಇ–ಪ್ರೋಕ್ಯೂರ್‌ಮೆಂಟ್ ನಿಯಮಾನುಸಾರ

ಒಂದು ವೇಳೆ ಪ್ರಕಟಿಸಲಾಗಿರುವ ದಿನಾಂಕಗಳು ಸಾರ್ವಜನಿಕ ರಜಾ ದಿನಗಳನ್ನಾಗಿ ಘೋಷಿಸಲ್ಪಟ್ಟರೆ ಮುಂದಿನ ದಿನಾಂಕವನ್ನು ಪರಿಗಣಿಸಲಾಗುವುದು.

ಕ್ರ ಸಂ.	ಕಾಮಗಾರಿಗಳ ವಿವರ	ಟೆಂಡರ್‌ಗಿಟ್ಟ ಅಂದಾಜು ಮೊತ್ತ (ರೂ. ಗಳಲ್ಲಿ)	ಮುಂಗಡ ಠೇವಣಿ ಮೊತ್ತ (ರೂ. ಗಳಲ್ಲಿ)	ನಿರ್ವಹಣೆಗಾಗಿ ನಿಗದಿಪಡಿಸಿದ ಅವಧಿ
	15th Finance GBG / 2020-21			
1	DMA/2024-25/OW/ WORK_INDENT20314 (ST)	3850000.00	77000.00	03 ತಿಂಗಳು
2	DMA/2024-25/OW/ WORK_INDENT20318 (GEN)	1540000.00	38500.00	03 ತಿಂಗಳು
3	DMA/2024-25RU/ WORK_INDENT20325 (GEN)	1540000.00	38500.00	03 ತಿಂಗಳು
	SCSP-TSP / 2022-23			
4	DMA/2024-25/EL/ WORK_INDENT18398 (SC)	64000.00	1600.00	01 ತಿಂಗಳು
5	DMA/2024-25/EL/ WORK_INDENT18397 (SC)	236000.00	5900.00	01 ತಿಂಗಳು
	SBM 2.O			
6	DMA/2024-25/OW/ WORK_INDENT20011 (GEN)	13655000.00	205000.00	04 ತಿಂಗಳು
	15th Finance GBG / 2022-23			
7	DMA/2024-25/EL/ WORK_INDENT18396 (GEN)	100000.00	2500.00	01 ತಿಂಗಳು
8	DMA/2024-25/OW/ WORK_INDENT18401 (GEN)	527000.00	13175.00	02 ತಿಂಗಳು
9	DMA/2024-25/OW/ WORK_INDENT18399 (GEN)	220000.00	5500.00	01 ತಿಂಗಳು
	SFC Drinkin Water Supply / 2023-24			
10	DMA/2023-24/WS/ WORK_INDENT16958	125000.00	3125.00	01 ತಿಂಗಳು
11	DMA/2024-25/WS/ WORK_INDENT20773	250000.00	6250.00	01 ತಿಂಗಳು
12	DMA/2024-25/WS/ WORK_INDENT20774	100000.00	2500.00	01 ತಿಂಗಳು
	MRF SBM 2.O / 2023-24			
13	DMA/2024-25/OW/ WORK_INDENT20783	3281800.00	66000.00	03 ತಿಂಗಳು

Note :- Any changes in Calendar of events will be published in http://kppp.karnataka.gov.in portal only

ಷರತ್ತುಗಳು: 1) ಟೆಂಡರ್ ದಸ್ತಾವೇಜುನಲ್ಲಿರುವಂತೆ ಷರತ್ತುಗಳನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು.
2) ಟೆಂಡರನ್ನು ಅಂಗೀಕರಿಸುವ ಅಥವಾ ತಿರಸ್ಕರಿಸುವ ಅಧಿಕಾರವನ್ನು ನಗರಸಭೆಯು ಕಾಯ್ದಿರಿಸಿಕೊಂಡಿದೆ.

ಸಹಿ/– ಮುಖ್ಯಾಧಿಕಾರಿಗಳು, ಪ.ಪಂ ತಾವರಗೇರಾ
ಸಹಿ/– ಆಡಳಿತಾಧಿಕಾರಿಗಳು ಹಾಗೂ ಮಾನ್ಯ ತಹಶಿಲ್ದಾರರು, ಪ.ಪಂ., ತಾವರಗೇರಾ

ಸ್ಪರ್ಧಾವಾಣಿ ಮಾಸಪತ್ರಿಕೆಯ ಹಿಂದಿನ ಸಂಚಿಕೆಗಳನ್ನು ಖರೀದಿಸುವ ಅವಕಾಶ ತಪ್ಪಿ ಹೋಯಿತೇ?
ಪ್ರಜಾವಾಣಿ
ಸ್ಪರ್ಧಾವಾಣಿ
MASTERMIND
ಆರ್ಡರ್ ಮಾಡಲು QR ಸ್ಕ್ಯಾನ್ ಮಾಡಿ, ನಿಮ್ಮ ವಿವರಗಳನ್ನು ಭರ್ತಿ ಮಾಡಿ.
ಕೇವಲ ₹220 ರಿಂದ ಪ್ರಾರಂಭ
*ಷರತ್ತುಗಳು ಅನ್ವಯ

ಭಾರತ– ಜಿಂಬಾಬ್ವೆ ನಾಲ್ಕನೇ ಟಿ20 ಪಂದ್ಯ ಇಂದು

ಸರಣಿ ಕೈವಶದ ಛಲದಲ್ಲಿ ಭಾರತ

ಹರಾರೆ (ಪಿಟಿಐ): ಪ್ರವಾಸಿ ಭಾರತ ತಂಡಕ್ಕೆ ಸರಣಿ ಕೈವಶ ಮಾಡಿಕೊಳ್ಳುವ ತವಕ. ಆತಿಥೇಯ ಜಿಂಬಾಬ್ವೆಗೆ ಸರಣಿ ಜಯದ ಅವಕಾಶ ಜೀವಂತವಾಗಿಟ್ಟುಕೊಳ್ಳುವ ಛಲ.

ಇದರಿಂದಾಗಿಯೇ ಉಭಯ ತಂಡಗಳ ನಡುವಣ ಶನಿವಾರ ಇಲ್ಲಿ ನಡೆಯಲಿರುವ ಟಿ20 ಸರಣಿಯ ನಾಲ್ಕನೇ ಪಂದ್ಯವು ಕುತೂಹಲ ಕೆರಳಿಸಿದೆ. ಸರಣಿಯಲ್ಲಿ ಶುಭಮನ್ ಗಿಲ್ ನಾಯಕತ್ವದ ಭಾರತ ತಂಡವು 2–1ರ ಮುನ್ನಡೆಯಲ್ಲಿದೆ.

ಮೊದಲ ಪಂದ್ಯದಲ್ಲಿ ಅಮೋಘ ಜಯ ಸಾಧಿಸಿದ್ದ ಜಿಂಬಾಬ್ವೆಯ ವಿರುದ್ಧದ ಇನ್ನೆರಡು ಪಂದ್ಯಗಳಲ್ಲಿ ಗಿಲ್ ಬಳಗವು ಅಧಿಕಾರಯುತ ಜಯ ಗಳಿಸಿತ್ತು. ಆದ್ದರಿಂದ ಈ ಹಣಾಹಣಿಯಲ್ಲಿಯೂ ಭಾರತವೇ ಗೆಲ್ಲುವ ನೆಚ್ಚಿನ ತಂಡ ಎನಿಸಿದೆ.

ಉಭಯ ತಂಡಗಳಲ್ಲಿಯೂ ಇರುವ ಯುವಪ್ರತಿಭೆಗಳು ತಮ್ಮ ಸಾಮರ್ಥ್ಯ ಮೆರೆಯುವ ಉತ್ಸಾಹದಲ್ಲಿವೆ. ಭಾರತ ತಂಡದ ಆಲ್‌ರೌಂಡರ್ ವಾಷಿಂಗ್ಟನ್ ಸುಂದರ್ ಮತ್ತು ಆರಂಭಿಕ ಬ್ಯಾಟರ್ ಅಭಿಷೇಕ್ ಶರ್ಮಾ ಅವರು ಈಗಾಗಲೇ ತಮ್ಮ ಚೆಂದದ ಆಟದ ಮೂಲಕ ಗೆಲುವಿನ ರೂವಾರಿಗಳಾಗಿದ್ದಾರೆ.

ಟಿ20 ಮಾದರಿಯಿಂದ ರವೀಂದ್ರ ಜಡೇಜ ಅವರು ನಿವೃತ್ತಿಯಾಗಿದ್ದಾರೆ. ಅದರಿಂದಾಗಿ ಸ್ಪಿನ್‌–ಆಲ್‌ರೌಂಡರ್ ಸ್ಥಾನ ತುಂಬಲು ವಾಷಿಂಗ್ಟನ್ ಪೈಪೋಟಿ ನಡೆಸಿದ್ದಾರೆ. ಅವರು ಪ್ರಸಕ್ತ ಸರಣಿಯಲ್ಲಿ ಆರು ವಿಕೆಟ್‌ಗಳನ್ನು 4.5ರ ಎಕಾನಮಿಯಲ್ಲಿ ಗಳಿಸಿದ್ದಾರೆ.

ಮುಂಬರಲಿರುವ ಶ್ರೀಲಂಕಾ ವಿರುದ್ಧದ ಟೂರ್ನಿಗೆ ಭಾರತ ತಂಡವನ್ನು ಆಯ್ಕೆ ಮಾಡುವಾಗ ಆಯ್ಕೆಗಾರರ ಸಮಿತಿಯು ವಾಷಿಂಗ್ಟನ್ ಅವರನ್ನು ಪರಿಗಣಿಸುವ ಸಾಧ್ಯತೆ ಹೆಚ್ಚಿದೆ.

ವಾಷಿಂಗ್ಟನ್ ಸುಂದರ್

ತಮಿಳುನಾಡಿನ 24 ವರ್ಷದ ವಾಷಿಂಗ್ಟನ್, ಪವರ್‌ಪ್ಲೇ ಮತ್ತು ನಂತರದ ಓವರ್‌ಗಳಲ್ಲಿಯೂ ತಮ್ಮ ಸ್ಪಿನ್ ಕೈಚಳಕ ತೋರುವ ಸಮರ್ಥರು. ಕೆಳಕ್ರಮಾಂಕದಲ್ಲಿ ಕ್ರೀಸ್‌ಗೆ ಬಂದು ರನ್ ಗಳಿಸಬಲ್ಲ ಬ್ಯಾಟರ್ ಕೂಡ ಹೌದು.

ಸರಣಿಯ ಎರಡನೇ ಪಂದ್ಯದಲ್ಲಿ ಅಭಿಷೇಕ್ 47 ಎಸೆತಗಳಲ್ಲಿ ಶತಕ ಗಳಿಸಿದ್ದರು. ವಿರಾಟ್ ಕೊಹ್ಲಿ ಮತ್ತು ರೋಹಿತ್ ಶರ್ಮಾ ಅವರಿಬ್ಬರ ಶೈಲಿಗಳ ಮಿಶ್ರಣದಂತಿರುವ ಅಭಿಷೇಕ್ ಆಟವು ಬಹುನಿರೀಕ್ಷೆ ಮೂಡಿಸಿದೆ. ಅಗ್ರಕ್ರಮಾಂಕದ ಬ್ಯಾಟಿಂಗ್ ಸ್ಥಾನಕ್ಕೆ ಅಭಿಷೇಕ್ ಅವರೊಂದಿಗೆ ಯಶಸ್ವಿ ಜೈಸ್ವಾಲ್ ಕೂಡ ಸ್ಪರ್ಧೆಯಲ್ಲಿದ್ದಾರೆ.

ಅವರಲ್ಲದೇ ನಾಯಕ ಶುಭಮನ್ ಗಿಲ್ ಮತ್ತು ಋತುರಾಜ್ ಗಾಯಕವಾಡ್ ಅವರೂ ಇದೇ ಸಾಲಿನಲ್ಲಿದ್ದಾರೆ. ಅವರಿಂದ ದೊಡ್ಡ ಇನಿಂಗ್ಸ್ ಮೂಡಿಬರುವ ನಿರೀಕ್ಷೆ ಇದೆ. ಅನುಭವಿ ಸಂಜು ಸ್ಯಾಮ್ಸನ್, ಆಲ್‌ರೌಂಡರ್ ಶಿವಂ ದುಬೆ ಅವರಿಗೆ ಈ ಸರಣಿಯಿಂದ ಹೆಚ್ಚಿನ ನಿರೀಕ್ಷೆಗಳಿಲ್ಲ. ಅವರಿಬ್ಬರೂ ಈಚೆಗೆ ಟಿ20 ವಿಶ್ವಕಪ್ ಗೆದ್ದ ಭಾರತ ತಂಡದಲ್ಲಿದ್ದರು.

ಬೌಲಿಂಗ್‌ನಲ್ಲಿ ಖಲೀಲ್ ಅಹಮದ್, ಮುಕೇಶ್ ಕುಮಾರ್ ಹಾಗೂ ಸ್ಪಿನ್ನರ್ ರವಿ ಬಿಷ್ಣೋಯಿ ಅವರು ತಂಡವನ್ನು ಗೆಲುವಿನತ್ತ ಮುನ್ನಡೆಸಬಲ್ಲ ಸಮರ್ಥರು.

ಆತಿಥೇಯ ತಂಡದ ನಾಯಕ ಸಿಕಂದರ್ ರಝಾ, ಮಧ್ಯಮ ಕ್ರಮಾಂಕದ ಬ್ಯಾಟರ್ ಡಿಯಾನ್ ಮೇಯರ್ಸ್ ಹಾಗೂ ಕ್ಲೈವ್ ಮೆಡಾಂದೆ ಅವರು ಉತ್ತಮ ಲಯದಲ್ಲಿ ದ್ದಾರೆ. ಬೌಲಿಂಗ್ ವಿಭಾಗವು ಇನ್ನಷ್ಟು ಸುಧಾರಣೆಗೊಳ್ಳಬೇಕಿರುವುದನ್ನು ಅಲ್ಲಗಳೆಯಲಾಗದು.

ಸಿಕಂದರ್ ರಝಾ

ಜಿಮ್ಮಿ ಆ್ಯಂಡರ್ಸನ್ ಯುಗಾಂತ್ಯ

ಎರಡು ದಶಕ ವಿಜೃಂಭಿಸಿದ ಇಂಗ್ಲೆಂಡ್ ವೇಗಿ • ದಾಖಲೆಗಳ ಸರದಾರ

ಲಂಡನ್ (ಎಪಿ/ಎಎಫ್‌ಪಿ/ಪಿಟಿಐ): ಇಂಗ್ಲೆಂಡ್ ವೇಗಿ ಜೇಮ್ಸ್ ಆ್ಯಂಡರ್ಸನ್ ಅವರು ಟೆಸ್ಟ್ ಕ್ರಿಕೆಟ್‌ನಲ್ಲಿ ಇನ್ನೈದು ವಿಕೆಟ್ ಗಳಿಸಿದ್ದರೆ ಆಸ್ಟ್ರೇಲಿಯಾದ ಶೇನ್ ವಾರ್ನ್ ಅವರ ದಾಖಲೆಯನ್ನು ಹಿಂದಿಕ್ಕಬಹುದಿತ್ತು.

ಆದರೆ ದಾಖಲೆಗಳ ಬಗ್ಗೆ ಎಂದಿಗೂ ಯೋಚಿಸದೇ ಆಟವನ್ನು ಆಸ್ವಾದಿಸಿದ ವೇಗಿ ಜಿಮ್ಮಿ ಟೆಸ್ಟ್ ಕ್ರಿಕೆಟ್ ಜೀವನಕ್ಕೆ ಶುಕ್ರವಾರ ವಿದಾಯ ಹೇಳಿದರು. 21 ವರ್ಷಗಳ ಹಿಂದೆ ತಾವು ಪದಾರ್ಪಣೆ ಮಾಡಿದ್ದ ಲಾರ್ಡ್ಸ್ ಅಂಗಳದಲ್ಲಿಯೇ ಕೊನೆಯ ಪಂದ್ಯವನ್ನು ಆಡುವುದು ಅವರ ಆಸೆಯಾಗಿತ್ತು. ಲಾರ್ಡ್ಸ್‌ನಲ್ಲಿ ನಡೆದ ಈ ಪಂದ್ಯದಲ್ಲಿ ವೆಸ್ಟ್ ಇಂಡೀಸ್ ಎದುರು ಇನಿಂಗ್ಸ್ ಮತ್ತು 114 ರನ್‌ಗಳಿಂದ ಜಯಿಸಿದ ಇಂಗ್ಲೆಂಡ್ ತಂಡವು ತನ್ನ 'ಹಿರಿಯಣ್ಣ'ನಿಗೆ ಅವಿಸ್ಮರಣೀಯ ಕಾಣಿಕೆ ನೀಡಿತು.

ಈ ಪಂದ್ಯದಲ್ಲಿಯೂ ಜಿಮ್ಮಿ (ಮೊದಲ ಇನಿಂಗ್ಸ್: 10.4–3–26–1. ಎರಡನೇ ಇನಿಂಗ್ಸ್: 16–7–32–3) ಒಟ್ಟು ನಾಲ್ಕು ವಿಕೆಟ್ ಗಳಿಸಿದರು. ಇದರೊಂದಿಗೆ ಒಟ್ಟು 704 ವಿಕೆಟ್‌ಗಳು ಅವರ ಖಾತೆಯಲ್ಲಿ ಸೇರಿದವು. 700ರ ಗಡಿ ದಾಟಿದ ಮೊದಲ ವೇಗದ ಬೌಲರ್ ಎಂಬ ಹೆಗ್ಗಳಿಕೆ ಅವರದ್ದು. ಟೆಸ್ಟ್ ಕ್ರಿಕೆಟ್‌ನಲ್ಲಿ ಅತಿ ಹೆಚ್ಚು ವಿಕೆಟ್ ಪಡೆದವರ ಪಟ್ಟಿಯಲ್ಲಿ ಅವರು ಮೂರನೇ ಸ್ಥಾನದಲ್ಲಿದ್ದಾರೆ.

ಶ್ರೀಲಂಕಾ ಸ್ಪಿನ್ನರ್ ಮುತ್ತಯ್ಯ ಮುರಳೀಧರನ್ (800) ಹಾಗೂ ಆಸ್ಟ್ರೇಲಿಯಾದ ಸ್ಪಿನ್ ದಂತಕಥೆ ಶೇನ್ ವಾರ್ನ್ (708) ಕ್ರಮವಾಗಿ ಮೊದಲ ಮತ್ತು ಎರಡನೇ ಸ್ಥಾನಗಳಲ್ಲಿದ್ದಾರೆ.

ವೇಗದ ಬೌಲರ್‌ಗಳಿಗೆ ಇಷ್ಟು ಸುದೀರ್ಘ ಫಿಟ್‌ನೆಸ್ ಉಳಿಸಿಕೊಳ್ಳುವುದು ಸುಲಭದ ಮಾತಲ್ಲ. ಆದರೆ ಜಿಮ್ಮಿ ಈ ಅಪರೂಪದ ಸಾಧನೆ ಮಾಡಿ ತೋರಿದ್ದಾರೆ.

'ಇಂಗ್ಲೆಂಡ್ ತಂಡದಲ್ಲಿ ಆಡುವುದು ವಿಶ್ವದಲ್ಲಿಯೇ ಶ್ರೇಷ್ಠವಾದ ಕೆಲಸ. ಅಂತಹ ತಂಡದಲ್ಲಿ ದೀರ್ಘ ಅವಧಿಯವರೆಗೆ ಆಡಿದ್ದು ನನ್ನ ಸೌಭಾಗ್ಯ. ಈ ವಾರ ನಾನು ಸುಮಾರು 55 ಓವರ್‌ಗಳನ್ನು ಬೌಲಿಂಗ್ ಮಾಡಿದ್ದೇನೆ' ಎಂದು ಪಂದ್ಯದ ನಂತರ ಆ್ಯಂಡರ್ಸನ್ ಸ್ಕೈ ಸ್ಪೋರ್ಟ್ಸ್ ಸಂದರ್ಶನದಲ್ಲಿ ಹೇಳಿದರು.

ವಿಂಡೀಸ್ ಎದುರಿನ ಪಂದ್ಯದ ಮೂರನೇ ದಿನದಾಟದ ಆರಂಭದಲ್ಲಿ ಜಿಮ್ಮಿ ಅವರು ಕ್ರೀಡಾಂಗಣಕ್ಕೆ ಪ್ರವೇಶಿಸುವಾಗ ಉಭಯ ತಂಡಗಳ ಆಟಗಾರರು ಗೌರವ ರಕ್ಷೆ ನೀಡಿದರು. ಕಿಕ್ಕಿರಿದು ತುಂಬಿದ್ದ ಪ್ರೇಕ್ಷಕರು ಎದ್ದು ನಿಂತು ಚಪ್ಪಾಳೆ ತಟ್ಟಿದರು. ಇದೆಲ್ಲವನ್ನೂ ಕಣ್ತುಂಬಿಕೊಂಡ ಜಿಮ್ಮಿ ತುಸು ಭಾವುಕರಾದಂತೆ ಕಂಡರು.

ಜೇಮ್ಸ್ ಆ್ಯಂಡರ್ಸನ್

ಹೇ ಜಿಮ್ಮಿ, 22 ವರ್ಷಗಳ ಸ್ಪೆಲ್‌ನಲ್ಲಿ ನಿಮ್ಮ ಸೊಗಸಾದ ಬೌಲಿಂಗ್ ಮೂಲಕ ಅಸಂಖ್ಯಾತ ಅಭಿಮಾನಿಗಳನ್ನು ಬೌಲ್ಡ್ ಮಾಡಿದ್ದೀರಿ. ನಿಮ್ಮ ಬೌಲಿಂಗ್ ನೋಡುವುದೇ ಆನಂದ. ನಿಮ್ಮ ವೇಗ, ನಿಖರತೆ, ಸ್ವಿಂಗ್ ಮತ್ತು ಫಿಟ್‌ನೆಸ್ ಅದ್ಭುತ.

ಸಚಿನ್ ತೆಂಡೂಲ್ಕರ್ ಭಾರತದ ಕ್ರಿಕೆಟ್ ದಿಗ್ಗಜ

ಟೆಸ್ಟ್	ಎಸೆತಗಳು	ಕೊಟ್ಟ ರನ್
188	40037	18627
ವಿಕೆಟ್	ಶ್ರೇಷ್ಠ (ಇನಿಂಗ್ಸ್)	ಶ್ರೇಷ್ಠ (ಪಂದ್ಯ)
704	42ಕ್ಕೆ7	71ಕ್ಕೆ11
ಎಕಾನಮಿ	ಸರಾಸರಿ	ರನ್ ಗಳಿಕೆ
2.79	26.45	1353
ಶ್ರೇಷ್ಠ ಸ್ಕೋರ್	ಅರ್ಧಶತಕ	
81	1	

ವಯಸ್ಸು: 41 ವರ್ಷ, 348 ದಿನಗಳು
ಶೈಲಿ: ಬಲಗೈ ವೇಗದ ಬೌಲರ್ ಮತ್ತು ಎಡಗೈ ಬ್ಯಾಟರ್
ಎತ್ತರ: 6.2 ಅಡಿ.

ಟೆಸ್ಟ್ ಪದಾರ್ಪಣೆ: 22 ಮೇ 2003. ಜಿಂಬಾಬ್ವೆ ವಿರುದ್ಧ (ಲಾರ್ಡ್ಸ್)
ಕೊನೆ ಪಂದ್ಯ: 10 ರಿಂದ 12 ಜುಲೈ 2024. ವೆಸ್ಟ್ ಇಂಡೀಸ್ ವಿರುದ್ಧ (ಲಾರ್ಡ್ಸ್)

ಅಟ್ಕಿನ್ಸನ್‌ಗೆ ಐದು ವಿಕೆಟ್: ಇಂಗ್ಲೆಂಡ್ ಜಯಭೇರಿ

ಲಂಡನ್ (ಎಎಫ್‌ಪಿ): ಗಸ್ ಅಟ್ಕಿನ್ಸನ್ (61ಕ್ಕೆ5) ಸ್ವಿಂಗ್ ದಾಳಿಯ ಮುಂದೆ ವೆಸ್ಟ್ ಇಂಡೀಸ್ ತಂಡವು ಇಂಗ್ಲೆಂಡ್ ಎದುರಿನ ಟೆಸ್ಟ್ ಪಂದ್ಯದಲ್ಲಿ ಪರಾಭವಗೊಂಡಿತು.

ಪಂದ್ಯದ ಮೂರನೇ ದಿನದಾಟದಲ್ಲಿಯೇ ವಿಂಡೀಸ್ ತಂಡವು ದೂಳೀಪಟವಾಯಿತು. ಆತಿಥೇಯ ಇಂಗ್ಲೆಂಡ್ ಇನಿಂಗ್ಸ್ ಮತ್ತು 114 ರನ್‌ಗಳಿಂದ ಜಯಿಸಿತು. ಇದರೊಂದಿಗೆ ಮೂರು ಪಂದ್ಯಗಳ ಸರಣಿಯಲ್ಲಿ ಇಂಗ್ಲೆಂಡ್ 1–0 ಮುನ್ನಡೆ ಸಾಧಿಸಿತು.

ಲಾರ್ಡ್ಸ್‌ನಲ್ಲಿ ನಡೆದ ಪಂದ್ಯದಲ್ಲಿ ವಿಂಡೀಸ್ ಮೊದಲ ಇನ್ನಿಂಗ್ಸ್‌ನಲ್ಲಿ 121 ರನ್ ಗಳಿಸಿತ್ತು. ಅದಕ್ಕುತ್ತರವಾಗಿ ಇಂಗ್ಲೆಂಡ್ 371 ರನ್ ಪೇರಿಸಿತ್ತು. ಅದರೊಂದಿಗೆ 250 ರನ್‌ಗಳ ಮುನ್ನಡೆ ಸಾಧಿಸಿತ್ತು. ಇದನ್ನು ಮೀರುವ ಹಾದಿಯಲ್ಲಿ ವಿಂಡೀಸ್ ಎಡವಿತು. ಅಟ್ಕಿನ್ಸನ್ ಮತ್ತು ತಮ್ಮ ವೃತ್ತಿಜೀವನದ ಕೊನೆಯ ಪಂದ್ಯವಾಡಿದ ಜಿಮ್ಮಿ ಆ್ಯಂಡರ್ಸನ್ (32ಕ್ಕೆ3) ಅವರ ಬೌಲಿಂಗ್ ಮುಂದೆ ಕುಸಿಯಿತು. 47 ಓವರ್‌ಗಳಲ್ಲಿ 136 ರನ್ ಗಳಿಸಿ ಆಲೌಟ್ ಆಯಿತು.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ವೆಸ್ಟ್ ಇಂಡೀಸ್: 41.4 ಓವರ್‌ಗಳಲ್ಲಿ 121. ಇಂಗ್ಲೆಂಡ್: 90 ಓವರ್‌ಗಳಲ್ಲಿ 371. ಎರಡನೇ ಇನಿಂಗ್ಸ್: ವೆಸ್ಟ್ ಇಂಡೀಸ್: 47 ಓವರ್‌ಗಳಲ್ಲಿ 136 (ಅಲಿಕ್ ಅಥಾಂಜೆ 22, ಜೇಸನ್ ಹೋಲ್ಡರ್ 20, ಗುಡಕೇಶ್ ಮೋತಿ ಔಟಾಗದೆ 31, ಜೇಮ್ಸ್ ಆ್ಯಂಡರ್ಸನ್ 32ಕ್ಕೆ3, ಗಸ್ ಅಟ್ಕಿನ್ಸನ್ 61ಕ್ಕೆ5, ಬೆನ್ ಸ್ಟೋಕ್ಸ್ 25ಕ್ಕೆ2) ಫಲಿತಾಂಶ: ಇಂಗ್ಲೆಂಡ್ ತಂಡಕ್ಕೆ ಇನಿಂಗ್ಸ್ ಹಾಗೂ 114 ರನ್‌ಗಳ ಜಯ. ಸರಣಿಯಲ್ಲಿ ಇಂಗ್ಲೆಂಡ್‌ಗೆ 1–0 ಮುನ್ನಡೆ.

ಭಾರತ– ಪಾಕ್ ಪಂದ್ಯ 19ರಂದು

ಕೊಲಂಬೊ (ಪಿಟಿಐ): ಏಷ್ಯಾ ಕಪ್ ಮಹಿಳಾ ಟಿ20 ಕ್ರಿಕೆಟ್ ಟೂರ್ನಿಯ ಮೊದಲ ಪಂದ್ಯದಲ್ಲಿ ಭಾರತವು ತನ್ನ ಸಾಂಪ್ರದಾಯಿಕ ಎದುರಾಳಿ ಪಾಕಿಸ್ತಾನ ತಂಡವನ್ನು ಎದುರಿಸಲಿದೆ. ಈ ಪಂದ್ಯ ಜುಲೈ 19ರಂದು ಪಂದ್ಯ ದಂಬುಲಾದಲ್ಲಿ ನಡೆಯಲಿದೆ. ಅತಿಥೇಯ ಶ್ರೀಲಂಕಾ ತನ್ನ ಮೊದಲ ಪಂದ್ಯದಲ್ಲಿ ಬಾಂಗ್ಲಾದೇಶ ತಂಡವನ್ನು ಎದುರಿಸಲಿದೆ ಎಂದು ಶ್ರೀಲಂಕಾ ಕ್ರಿಕೆಟ್ ಮಂಡಳಿ ಶುಕ್ರವಾರ ತಿಳಿಸಿದೆ.

ಒಟ್ಟು ಎಂಟು ತಂಡಗಳು ಭಾಗವಹಿಸುತ್ತಿವೆ. ನಾಕೌಟ್ ತಲುಪುವ ನಿರೀಕ್ಷೆ ಹೊಂದಿರುವ ಭಾರತ, ಪಾಕಿಸ್ತಾನ, ಬಾಂಗ್ಲಾದೇಶ ಮತ್ತು ಶ್ರೀಲಂಕಾ ಜೊತೆಗೆ ಯುಎಇ, ನೇಪಾಳ, ಮಲೇಷ್ಯಾ ಹಾಗೂ ಥಾಯ್ಲೆಂಡ್ ತಂಡಗಳು ಕಣದಲ್ಲಿವೆ.

'ಎ' ಗುಂಪಿನಲ್ಲಿ ಭಾರತದ ಜೊತೆ ಪಾಕಿಸ್ತಾನ, ಯುಎಇ, ನೇಪಾಳ ತಂಡಗಳಿವೆ. 'ಬಿ' ಗುಂಪಿನಲ್ಲಿ ಬಾಂಗ್ಲಾದೇಶ, ಶ್ರೀಲಂಕಾ, ಮಲೇಷ್ಯಾ ಹಾಗೂ ಥಾಯ್ಲೆಂಡ್ ತಂಡಗಳಿವೆ.

ಫೈನಲ್ ಮತ್ತು ಸೆಮಿಫೈನಲ್ ಸೇರಿ ದಂತೆ ಒಟ್ಟು 15 ಪಂದ್ಯಗಳು ನಡೆಯಲಿವೆ.

ವಿಂಬಲ್ಡನ್: ಸರ್ಬಿಯಾ ಆಟಗಾರನಿಗೆ ಮುಸೆಟ್ಟಿ ವಿರುದ್ಧ ನೇರ ಸೆಟ್ ಜಯ

ಫೈನಲ್‌ಗೆ ಅಲ್ಕರಾಜ್, ಜೊಕೊವಿಚ್

ಲಂಡನ್ (ಎಎಫ್‌ಪಿ): ಸೆಟ್ ಹಿನ್ನಡೆಯಿಂದ ಚೇತರಿಸಿಕೊಂಡ ಹಾಲಿ ಚಾಂಪಿಯನ್ ಕಾರ್ಲೋಸ್ ಅಲ್ಕರಾಜ್ ಅವರು ಶುಕ್ರವಾರ ರಷ್ಯಾದ ಡೇನಿಯಲ್ ಮೆಡ್ವೆಡೇವ್ ಅವರನ್ನು ಸೋಲಿಸಿ ವಿಂಬಲ್ಡನ್ ಪುರುಷ ಸಿಂಗಲ್ಸ್ ಫೈನಲ್ ತಲುಪಿದರು. ಇದು ಸ್ಪೇನ್ ಆಟಗಾರನಿಗೆ ನಾಲ್ಕನೇ ಗ್ರ್ಯಾನ್‌ಸ್ಲಾಮ್ ಫೈನಲ್ ಆಗಿದೆ.

ವಿಶ್ವದ ಮೂರನೇ ಕ್ರಮಾಂಕದ ಅಲ್ಕರಾಜ್ 6–7 (1–7), 6–3, 6–4, 6–4 ರಿಂದ ಐದನೇ ಕ್ರಮಾಂಕದ ಮೆಡ್ವೆಡೇವ್ ಅವರನ್ನು ಹಿಮ್ಮೆಟ್ಟಿಸಿದರು. ಭಾನುವಾರ ನಡೆಯುವ ಫೈನಲ್‌ನಲ್ಲಿ ಅವರು ಏಳುಬಾರಿಯ ಚಾಂಪಿಯನ್ ನೊವಾಕ್ ಜೊಕೊವಿಚ್ ಅವರನ್ನು ಎದುರಿಸಲಿದ್ದಾರೆ.

ಎರಡನೇ ಶ್ರೇಯಾಂಕದ ನೊವಾಕ್ ಜೊಕೊವಿಚ್ ಎರಡನೇ ಸೆಮಿಫೈನಲ್‌ನಲ್ಲಿ ನೇರ ಸೆಟ್‌ಗಳಿಂದ ಇಟಲಿಯ ಲೊರೆಂಜೊ ಮುಸೆಟ್ಟಿ ಅವರನ್ನು ಸೋಲಿಸಿದರು. ದಾಖಲೆಯ 25ನೇ ಗ್ರ್ಯಾನ್‌ಸ್ಲಾಮ್ ಪ್ರಶಸ್ತಿ ಯತ್ನದಲ್ಲಿರುವ ಸರ್ಬಿಯಾದ ಆಟಗಾರ 6-4, 7-6 (7-2), 6-4 ರಲ್ಲಿ ಜಯಗಳಿಸಿದರು.

ಕಳೆದ ವರ್ಷ ಕೂಡಾ ಜೊಕೊವಿಚ್ ಮತ್ತು ಅಲ್ಕರಾಜ್ ಅವರು ಫೈನಲ್‌ನಲ್ಲಿ ಎದುರಾಳಿಗಳಾಗಿದ್ದರು.

ಮೆಡ್ವೆಡೇವ್ ಹತಾಶೆ: ಮೊದಲ ಸೆಟ್‌ನಲ್ಲಿ ಎರಡು ಬ್ರೇಕ್‌ಗಳೊಂದಿಗೆ ಮೆಡ್ವೆಡೇವ್ ಮುನ್ನಡೆ ಪಡೆದರೂ, ಅಲ್ಕರಾಜ್ ಹೋರಾಟ ತೋರಿದರು. ಮೆಡ್ವೆಡೇವ್ ಹತಾಶೆ ಎಷ್ಟಿತ್ತೆಂದರೆ ಒಮ್ಮೆ ಅವರು ಕ್ರೀಡಾ ಮನೋಭಾವಕ್ಕೆ ವಿರುದ್ಧವಾಗಿ ಅಸಭ್ಯ ಪದ ಬಳಕೆಗಾಗಿ ಅಂಪೈರ್ ಇವಾ ಅಸ್ಡೆರಕಿ ಅವರಿಂದ ಎಚ್ಚರಿಕೆ ಪಡೆದರು. 9ನೇ ಗೇಮ್‌ನಲ್ಲಿ ಬ್ರೇಕ್‌ಗೆ ಒಳಗಾದರು.

ಅಸ್ಡೆರಕಿ ಅವರು ಟೂರ್ನಿಯ ರೆಫ್ರಿ ಅವರನ್ನು ಸೆಂಟರ್‌ಕೋರ್ಟ್‌ಗೆ ಕರೆಸಬೇಕಾಯಿತು. ಆದರೆ ಆ ಪ್ರಕರಣದ ನಂತರ ಸಮಾಧಾನವಹಿಸಿ ಆಡಿದ ಮೆಡ್ವೆಡೇವ್, ಟೈಬ್ರೇಕ್‌ನಲ್ಲಿ ಸುಲಭವಾಗಿ ಮೊದಲ ಸೆಟ್ ಪಡೆದರು. ಈ ಬಾರಿಯ ವಿಂಬಲ್ಡನ್‌ನಲ್ಲಿ ಅಲ್ಕರಾಜ್ ಮೊದಲ ಸೆಟ್ ಕಳೆದುಕೊಂಡಿದ್ದು ಇದು ಮೂರನೇ ಬಾರಿ.

ಎರಡನೆ ಸೆಟ್‌ನಲ್ಲಿ ಅಧಿಕಾರಯುತವಾಗಿ ಆಡಿದ ಸ್ಪೇನ್ ಆಟಗಾರ 3–1 ಮುನ್ನಡೆ ಪಡೆದರಲ್ಲದೇ, ಹೆಚ್ಚಿನ ಪ್ರಯಾಸವಿಲ್ಲದೇ ಸೆಟ್ ಪಡೆದರು. 21 ವರ್ಷದ ಅಲ್ಕರಾಜ್ ಮೂರನೇ ಸೆಟ್‌ನಲ್ಲಿ 14 ವಿನ್ನರ್‌ಗಳನ್ನು ಸಿಡಿಸಿದರು. ಮೂರನೇ ಗೇಮ್‌ನಲ್ಲಿ ಒಮ್ಮೆ ಮೆಡ್ವೆಡೇವ್ ಸರ್ವ್ ಬ್ರೇಕ್ ಮಾಡಿದರು.

ವಿಶ್ವದ ಅಗ್ರ ಆಟಗಾರ ಯಾನಿಕ್ ಸಿನ್ನರ್ ಅವರನ್ನು ಕ್ವಾರ್ಟರ್‌ಫೈನಲ್‌ನಲ್ಲಿ ಹೊರದೂಡಿದ್ದ ಮೆಡ್ವೆಡೇವ್ ನಾಲ್ಕನೇ ಸೆಟ್‌ನಲ್ಲಿ ಆರಂಭದಲ್ಲೇ ಬ್ರೇಕ್ ಪಡೆದರು. ಆದರೆ ನಂತರ ಅಲ್ಕರಾಜ್ ಪ್ರಾಬಲ್ಯ ಮುಂದುವರಿಸಿ ಪಂದ್ಯ ಗೆದ್ದರು.

ಗೆಲುವಿನ ಸಂಭ್ರಮ.... ವಿಂಬಲ್ಡನ್ ಸೆಮಿಫೈನಲ್‌ನಲ್ಲಿ ಮೆಡ್ವೆಡೇವ್ ಅವರನ್ನು ಸೋಲಿಸಿದ ಕಾರ್ಲೋಸ್ ಅಲ್ಕರಾಜ್ ಸಂಭ್ರಮಿಸಿದ್ದು ಹೀಗೆ ಎಪಿ/ ಪಿಟಿಐ ಚಿತ್ರ

ಮಹಿಳಾ ಫುಟ್‌ಬಾಲ್ ಪಂದ್ಯ ಸಮಬಲ

ಯಾಂಗುನ್ (ಮ್ಯಾನ್ಮಾರ್), (ಪಿಟಿಐ): ಸುಧಾರಿತ ಆಟದ ಪ್ರದರ್ಶನ ನೀಡಿದ ಭಾರತ ಸೀನಿಯರ್ ಮಹಿಳಾ ಫುಟ್‌ಬಾಲ್ ತಂಡ ಶುಕ್ರವಾರ ಎರಡನೇ ಹಾಗೂ ಅಂತಿಮ ಸೌಹಾರ್ದ ಪಂದ್ಯದಲ್ಲಿ ಆತಿಥೇಯ ಬರ್ಮಾ ತಂಡದ ಜೊತೆ 1–1 ಡ್ರಾ ಮಾಡಿಕೊಂಡಿತು.

ಕ್ವಾರ್ಟರ್ ಫೈನಲ್‌ಗೆ ಶಾಂತಿ ನಗರ, ಬಿಟಿಎಂ

ಬೆಂಗಳೂರು: ಶಾಂತಿನಗರ ವಿಧಾನಸಭಾ ಕ್ಷೇತ್ರ ತಂಡವು ಮುಖ್ಯಮಂತ್ರಿ ಕಪ್ ಫುಟ್‌ಬಾಲ್ ಟೂರ್ನಿಯಲ್ಲಿ ಕ್ವಾರ್ಟರ್ ಫೈನಲ್ ಪ್ರವೇಶಿಸಿದೆ.

ಶುಕ್ರವಾರ ಶಾಂತಿನಗರ ತಂಡವು 3–0 ಅಂತರದಿಂದ ಬಿಟಿಎಂ ಲೇಔಟ್ ವಿಧಾನಸಭಾ ಕ್ಷೇತ್ರ ತಂಡವನ್ನು ಮಣಿಸಿ, ಎ ಗುಂಪಿನಲ್ಲಿ ಅಗ್ರಸ್ಥಾನದೊಂದಿಗೆ ಕ್ವಾರ್ಟರ್ ಫೈನಲ್ ತಲುಪಿದೆ.

ಈ ಪಂದ್ಯದಲ್ಲಿ ಸೋಲನುಭವಿಸಿದ ಬಿಟಿಎಂ ಲೇಔಟ್ ವಿಧಾನಸಭಾ ಕ್ಷೇತ್ರ ತಂಡವು ಎ ಗುಂಪಿನಲ್ಲಿ ಎರಡನೇ ಸ್ಥಾನದಲ್ಲಿ ಇರುವುದರಿಂದ ಕ್ವಾರ್ಟರ್ ಫೈನಲ್‌ಗೆ ಅರ್ಹತೆ ಪಡೆದಿದೆ.

ಬೆಂಗಳೂರು ರೇಸ್

ಓ ಹನ್ಸಿನಿ ಗೆಲ್ಲುವ ನಿರೀಕ್ಷೆ

ರೇಸಿಂಗ್ ಪ್ಯಾಟ್ರನ್ಸ್ ಟ್ರೋಫಿ ಶನಿವಾರದಿಂದ ಪ್ರಾರಂಭವಾಗಲಿರುವ ಬೆಂಗಳೂರು ಬೇಸಿಗೆ ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಓ ಹನ್ಸಿನಿ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 1.30ಕ್ಕೆ ಪ್ರಾಂಭವಾಗಲಿರುವ ದಿನದ ಒಂಬತ್ತು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ

1ನೇ ರೇಸ್: **ಗೋಲ್ಡನ್ ಲೈಟ್ 1, ದೇಸ್ ಡೇಟ್ 5, ಡೆಸರ್ಟ್ ಗಾಡೆಸ್ 6**
2ನೇ ರೇಸ್: **ಸನ್‌ಲಿಟ್ ಪಾತ್ 2, ಟಾಂಕಿನಿಕ 3, ಸೆಕ್ರೆಡ್ ಕ್ರಿಯೆಟರ್ 6**
3ನೇ ರೇಸ್: **ಸೂಪರ್ ಸಫೈರ್ 7, ಅವಿಸೆನಾ 1, ಕ್ವಿಕ್ ವಿಟೆಡ್ 2**
4ನೇ ರೇಸ್: **ಎಮಿರಾಲ್ಡೊ 5, ಏರ್‌ಬ್ಲ್ಯಾಸ್ಟ್ 10, ಅಕಾಸಿ 9**
5ನೇ ರೇಸ್: **ದಿ ಫರ್ಫೆಕ್ಟ್ ಚಾಯ್ಸ್ 6, ಅಹರ್ನೆ 2, ಟಿಗಾನೆಲ್ಲೊ 4**
6ನೇ ರೇಸ್: **ಓ ಹನ್ಸಿನಿ 1, ಚಾಂಪಿಯನ್ಸ್ ವೇ 3, ಯೂಕಾನ್ 6**
7ನೇ ರೇಸ್: **ಡಾನ್ ಕಾರ್ಲೋಸ್ 4, ಫೀಲಿಂಗ್ ಗುಡ್ 5, ಕಂಪ್ಲೀಟ್ ಪ್ಯಾಕೇಜ್ 3**
8ನೇ ರೇಸ್: **ಡೆಲ್ ಅವಿಜ್ 4, ಬ್ಲೂ ಡಾಲಿ 9, ಗೋಲ್ಡನ್ ಲೆಜೆಂಡ್ 8**
9ನೇ ರೇಸ್: **ಆಗಸ್ಟ್ 1, ವ್ಯಾಸ 9, ಸೂಪರ್ ಮಾರ್ವೆಲ್ಲಾ 5**

ಉತ್ತಮ ಬೆಟ್: ಗೋಲ್ಡನ್ ಲೈಟ್

ಜಾಕ್‌ಪಾಟ್‌ಗೆ	1ನೇ ಟ್ರಬಲ್	2ನೇ ಟ್ರಬಲ್	3ನೇ ಟ್ರಬಲ್
5,6,7,8,9	1,2,3	4,5,6	7,8,9.

ಬೆಂಗಳೂರು ಟರ್ಫ್ ಕ್ಲಬ್‌ನಲ್ಲಿ ಶನಿವಾರದಿಂದ ಪ್ರಾರಂಭವಾಗಲಿರುವ ಆನ್‌ಕೋರ್ಸ್ ಮತ್ತು ಆಫ್‌ಕೋರ್ಸ್ ರೇಸ್‌ಗಳಿಗೆ ಬುಕ್‌ಮೇಕರ್ಸ್ ಸದ್ಯಕ್ಕೆ ಕಾರ್ಯನಿರ್ವಹಿಸುತ್ತಿಲ್ಲ. ಆದರೆ, ಬಿಟಿಸಿ ಹೊರಗಿನ ಟೋಟ್ ಸೆಂಟರ್‌ಗಳು ಕಾರ್ಯನಿರ್ವಹಿಸಲಿವೆ ಎಂದು ಮೂಲಗಳು ತಿಳಿಸಿವೆ

ಎರಡು ವರ್ಷ ನಿಷೇಧ ಶಿಕ್ಷೆಯಿಂದ ಹೊರಬಂದು ಹೊಸ ಅಧ್ಯಾಯ

ಒಲಿಂಪಿಕ್ಸ್ ಪದಾರ್ಪಣೆಗೆ ಸಜ್ಜಾದ ಜರ್ಮನ್‌ಪ್ರೀತ್

ನವದೆಹಲಿ (ಪಿಟಿಐ): ಉದ್ದೀಪನ ಮದ್ದು ಸೇವನೆಗಾಗಿ 2016ರಲ್ಲಿ ಎರಡು ವರ್ಷ ನಿಷೇಧ ಶಿಕ್ಷೆಯಿಂದ ಜರ್ಮನ್‌ಪ್ರೀತ್ ಸಿಂಗ್ ಅವರ ವೃತ್ತಿಜೀವನ ಡೋಲಾಯಮಾನ ಆಗುವ ಹಾದಿಯಲ್ಲಿತ್ತು. ಆದರೆ ಅದರಿಂದ ಹೊರಬಂದ ಭಾರತ ಹಾಕಿ ತಂಡದ ರಕ್ಷಣೆ ಆಟಗಾರ ಆ ಕಹಿಯನ್ನೆಲ್ಲಾ ಮರೆತು ಈಗ ಒಲಿಂಪಿಕ್ಸ್‌ಗೆ ಪದಾರ್ಪಣೆಗೆ ಸಜ್ಜಾಗಿದ್ದಾರೆ.

ಈಗ ಕೆಲವು ವರ್ಷಗಳಿಂದ ಜರ್ಮನ್‌ಪ್ರೀತ್ ಭಾರತ ತಂಡದ ಕಾಯಂ ಆಟಗಾರ. ಅವರು ಪ್ಯಾರಿಸ್‌ಗೆ ತೆರಳುತ್ತಿರುವ 16 ಆಟಗಾರರ ಹಾಕಿ ತಂಡದಲ್ಲಿದ್ದಾರೆ.

'ಆ ಡೋಪಿಂಗ್ ಬ್ಯಾನ್ ನನ್ನ ಜೀವನದ ಕರಾಳ ಹಂತ. ಆ ವೇಳೆ ನನಗೆ ಅನಿಶ್ಚಿತತೆ ಕಾಡಿತ್ತು' ಎಂದು 2016 ರಿಂದ 18ರವರೆಗೆ ನಿಷೇಧ ಅನುಭವಿಸಿದ್ದ ಆಟಗಾರ ಹೇಳಿದರು.

'ಆಟಗಾರರು ಇಂಥ ಹಿನ್ನಡೆಯಿಂದ ಸಾಮಾನ್ಯವಾಗಿ ಹೊರಬರುವುದಿಲ್ಲ. ಎರಡು ವರ್ಷ ಪಂದ್ಯಗಳನ್ನಾಡದೇ ಕುಳಿತುಕೊಳ್ಳುವುದೆಂದರೆ ಕ್ರೀಡೆಯಲ್ಲಿ ಕಷ್ಟ' ಎಂದರು.

ಜೂನಿಯರ್ ವಿಶ್ವಕಪ್ ಆಡಲು 2016ರಲ್ಲಿ ಸಜ್ಜಾಗುವಾಗ ಅವರು ಉದ್ದೀಪನ ಮದ್ದು ಸೇವನೆ ಮಾಡಿದ್ದು ಪತ್ತೆಯಾಗಿತ್ತು. ಆದರೆ ಪಂಜಾಬ್‌ನ ಆಟಗಾರ ಪುನರಾಗಮನ ಮಾಡುವಲ್ಲಿ ಯಶಸ್ವಿ ಆದರು. ಸೀನಿಯರ್ ತಂಡಕ್ಕೆ ಮರಳಿದರು.

'2018ರಲ್ಲಿ, ಹಾಕಿ ಇಂಡಿಯಾ ಸೀನಿಯರ್ ರಾಷ್ಟ್ರೀಯ ಚಾಂಪಿಯನ್‌ಷಿಪ್ ನಂತರ ನಡೆದ ಶಿಬಿರಕ್ಕೆ ಆಯ್ಕೆಯಾದ 50 ಸಂಭನವೀಯರಲ್ಲಿ ನಾನೂ ಒಬ್ಬನಾಗಿದ್ದೆ. ನಾನು ವೃತ್ತಿಜೀವನ ಮತ್ತೆ ಕಟ್ಟಿಕೊಳ್ಳಲು ಹಾಕಿ ಇಂಡಿಯಾ ನನಗೆ ಅವಕಾಶ ನೀಡಿತು' ಎಂದು ಅವರು ನೆನಪಿಸಿಕೊಂಡರು.

'ಅವರು ನನ್ನ ಸಾಮರ್ಥ್ಯ ಗುರುತಿಸಿದರು. ಒಲಿಂಪಿಕ್ಸ್‌ನಲ್ಲಿ ಆಡಬೇಕೆಂಬ ಕನಸು ಹೊಂದಲು ಇದು ಅವಕಾಶ ನೀಡಿತು' ಎಂದು 27 ವರ್ಷದ ಜರ್ಮನ್‌ಪ್ರೀತ್ ಹೇಳಿದರು. ಅವರು 98 ಅಂತರರಾಷ್ಟ್ರೀಯ ಪಂದ್ಯಗಳನ್ನು ಆಡಿದ್ದಾರೆ.

ಬ್ರೇಡಾದಲ್ಲಿ ನಡೆದ ಚಾಂಪಿಯನ್ಸ್ ಟ್ರೋಫಿಯಲ್ಲಿ ಅವರು ಭಾರತ ತಂಡಕ್ಕೆ ಪದಾರ್ಪಣೆ ಮಾಡಿದ್ದರು. ಅಲ್ಲಿ ಭಾರತ ಬೆಳ್ಳಿ ಪದಕ ಗೆದ್ದುಕೊಂಡಿತ್ತು.

ಜರ್ಮನ್‌ಪ್ರೀತ್ ಸಿಂಗ್

PARIS 2024

ಸೀನ್ ನದಿ ಈಜಲು ಯೋಗ್ಯ: ನಗರಾಡಳಿತ

ಪ್ಯಾರಿಸ್ (ಎಎಫ್‌ಪಿ): ಒಲಿಂಪಿಕ್ಸ್‌ಗೆ ಕೆಲವೇ ದಿನಗಳಿರುವಂತೆ ನಗರದ ಹೃದಯಭಾಗದಲ್ಲಿರುವ ಸೀನ್ ನದಿ ಕಳೆದ 12 ದಿನಗಳಿಂದ ಈಜಾಡಲು ಯೋಗ್ಯವಾಗಿರುವಷ್ಟು ಶುದ್ಧವಾಗಿದೆ ಎಂದು ನಗರಾಡಳಿತ (ಪ್ಯಾರಿಸ್ ಸಿಟಿ ಹಾಲ್) ಹೇಳಿದೆ.

ಈ ನದಿಯಲ್ಲಿ ಒಲಿಂಪಿಕ್ಸ್‌ನ ಟ್ರಯಥ್ಲಾನ್ ಸ್ಪರ್ಧೆಯ ಈಜು ಭಾಗ ಮತ್ತು ಮ್ಯಾರಥಾನ್ ಈಜು ಸ್ಪರ್ಧೆ ನಡೆಸಲಾಗುತ್ತಿದೆ. ಹವೆ ಅವಕಾಶ ಮಾಡಿಕೊಟ್ಟರೆ, ಜುಲೈ 26ರಂದು ಒಲಿಂಪಿಕ್ ಕ್ರೀಡೆಗಳ ಉದ್ಘಾಟನಾ ಸಮಾರಂಭ ಕೂಡ ಇದೇ ನದಿಯಲ್ಲಿ ನಡೆಯಲಿದೆ. ಕಳೆದ 12 ದಿನಗಳಲ್ಲಿ 10 ದಿನ ನೀರಿನ ಗುಣಮಟ್ಟ ಅಗತ್ಯವಿರುವ ಮಾನದಂಡಗಳಿಗೆ ಅನುಗುಣವಾಗಿತ್ತು ಎಂದು ನಗರಾಡಳಿತದ ಅಧಿಕಾರಿ ಪಿಯರೆ ರಬದಾನ್ ಆರ್‌ಎಫ್‌ಐ ಬ್ರಾಡ್‌ಕಾಸ್ಟರ್‌ಗೆ ತಿಳಿಸಿದ್ದಾರೆ.

ಕೆಲವು ವಾರಗಳ ಹಿಂದೆ ಪ್ಯಾರಿಸ್ ಭಾಗದಲ್ಲಿ ಮಾಮೂಲಿಗಿಂತ ಹೆಚ್ಚೇ ಮಳೆಯಾದ ಪರಿಣಾಮ, ಕೊಳಚೆ ನೀರು ನದಿಗೆ ಹರಿದುಬಂದು, ನದಿಯ ಮಾಲಿನ್ಯ ಪ್ರಮಾಣ ಏರಿತ್ತು.

ಒಲಿಂಪಿಕ್ಸ್‌ನಲ್ಲಿ ಪದಕ ಗೆಲ್ಲಬಲ್ಲೆ: ಸಾಬ್ಳೆ

ನವದೆಹಲಿ (ಪಿಟಿಐ): 'ಈ ತಿಂಗಳ ಕೊನೆಯಲ್ಲಿ ಆರಂಭವಾಗುವ ಒಲಿಂಪಿಕ್ಸ್‌ನಲ್ಲಿ ನಾನು ಸ್ಪರ್ಧಿಯಾಗಿ ಅಷ್ಟೇ ಉಳಿಯಲು ಬಯಸುವುದಿಲ್ಲ, ಪದಕವನ್ನೂ ಗೆಲ್ಲಬಲ್ಲೆ' ಎಂದು ಭಾರತದ 3000 ಮೀ. ಸ್ಟೀಪಲ್‌ಚೇಸರ್ ಅವಿನಾಶ್ ಸಾಬ್ಳೆ ಅವರು ವಿಶ್ವಾಸ ವ್ಯಕ್ತಪಡಿಸಿದ್ದಾರೆ.

29 ವರ್ಷದ ಸಾಬ್ಳೆ ಇತ್ತೀಚೆಗಷ್ಟೇ ತಮ್ಮದೇ ರಾಷ್ಟ್ರೀಯ ದಾಖಲೆಯನ್ನು ಸುಧಾರಿಸಿದ್ದರು. ಅವರಿಗೆ ಇದು ಎರಡನೇ ಒಲಿಂಪಿಕ್ಸ್, 2021ರ ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಅವರು ಫೈನಲ್ ತಲುಪಲು ವಿಫಲರಾಗಿದ್ದರು.

'ನಾನು ಭಾಗವಹಿಸುವುದಷ್ಟನ್ನೇ ಬಯಸುವುದಿಲ್ಲ. ಪದಕ ಗೆಲ್ಲುವೆನೆಂಬ ವಿಶ್ವಾಸ ನನಗಿದೆ. ಗುರಿಯತ್ತ ಕಣ್ಣಿಟ್ಟಿದ್ದು, ಪರಿಶ್ರಮ ಹಾಕುತ್ತಿದ್ದೇನೆ. ಎಲ್ಲವೂ ನಾನು ಅಂದುಕೊಂಡಂತೆ ನಡೆದರೆ ನಾನು ಪದಕ ಗೆಲ್ಲುವೆ' ಎಂದು ಅವರು ಜಿಯೊ ಸಿನಿಮಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ

ಒಲಿಂಪಿಕ್ಸ್ ಬ್ಯಾಡ್ಮಿಂಟನ್: ಲಕ್ಷ್ಯ ಸೇನ್‌ಗೆ ಕಠಿಣ ಗುಂಪು

ಸಿಂಧು, ಪ್ರಣಯ್‌ಗೆ ಸುಲಭದ ಗುಂಪು

ಕ್ವಾಲಾಲಂಪುರ (ಪಿಟಿಐ): ಭಾರತದ ಅಗ್ರ ಆಟಗಾರ್ತಿ ಪಿ.ವಿ.ಸಿಂಧು ಮತ್ತು ಎಚ್.ಎಸ್.ಪ್ರಣಯ್ ಅವರಿಗೆ ಇದೇ ತಿಂಗಳ 26ರಂದು ಪ್ಯಾರಿಸ್‌ನಲ್ಲಿ ಆರಂಭವಾಗುವ ಒಲಿಂಪಿಕ್ ಕ್ರೀಡೆಗಳ ಗುಂಪು ಹಂತದಲ್ಲಿ ಅಷ್ಟೇನೂ ಪ್ರಬಲ ಸ್ಪರ್ಧಿಗಳು ಎದುರಾಗುತ್ತಿಲ್ಲ. ಶುಕ್ರವಾರ ಬ್ಯಾಡ್ಮಿಂಟನ್ ಸಿಂಗಲ್ಸ್ 'ಡ್ರಾ' ಅಂತಿಮಗೊಳಿಸಲಾಗಿದೆ.

ರಿಯೊ ಒಲಿಂಪಿಕ್ಸ್‌ನಲ್ಲಿ (2016) ಬೆಳ್ಳಿ ಹಾಗೂ ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಕಂಚಿನ ಪದಕ ಗೆದ್ದುಕೊಂಡಿರುವ, 29 ವರ್ಷ ವಯಸ್ಸಿನ ಸಿಂಧು ಅವರಿಗೆ ಹತ್ತನೇ ಶ್ರೇಯಾಂಕ ನೀಡಲಾಗಿದೆ.

ವಿಶ್ವ ಕ್ರಮಾಂಕದಲ್ಲಿ 13ನೇ ಸ್ಥಾನದಲ್ಲಿರುವ ಸಿಂಧು 'ಎಂ' ಗುಂಪಿನಲ್ಲಿದ್ದು, ಎಸ್ಟೋನಿಯಾದ ಕ್ರಿಸ್ಟಿನ್ ಕುಬಾ (75ನೇ ಕ್ರಮಾಂಕ), ಮಾಲ್ದೀವ್ಸ್‌ನ ಫಾತಿಮತ್ ನಬಾಹ ಅಬ್ದುಲ್ ರಝಾಕ್ (111ನೇ ಕ್ರಮಾಂಕ) ಅವರನ್ನು ಎದುರಿಸಬೇಕಾಗಿದೆ.

ಗುಂಪು ಹಂತ ದಾಟಿದರೆ ಸಿಂಧು ಅವರಿಗೆ 16ರ ಸುತ್ತಿನಲ್ಲಿ ಆರನೇ ಶ್ರೇಯಾಂಕದ ಹೆ ಬಿಂಗ್ ಜಿಯಾವೊ (ಚೀನಾ) ಸಂಭವನೀಯ ಎದುರಾಳಿ. ಜಿಯಾವೊ ವಿರುದ್ಧ ಗೆದ್ದಲ್ಲಿ, ಒಲಿಂಪಿಕ್ ಚಾಂಪಿಯನ್ ಚೆನ್ ಯು ಫೀ (ಚೀನಾ) ಮುಖಾಮುಖಿಯಾಗಬಹುದು.

ಪುರುಷರ ಸಿಂಗಲ್ಸ್‌ನಲ್ಲಿ 13ನೇ ಶ್ರೇಯಾಂಕ ಪಡೆದಿರುವ ಪ್ರಣಯ್ ಮೊದಲ ಸಲ ಒಲಿಂಪಿಕ್ಸ್‌ನಲ್ಲಿ ಭಾಗವಹಿಸುತ್ತಿದ್ದು 'ಕೆ' ಗುಂಪಿನಲ್ಲಿದ್ದಾರೆ. ಇದೂ ಅಷ್ಟು ಪ್ರಬಲವಾಗಿಲ್ಲ. ವಿಯೆಟ್ನಾಮ್‌ನ ಲಿ ಡುಕ್ ಫಟ್ (70ನೇ ಕ್ರಮಾಂಕ), ಜರ್ಮನಿಯ ಫ್ಯಾಬಿಯನ್ ರೋತ್ (82ನೇ ಕ್ರಮಾಂಕ) ಈ ಗುಂಪಿನ ಇತರ ಆಟಗಾರರು.

19ನೇ ಕ್ರಮಾಂಕದ ಲಕ್ಷ್ಯ ಸೇನ್ ಒಲಿಂಪಿಕ್ಸ್‌ನಲ್ಲಿ ಶ್ರೇಯಾಂಕರಹಿತರಾಗಿದ್ದು, 'ಎಲ್' ಗುಂಪಿನಲ್ಲಿದ್ದಾರೆ. ಇದು ಪ್ರಬಲ ಗುಂಪು. ಮೂರನೇ ಕ್ರಮಾಂಕದ ಜೊನಾಥನ್ ಕ್ರಿಸ್ಟಿ (ಇಂಡೊನೇಷ್ಯಾ), ಗ್ವಾಟೆಮಾಲಾದ ಕೆವಿನ್ ಕಾರ್ಡೋನ್ (41ನೇ ಕ್ರಮಾಂಕ) ಇದೇ ಗುಂಪಿನಲ್ಲಿದ್ದಾರೆ.

22 ವರ್ಷದ ಲಕ್ಷ್ಯ ಅವರು ಕ್ರಿಸ್ಟಿ ವಿರುದ್ಧ ಆಡಿರುವ ನಾಲ್ಕು ಪಂದ್ಯಗಳಲ್ಲಿ ಗೆದ್ದಿರುವುದು ಒಂದು ಮಾತ್ರ.

ತನಿಶಾ–ಅಶ್ವಿನಿಗೆ ಸವಾಲು: ವಿಶ್ವ ಕ್ರಮಾಂಕದಲ್ಲಿ 19ನೇ ಸ್ಥಾನದಲ್ಲಿರುವ ತನಿಶಾ ಕ್ರಾಸ್ಟೊ–ಅಶ್ವಿನಿ ಪೊನ್ನಪ್ಪ ಅವರು ಮಹಿಳಾ ಡಬಲ್ಸ್‌ನಲ್ಲಿ 'ಸಿ' ಗುಂಪಿನಲ್ಲಿದ್ದು ಪ್ರಬಲ ಸವಾಲು ಎದುರಾಗಿದೆ. ಈ ಗುಂಪಿನಲ್ಲಿ ವಿಶ್ವದ ನಾಲ್ಕನೇ ಕ್ರಮಾಂಕದ ನಾಮಿ ಮತ್ಸುಯಾಮಾ– ಚಿಹಾರು ಶಿಡಾ ಇದ್ದಾರೆ. ಟೋಕಿಯೊ ಕ್ರೀಡೆಗಳ ಕಂಚಿನ ಪದಕ ವಿಜೇತರಾದ ಕಿಮ್ ಸೊ ಯಂಗ್–ಕಾಂಗ್ ಹೀ ಯಾಂಗ್ (7ನೇ ಕ್ರಮಾಂಕ, ದಕ್ಷಿಣ ಕೊರಿಯಾ) ಅವರೂ ಇದ್ದಾರೆ. 27ನೇ ಕ್ರಮಾಂಕದ ಸೆಟ್ಯಾನಾ ಮಾಪಸಾ–ಆ್ಯಂಜೆಲಾ ಯು (ಆಸ್ಟ್ರೇಲಿಯಾ) ಸಹ ಇದೇ ಗುಂಪಿನಲ್ಲಿದ್ದಾರೆ.

ಮುಂದೂಡಿಕೆ: ಡ್ರಾದಲ್ಲಿ ಇರುವ ಜೋಡಿಗಳ ಸಂಖ್ಯೆಗೆ ಸಂಬಂಧಿಸಿ ಕ್ರೀಡಾ ನ್ಯಾಯಮಂಡಳಿಯಲ್ಲಿ ನಿರ್ಧಾರ ಆಗಬೇಕಿರುವ ಕಾರಣ ಪುರುಷರ ಡಬಲ್ಸ್ ಡ್ರಾ ಮುಂದಕ್ಕೆ ಹೋಗಿದೆ. ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ ಮತ್ತು ಚಿರಾಗ್ ಶೆಟ್ಟಿ ಪದಕ ಗೆಲ್ಲುವ ನೆಚ್ಚಿನ ಜೋಡಿಯಾಗಿದ್ದು ಅವರಿಗೆ ಮೂರನೇ ಶ್ರೇಯಾಂಕ ನೀಡಲಾಗಿದೆ.

ಡ್ರಾ ದಿನಾಂಕದ ಬಗ್ಗೆ ವಿಶ್ವ ಬ್ಯಾಡ್ಮಿಂಟನ್ ಫೆಡರೇಷನ್ ಖಚಿತಪಡಿಸಿಲ್ಲ. ಜುಲೈ 27 ರಿಂದ ಒಲಿಂಪಿಕ್ಸ್‌ನಲ್ಲಿ ಬ್ಯಾಡ್ಮಿಂಟನ್ ಸ್ಪರ್ಧೆಗಳು ಆರಂಭವಾಗಲಿವೆ.

ಪಿ.ವಿ.ಸಿಂಧು